ಬುಧವಾರ, ಮಾರ್ಚ್ 31, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 90 | ಪುಟ 14
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ನಮ್ಮ ಸರ್ವಸ್ವವೇ ಆಗಿರುವ ಸ್ಮಾರ್ಟ್ ಫೋನ್, ವೈಯಕ್ತಿಕ ಬಳಕೆಗಷ್ಟೇ ಅಲ್ಲದೆ ನಿತ್ಯದ ವಹಿವಾಟಿಗೂ ಅತ್ಯಗತ್ಯ. ಹೀಗಿರುವಾಗ ಅದರ ಸುರಕ್ಷತೆಗೆ ಒಂದಷ್ಟು ಎಚ್ಚರಿಕೆಗಳು ಇರಬೇಕಲ್ಲವೇ?

ಅನುಭವ ಮಂಟಪ — ಒಡೆದ 'ಕಾವೇರಿ ಕುಟುಂಬ' ಚಾರಿತ್ರಿಕ ಸೋಲು
ಸಾರಿಗೆ ನೌಕರರ ಮುಷ್ಕರ: ದಿನಕ್ಕೊಂದು ಮಾದರಿ 4
45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನಾಳೆಯಿಂದ 4B

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
50,137 ▲	14,845 ▲	₹45,700 (ಬೆಂಗಳೂರು)	₹65,300 (ಬೆಂಗಳೂರು)	73.38 ▼

ಸಿ.ಡಿ. ಪ್ರಕರಣ ● ದಿನವಿಡೀ ನಾಟಕೀಯ ಬೆಳವಣಿಗೆ ● ರಮೇಶ ಜಾರಕಿಹೊಳಿಗೆ ಬಂಧನ ಭೀತಿ

ಅತ್ಯಾಚಾರ: ಸಂತ್ರಸ್ತೆ 'ಪ್ರಮಾಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ. ಪ್ರಕರಣ ಬೆಳಕಿಗೆ ಬಂದಾಗಿನಿಂದಲೂ ಅಜ್ಞಾತ ಸ್ಥಳದಲ್ಲಿದ್ದ ಸಂತ್ರಸ್ತೆ, ನ್ಯಾಯಾಧೀಶರ ಎದುರು ಮಂಗಳವಾರ ಹಾಜರಾಗಿ ಸ್ವ-ಇಚ್ಛಾ ಹೇಳಿಕೆ ದಾಖಲಿಸುವ ಮೂಲಕ ಪ್ರಕರಣಕ್ಕೆ ತಾರ್ಕಿಕ ತಿರುವು ಕೊಟ್ಟಿದ್ದಾರೆ.

ಇದರ ಬೆನ್ನಲ್ಲೇ ಕಬ್ಬನ್ ಪಾರ್ಕ್ ಪೊಲೀಸರಿಗೂ ದಾಖಲೆ ಸಮೇತ ಯುವತಿ ಹೇಳಿಕೆ ನೀಡಿದ್ದು, ಆರೋಪಿಯೂ ಆಗಿರುವ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿಗೆ ಬಂಧನದ ಭೀತಿ ಶುರುವಾಗಿದೆ.

ವಸಂತನಗರದ ವಿಶೇಷ ನ್ಯಾಯಾಲಯದಲ್ಲಿ ನಗರದ 24ನೇ ಎಸಿಎಂಎಂ ನ್ಯಾಯಾಧೀಶರ ಎದುರು ಮಂಗಳವಾರ ಮಧ್ಯಾಹ್ನ ಹಾಜರಾದ ಸಂತ್ರಸ್ತೆ, ಸಿಆರ್‌ಪಿಸಿ ಸೆಕ್ಷನ್ 164ರಡಿ ಎರಡೂವರೆ ಗಂಟೆ ತಮ್ಮ ಹೇಳಿಕೆ ನೀಡಿದರು. ಅದನ್ನು ನ್ಯಾಯಾಲಯ ದಾಖಲಿಸಿಕೊಂಡಿತು. ಹೇಳಿಕೆ ದಾಖಲು ಪ್ರಕ್ರಿಯೆಯನ್ನು ವಿಡಿಯೊ ಚಿತ್ರೀಕರಣ ಮಾಡಲಾಯಿತು.

'ಕೆಲಸ ಕೊಡಿಸುವುದಾಗಿ ಹೇಳಿ ನಂಬಿಸಿದ್ದ ರಮೇಶ ನನ್ನ ಮೇಲೆ ಅತ್ಯಾಚಾರ ಎಸಗಿದ್ದಲ್ಲದೇ, ಜೀವ ಬೆದರಿಕೆ ಹಾಕಿದ್ದಾರೆ' ಎಂದು ಆರೋಪಿಸಿ ಯುವತಿ, ಕಬ್ಬನ್‌ಪಾರ್ಕ್ ಠಾಣೆ ಪೊಲೀಸರಿಗೆ ದೂರು ನೀಡಿದ್ದರು. ಅದಕ್ಕೆ ಸಂಬಂಧಪಟ್ಟಂತೆ ಯುವತಿಯು ನ್ಯಾಯಾಧೀಶರ ಎದುರು ಪೂರಕ ಹೇಳಿಕೆ ನೀಡಿದ್ದು, ದಾಖಲೆಯನ್ನೂ ಸಲ್ಲಿಸಿದ್ದಾರೆ ಎಂದು ಗೊತ್ತಾಗಿದೆ.

ಲಿಖಿತ ರೂಪದಲ್ಲಿ ಹೇಳಿಕೆ ದಾಖಲಿಸಿಕೊಂಡ ನ್ಯಾಯಾಧೀಶರು, ಅದನ್ನು ಮುಚ್ಚಿದ ಲಕೋಟೆಯಲ್ಲಿಟ್ಟರು. ಅದೇ ಲಕೋಟೆಯನ್ನು ಪ್ರಕರಣದ ತನಿಖಾಧಿಕಾರಿ ಎಂ.ಸಿ. ಕವಿತಾ ಅವರಿಗೆ ಬುಧವಾರ ಹಸ್ತಾಂತರಿಸುವ ಸಾಧ್ಯತೆ ಇದೆ.

ಧ್ವನಿ ಮಾದರಿ ಸಂಗ್ರಹ: ಈ ಪ್ರಕ್ರಿಯೆ ಬಳಿಕ ಆಡುಗೋಡಿಯಲ್ಲಿರುವ ಸಿಸಿಬಿ ತಾಂತ್ರಿಕ ವಿಭಾಗಕ್ಕೆ ಸಂತ್ರಸ್ತೆಯನ್ನು ಕರೆದೊಯ್ದ ತನಿಖಾಧಿಕಾರಿ ಕವಿತಾ, ಅವರ ಧ್ವನಿ ಮಾದರಿ ಸಂಗ್ರಹಿಸಿದರು. ಅದೇ ಮಾದರಿಯನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಸಿ.ಡಿಯಲ್ಲಿರುವ ಯುವತಿ ಹಾಗೂ ಈಗ ಹೇಳಿಕೆ ನೀಡಿರುವ ಯುವತಿ ಒಬ್ಬರೇ ಅಥವಾ ಬೇರೆ ಬೇರೆಯವರೇ ಎಂಬುದರ ಪತ್ತೆಗೆ ಈ ಪ್ರಕ್ರಿಯೆ ನಡೆಸಲಾಗಿದೆ.

4A ಪುಟ ನೋಡಿ

ಬೆಂಗಳೂರಿನ ಗುರು ನಾನಕ್ ಭವನದ ಬಳಿ ಮಂಗಳವಾರ ಬಿಗಿ ಪೊಲೀಸ್ ಬಂದೋಬಸ್ತ್ ಇತ್ತು –ಪ್ರಜಾವಾಣಿ ಚಿತ್ರ

ವಿಮಾನದಲ್ಲಿ ಬಂದು ವಾಸ್ತವ್ಯ

ಪ್ರಕರಣ ಬೆಳಕಿಗೆ ಬಂದ ದಿನದಿಂದಲೂ ತನಗಾಗಿ ಹುಡುಕಾಟ ನಡೆಸುತ್ತಿದ್ದ ಪೊಲೀಸರ ಕಣ್ಣು ತಪ್ಪಿಸಿದ ಯುವತಿ, ವಿಮಾನದಲ್ಲಿ ಸೋಮವಾರವೇ(ಮಾ.29) ಬೆಂಗಳೂರಿಗೆ ಬಂದು, ನಗರದಲ್ಲೇ ವಾಸ್ತವ್ಯ ಹೂಡಿದ್ದರು.

ಅಜ್ಞಾತ ಸ್ಥಳದಲ್ಲಿದ್ದ ಯುವತಿ, ವಿಡಿಯೊ ಹಾಗೂ ಕೈ ಬರಹದ ಮೂಲಕ ಪ್ರಕರಣಕ್ಕೆ ದಿನಕ್ಕೊಂದು ತಿರುವು ನೀಡುತ್ತಿದ್ದರು. ಅವರು ನ್ಯಾಯಾಲಯಕ್ಕೆ ಹಾಜರಾಗುವ ಸುದ್ದಿ ಹರಿದಾಡುತ್ತಿದ್ದಂತೆ, ಯುವತಿ ಎಲ್ಲಿಂದ ಬರುತ್ತಾರೆ? ಹೇಗೆ ಬರುತ್ತಾರೆ? ಎಂಬ ಪ್ರಶ್ನೆ ಕಾಡುತ್ತಿದ್ದವು.

ಹೊರ ರಾಜ್ಯದಲ್ಲಿದ್ದ ಯುವತಿ, ವಕೀಲರ ಭದ್ರತೆಯಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸೋಮವಾರ ಮಧ್ಯಾಹ್ನ ಬಂದಿಳಿದಿದ್ದರು. ಆದರೆ, ಹೇಳಿಕೆ ದಾಖಲಿಸಲು ಅನುಮತಿ ಸಿಕ್ಕಿರಲಿಲ್ಲ.

ಅದೇ ಕಾರಣಕ್ಕೆ ದೇವನಹಳ್ಳಿ ಬಳಿಯ ಸ್ಥಳವೊಂದರಲ್ಲಿ ವಕೀಲರು ಮತ್ತು ಆಪ್ತರ ರಕ್ಷಣೆಯಲ್ಲಿ ಯುವತಿ ಉಳಿದುಕೊಂಡಿದ್ದರು. ನ್ಯಾಯಾಲಯದಿಂದ ಅನುಮತಿ ಸಿಗುತ್ತಿದ್ದಂತೆ ಕಾರಿನಲ್ಲಿ ಬಂದ ಯುವತಿ, ನ್ಯಾಯಾಲಯಕ್ಕೆ ಹಾಜರಾದರು.

'ಹೆಣ್ಣುಮಗಳಿಗೆ ಅನ್ಯಾಯವಾಗಬಾರದು'

ರಾಯಚೂರು: 'ಯಾವುದೇ ಹೆಣ್ಣುಮಕ್ಕಳಿಗೆ ಅನ್ಯಾಯ ಆಗಬಾರದು. ನಾವೆಲ್ಲ ಹೆಣ್ಣುಮಕ್ಕಳ ಪರವಾಗಿದ್ದೇವೆ. ಸಿ.ಡಿ.ಪ್ರಕರಣಕ್ಕೆ ಸಂಬಂಧಿಸಿ ತನಿಖೆ ನಡೆಯುತ್ತಿರುವುದರಿಂದ ಆ ಬಗ್ಗೆ ಈಗ ಏನೂ ಹೇಳಿದರೂ ತಪ್ಪಾಗುತ್ತದೆ' ಎಂದು ಸಮಾಜ ಕಲ್ಯಾಣ ಸಚಿವ ಬಿ.ಶ್ರೀರಾಮುಲು ಹೇಳಿದರು.

ಮಂಗಳವಾರ ಮಸ್ಕಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಪ್ರಕರಣದಲ್ಲಿ ಯಾರಿಗೂ ಅನ್ಯಾಯವಾಗಬಾರದು. ತಪ್ಪು ಮಾಡಿದವರು ತನಿಖೆ ನಂತರ ಶಿಕ್ಷೆ ಅನುಭವಿಸುತ್ತಾರೆ' ಎಂದರು. ಯಾವುದೇ ಹೆಣ್ಣುಮಕ್ಕಳಿಗೆ ಕಾನೂನಾತ್ಮಕವಾಗಿ ಸಿಗಬೇಕಾದ ರಕ್ಷಣೆಯನ್ನು ವಾಲ್ಮೀಕಿ ಸಮಾಜದಿಂದಲೂ ಒದಗಿಸಲಾಗುವುದು' ಎಂದು ಹೇಳಿದರು.

ಉಡುಗೊರೆ: ಪುರಾವೆ ಕೊಟ್ಟ ಸಂತ್ರಸ್ತೆ

ತನಿಖಾಧಿಕಾರಿ ಎದುರು ಹೇಳಿಕೆ ನೀಡಿರುವ ಸಂತ್ರಸ್ತೆ, ಆರೋಪಿ ರಮೇಶ ಜಾರಕಿಹೊಳಿ ನೀಡಿದ್ದರು ಎನ್ನಲಾದ ಉಡುಗೊರೆಗಳ ಪುರಾವೆಗಳನ್ನು ಕೊಟ್ಟಿದ್ದಾರೆ.

ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿ ತನಿಖಾಧಿಕಾರಿ ಕವಿತಾ ಜೊತೆಯಲ್ಲೇ ಆಡುಗೋಡಿಯಲ್ಲಿರುವ ವಿಶೇಷ ವಿಚಾರಣಾ ಕೊಠಡಿಗೆ ಬಂದಿದ್ದ ಸಂತ್ರಸ್ತೆ, ಎರಡು ಗಂಟೆ ವಿಚಾರಣೆ ಎದುರಿಸಿದರು.

'ಕೆಲಸ ಕೊಡಿಸುವುದಾಗಿ ನಂಬಿಸಿದ್ದ ರಮೇಶ ಜಾರಕಿಹೊಳಿ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ. ಅವರ ವಿರುದ್ಧ ನೀಡಿರುವ ದೂರಿಗೆ ನಾನು ಬದ್ಧವಾಗಿದ್ದೇನೆ. ಪೂರಕ ಪುರಾವೆಗಳನ್ನೂ ಒದಗಿಸಲು ಸಿದ್ಧವಾಗಿದ್ದೇನೆ' ಎಂದು ಸಂತ್ರಸ್ತೆ ಹೇಳಿರುವುದಾಗಿ ಗೊತ್ತಾಗಿದೆ.

'ಕೆಲಸ ಸಿಗುವ ಭರವಸೆಯಿಂದ ಅವರು ಹೇಳಿದಂತೆ ಕೇಳಿದೆ. ನನ್ನೊಂದಿಗೆ ಸಲುಗೆಯಿಂದ ಮಾತನಾಡುತ್ತಿದ್ದ ರಮೇಶ, ಉಡುಗೊರೆಗಳನ್ನು ನೀಡಿದ್ದರು. ಕೆಲಸ ಕೊಡಿಸುವಂತೆ ಕೇಳಿದಾಗ, ನಿರಾಕರಿಸಿದ್ದ ಅವರು ಅಶ್ಲೀಲವಾಗಿ ನಿಂದಿಸಿ ಜೀವ ಬೆದರಿಕೆ ಹಾಕಿದ್ದರು. ಅದರಿಂದ ನೊಂದ ನಾನು, ಅವರ ವಿರುದ್ಧ ದೂರು ನೀಡಲು ಮುಂದಾದೆ. ಆದರೆ, ಅವರು ಪ್ರಭಾವಿ ಸಚಿವರಾಗಿದ್ದರು. ಹೀಗಾಗಿ, ಬೇರೆಯವರ ಮೂಲಕ ದೂರು ದಾಖಲಿಸಿದ್ದೆ. ಜೀವ ಭಯದಿಂದಾಗಿ ರಹಸ್ಯ ಸ್ಥಳದಲ್ಲಿ ಉಳಿದುಕೊಂಡಿದ್ದೆ. ಈಗ ನ್ಯಾಯ ಸಿಗುವ ಭರವಸೆ ಬಂದಿದ್ದರಿಂದ ನ್ಯಾಯಾಲಯ ಹಾಗೂ ತಮ್ಮ (ತನಿಖಾಧಿಕಾರಿ) ಮುಂದೆ ಹಾಜರಾಗಿದ್ದೇನೆ' ಎಂದೂ ಯುವತಿ ತಿಳಿಸಿದ್ದಾಗಿ ಮೂಲಗಳು ಹೇಳಿವೆ.

ಪ್ರಕರಣಕ್ಕೆ ಸಂಬಂಧಪಟ್ಟಿರುವ ತಮ್ಮ ಮೊಬೈಲ್, ವಿಡಿಯೊ, ಆಡಿಯೊ, ಉಡುಗೊರೆ ಸೇರಿದಂತೆ ಇತರೆ ಪುರಾವೆಗಳನ್ನೂ ಯುವತಿ ತನಿಖಾಧಿಕಾರಿಗೆ ನೀಡಿರುವುದು ಗೊತ್ತಾಗಿದೆ.

ರಮೇಶ ನಿರಪರಾಧಿಯಾಗಿ ಹೊರಬರ್ತಾರೆ: ಬಿಎಸ್‌ವೈ

ಬೆಳಗಾವಿ: 'ಸಿ.ಡಿ. ಪ್ರಕರಣದ ತನಿಖೆಯನ್ನು ಎಸ್‌ಐಟಿ ನಿಷ್ಪಕ್ಷಪಾತವಾಗಿ ಮಾಡುತ್ತಿದ್ದು, ರಮೇಶ ಜಾರಕಿಹೊಳಿ ನಿರಪರಾಧಿಯಾಗಿ ಹೊರಬರುತ್ತಾರೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

'ಪ್ರಕರಣದ ಬಗ್ಗೆ ಮುಖ್ಯಮಂತ್ರಿ ಮಾತನಾಡದೇ ಇರುವುದನ್ನು ನೋಡಿದರೆ ಅವರಲ್ಲೇ ಹುಳುಕಿದೆ ಎನಿಸುತ್ತದೆ' ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ' ಗೃಹ ಸಚಿವರಿಂದ ನಿತ್ಯವೂ ಮಾಹಿತಿ ಪಡೆಯುತ್ತಿದ್ದೇನೆ. ಸಿದ್ದರಾಮಯ್ಯ ಜವಾಬ್ದಾರಿ ಸ್ಥಾನದಲ್ಲಿದ್ದು ಅದಕ್ಕೆ ತಕ್ಕಂತೆ ಮಾತನಾಡಬೇಕು. ಕಾಂಗ್ರೆಸ್‌ನವರು ಇದರಲ್ಲಿ ದುರುದ್ದೇಶದ ರಾಜಕೀಯ ಮಾಡುತ್ತಿದ್ದಾರೆ' ಎಂದರು.

'ಉಪ ಚುನಾವಣೆ ಪ್ರಚಾರದಲ್ಲಿ ಭಾಗಿಯಾಗುವಂತೆ ರಮೇಶಗೆ ಹೇಳಿದ್ದೇನೆ' ಎಂದೂ ಅವರು ಹೇಳಿದರು.

'ಯುವತಿ ನ್ಯಾಯಾಲಯದಲ್ಲಿ ಹೇಳಿಕೆ ನೀಡಿದ ವಿಚಾರ ನನಗೆ ಗೊತ್ತಿಲ್ಲ' ಎಂದು ಯಡಿಯೂರಪ್ಪ ಪ್ರತಿಕ್ರಿಯಿಸಿದರು.

ಡಿಎಸ್‌ಇಆರ್‌ಟಿ ಅನ್ವಯ
1–9 ಪರೀಕ್ಷೆ, ಮೌಲ್ಯಮಾಪನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಮತ್ತೆ ಹೆಚ್ಚುತ್ತಿದ್ದು, 1-9ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಪರೀಕ್ಷೆಯು ನಿರಂತರ ಮೌಲ್ಯಮಾಪನದ ರೀತಿಯಲ್ಲಿ ನಡೆಯುವುದರಿಂದ ಶೀಘ್ರ ಈ ಪ್ರಕ್ರಿಯೆ ಮುಗಿಸಿ ಬೇಸಿಗೆ ರಜೆ ಘೋಷಿಸುವಂತೆ ಖಾಸಗಿ ಶಾಲಾ ಆಡಳಿತ ಮಂಡಳಿಗಳು ಮತ್ತು ಪೋಷಕ ಸಮುದಾಯ ಶಿಕ್ಷಣ ಇಲಾಖೆಗೆ ಬೇಡಿಕೆ ಇಟ್ಟಿವೆ.

ರಾಜ್ಯ ಶಿಕ್ಷಣ ಸಂಶೋಧನೆ ಹಾಗೂ ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳ ಪರೀಕ್ಷೆ ಮತ್ತು ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಈಗಾಗಲೇ ಮಾರ್ಗಸೂಚಿ ಹೊರಡಿಸಿದೆ.

ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ಹಾಗೂ ಮೌಲ್ಯಮಾಪನ ನಡೆಸಲು ಶಿಕ್ಷಣ ಇಲಾಖೆ ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡಿದೆ. ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲಾ ಆಡಳಿತ ಮಂಡಳಿಗಳು ಕೂಡ ಈ ಹಂತದ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸಲು ಪೂರ್ವ ತಯಾರಿ ಮಾಡಿಕೊಂಡಿವೆ. ಶಾಲಾ ಮಟ್ಟದಲ್ಲಿ ಆಯಾ ತರಗತಿಗಳ ಕೊಠಡಿಗಳಲ್ಲಿ ಪರೀಕ್ಷೆಗಳು ನಡೆಯುತ್ತವೆ ಎಂದು ಹೇಳಿವೆ.

ಶಿಕ್ಷಣ ಹಕ್ಕು ಕಾಯ್ದೆ ಪ್ರಕಾರ 1 ರಿಂದ 8ನೇ ತರಗತಿವರೆಗಿನ ಮಕ್ಕಳನ್ನು ಅನುತ್ತೀರ್ಣಗೊಳಿಸುವಂತಿಲ್ಲ. ಹೀಗಾಗಿ, ಪರೀಕ್ಷೆ ನಡೆಸಿ, ಫಲಿತಾಂಶ ನೀಡಿದರೂ ತೇರ್ಗಡೆ ಮಾಡಬೇಕು. ಒಂದೇ ತರಗತಿಯಲ್ಲಿ ಎರಡು ವರ್ಷ ಕುಳ್ಳಿರಿಸುವ ಅಥವಾ ಶಾಲೆಯಿಂದ ಹೊರಹಾಕಲು ಅವಕಾಶ ಇಲ್ಲ ಎಂದಿವೆ.

'ಡಿಎಸ್‌ಇಆರ್‌ಟಿ ಮಾರ್ಗಸೂಚಿಯಂತೆ ಹೆಚ್ಚಿನ ಶಾಲೆಗಳು 1ರಿಂದ 5ನೇ ತರಗತಿವರೆಗಿನ ವಿದ್ಯಾರ್ಥಿಗಳ ರೂಪಣಾತ್ಮಕ ಹಾಗೂ ಸಂಕಲನಾತ್ಮಕ ಮೌಲ್ಯಮಾಪನ ಪ್ರಕ್ರಿಯೆಯನ್ನು ಪೂರ್ಣಗೊಳಿಸಿವೆ. 6 ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ತರಗತಿಗಳು ನಡೆಯುತ್ತಿರುವುದರಿಂದ 10 ಅಂಕಗಳ ರೂಪಣಾತ್ಮಕ ಮೌಲ್ಯಮಾಪನ ಪೂರ್ಣಗೊಂಡಿದೆ. ಹತ್ತು ಅಂಕಗಳ ರೂಪಣಾತ್ಮಕ ಮೌಲ್ಯಮಾಪನ ಏಪ್ರಿಲ್‌ನಲ್ಲಿ ನಡೆಯಲಿದೆ. 30 ಅಂಕದ ಸಂಕಲನಾತ್ಮಕ ಮೌಲ್ಯಮಾಪನ (ವಾರ್ಷಿಕ ಪರೀಕ್ಷೆ) ಮೇ ತಿಂಗಳ ಅಂತ್ಯದಲ್ಲಿ ಅಥವಾ ಜೂನ್ ಮೊದಲ ವಾರದಲ್ಲಿ ನಡೆಯಲಿದೆ' ಎಂದು ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಪರೀಕ್ಷೆ ವಿಷಯದಲ್ಲಿ ಶಿಕ್ಷಣ ಹಕ್ಕು ಕಾಯ್ದೆ ಮತ್ತು ನಿಯಮಗಳ ಚೌಕಟ್ಟಿನಲ್ಲಿ ಸ್ಪಷ್ಟತೆ ಒದಗಿಸುವ ತೀರ್ಮಾನ ಕೈಗೊಂಡು ಅಗತ್ಯ ಆದೇಶವನ್ನು ಸರ್ಕಾರ ಹೊರಡಿಸಬೇಕು
ನಿರಂಜನಾರಾಧ್ಯ ವಿ.ಪಿ
ಅಭಿವೃದ್ಧಿ ಶಿಕ್ಷಣ ತಜ್ಞ

ಲಸಿಕೆ: ಬೀದರ್, ಕಲಬುರ್ಗಿ ಕಳಪೆ ಸಾಧನೆ

ಕಲಬುರ್ಗಿ: ಕೋವಿಡ್ ಲಸಿಕೆ ನೀಡುವ ವಿಚಾರದಲ್ಲಿ ಕಲ್ಯಾಣ ಕರ್ನಾಟಕದ ಎರಡು ಜಿಲ್ಲೆಗಳು ಕಳಪೆ ಸಾಧನೆ ಮಾಡಿದ್ದು, ಬೀದರ್ ಶೇ 31.03 ಹಾಗೂ ಕಲಬುರ್ಗಿ ಶೇ 50ರಷ್ಟು ಮಾತ್ರ ಗುರಿ ತಲುಪಲು ಸಾಧ್ಯವಾಗಿದೆ. 4B

ಬಿಜೆಪಿಗೆ ಸೆಡ್ಡು ಹೊಡೆದ ಖೂಬಾ

ಬಸವಕಲ್ಯಾಣ (ಬೀದರ್ ಜಿಲ್ಲೆ): ಬಿಜೆಪಿ ನಾಯಕರ ಮನವೊಲಿಕೆಗೆ ಜಗ್ಗದ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಬಿಜೆಪಿ ವಿರುದ್ಧ ಬಂಡೆದ್ದು ಪಕ್ಷೇತರರಾಗಿ ಮಂಗಳವಾರ ನಾಮಪತ್ರ ಸಲ್ಲಿಸಿದರು. 8

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ,
ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ-5

ಇಂದಿನ ಪಾಡ್‌ಕಾಸ್ಟ್ ವಿಶೇಷ
ಝಣ ಝಣ ಕಾಂಚಾಣ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಒಳ ಪುಟಗಳು

'ಎಲ್‌ಡಿಎಫ್–ಯುಡಿಎಫ್ ಮ್ಯಾಚ್‌ಫಿಕ್ಸಿಂಗ್' 8

ಮಮತಾ–ಸುವೇಂದು: ಗೆಲುವಿನ ಸನಿಹ ಯಾರು? 8

ಚಿನಕುರಳಿ
ಪ್ರಕಾಶ್ ಶೆಟ್ಟಿ

ಕೆಂಪು ಪಟ್ಟಿಯಲ್ಲಿ ಕರಾವಳಿ ● ಮುಂದುವರಿಯುವ 'ಲಾ ನಿನಾ' ಪರಿಣಾಮ

ಸಹನೀಯ ಬೇಸಿಗೆ, ಸಾಮಾನ್ಯ ಮುಂಗಾರು

● ಎಸ್. ರವಿಪ್ರಕಾಶ್

ಬೆಂಗಳೂರು: ಬಹುತೇಕ ರಾಜ್ಯಗಳು ಈ ವರ್ಷ ಬೇಸಿಗೆಯ ಬೇಗೆಯಲ್ಲಿ ಬೆಂದರೆ, ಕರ್ನಾಟಕಕ್ಕೆ ಈ ಬಾರಿ ಅಂತಹ ತೀವ್ರ ತಾಪ ತಟ್ಟುವುದಿಲ್ಲ. ರಾಜ್ಯದಲ್ಲಿ ವಾಡಿಕೆಗಿಂತಲೂ ಕಡಿಮೆ ತಾಪಮಾನ ಇರಲಿದೆ.

ಆದರೆ, ಅಪರೂಪಕ್ಕೊಮ್ಮೆ ತಾಪಮಾನ ತಾರಕಕ್ಕೆ ಏರಿದರೂ ಬಹುತೇಕ ದಿನಗಳ ಉಷ್ಣಾಂಶ ಸಹನೀಯವಾಗಿರಲಿದೆ. ಭಾರತೀಯ ಹವಾಮಾನ ಇಲಾಖೆ ಬಿಡುಗಡೆ ಮಾಡಿರುವ ಬೇಸಿಗೆಯ ಮುನ್ಸೂಚನೆಯ ಸೂಚ್ಯಂಕದಲ್ಲಿ ಕರ್ನಾಟಕದ ಕರಾವಳಿ 'ಕೆಂಪು' ಪಟ್ಟಿಗೆ ಸೇರಿದ್ದರೆ, ಉಳಿದ ಜಿಲ್ಲೆಗಳು 'ಬಿಳಿ/ನೀಲಿ' ಪಟ್ಟಿಗೆ ಸೇರಿವೆ. 'ಬಿಳಿ/ನೀಲಿ' ಪಟ್ಟಿಗೆ ಸೇರಿರುವುದು ಕರ್ನಾಟಕ ಮಾತ್ರ. ಇದು (ಬೇಸಿಗೆಯಲ್ಲಿ) ಸಾಮಾನ್ಯಕ್ಕಿಂತ ಕಡಿಮೆ ತಾಪಮಾನ ಇರುವುದರ ಸೂಚ್ಯಂಕ.

ಅಲ್ಲದೆ, 'ಲಾ ನಿನಾ' ಪರಿಣಾಮ ಈ ವರ್ಷವೂ ಮುಂದುವರಿದಿದೆ. ಇದರಿಂದಾಗಿ ಈ ವರ್ಷ ಮತ್ತು ಮುಂದಿನ ವರ್ಷದ ಮುಂಗಾರು ಕೂಡಾ ಉತ್ತಮವಾಗಿರಲಿದೆ ಎಂದು ಹವಾಮಾನ ತಜ್ಞರು ಹೇಳಿದ್ದಾರೆ.

ಬೇಸಿಗೆಯ ಮಧ್ಯೆಯೇ ಹಲವೆಡೆ ಆಗ್ಗಾಗ್ಗೆ ಮಳೆಯೂ ಬೀಳಲಿದೆ. 'ಲಾ ನಿನಾ' ಸ್ಥಿತಿ ಸಮಭಾಜಕ ಫೆಸಿಫಿಕ್ ಮೇಲೆ ನೆಲೆ ನಿಂತಿದೆ. ಇದರಿಂದಾಗಿ ಸಮುದ್ರದ ಮೇಲ್ಭಾಗದಲ್ಲಿ ತಾಪಮಾನ ಸಾಮಾನ್ಯಕ್ಕಿಂತ ಕಡಿಮೆ ಇರಲಿದೆ ಎಂದು ಹವಾಮಾನ ಇಲಾಖೆ ವರದಿ ತಿಳಿಸಿದೆ.

'ಲಾ ನಿನಾ' ಪರಿಣಾಮ ಇದ್ದಾಗ ಉಷ್ಣಾಂಶ ಕೊಂಚ ಕಡಿಮೆ ಇರುತ್ತದೆ. ಇದು ಮುಂಗಾರಿನ ಮೇಲೆ ಪರಿಣಾಮ ಬೀರುವುದಿಲ್ಲ. ಹೀಗಾಗಿ ಮಳೆಗಾಲ ಸಹಜವಾಗಿಯೇ ಇರುತ್ತದೆ. ಆದರೆ, ರಾಜ್ಯದಲ್ಲಿ ತಾಪಮಾನ ಏರಿಕೆ ಆಗಲು ಉತ್ತರ ರಾಜ್ಯಗಳಿಂದ ಹಾದು ಬರುವ ಬಿಸಿ ಮಾರುತಗಳು ಮುಖ್ಯ ಕಾರಣ ಎನ್ನುತ್ತಾರೆ ತಜ್ಞರು.

ರಾಜ್ಯದಲ್ಲಿ ಈಗಾಗಲೇ ಕೆಲವೆಡೆ ಮಿಂಚು–ಗುಡುಗಿನಿಂದ ಆರಂಭವಾಗಿದ್ದು, ಮಳೆಯೂ ಸುರಿದಿದೆ. ಆಗಾಗ್ಗೆ ಮಳೆಯೂ ಬರುತ್ತದೆ. ಕರಾವಳಿ ಭಾಗದಲ್ಲಿ ಉಷ್ಣಾಂಶದ ಜತೆಗೆ ತೇವಾಂಶವೂ ಇರುವುದರಿಂದ ತಾಪಮಾನ ಹೆಚ್ಚಲಿದೆ. ಇದರಿಂದಾಗಿ ಕರಾವಳಿ ಜಿಲ್ಲೆಯ ಹಲವೆಡೆ ತಾಪಮಾನ 40 ಡಿಗ್ರಿ ಸೆಲ್ಸಿಯಸ್ ಮೀರಿ ಹೋಗುವ ಸಾಧ್ಯತೆ ಇದೆ. ಒಟ್ಟಾರೆ, ರಾಜ್ಯದ ಉತ್ತರ ಮತ್ತು ದಕ್ಷಿಣ ಒಳನಾಡಿನಲ್ಲಿ ಸರಾಸರಿ ಉಷ್ಣಾಂಶದಲ್ಲಿ 0.55 ಡಿಗ್ರಿಯಷ್ಟು ಕಡಿಮೆ ಇರಲಿದೆ.

'ಲಾ ನಿನಾ' ಪರಿಣಾಮ ಎಂದರೇನು?

'ಲಾ ನಿನಾ' ಪರಿಣಾಮವು 'ಎಲ್‌ನಿನೊ'ಗೆ ಸಂಪೂರ್ಣ ತದ್ವಿರುದ್ಧವಾದುದು. 'ಎಲ್ ನಿನೊ' ಇದ್ದಾಗ ಬರ ಕಾಣಿಸಿಕೊಳ್ಳುತ್ತದೆ. ಫೆಸಿಫಿಕ್ ಸಾಗರದ ಮೇಲೆ ತಾಪಮಾನ ಹೆಚ್ಚಾಗುವುದರಿಂದ 'ಎಲ್ ನಿನೊ' ಪರಿಣಾಮ ಆಗುತ್ತದೆ. ಅದೇ ಫೆಸಿಫಿಕ್ ಸಾಗರದ ಮೇಲೆ ಅತ್ಯಂತ ಸಂಕೀರ್ಣವೆನಿಸುವ ನೈಸರ್ಗಿಕ ಕ್ರಿಯೆ ಜರುಗಿದಾಗ ಜಾಗತಿಕ ಹವಾಮಾನದಲ್ಲಿ ಬದಲಾವಣೆ ಆಗಿ ಶೀತಲ ವಾತಾವರಣ ನಿರ್ಮಾಣವಾಗುತ್ತೆ. ಇದಕ್ಕೆ 'ಲಾ ನಿನಾ' ಪರಿಣಾಮ ಎನ್ನಲಾಗುತ್ತದೆ.

'ಲಾ ನಿನಾ' ಪರಿಣಾಮದಲ್ಲಿ ಫೆಸಿಫಿಕ್ ಸಾಗರ ಮೇಲೆ ಪಶ್ಚಿಮಾಭಿಮುಖವಾಗಿ ಅಂದರೆ ಏಷ್ಯಾ ಕಡೆಯಿಂದ ದಕ್ಷಿಣ ಅಮೆರಿಕಾದ ಕಡೆಗೆ ಗಾಳಿ ಬೀಸಲಾರಂಭಿಸುತ್ತದೆ. ಸಾಗರದ ಮೇಲ್ಮೈ ಮೇಲೆ ಬೆಚ್ಚಗಿನ ನೀರಿನ ಮೇಲೆ ಗಾಳಿ ಹಾದು ಹೋಗುತ್ತದೆ. ಹೀಗೆ ಬೆಚ್ಚಗಿನ ನೀರು ಚಲಿಸಲು ಆರಂಭವಾಗುತ್ತಿದ್ದಂತೆ, ಶೀತಲ ನೀರು ಮೇಲಕ್ಕೆ ಬರುತ್ತದೆ. ಇದರಿಂದ ಫೆಸಿಫಿಕ್ ಸಾಗರದ ಪೂರ್ವ ಭಾಗದಲ್ಲಿ ನೀರು ಸಾಮಾನ್ಯಕ್ಕಿಂತ ಹೆಚ್ಚು ಶೀತಲವಾಗುತ್ತದೆ.

ಗಾಳಿಗೆ ಚಲಿಸಿದ ಬೋಟ್

ಮಂಗಳೂರಿನ ಹಳೆಯ ದಕ್ಕೆಯಲ್ಲಿ ಲಂಗರು ಹಾಕಿದ್ದ ಬೋಟ್‌ಗಳ ಹಗ್ಗ ತುಂಡಾಗಿ, ಹಲವಾರು ಬೋಟ್‌ಗಳು ಗಾಳಿಯ ವೇಗಕ್ಕೆ ಪಣಂಬೂರು ಮೀನಕಳಿಯ, ಚಿತ್ರಾಪುರ, ಸುರತ್ಕಲ್, ಸಸಿಹಿತ್ಲು ಸಮುದ್ರ ಕಿನಾರೆಗೆ ಬಂದು ನಿಂತಿವೆ. ಹಲವಾರು ಬೋಟ್‌ಗಳಿಗೆ ಹಾನಿಯಾಗಿದೆ

ಶಿರಸಿಯ ಕದಂಬ ಕಂಪನಿ ಒಪ್ಪಂದ: ವಿದೇಶದಲ್ಲಿ ಕಡಿಮೆಯಾದ ಬೇಡಿಕೆ

ರೈತರ 'ಸಿರಿ' ಕಸಿದ ದುಬಾರಿ 'ಸಿರಿಧಾನ್ಯ'

● ನಾಗರಾಜ ಚಿನಗುಂಡಿ

ಪ್ರಜಾವಾಣಿ ವಿಶೇಷ

ರಾಯಚೂರು: ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹ 60 ಸಾವಿರ ಬೆಲೆ ಇರುವ 'ಟೆಫ್ಫ್' ಹೆಸರಿನ ಸಿರಿಧಾನ್ಯ ಬೆಳೆದಿರುವ ದೇವದುರ್ಗ ತಾಲ್ಲೂಕಿನ ರಾಮದುರ್ಗದ ರೈತರು ನಷ್ಟದ ಸುಳಿಗೆ ಸಿಲುಕಿದ್ದಾರೆ. ಒಂದು ವರ್ಷದಿಂದ ಸಿರಿಧಾನ್ಯ ಮಾರಾಟವಾಗಿಲ್ಲ.

ಶಿರಸಿಯ 'ಕದಂಬ ಅಗ್ರೊ ಪ್ರೊಡ್ಯೂಸರ್ ಲಿಮಿಟೆಡ್' ಕಂಪನಿಯು 2019ರ ಮಾರ್ಚ್ 15ರಂದು ರೈತರೊಂದಿಗೆ ಒಪ್ಪಂದ ಮಾಡಿಕೊಂಡು, ಎರಡು ವರ್ಷಗಳವರೆಗೆ ಸಿರಿಧಾನ್ಯ ಖರೀದಿಸುವುದಾಗಿ ಹೇಳಿತ್ತು.

ರೈತ ವಿರೂಪನಗೌಡ ಅವರು ಮೊದಲ ವರ್ಷ ಮೂರು ಎಕರೆಯಲ್ಲಿ ನಾಲ್ಕು ಕ್ವಿಂಟಲ್ ಟೆಫ್ಫ್ ಬೆಳೆದಿದ್ದರು. ಪ್ರತಿ ಕ್ವಿಂಟಲ್‌ಗೆ ₹ 50 ಸಾವಿರ ಕೊಟ್ಟು ಕಂಪನಿ ಖರೀದಿಸಿತ್ತು. ಎರಡನೇ ವರ್ಷ ಹಲವು ರೈತರು ಸೇರಿ 40 ಕ್ವಿಂಟಲ್‌ನಷ್ಟು ಸಿರಿಧಾನ್ಯ ಬೆಳೆದಿದ್ದಾರೆ. ಆದರೆ, 2020ರ ಮಾರ್ಚ್‌ನಲ್ಲಿ ಬೆಳೆದಿದ್ದ ಫಸಲನ್ನು ಕದಂಬ ಕಂಪನಿ ಇದುವರೆಗೂ ಖರೀದಿಸಿಲ್ಲ ಎಂಬುದು ರೈತರ ದೂರು.

ಕದಂಬ ಕಂಪನಿಯ ಸಿಇಒ ನಾಗರಾಜ ಭಟ್ ಅವರನ್ನು ಈ ಕುರಿತು ವಿಚಾರಿಸಿದಾಗ, 'ಲಾಕ್‌ಡೌನ್ ಅವಧಿಯಲ್ಲಿ ದೇಶ–ವಿದೇಶಗಳಲ್ಲಿರುವ ಎಲ್ಲ ತಾರಾ ಹೋಟೆಲ್‌ಗಳು ಬಂದ್ ಆಗಿದ್ದವು. ಈ ದುಬಾರಿ ಸಿರಿಧಾನ್ಯವನ್ನು ಇಂತಹ ಹೋಟೆಲ್‌ಗಳಲ್ಲಿ ಮಾತ್ರ ಬಳಕೆ ಮಾಡುತ್ತಿದ್ದಾರೆ. ದೇವದುರ್ಗದ ರೈತರಿಂದ ಮೊದಲು ಖರೀದಿಸಿರುವ ಸಿರಿಧಾನ್ಯ ಕೂಡಾ ಹಾಗೇ ಉಳಿದಿದೆ. ಕಂಪನಿಯೇ ಲಕ್ಷಾಂತರ ರೂಪಾಯಿ ನಷ್ಟದಲ್ಲಿದ್ದು, ರೈತರಿಂದ ಮತ್ತೆ ಸಿರಿಧಾನ್ಯ ಖರೀದಿಸುವುದಕ್ಕೆ ಆಗುತ್ತಿಲ್ಲ' ಎಂದರು.

'ಕಂಪನಿ ಜತೆಗಿನ ಒಪ್ಪಂದ ನಂಬಿಕೊಂಡು ಒಂದು ವರ್ಷದಿಂದ ಟೆಫ್ಫ್ ಸಿರಿಧಾನ್ಯ ಸಂರಕ್ಷಣೆ ಮಾಡಿದ್ದೇವೆ. ಹತ್ತು ರೈತರು ಸಿರಿಧಾನ್ಯ ಬೆಳೆದಿದ್ದು, ಎಕರೆಗೆ ಒಂದೂವರೆ ಕ್ವಿಂಟಲ್ ಮಾತ್ರ ಇಳುವರಿ ಬರುತ್ತದೆ. ಬೆಳೆಗಾಗಿ ಸಾಲ ಮಾಡಿದ್ದು, ಮಾರಾಟವಾಗದೇ ನಷ್ಟ ಆಗುತ್ತಿದೆ' ಎಂದು ರೈತ ವಿರೂಪನಗೌಡ ಅಳಲು ತೋಡಿಕೊಂಡರು.

ಏನಿದು ಟೆಫ್ಫ್?: ಪೂರ್ವ ಆಫ್ರಿಕಾದ ಎರಿಟ್ರಿಯಾ ಮತ್ತು ಇಥಿಯೋಪಿಯಾ ರಾಷ್ಟ್ರಗಳಲ್ಲಿ ಇದನ್ನು ಹೆಚ್ಚಾಗಿ ಬೆಳೆಯುತ್ತಾರೆ. ಭಾರತ, ಆಸ್ಟ್ರೇಲಿಯಾ, ಅಮೆರಿಕ ಹಾಗೂ ಜರ್ಮನಿ ದೇಶಗಳಿಗೆ ಈಚೆಗೆ ಬೆಳೆ ಪರಿಚಯಿಸಲಾಗಿದೆ. ಇದು ಹುಲ್ಲಿನಂತೆ ಬೆಳೆಯುತ್ತದೆ.

ಅಲ್ಕೊಹಾಲ್ ತಯಾರಿಕೆಯಲ್ಲಿ ಇದನ್ನು ಬಳಕೆ ಮಾಡಲಾಗುತ್ತದೆ. ಜಾನುವಾರುಗಳಿಗೆ ಮೇವು ಆಗಿಯೂ ಉಪಯೋಗಿಸಲಾಗುತ್ತದೆ. ಕ್ಯಾಲ್ಸಿಯಂ, ಕಬ್ಬಿಣ ಹಾಗೂ ವಿಟಮಿನ್ ಸಿ ಅಂಶಗಳು ಇದರಲ್ಲಿ ಹೆಚ್ಚಾಗಿರುತ್ತವೆ.

ಮಾರಾಟವಾಗದ ಟೆಫ್ಫ್ ಸಿರಿಧಾನ್ಯ ಸಂರಕ್ಷಿಸಿಟ್ಟಿರುವ ರಾಮದುರ್ಗದ ರೈತರು

ಟೆಫ್ಫ್ ಸಿರಿಧಾನ್ಯ ಬೆಳೆ ಬಗ್ಗೆ ಗೊತ್ತಿಲ್ಲ. ಸಂಬಂಧಿಸಿದ ರೈತರು ಇಲಾಖೆಯನ್ನು ಸಂಪರ್ಕಿಸಿ, ಮಾಹಿತಿ ನೀಡಲಿ. ಆ ನಂತರ ಏನಾಗಿದೆ ಎಂಬುದನ್ನು ವಿಚಾರಿಸುತ್ತೇವೆ
ಮಲ್ಲಿಕಾರ್ಜುನ
ಜಂಟಿ ಕೃಷಿ ನಿರ್ದೇಶಕ, ರಾಯಚೂರು

ಮೂಡಿಸ್ ಅನಾಲಿಟಿಕ್ಸ್ ಅಭಿಪ್ರಾಯ

ಅಹಿತಕರ ಮಟ್ಟದಲ್ಲಿ ಹಣದುಬ್ಬರ

ನವದೆಹಲಿ (ಪಿಟಿಐ): ಭಾರತದಲ್ಲಿನ ಹಣದುಬ್ಬರ ದರವು 'ಅಹಿತಕರ ಅನಿಸುವಷ್ಟು ಹೆಚ್ಚಿನ' ಮಟ್ಟದಲ್ಲಿ ಇದೆ ಎಂದು ಮೂಡಿಸ್ ಅನಾಲಿಟಿಕ್ಸ್ ಹೇಳಿದೆ. ಪೆಟ್ರೋಲ್, ಡೀಸೆಲ್ ದರವು ದುಬಾರಿ ಆಗಿರುವುದು ಚಿಲ್ಲರೆ ಹಣದುಬ್ಬರ ದರ ಹೆಚ್ಚಿನ ಮಟ್ಟದಲ್ಲಿಯೇ ಇರುವಂತಹ ಒತ್ತಡ ಸೃಷ್ಟಿಸಲಿದೆ ಎಂದು ಅದು ಅಭಿಪ್ರಾಯ ವ್ಯಕ್ತಪಡಿಸಿದೆ.

ಹಣದುಬ್ಬರ ಹೆಚ್ಚಳದ ಕಾರಣದಿಂದಾಗಿ ಭಾರತೀಯ ರಿಸರ್ವ್ ಬ್ಯಾಂಕ್‌ಗೆ (ಆರ್‌ಬಿಐ) ರೆಪೊ ದರವನ್ನು ಇನ್ನಷ್ಟು ಇಳಿಸಲು ಆಗುವುದಿಲ್ಲ ಎಂದು ಕೂಡ ಮೂಡಿಸ್ ಹೇಳಿದೆ.

ಚಿಲ್ಲರೆ ಹಣದುಬ್ಬರ ದರವು ಜನವರಿಯಲ್ಲಿ ಶೇಕಡ 4.1ರಷ್ಟು ಇದ್ದಿದ್ದು ಫೆಬ್ರುವರಿಯಲ್ಲಿ ಶೇ 5ಕ್ಕೆ ಹೆಚ್ಚಳವಾಗಿದೆ. ರೆಪೊ ದರ ನಿರ್ಧರಿಸುವಾಗ ಆರ್‌ಬಿಐ ಮುಖ್ಯವಾಗಿ ಚಿಲ್ಲರೆ ಹಣದುಬ್ಬರ ದರವನ್ನು ಪರಿಗಣಿಸುತ್ತದೆ.

ಏಷ್ಯಾದ ಹೆಚ್ಚಿನ ದೇಶಗಳಲ್ಲಿ ಹಣದುಬ್ಬರ ಪ್ರಮಾಣವು ಕಡಿಮೆ ಇದೆ. ಇಂಧನ ಬೆಲೆ ಏರಿಕೆ ಆಗುತ್ತಿರುವುದರಿಂದಾಗಿ, ಅರ್ಥ ವ್ಯವಸ್ಥೆಯಲ್ಲಿ ಚಟುವಟಿಕೆಗಳು ಹೆಚ್ಚಾಗುತ್ತಿರುವ ಕಾರಣ ಹಣದುಬ್ಬರವು 2021ರಲ್ಲಿ ನಿಧಾನವಾಗಿ ಹೆಚ್ಚಾಗುವ ನಿರೀಕ್ಷೆ ಇದೆ. 'ಏಷ್ಯಾದಲ್ಲಿ ಭಾರತ ಮತ್ತು ಫಿಲಿಪೀನ್ಸ್ ಮಾತ್ರ ಅಪವಾದದಂತೆ ಕಾಣಿಸುತ್ತಿವೆ. ಈ ಎರಡು ದೇಶಗಳಲ್ಲಿ ಹಣದುಬ್ಬರ ಪ್ರಮಾಣವು ಹಿತಕರ ಮಟ್ಟಕ್ಕಿಂತ ಹೆಚ್ಚಿನದಾಗಿದೆ. ಇದು ನೀತಿ ನಿರೂಪಕರ ಪಾಲಿಗೆ ಹೊಸದೊಂದು ಸವಾಲು' ಎಂದು ಮೂಡಿಸ್ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಭಾರತದಲ್ಲಿನ ಹಣದುಬ್ಬರ ಪ್ರಮಾಣವು ಚಿಂತೆ ಮೂಡಿಸುವಂತೆ ಇದೆ ಎಂದೂ ವರದಿ ಅಭಿಪ್ರಾಯ ವ್ಯಕ್ತಪಡಿಸಿದೆ. ಆಹಾರ ವಸ್ತುಗಳ ಬೆಲೆಯು ತೀವ್ರವಾಗಿ ಏರಿಳಿತ ಕಾಣುತ್ತಿದ್ದುದು ಹಾಗೂ ತೈಲ ಬೆಲೆ ಹೆಚ್ಚಾಗುತ್ತಿದ್ದುದು ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು 2020ರಲ್ಲಿ ಹಲವು ಬಾರಿ ಶೇ 6ಕ್ಕಿಂತ ಹೆಚ್ಚಿನ ಮಟ್ಟಕ್ಕೆ ಒಯ್ದಿದ್ದವು ಎಂದು ಅದು ಹೇಳಿದೆ.

ಬಿಬಿಎಂಪಿ: 2020–21ನೇ ಸಾಲಿನ ಆಸ್ತಿ ತೆರಿಗೆ

ಇಂದು ಕಟ್ಟದಿದ್ದರೆ ದುಪ್ಪಟ್ಟು ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಸ್ವತ್ತುಗಳ ಮಾಲೀಕರು 2020–21ನೇ ಸಾಲಿನ ಆಸ್ತಿ ತೆರಿಗೆ ಪಾವತಿಸುವುದಕ್ಕೆ ಬುಧವಾರ ಕೊನೇ ದಿನ. ಈ ಆರ್ಥಿಕ ವರ್ಷದ ತೆರಿಗೆಯನ್ನು ಬುಧವಾರ ಪಾವತಿಸದೇ ಹೋದರೆ ದುಪ್ಪಟ್ಟು ದಂಡದೊಂದಿಗೆ ಪಾವತಿಸಬೇಕಾಗುತ್ತದೆ.

'ಈ ಆರ್ಥಿಕ ವರ್ಷದ ತೆರಿಗೆ ಪಾವತಿ ಬುಧವಾರ ಕೊನೆಗೊಳ್ಳುತ್ತದೆ. ಕೋವಿಡ್‌ನಿಂದ ಉಂಟಾಗಿದ್ದ ಬಿಕ್ಕಟ್ಟಿನ ಹೊರತಾಗಿಯೂ ಈ ಬಾರಿ ಹೆಚ್ಚಿನ ಆಸ್ತಿ ಮಾಲೀಕರು ತೆರಿಗೆಯನ್ನು ಪಾವತಿಸಿದ್ದಾರೆ. ನಾನಾ ಕಾರಣಗಳಿಂದಾಗಿ ತೆರಿಗೆ ಪಾವತಿಸದೇ ಇದ್ದವರು ಬುಧವಾರವಾದರೂ ತೆರಿಗೆ ಕಟ್ಟುವುದು ಒಳ್ಳೆಯದು. ನಂತರ ದುಪ್ಪಟ್ಟು ದಂಡದೊಂದಿಗೆ ತೆರಿಗೆ ಪಾವತಿಸಬೇಕಾಗುತ್ತದೆ. ಅಷ್ಟೇ ಅಲ್ಲ ತೆರಿಗೆ ಪಾವತಿ ವಿಳಂಬವಾದಂತೆಯೇ ತೆರಿಗೆಯ ಮೊತ್ತಕ್ಕೆ ಪ್ರತಿ ತಿಂಗಳಿಗೆ ಶೇ 2ರಷ್ಟು ದಂಡ ಶುಲ್ಕವನ್ನು ಸೇರಿಸಿ ಪಾವತಿಸಬೇಕಾಗುತ್ತದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಕಂದಾಯ) ಎಸ್. ಬಸವರಾಜ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರಸಕ್ತ ಆರ್ಥಿಕ ವರ್ಷದಲ್ಲಿ ಮಂಗಳವಾರದವರೆಗೆ ಒಟ್ಟು ₹ 2,753 ಕೋಟಿ ತೆರಿಗೆ ಸಂಗ್ರಹವಾಗಿದೆ. ಇನ್ನೂ 9,283 ಮಂದಿ ಚಲನ್ ಪಡೆದುಕೊಂಡಿದ್ದು, ಅದರಿಂದ ₹ 64.94 ಕೋಟಿ ತೆರಿಗೆ ಬರಲಿದೆ' ಎಂದರು.

3B ಪುಟ ನೋಡಿ

ಅಂಕಿ-ಅಂಶಗಳು

₹1,343.31 ಕೋಟಿ	₹1,410.63 ಕೋಟಿ	20.60 ಲಕ್ಷ
ಬಿಬಿಎಂಪಿಗೆ ಆನ್‌ಲೈನ್ ಮೂಲಕ ಇದುವರೆಗೆ ಪಾವತಿಯಾಗಿರುವ ಆಸ್ತಿ ತೆರಿಗೆ	ಚಲನ್ ಮೂಲಕ ಇದುವರೆಗೆ ಪಾವತಿಯಾಗಿರುವ ಆಸ್ತಿ ತೆರಿಗೆ	ತೆರಿಗೆ ಪಾವತಿ ವ್ಯಾಪ್ತಿಗೆ ಸೇರಿರುವ ಆಸ್ತಿಗಳು

ಮಹಿಳೆಯರಿಗೆ ಉಚಿತ ತರಬೇತಿ

ಬೆಂಗಳೂರು: ಹೊಸ ಬೆಳಕು ಎಜುಕೇಷನ್ ಸೇವಾ ಟ್ರಸ್ಟ್ ಮಹಿಳಾ ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಆಯ್ಕೆಪರೀಕ್ಷೆಗೆಹಾಜರಾಗುವಆಕಾಂಕ್ಷಿಗಳಿಗೆಉಚಿತತರಬೇತಿಯನ್ನುಹಮ್ಮಿಕೊಂಡಿದೆ. ಏ.4ರಂದು ಬೆಳಿಗ್ಗೆ 10.30ಕ್ಕೆ ಲಿಖಿತ ಪರೀಕ್ಷೆ ಮತ್ತು ಸಂದರ್ಶನ ನಡೆಯಲಿದೆ. ಈ ತರಬೇತಿಗೆ 100 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಸಕ್ತ ಅಭ್ಯರ್ಥಿಗಳು ಹೆಸರು ನೋಂದಾಯಿಸಿಕೊಳ್ಳಬೇಕು. ಟ್ರಸ್ಟ್‌ನ ಕಚೇರಿಯು ಕುರುಬರಹಳ್ಳಿ ಮುಖ್ಯರಸ್ತೆಯ ಎರಡನೇ ಅಡ್ಡ ರಸ್ತೆಯಲ್ಲಿದೆ. ಸಂಪರ್ಕ: 6366828041

ಕೃಷಿ ಮಾರಾಟ ಇಲಾಖೆ
ಉಪ ನಿರ್ದೇಶಕರ ಕಚೇರಿ, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ, ಎಂ.ಜಿ ಕಾಂಪ್ಲೆಕ್ಸ್, ಎ.ಪಿ.ಎಂ.ಸಿ. ಆವರಣ, ಯಶವಂತಪುರ, ಬೆಂಗಳೂರು–22, ಇ–ಮೇಲ್ ddbanglr@gmail.com, ದೂ: 080–23471717
ಸಂಖ್ಯೆ: ಕೃಮಾಇ/ಉನಿ/ಬೆಂ.ನ&ಗ್ರಾಂ/ /2020–21. ದಿನಾಂಕ: 15.03.2021

ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ / ರೈತಬಾಂಧವರಿಗೆ / ಸಮಸ್ತ ಪೇಟೆ ಕಾರ್ಯಕರ್ತರಿಗೆ / ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ತಿಳಿಸುವುದೇನೆಂದರೆ, M/S EDELWEISS RURAL AND CORPORATE SERVICES LIMITED, No.5, 2nd Floor, Onyx Cerntre, Museum Road, Bengaluru-560001 ಇವರು ಉಪನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಈ ಕಛೇರಿಯಿಂದ ದಿನಾಂಕ:02–01–2015 ರಂದು ವರ್ತಕರ ಪರವಾನಗಿ ಸಂಖ್ಯೆ: DAM/DD-BNG/TRL/3417/2014-15(YPR), D:02-01-2015, KT84367 ರಲ್ಲಿ ವರ್ತಕರ ಲೈಸನ್ಸ್ ಪಡೆದು ವ್ಯವಹರಿಸುತ್ತಿರುತ್ತಾರೆ. ಸದರಿಯವರು ತಮ್ಮ ಸಂಸ್ಥೆಯ ಖರೀದಿದಾರರ ಲೈಸನ್ಸ್ ಅನ್ನು ರದ್ದುಪಡಿಸುವಂತೆ ಮನವಿ ಸಲ್ಲಿಸಿರುತ್ತಾರೆ.
ಮುಂದುವರೆದು, ಸದರಿಯವರಿಂದ ಸಮಿತಿಗಾಗಲಿ / ರೈತರಿಗಾಗಲಿ / ವರ್ತಕರಿಗಾಗಲಿ/ ಸರ್ಕಾರಕ್ಕಾಗಲಿ ಹಾಗೂ ಇತರೆ ಸಂಘ ಸಂಸ್ಥೆಗಳಿಗಾಗಲಿ ಯಾವುದೇ ಬಾಕಿ ಇರುವ/ ಇಲ್ಲದಿರುವ ಕುರಿತು ಯಾರಿಂದಲಾದರೂ ಸಲಹೆ / ಸೂಚನೆ / ಆಕ್ಷೇಪಣೆಗಳೇನಾದರೂ ಇದ್ದರೆ ಈ ಪ್ರಕಟಣೆಯ ದಿನಾಂಕದಿಂದ 07 ದಿನಗಳೊಳಗಾಗಿ ಲಿಖಿತ ರೂಪದಲ್ಲಿ ಈ ಕೆಳಗೆ ಸಹಿ ಮಾಡಿರುವವರಿಗೆ ಸಲ್ಲಿಸತಕ್ಕದ್ದು. ತಡವಾಗಿ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ನಿಗದಿತ ಅವಧಿಯಲ್ಲಿ ಆಕ್ಷೇಪಣೆಗಳು ಬಾರದೇ ಇದ್ದಲ್ಲಿ ನಿಯಮಾನುಸಾರ ಯಾವುದೇ ಆಕ್ಷೇಪಣೆಗಳು ಬಂದಿಲ್ಲವೆಂದು ಪರಿಗಣಿಸಿ ಮುಂದಿನಂತೆ ಕ್ರಮವಹಿಸಲಾಗುವುದಾಗಿ ಈ ಪ್ರಕಟಣೆಯ ಮೂಲಕ ತಿಳಿಸಲಾಗಿದೆ.

ಸಹಿ/– ನಜೀಬುಲ್ಲಾ ಖಾನ್
ಉಪನಿರ್ದೇಶಕರು, ಕೃಷಿ ಮಾರಾಟ ಇಲಾಖೆ,
ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಮಹಾಲಕ್ಷ್ಮಿ ಮೊರೆ ಹೋದ ರಮೇಶ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರು ಮಂಗಳವಾರ ನೆರೆಯ ಮಹಾರಾಷ್ಟ್ರದ ಕೊಲ್ಹಾಪುರದ ಮಹಾಲಕ್ಷ್ಮಿ ದೇವಸ್ಥಾನಕ್ಕೆ ತೆರಳಿ, ಸಿ.ಡಿ. ಪ್ರಕರಣದಿಂದ ಉಂಟಾಗಿರುವ ಸಂಕಷ್ಟದಿಂದ ತನ್ನನ್ನು ಪಾರು ಮಾಡುವಂತೆ ದೇವಿಯ ಮೊರೆ ಹೋದರು.

ಸೋಮವಾರ ರಾತ್ರಿ ಗೋಕಾಕಕ್ಕೆ ಬಂದು ತಂಗಿದ್ದ ಅವರು, ಕೊಲ್ಹಾಪುರ ದೇಗುಲದಲ್ಲಿ ವಿಶೇಷ ಪೂಜೆ ಸಲ್ಲಿಸಿ ಬೆಂಗಳೂರಿಗೆ ವಾಪಸ್ಸಾದರು ಎಂದು ವಿಶ್ವಾಸನೀಯ ಮೂಲಗಳು ತಿಳಿಸಿವೆ.

ಬನ್ನೇರುಘಟ್ಟ ಜೈವಿಕ ಉದ್ಯಾನವನ
ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು–83
ದೂರವಾಣಿ: 080–29776466/8884414268, ಇ–ಮೇಲ್: bannerghattazoo@gmail.com
ಸಂಖ್ಯೆ: ಎ3/ಬಬಪಾ/ಟೆಂಡರ್/ಸಿವಿಲ್ ಕಾಮಗಾರಿ/ಸಿಆರ್–5/2020–21 ದಿನಾಂಕ : 22.03.2021

ಟೆಂಡರ್ ಪ್ರಕಟಣೆ

ಬನ್ನೇರುಘಟ್ಟ ಜೈವಿಕ ಉದ್ಯಾನವನದ ವ್ಯಾಪ್ತಿಯಲ್ಲಿ ಆಯೋಜಿಸಿರುವ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಪಿಡಬ್ಲ್ಯೂಡಿ ಗುತ್ತಿಗೆದಾರರಿಂದ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://eproc.karnataka.gov.in) ಮುಖಾಂತರ ಟೆಂಡರನ್ನು ಕರೆಯಲಾಗಿರುತ್ತದೆ. ನಿಗಧಿತ ಇ.ಎಂ.ಡಿ ಹಾಗೂ ಟೆಂಡರ್ ಪ್ರೊಸೆಸ್ಸಿಂಗ್ ಫೀ ಯೊಂದಿಗೆ ಟೆಂಡರ್ ಸ್ವೀಕರಿಸಲು ಕೊನೆಯ **ದಿನಾಂಕ: 09.04.2021 ಸಂಜೆ 4.00 ಗಂಟೆಯಾಗಿರುತ್ತದೆ.** ಟೆಂಡರ್ ಅನ್ನು **ದಿನಾಂಕ: 12.04.2021 ಬೆಳಿಗ್ಗೆ 11.30ರ** ನಂತರ ತೆರೆಯಲಾಗುವುದು. ವಿವರವಾದ ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ವಾಸಾಸಂಇ/ಬೆಂ.ನ/ಶಿರಡಿ ಸಾಯಿ/3281/2020–21 ಕಾರ್ಯನಿರ್ವಾಹಕ ನಿರ್ದೇಶಕರು

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜನವಾದಿ ಮಹಿಳಾ ಸಂಘಟನೆ ಉಪಾಧ್ಯಕ್ಷೆ ಕೆ.ಎಸ್‌.ವಿಮಲಾ ಆತಂಕ

‘ನ್ಯಾಯಾಲಯದ ನಡೆ ಕಳವಳಕಾರಿ’

ಪ್ರಜಾವಾಣಿ ವಾರ್ತೆ

ಕೆ.ಎಸ್‌.ವಿಮಲಾ

ಬೆಂಗಳೂರು: ‘ಆರು ಸಚಿವರ ವಿರುದ್ಧ ಮಾಧ್ಯಮಗಳು ಮಾನಹಾನಿಕರ-ವಾದ ವಿಚಾರಗಳ್ಯಾವುದನ್ನೂ ಪ್ರಸಾರ ಮಾಡಬಾರದು ಎಂದು ನ್ಯಾಯಾಲಯ ತಾತ್ಕಾಲಿಕ ಆದೇಶ ನೀಡಿದೆ. ಇದು ಅತ್ಯಂತ ಕಳವಳಕಾರಿ. ನ್ಯಾಯಾಲಯವು ಹೀಗೆ ಕಣ್ಣು ಮುಚ್ಚಿಕೊಂಡು ತೀರ್ಪು ನೀಡುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ’ ಎಂದು ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ ಕೆ.ಎಸ್. ವಿಮಲಾ ಟೀಕಿಸಿದರು.

‘ನಾವೆದ್ದು ನಿಲ್ಲದಿರೆ’ ಸಂಘಟನೆಯು ಮಂಗಳವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿ ಶಾಸಕ ರಮೇಶ ಜಾರಕಿಹೊಳಿಗೆ ಸಂಬಂಧಿಸಿದ್ದು ಎನ್ನಲಾಗುತ್ತಿರುವ ಸಿ.ಡಿ. ಪ್ರಕರಣದ ಸಂತ್ರಸ್ತ ಯುವತಿಗೆ ರಕ್ಷಣೆ ಹಾಗೂ ಸೂಕ್ತ ಭದ್ರತೆ ಕಲ್ಪಿಸುವುದು ಸರ್ಕಾರದ ಕರ್ತವ್ಯ. ಕಾನೂನಿನ ಚೌಕಟ್ಟಿನಲ್ಲಿ ತನಿಖೆ ಮಾಡಿ ಸತ್ಯ ಹೊರಗೆಡಹಬೇಕಿದ್ದ ಎಸ್‌ಐಟಿ, ಆ ಹಾದಿಯಲ್ಲಿ ಸಾಗುತ್ತಿರುವಂತೆ ಕಾಣುತ್ತಿಲ್ಲ. ಎಸ್‌ಐಟಿಯ ನಡೆ ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಹೀಗಾಗಿ ಉಚ್ಚ ನ್ಯಾಯಾಲಯದ ಮೇಲುಸ್ತುವಾರಿಯಲ್ಲಿ ತನಿಖೆ ನಡೆಯಬೇಕು’ ಎಂದು ಒತ್ತಾಯಿಸಿದರು.

‘ಸಿ.ಡಿ.ಪ್ರಕರಣವು ಗೊಂದಲದ ಗೂಡಾಗಿದೆ. ನಿತ್ಯ ಹೊಸ ಹೊಸ ವಿಷಯಗಳು ಹೊರಬೀಳುತ್ತಿವೆ. ನೈಜ ಸತ್ಯ ಹೊರಬರಬೇಕಾದರೆ ನಿಷ್ಪಕ್ಷಪಾತ ಹಾಗೂ ಪಾರದರ್ಶಕ ತನಿಖೆ ಅಗತ್ಯ’ ಎಂದರು.

‘ಕೋವಿಡ್ ಎರಡನೇ ಅಲೆ ವ್ಯಾಪಿಸುತ್ತಿದೆ. ಇಂತಹ ಸಂದರ್ಭದಲ್ಲಿ ಅದರ ನಿಯಂತ್ರಣಕ್ಕೆ ಅಗತ್ಯವಿರುವ ಕ್ರಮ ಕೈಗೊಳ್ಳುವುದು ಆರೋಗ್ಯ ಸಚಿವರ ಜವಾಬ್ದಾರಿ. ಆದರೆ ಕೆ.ಸುಧಾಕರ್ ಅದನ್ನು ಮರೆತಿರುವಂತಿದೆ. ಅವರು ಇಲಾಖೆ ಕೆಲಸಗಳತ್ತ ಗಮನಹರಿಸುವ ಬದಲು ಸ್ನೇಹಿತನನ್ನು ಸಮರ್ಥಿಸಿಕೊಳ್ಳುವ ರೀತಿಯ ಹೇಳಿಕೆಗಳನ್ನು ನೀಡುತ್ತಾ ಬೇಜವಾಬ್ದಾರಿತನ ಪ್ರದರ್ಶಿಸುತ್ತಿದ್ದಾರೆ’ ಎಂದರು.

‘224 ಶಾಸಕರ ವೈಯಕ್ತಿಕ ಜೀವನದ ಬಗ್ಗೆ ತನಿಖೆಯಾಗಲಿ. ಆಗ ಎಲ್ಲರ ಬಂಡವಾಳ ಬಯಲಾಗಲಿದೆ ಎಂದು ಸುಧಾಕರ್ ಹೇಳಿದ್ದಾರೆ. ಇಂತಹ ಬಾಲಿಶ ಹೇಳಿಕೆಯ ಮೂಲಕ ಸದನ ಹಾಗೂ ಮಹಿಳೆಯರ ಘನತೆಗೆ ಕುಂದುಂಟುಮಾಡಿರುವ ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು. ಮಾಧ್ಯಮಗಳು ಮಹಿಳಾ ವಿರೋಧಿ ನೆಲೆಯಲ್ಲಿ ಸುದ್ದಿ ಬಿತ್ತರಿಸುತ್ತಿರುವುದನ್ನು ಭಾರತದ ಪ್ರೆಸ್ ಕೌನ್ಸಿಲ್ ಗಂಭೀರವಾಗಿ ಪರಿಗಣಿಸಬೇಕು’ ಎಂದರು.

ಜನವಾದಿ ಸಂಘಟನೆಯ ಲಕ್ಷ್ಮಿ, ಗಮನ ಮಹಿಳಾ ಸಮೂಹ ಸಂಸ್ಥೆಯ ಮಮತಾ, ಭಾಗೀರಥಿ ಇದ್ದರು.

ರಸ್ತೆ ಗುಂಡಿ ಪರಿಶೀಲಿಸಲು ಕೆಎಸ್‌ಎಲ್‌ಎಸ್‌ಎಗೆ ನಿರ್ದೇಶನ

ಬೆಂಗಳೂರು: ‘ನಗರದ 101 ಬೀದಿಗಳು ಮತ್ತು 642 ಪಾದಚಾರಿ ಮಾರ್ಗಗಳ ಸಮಸ್ಯೆಗಳನ್ನು ಪರಿಶೀಲಿಸಿ ಸರಿಪಡಿಸಲಾಗಿದೆ’ ಎಂದು ಬಿಬಿಎಂಪಿ ಹೈಕೋರ್ಟ್‌ಗೆ ಮಾಹಿತಿ ನೀಡಿದೆ. ಕೆಲ ಬೀದಿಗಳಿಗೆ ಭೇಟಿ ನೀಡಿ ತಪಾಸಣೆ ನಡೆಸುವಂತೆ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ (ಕೆಎಸ್‌ಎಲ್‌ಎಸ್‌ಎ) ಪೀಠ ನಿರ್ದೇಶನ ನೀಡಿದೆ. ಈ ಸಂಬಂಧ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥಪ್ರಸಾದ್ ಸಲ್ಲಿಸಿರುವ ಅಫಿಡವಿಟ್ ಪರಿಶೀಲಿಸಿದ ಪೀಠವು, ಸಮಸ್ಯೆ ಸರಿಪಡಿಸಿರುವ ನಿರ್ದಿಷ್ಟ ಸ್ಥಳ ಮತ್ತು ರಸ್ತೆಗಳ ವಿವರವನ್ನು ಪ್ರಾಧಿಕಾರಕ್ಕೆ ಒದಗಿಸುವಂತೆ ಪಾಲಿಕೆಗೆ ನಿರ್ದೇಶನ ನೀಡಿದೆ.

‘ಕೆಎಸ್‌ಎಲ್‌ಎಸ್‌ಎ ಕಾರ್ಯದರ್ಶಿ ಅವರು ಎಲ್ಲರ ಸಹಕಾರ ಪಡೆದು ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು. ಅಫಿಡವಿಟ್‌ನಲ್ಲಿ ಸಲ್ಲಿಸಿರುವ ವಿವರ ಸರಿಯಿದೆಯೇ ಎಂಬುದನ್ನು ಗಮನಿಸಬೇಕು’ ಎಂದು ಪೀಠ ತಿಳಿಸಿತು. ಏ.22ಕ್ಕೆ ವಿಚಾರಣೆ ಮುಂದೂಡಲಾಯಿತು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Hospital & Medical Jobs

ಜೈನ್ ಮಿಷನ್ ಹಾಸ್ಪಿಟಲ್
ಚಿಕ್ಕಬಳ್ಳಾಪುರ
ಸಿಬ್ಬಂದಿ ಬೇಕಾಗಿದ್ದಾರೆ
1. ಸಿ ಎಂ ಒ
2 ವೈದ್ಯರು
3. ರಿಜಿಸ್ಟ್ರೇಷನ್ ಇನ್ ಮೆಡಿಸಿನ್/ ಸರ್ಜರಿ /ಆರ್ಥೋ /ಒಬಿಜಿ/ ನೇತ್ರಶಾಸ್ತ್ರ
4. ನರ್ಸಿಂಗ್ ಇನ್ ಚಾರ್ಜ್
5. ಐ ಸಿ ಯು / ಎಮರ್ಜೆನ್ಸಿ ನರ್ಸ್
6. ಸ್ಟಾಫ್ ನರ್ಸ್
7. ಲ್ಯಾಬ್/ ಆಪರೇಷನ್ ಥಿಯೇಟರ್ / ಎಕ್ಸ್ ರೇ ಟೆಕ್ನಿಷಿಯನ್
8. ಸೀನಿಯರ್ ಫಾರ್ಮಸಿಸ್ಟ್
9. ಬಿಲ್ಲಿಂಗ್ / ರಿಸೆಪ್ಷನಿಸ್ಟ್
10. ಹೌಸ್ ಕೀಪಿಂಗ್ ಸೂಪರ್‌ವೈಸರ್
11. ಮಾನವ ಸಂಪನ್ಮೂಲ/ ಆಡಳಿತ / ಅಕೌಂಟ್ಸ್ / ಐಟಿ ಮ್ಯಾನೇಜರ್
12. ಮಾರ್ಕೆಟಿಂಗ್/ ಸಾರ್ವಜನಿಕ ಸಂಪರ್ಕ ಅಧಿಕಾರಿ

ಅರ್ಹತೆ ಮತ್ತು ಅನುಭವಕ್ಕೆ ತಕ್ಕಂತೆ ಸಂಬಳ ನೀಡಲಾಗುವುದು
jainmissionhospital@gmail.com
Contact : +91 9141719239

Accounts & Finance

WANTED_FEMALE EXPERIENCED ACCOUNTANTS with Knowledge of TALLY, IT, GST, ESI, PF Candidates residingin and around Vijayanagar, Nagarabhavi and Chandralayout. Call:080-23214288. Apply to: jayaramaiah24@gmail.com

REQUIRED SENIOR ACCOUNTANT- Minimum-10+ years experience. Email Resume: turnkeyce.jobs@gmail.com Phone: 080- 26600669

REQUIRED ACCOUNTANTS B.com Graduate Experience 3-5 years With Tally, TDS & GST Salary upto 20000/- to 25000/- Call:7338084555 9880727889 Email:glprojects7889@gmail.com

WANTED: CHARTERED ACCOUNTANTS, Commerce Graduates,Auditors, Retired Auditors/Accountants and CA (Inter/Final-Articles Completed).Apply RANGARAJU and ASSOCIATES, 503 & 504, Brigade Towers, Brigade Road, Bangalore. Contact:080 22249077, 9448070838 or Email:rangaraju.associates@gmail.com

Engg/ Production Technical

WANTED B.E Mechanical Engineer Trainees Fresher's for an Aircraft Component Manufacturing Industry. Training period 1YEAR, Stipend 0-6-Months Rs.12000, 7-12-Months Rs.14000. Mail Your resume to mail@ayyappa-cnc.com

MNC REQUIRED Diploma Mechanicals, Electronics, Fitters, Welders, Electricians, CNC Operators, Storekeepers, Accountants. Monica: 7204367465/ 9845379900

Teachers/ Professors

REQUIRED P.G. Faculties for Pharmacy, Nursing, Physiotherapy,Ayurveda, Homeopathy & Bio-Chemistry.Contact: K.T.G College, HegganahalliCross, Sunkadakatte, Bengaluru-560 091. Mob: 9845051023 / 9880453539 Email: ktgcolleges@gmail.com

ARVIND Residential School & PU College, Kunigal
Ph: 08132-210000/ 01. Mob: 9483683002/ 005.
Website: www.arvindinternationalschool.com
REQUIRES DEDICATED & PASSIONATE PROFESSIONALS WITH GOOD COMMUNICATION SKILLS
- PUC LECTURER (Science & Commerce Stream)
- Well Experienced NEET & JEE faculties for PUC
- Nursery/ Primary/ Middle School/ High school Teachers (ICSE/ CBSE & State)
- Co-Ordinator (ICSE & CBSE), Hostel Co-Ordination
- Warden (M/F), Cooks, Nurse (F), Office Assistant (F)

Experienced in all streams with desired qualification
Send your resume with recent passport size photo to airsjobs@gmail.com within 7 days
OR Walk-in interview from 21st April Onwards (Monday to Thursday Between 10.00 to 2.00pm only)

ST. JOSEPH'S COLLEGE OF COMMERCE (AUTONOMOUS) BANGALORE
Accredited with A++ Grade (4th Cycle) by NAAC
www.sjcc.edu.in
ASSISTANT / ASSOCIATE PROFESSORS
required to teach Commerce / Management / English.
Qualification : PG in Commerce or Management / CA /CMA /ACCA with NET/ SLET/ Ph.D
(Preferable Specialization - Finance / Accountancy / Entrepreneurship/ Information Technology).
Other things being equal, preference will be for SC/ST candidates and those with research experience.
Applications should be mailed to: principal@sjcc.edu.in
ON OR BEFORE APRIL 10, 2021

HARWARD INTERNATIONAL SCHOOL CBSE & PU COLLEGE SCIENCE INTEGRATED
Affiliated No.830335
Dasanapura, Tumkur Road, Bangalore North – 562123
www.harwardinstitution.com
Walk in interview On 04-04-2021 @10:30am to 4:00pm
LECTURERS: INTEGRATED Physics, Chemistry, Biology Mathematics,(having experience in handling integrated courses), English, Social Studies, Computer Science, Hindi & Kannada (min. 5 years of exp. with B.Ed)
Primary and Montessori Teachers
Graduates with B.Ed or NTT exp. of at least 3-5yrs. Non teaching staff- DTP operator (exp. of 3yrs in a reputed CBSE school).
Note: All candidates should have: 1. Excellent communication skills. 2. Openness to innovative methods of teaching. 3. Ability to work in team.
Please mail your resume to infoharwardschoolbgl@gmail.com
Ph:9880112833/9945230285 9945230286 - 080-29723540

ST SOPHIA Convent (CBSE) Nagarabhavi requires Trained /experienced Office Assistants, Teachers for Mathematicians, Science, Socialscience, English, for primary & High school (Immediate Appointment) principal@stsophiaconvent.org Contact: 9243031872

Marketing & Sales

WANTED MARKETING executives for leading newspaper Salary 15000/- to 25000/- 2 wheeler must. Call: 8095400002.

Factory

WANTED IMMEDIATELY a).PRODUCTION MANAGER/ ENGINEER and b).MARKETING EXECUTIVE with-min-3years experience for a manufacturing Company located-in Bommanahalli, Hosur-Road, Bangalore-68. Send-resume with-expected salaries-to: upplangalore@gmail.com/ Contact: 9449817703.

Multiple Vacancy

ಬೇಕಾಗಿದ್ದಾರೆ
ಬೆಂಗಳೂರು ನಗರದಲ್ಲಿರುವ ಒಂದು ವಿಶೇಷ ಉದ್ದೇಶದ ಯಂತ್ರೋಪಕರಣಗಳನ್ನು ಉತ್ಪಾದಿಸುವ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಬೇಕಾಗಿದ್ದಾರೆ.
- ಸ್ಟೋರ್ ಕೀಪರ್ – ಇಂಜಿನಿಯರಿಂಗ್ ಸ್ಟೋರ್‌ಗಳಲ್ಲಿ 4–5 ವರ್ಷ ಅನುಭವ ಹೊಂದಿರಬೇಕು
- ಟೆಕ್ನಿಷಿಯನ್ – ಐಟಿಐ ಫಿಟ್ಟರ್ ಸರ್ಟಿಫಿಕೇಟ್ ಮತ್ತು ಮಷೀನ್ ಅಸೆಂಬ್ಲಿ ಕ್ಷೇತ್ರದಲ್ಲಿ 4–5 ವರ್ಷ ಅನುಭವ ಹೊಂದಿರಬೇಕು
- ಟೆಕ್ನಿಷಿಯನ್ – ಐಟಿಐ ಇಲೆಕ್ಟ್ರಿಕಲ್ ಸರ್ಟಿಫಿಕೇಟ್ ಮತ್ತು ಮಷೀನ್ ವೈರಿಂಗ್ ಕ್ಷೇತ್ರದಲ್ಲಿ 4–5 ವರ್ಷ ಅನುಭವ ಹೊಂದಿರಬೇಕು
- ಪ್ಲಾಂಟ್ ಇಂಜಿನಿಯರ್ – ಇಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವಿ ಜೊತೆಗೆ 4–5 ವರ್ಷ ಅನುಭವ ಮತ್ತು ಸರ್ವೊ ಡ್ರೈವ್ಸ್, ಪಿಎಲ್‌ಸಿ ಹಾಗೂ ಸಂಬಂಧಿತ ಮಷೀನ್ ಬಿಲ್ಡಿಂಗ್ ಚಟುವಟಿಕೆಗಳ ಜ್ಞಾನ ಹೊಂದಿರಬೇಕು.

ನಿಮ್ಮ ಸಿವಿ'ಗಳನ್ನು ರವಾನಿಸಿ: spmbangalore2@gmail.com

Wanted

WANTED OFFICE Staffs (Male) With Computer Knowledge To work in Srirampuram, Peenya and Cubbonpet Qualification: SSLC, 2nd PUC, Contact: 9738421001/ 9886683188

WANTED ITI, Diploma Holders and Machine Operators (Ladies/ Gents) for a Private Limited Company in Prakash Nagar: 9448481947/ 9448376584; magraa@magraa.in

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

General

ESTD: 2002
ಬಿ. ಎಂ. ಎಸ್. ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಮ್ಯಾನೇಜ್ಮೆಂಟ್
ಬಿ.ಎಂ.ಎಸ್.ಐ.ಟಿ ಹಾಸ್ಟಲ್
ಅವಲಹಳ್ಳಿ, ಯಲಹಂಕ, ಬೆಂಗಳೂರು 560064, Ph.No: 080-68730444, 080-29521171
ರೆಸಿಡೆಂಟ್ ವಾರ್ಡನ್ (ಯಾವುದೇ ಪದವಿ), **ಕಚೇರಿ ಸಹಾಯಕರು** (ಬಿ.ಕಾಂ, ಬಿಬಿಎಂ, ಸಮಾನ), ಉತ್ತರ ಮತ್ತು ದಕ್ಷಿಣ ಭಾರತದ ಆಹಾರವನ್ನು ತಯಾರಿಸಲು **ಹೆಡ್ ಕುಕ್ ಮತ್ತು ಸಹಾಯಕರು** ಅಗತ್ಯವಿದೆ. ಆಸಕ್ತ ಮತ್ತು ಅನುಭವಿ ಅಭ್ಯರ್ಥಿಗಳು ತಮ್ಮ ಬಯೋಡೇಟಾವನ್ನು ಸಂಬಂಧಿತ ವಿವರಗಳೊಂದಿಗೆ/ದಾಖಲೆಗಳು, ಆಧಾರ್ ಕಾರ್ಡ್ ಪ್ರತಿ ಮತ್ತು ಫೋಟೋವನ್ನು, ಗೆ, **“The Principal, BMS Institute of Technology and Management”,** BMSIT&M Hostel, Avalahalli, Yelahanka, Bangalore- 560 064” ವಿಳಾಸಕ್ಕೆ 15.04.2021 ರೊಳಗೆ ಕಳುಹಿಸಿಕೊಡಬೇಕು.
ಪ್ರಾಂಶುಪಾಲರು

'WANTED FEMALE RECEPTIONIST, ACCOUNTANT, OFFICE ASSISTANT for Construction Company in HSR-Layout, Good Salary. 'Krishna'-9886294610'

WANTED SCANNING & Data Entry Operators (25No.s), Qualification:10th, 12th, Graduate with knowledge in computer and Kannada,Salary: 9K + conveyance,Contact: Ninestars Information Technologies Private Limited,Gandhinagar, Bangalore. Mobile: 9840322363, 9972573003 Email: amit.a@ninestars.in, sathya@ninestars.in

WANTED FOR Reputed Company, Graduates Age-30-70, Bangalore only, Earn: 30,000- 50,000/-. Contact: 9008305194/ 9880441530.

Drivers

DRIVERS wanted for Water Tankers in Bangalore, Contact : 9448171416

Hotel

CONTINENTAL AND Chinese Cooks, Captains, Cashier, Waiters, Washboys required for Hotel on Double Road, Bangalore. Call: 9844021722, 9243192072

Graphic Designers

WANTED DTP Operator/ Graphic Designer, Corel Draw, Illustrator & Photoshop for a Pvt Limited Company in around Rajajinagar Contact: 23307910 / 9108458798

Office Boys/ Peon

URGENTLY REQUIRED male candidates as office assistant for food machinery company in yeshwanthpura Salary 10-12k Mob 6361766924 Interview timing 10 AM to 3 PM

RENTAL PROPERTIES

Accommodation Available

House

3-BHK ATTACHED Bathroom with Pooja room in Domlur 2nd stage, 1st floor, 24hr water,Rent 35000/-. Owner: 9886185803

2 BHK house Rent Rs.12,000/- Ist Floor at Kanakanagar, near Manyatha Tech Park Contact: 9845535747

REAL ESTATE SELLING

Farm House/ Land/ Resorts

HAL And Around

THREE 30X46 sqft lot Fully developed location Rs 9999/- sqft contact on WhatsApp +15127962388

Industrial & Factory

Kanakapura Road

INDUSTRIAL PLOTS 4000sft to 6500sft for Sale. suitable for Service Station, Garage, Small Scale Industries etc at Jaraganahalli Pipe-line road, Kanakapura Road,near JP Nagar Metro Station. Contact:Verna Developers MG Road. 9620253180/ 08050749740

Sites

Kumaraswamy Layout

BDA 30X40 Intermediate Vacant 2nd Stage, Near 15F/G Bus Stop, ISKCON South, Genuine Buyers Call 9972095359 Brokers Excuse.

PERSONAL

Change of Name

I, BHAGYAMMA W/o Siddegowda residing at Badagalapura Grama, Hadanur Post, Saraguru Hobli, Heggadadevanakote Tq, Mysore Dist, Karnataka-571121 have changed my name to BHAGYA vide affidavit dated 18/03/2021 before notary G.Rajendra, Bengaluru.

I, RAMADEVI N.C W/o Antony K.V aged about 41 years, residing at 18-19 26/1, 3rd Floor, 2nd Cross, Balajinagar, Suddagunte Palya, Dharmaram College Post, Bangalore South, Bangalore 560029. have changed my name to NIRMALA ANTONY KELAMPARAMBIL vide affidavit dated 29.03.2021 before notary D Guna Shekar, Bangalore.

I,REMELA ALIAS AROKIA MARIE REMILA, R/@#7/B, St, Marys Main Road, Behind Crown Plaza International Hotel, Chelikere, Meganapalya, Bangalore-43. Have Changed My Name To C.REMELA. Vide Affidavit Dated:23/03/2021 Before Notary S.I.Balaguru, Bangalore

I, No 15469777F LD Parameshwaran g v. state that in my service & others records my wife name is SHYLLIE but as per her adhaar card no 420047761496 her correct name is SHYLLIE P. Vide affidavit dt. 17.02.2021 before notary Thangaraj.s.

I, VISHWA Samirbhai D/O, Samir Shah Residing @ Tower 6 A/804 Godrej Woodsman Estate, Bangalore-24, have changed my name to Vishwa Shah for all purposes. Before Notary L.B.Anasuyamma, Bangalore-13

BUSINESS

Business Offers

Finance

NRI'S INVESTMENT And Finance Available On Low Interest Against, Properties, Land&Building,Sites, Flats, (Also)Business, Companies Call: 7411265189

Agents Wanted

WANTED PROMOTERS Dealers Marketing Staff for Unique Healthy Consumer Products Contact: 9448041257

General

GOLDEN INVESTMENT Opportunity; Invest Rs.1-Lacs in our Water & Food products business & get Rs.365/- for 365 days. (Including your Principle+ Profit Share). Returns paid on daily basis from the next day of investment. Interested parties Call; 9739979946.

EDUCATIONAL

Admission

DIRECT FINAL Year: B.Ed/ LL.B/B.Tech/M.Tech/ Diploma/MBA/BBA/BCA/ B.Com. Govt,UGC Recognised, Join immediately. Asha Institute: Bangalore. 9448460103/ 7093438248

DH DECCAN HERALD ಪ್ರಜಾವಾಣಿ ಕ್ಲಾಸಿಫೈಡ್ಸ್
RECRUITMENT
BOOK YOUR JOB AD IN DECCAN HERALD ALL KARNATAKA + PRAJAVANI BENGALURU ON WEDNESDAY + SUNDAY
@720/-* Per Sqcm Single Column
@750/-* Per Sqcm Double Column
For More Details Contact:
9880856233 | 9731810277
9901641752 | 9845114560 | 9886213331
080- 45557163 | 45557164
condition apply*

CONNECT ಕ್ಲಾಸಿಫೈಡ್ಸ್

Haier Inspired Living — World's No.1 WATER HEATER
- Shock Proof Technology
- IPX4 Coated Body
- Incoloy Heating Element
- MUV Valve
- Tough UMC Inner Tank
- 8 Bars Rated Pressure
- Superior Insulation
- TTS Technology

FREE INSTALLATION. Free Connection Pipe with Spa Series. Energy Saving.

Spa Series
Haier Shock Proof Water Heaters MADE IN INDIA
www.haier.com/in /HaierIndia /IndiaHaier /HaierIndia 1800-209-9999 1800-102-9999 Toll Free - 24x7
Marketed by Orangewater.in Contact: 9844537996, 9844459956

EXCLUSIVE WEDDING SILK SAREES
KANCHIPURAM **A.G.BABU SAH** SILK CLOTH MERCHANT
Ugadi Sale
Date : 01.04.2021 to 05.04.2021
Timings 11.00 a.m. to 7.00 p.m.
WHITE HOUZZ
No.4B, 14th Main Road, 6th Sector, Next to B.D.A. Complex, HSR Layout, Bangalore - 560 102. Mob : 7904413982
NO EXCHANGE - NO RETURNS
MASK COMPULSORY
No Entry For Children & Persons Above 60 years
HAND BAG & LUGGAGE NOT ALLOWED INSIDE

V-WATER: UNIQUE PHYSICAL WATER SOFTNER
UNIVERSALLY FIRST PHYSICAL WATER SOFTNER WITH CDLPT TECHNOLOGY Patent applied for
MAKE IN INDIA
•FIT AND FORGET. • DE- SCALING SEEN AFTER 60 MINUTES OF INSTALLATION. • NO MAINTENANCE. • NO WATER WASTAGE. • NO POWER CONSUMPTION. • SUITABLE FOR SOFTENING OF HARD WATER UPTO 20000ppm TDS. • INSTANTANEOUS FEEL OF SPRING WATER AFTER PASSING THROUGH OUR DEVICE. • ONE TIME INVESTEMENT. • APPLICABLE FOR AGRICULTURE, DOMESTIC, COMMERCIAL AND INDUSTRIAL PURPOSES WITH PROVEN AND LONG LASTING RESULTS
IN THE MARKET SINCE 4 YEARS WITH OVER 3000+ SUCCESSFUL INSTALATIONS AND STILL GOING STRONG.WE ARE EXPANDING OUR REACH AND BUSINESS...LOOKING FOR DEALERS AND SUPER STOCKISTS ACROSS KARNATAKA.
FOR MORE DETAILS CONTACT- 9110441765, 8105605596

Classifieds
Book Your Classifieds Ads
Online Log in to dhclassifieds.com
For More Details Call 9880856233 • 9886213331
Email: Santhoshkumar@deccanherald.co.in

ಬೇಸಿಗೆ ಕಾವೇರಿದಂತೆಯೇ ಹೆಚ್ಚಾಯಿತು ಬೇಡಿಕೆ • ಸೊಪ್ಪಿನ ಆವಕದಲ್ಲಿ ಇಳಿಮುಖ

ತರಕಾರಿ, ಸೊಪ್ಪಿನ ದರ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಸಿಗೆ ಕಾವೇರುತ್ತಿದ್ದಂತೆಯೇ ತರಕಾರಿ, ಸೊಪ್ಪು ಹಾಗೂ ಹಣ್ಣಿನ ದರಗಳು ದಿಢೀರ್ ಏರಿಕೆ ಕಂಡಿವೆ. ಕಳೆದ ವಾರ ಕಡಿಮೆ ಇದ್ದ ಕೆಲ ತರಕಾರಿಗಳು ಈಗ ದುಬಾರಿಯಾಗಿವೆ.

ಮಾರ್ಚ್‌ನಿಂದ ಜೂನ್‌ವರೆಗಿನ ಬೇಸಿಗೆ ಅವಧಿಯಲ್ಲಿ ಹಣ್ಣುಗಳಿಗೆ ಭಾರಿ ಬೇಡಿಕೆ ಇರುತ್ತದೆ. ತರಕಾರಿ ಹಾಗೂ ಸೊಪ್ಪಿನ ಬೆಳೆಗಳು ಬೇಸಿಗೆಯ ಧಗೆಗೆ ಹೆಚ್ಚು ಹಾನಿಯಾಗುತ್ತವೆ. ಕ್ರಮೇಣ ಇಳುವರಿಯೂ ಕುಸಿತ ಕಾಣುವುದರಿಂದ ತರಕಾರಿ ಹಾಗೂ ಸೊಪ್ಪಿಗೂ ಬೇಡಿಕೆ ಹೆಚ್ಚಾಗುತ್ತದೆ.

ಹಸಿ ಮೆಣಸಿನಕಾಯಿ ಹಾಗೂ ಬೀನ್ಸ್ ದರಗಳು ವಾರದ ಹಿಂದೆ ಕಡಿಮೆ ಇದ್ದವು. ಈಗ ಎರಡಕ್ಕೂ ಬೇಡಿಕೆ ಹೆಚ್ಚಾಗಿರುವುದರಿಂದ ಬೆಲೆಗಳು ಏರಿವೆ. ಶುಂಠಿ, ಬೆಳ್ಳುಳ್ಳಿ ದರಗಳು ಸ್ಥಿರವಾಗಿದ್ದು, ಬದನೆ, ಕ್ಯಾರೆಟ್, ಮೂಲಂಗಿ, ಆಲೂಗಡ್ಡೆ, ಈರುಳ್ಳಿ, ಟೊಮೆಟೊ ದರಗಳು ಪ್ರತಿ ಕೆ.ಜಿಗೆ ₹30ರ ಒಳಗಿವೆ.

'ಬೇಸಿಗೆ ತಾಪದಿಂದ ಒಂದು ವಾರದಿಂದ ತರಕಾರಿ ದರಗಳು ಏರುತ್ತಿವೆ. ಶುಭ ಸಮಾರಂಭಗಳು ನಡೆಯುತ್ತಿರುವುದರಿಂದ ಬೇಡಿಕೆಯೂ ಇದೆ. ತರಕಾರಿಗಳ ದರ ಹೆಚ್ಚಾಗಲು ಇದು ಕೂಡ ಕಾರಣ. ಒಂದು ತಿಂಗಳವರೆಗೆ ತರಕಾರಿ ದರಗಳ ಏರಿಳಿತ ಸಾಮಾನ್ಯ' ಎಂದು ಕೆ.ಆರ್. ಮಾರುಕಟ್ಟೆಯ ತರಕಾರಿ ವರ್ತಕ ಸೋಮಶೇಖರ್ ತಿಳಿಸಿದರು.

ಕೆ.ಆರ್‌.ಮಾರುಕಟ್ಟೆ (ಸಾಂದರ್ಭಿಕ ಚಿತ್ರ)

ಏರಿತು ಸೊಪ್ಪಿನ ದರ: ಕಳೆದ ವಾರ ಎಲ್ಲ ಸೊಪ್ಪಿನ ಚಿಲ್ಲರೆ ದರಗಳು ₹10ರ ಗಡಿ ದಾಟಿರಲಿಲ್ಲ. ಈ ಪೈಕಿ ಕೊತ್ತಂಬರಿ ಸೊಪ್ಪಿನ ದರ ಪ್ರತಿ ಕೆ.ಜಿ.ಗೆ 36ರಿಂದ 52ಕ್ಕೆ ಜಿಗಿದಿದೆ. ಮೆಂತ್ಯ, ಪಾಲಕ್, ಸಬ್ಬಕ್ಕಿ ಸೊಪ್ಪಿನ ದರಗಳೂ ತಲಾ ₹2ಕ್ಕಿಂತ ಹೆಚ್ಚಳ ಕಂಡಿದೆ.

ಸೊಪ್ಪು	ಚಿಲ್ಲರೆ ದರ (ಪ್ರತಿ ಕಟ್ಟಿಗೆ)	ಹಾಪ್‌ಕಾಮ್ಸ್ ದರ (ಪ್ರತಿ ಕೆ.ಜಿಗೆ)
ಕೊತ್ತಂಬರಿ	15	52
ಮೆಂತ್ಯ	12	54
ಸಬ್ಬಕ್ಕಿ	12	40
ಪಾಲಕ್	10	40
ದಂಟು	10	36

ದರ ಪಟ್ಟಿ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ತರಕಾರಿ	ಚಿಲ್ಲರೆ ದರ	ಹಾಪ್‌ಕಾಮ್ಸ್ ದರ
ಬಟಾಣಿ	170	168
ಬೆಳ್ಳುಳ್ಳಿ	100	120
ಮೆಣಸಿನ ಕಾಯಿ	70	78
ಶುಂಠಿ	40	38
ಬೀನ್ಸ್	50	48
ಬದನೆ	30	32
ಕ್ಯಾರೆಟ್	28	30
ಮೂಲಂಗಿ	20	26
ಆಲೂಗಡ್ಡೆ	20	22
ಈರುಳ್ಳಿ	25	28
ಟೊಮೆಟೊ	15	18

ಹಣ್ಣು	ಸಗಟು ದರ	ಹಾಪ್‌ಕಾಮ್ಸ್ ದರ
ಸೇಬು	150	180
ದಾಳಿಂಬೆ	200	245
ದ್ರಾಕ್ಷಿ	100	148
ಕಿತ್ತಳೆ	100	158
ಮೂಸಂಬಿ	80	99
ಸೀಬೆ	55	70
ಮಾವು	60	76
ಏಲಕ್ಕಿ ಬಾಳೆ	40	48
ಸಪೋಟ	45	59
ಪಪ್ಪಾಯ	20	40
ಕಲ್ಲಂಗಡಿ	20	24
ಅನಾನಸ್	30	54

'ಬೇಸಿಗೆ ಅವಧಿಯಲ್ಲಿ ಸೊಪ್ಪಿನ ಬೆಳೆ ರೈತರಿಗೆ ಕೈಗೆಟಕುವುದಿಲ್ಲ. ಬಿಸಿಲ ಹೊಡೆತಕ್ಕೆ ಸೊಪ್ಪು ತೋಟದಲ್ಲೇ ಹಾಳಾಗುತ್ತದೆ. ಬೆಳೆಯುವ ಸೊಪ್ಪಿನಲ್ಲಿ ಶೇ 50ರಷ್ಟು ಮಾತ್ರ ಮಾರುಕಟ್ಟೆಗೆ ಆವಕವಾಗುತ್ತದೆ. ಹಾಗಾಗಿ, ಬೇಸಿಗೆಯಲ್ಲಿ ಸೊಪ್ಪುಗಳಿಗೆ ತುಸು ಬೇಡಿಕೆ ಇದ್ದೇ ಇರುತ್ತದೆ. ಯುಗಾದಿ ವೇಳೆಗೆ ಕೊತ್ತಂಬರಿ ಸೊಪ್ಪಿನ ದರ ಇನ್ನಷ್ಟು ಏರಿಕೆಯಾಗುವ ನಿರೀಕ್ಷೆ ಇದೆ' ಎನ್ನುತ್ತಾರೆ ದಾಸನಪುರ ಎಪಿಎಂಪಿ ಪ್ರಾಂಗಣದ ಸೊಪ್ಪಿನ ವ್ಯಾಪಾರಿ ಕುಮಾರ್.

ಒಪ್ಪಂದ ಪತ್ರವನ್ನು ಡಾ.ಸಿ.ಎನ್‌.ಮಂಜುನಾಥ್ ಹಾಗೂ ಡಾ.ವೆಂಕಟೇಶಯ್ಯ ಪರಸ್ಪರ ವಿನಿಮಯ ಮಾಡಿಕೊಂಡರು

ಉಭಯ ಆಸ್ಪತ್ರೆಗಳ ಮುಖ್ಯಸ್ಥರಿಂದ ಒಪ್ಪಂದಕ್ಕೆ ಸಹಿ

ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಜಯದೇವ ಹೃದ್ರೋಗ ಘಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಘಟಕವು ಸ್ಥಾಪನೆಯಾಗಲಿದೆ. 50 ಹಾಸಿಗೆಗಳ ಸಾಮರ್ಥ್ಯದ ಹೃದ್ರೋಗ ಘಟಕ ಸ್ಥಾಪನೆ ಸಲುವಾಗಿ ಜಯದೇವ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಹಾಗೂ ಕೆ.ಸಿ.ಜನರಲ್ ಆಸ್ಪತ್ರೆ ಅಧೀಕ್ಷಕ ಡಾ.ವೆಂಕಟೇಶಯ್ಯ ಅವರು ಮಂಗಳವಾರ ಒಪ್ಪಂದಕ್ಕೆ ಸಹಿ ಹಾಕಿದರು.

ಕೆ.ಸಿ.ಜನರಲ್ ಆಸ್ಪತ್ರೆಯ ಎರಡನೇ ಮಹಡಿಯಲ್ಲಿ 20 ಸಾವಿರ ಚದರ ಅಡಿ ಜಾಗದಲ್ಲಿ ಹೃದ್ರೋಗ ಘಟಕ ತಲೆ ಎತ್ತಲಿದೆ. ಒಪ್ಪಂದದ ಪ್ರಕಾರ, ಹೃದ್ರೋಗ ಘಟಕಕ್ಕೆ ಅಗತ್ಯವಾದ ಜಾಗ, ನೀರು ಮತ್ತಿತರ ಸೌಕರ್ಯಗಳನ್ನು ಕೆ.ಸಿ.ಜನರಲ್ ಆಸ್ಪತ್ರೆ ಒದಗಿಸುತ್ತದೆ. ಉಳಿದಂತೆ ವೈದ್ಯಕೀಯ ಪರಿಕರಗಳು, ಯಂತ್ರೋಪಕರಣಗಳು, ಸಿಬ್ಬಂದಿ ಇತ್ಯಾದಿ ಸೌಲಭ್ಯಗಳನ್ನು ಜಯದೇವ ಆಸ್ಪತ್ರೆ ವ್ಯವಸ್ಥೆ ಮಾಡಲಿದೆ.

'ಮುಂಬರುವ ಆಗಸ್ಟ್ ವೇಳೆಗೆ ಈ ಹೃದ್ರೋಗ ಘಟಕ ಕಾರ್ಯಾರಂಭ ಮಾಡಲಿದೆ. ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಸಿಗುವ ಎಲ್ಲ ಸೌಕರ್ಯಗಳು ಈ ಘಟಕದಲ್ಲೂ ಸಿಗಲಿವೆ. ಮಲ್ಲೇಶ್ವರ ಮತ್ತು ಸುತ್ತಮುತ್ತಲಿನ ಪ್ರದೇಶಗಳೂ ಸೇರಿದಂತೆ ಬೆಂಗಳೂರು ಉತ್ತರ ಭಾಗದ ಜನರಿಗೆ ಈ ಘಟಕ ಹೆಚ್ಚು ಉಪಯುಕ್ತವಾಗಲಿದೆ. ಹೃದಯದ ಸಮಸ್ಯೆ ಕಂಡುಬಂದಾಗ ಈ ಭಾಗದ ಜನರು ಜಯದೇವ ಆಸ್ಪತ್ರೆಗೆ ಹೋಗುವ ಅಗತ್ಯವಿಲ್ಲ' ಎಂದು ಮಲ್ಲೇಶ್ವರ ಕ್ಷೇತ್ರದ ಶಾಸಕರೂ ಆಗಿರುವ ಉಪಮುಖ್ಯಮಂತ್ರಿ ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ಈ ಘಟಕ ಸ್ಥಾಪಿಸಲು ಒಪ್ಪಿಗೆ ನೀಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಸಹಕಾರ ನೀಡಿದ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರಿಗೆ ಅಶ್ವತ್ಥನಾರಾಯಣ ಧನ್ಯವಾದ ಸಲ್ಲಿಸಿದರು.

'ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ 100 ಹಾಸಿಗೆಗಳ ಸುಸಜ್ಜಿತ ಮಾಡ್ಯುಲರ್ ತುರ್ತು ನಿಗಾ ಘಟಕವನ್ನು ಈಗಾಗಲೇ ಸ್ಥಾಪಿಸಲಾಗಿದೆ. ಟ್ರಾಮಾ ಕೇಂದ್ರವನ್ನು ಶೀಘ್ರವೇ ಸ್ಥಾಪನೆ ಮಾಡುವ ಉದ್ದೇಶವಿದೆ. ಈ ಆಸ್ಪತ್ರೆಗೆ ಇನ್ನಷ್ಟು ಸೌಕರ್ಯ ಕಲ್ಪಿಸಲಾಗುವುದು' ಎಂದು ಅವರು ತಿಳಿಸಿದರು.

ರಾಮನ ಹೆಸರಿನಲ್ಲಿ ಕಾಂಗ್ರೆಸ್ ಬಿಜೆಪಿ ಟ್ವೀಟ್ ಸಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀರಾಮನ ಹೆಸರಿನಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಟ್ವೀಟ್ ಸಮರ ಆರಂಭಿಸಿವೆ. ರಾಮ ನಾಮ ಜಪಿಸುವುದನ್ನು ಬಿಜೆಪಿ ಬಿಡಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದ್ದು, ಅವಸಾನದ ಅಂಚಿನಲ್ಲಿರುವ ಕಾಂಗ್ರೆಸ್‌ಗೆ ಈಗ ರಾಮನ ನೆನಪು ಬಂದಿದೆ ಎಂದು ಬಿಜೆಪಿ ಕಟಕಿಯಾಡಿದೆ.

'ರಾಮನೆಂದರೆ ಹಿಂದೂಗಳಿಗೆ ಧ್ಯಾನ, ಭಕ್ತಿ, ಶ್ರದ್ಧೆ. ಸಮಸ್ತ ಹಿಂದೂಗಳ ಭಾವನೆ ಗೌರವಿಸಿ ಇನ್ನು ಮುಂದೆ ಬಿಜೆಪಿ ರಾಮನ ಹೆಸರು ಹೇಳುವುದನ್ನು ನಿಲ್ಲಿಸಬೇಕು. ರಾಜಕೀಯ ಕೊಲೆ, ಸುಲಿಗೆ, ಹಿಂಸೆ, ವಂಚನೆ ಮುಂತಾದ ಅಧರ್ಮಗಳನ್ನು ತನ್ನ ಹೆಸರಿನಲ್ಲಿ ಮಾಡುವುದನ್ನು ರಾಮ ಸಹಿಸುವುದಿಲ್ಲ. ರಾಮನ ನಿಜ ಭಕ್ತರೂ ಸಹಿಸುವುದಿಲ್ಲ' ಎಂದು ಕೆಪಿಸಿಸಿ ಟ್ವೀಟ್ ಮಾಡಿದೆ.

ಇದಕ್ಕೆ ಕಟುವಾಗಿ ಪ್ರತಿಕ್ರಿಯಿಸಿರುವ ಬಿಜೆಪಿ, ಕಾಂಗ್ರೆಸ್ ಈಗ ಅವಸಾನದ ಅಂಚಿಗೆ ತಲುಪಿದ್ದು, ರಾಮ ನಾಮ ಜಪಿಸುತ್ತಿದೆ. ರಾಮಸೇತು ಒಡೆಯಲು ಯತ್ನಿಸಿದರು, ರಾಮಮಂದಿರ ನಿರ್ಮಾಣಕ್ಕೆ ವಿರೋಧಿಸಿದರು, ಜೈಶ್ರೀರಾಮ್ ಘೋಷಣೆ ಕೂಗಿದವರ ಮೇಲೆ ಹಲ್ಲೆ ಮಾಡಿದರು. ಇಷ್ಟೆಲ್ಲಾ ಮಾಡಿದ ಕಾಂಗ್ರೆಸ್ ಪಕ್ಷಕ್ಕೆ ಇದ್ದಕ್ಕಿದ್ದಂತೆ ರಾಮಭಕ್ತಿ ಬರಲು ಕಾರಣವೇನು ಎಂದು ಬಿಜೆಪಿ ಪ್ರಶ್ನಿಸಿದೆ.

ವೈಟ್ ಟಾಪಿಂಗ್ ಕಾಮಗಾರಿ...

ವಾಹನ ಸವಾರರ ಹರಸಾಹಸ... ಬೆಂಗಳೂರಿನ ಹೊರವರ್ತುಲ ರಸ್ತೆಯಲ್ಲಿರುವ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆ ಮುಂಭಾಗ ವೈಟ್ ಟಾಪಿಂಗ್ ಕಾಮಗಾರಿಯ ರಸ್ತೆಗೆ ಕಾರ್ಮಿಕರು ಕ್ಯೂರಿಂಗ್ ಮಾಡುತ್ತಿರುವ ದೃಶ್ಯ ಮಂಗಳವಾರ ಕಂಡುಬಂತು. ಕಾಮಗಾರಿ ಪ್ರಗತಿಯಲ್ಲಿರುವುದರಿಂದ ವಾಹನ ಸವಾರರು ಕಿರಿದಾದ ರಸ್ತೆಯಲ್ಲಿ ಟ್ರಾಫಿಕ್ ನಲ್ಲಿ ಸಿಕ್ಕಿ ಪರದಾಡಿದರು

ಪ್ರಜಾವಾಣಿ ಚಿತ್ರ/ ರಂಜು ಪಿ

'ಅಬಕಾರಿ ವರಮಾನ: ಗುರಿ ಮೀರಿ ಸಾಧನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಸಕ್ತ ಸಾಲಿನಲ್ಲಿ (2020-21) ಅಬಕಾರಿ ವರಮಾನ ಸಂಗ್ರಹದಲ್ಲಿ ಗುರಿ ಮೀರಿ ಸಾಧನೆಯಾಗಿದೆ. ನಿಗದಿತ ಗುರಿಗಿಂತ ₹ 250 ಕೋಟಿಯಿಂದ ₹ 300 ಕೋಟಿ ಹೆಚ್ಚುವರಿ ಸಂಗ್ರಹವಾಗುವ ನಿರೀಕ್ಷೆ ಇದೆ' ಎಂದು ಅಬಕಾರಿ ಸಚಿವ ಕೆ. ಗೋಪಾಲಯ್ಯ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಪ್ರಸಕ್ತ ಸಾಲಿನಲ್ಲಿ ಅಬಕಾರಿ ಮೂಲದಿಂದ ₹ 22,700 ಕೋಟಿ ಸಂಗ್ರಹಿಸುವ ಗುರಿ ಇತ್ತು. ಐದು ದಿನಗಳ ಹಿಂದೆಯೇ ನಿಗದಿತ ಗುರಿಯಷ್ಟು ಸಂಗ್ರಹವಾಗಿದೆ. ಇದೇ 31ರೊಳಗೆ ಹೆಚ್ಚುವರಿಯಾಗಿ ₹ 300 ಕೋಟಿ ಸಂಗ್ರಹವಾಗುವ ಸಾಧ್ಯತೆ ಇದೆ' ಎಂದರು.

ಗೋಪಾಲಯ್ಯ

'ಇಲಾಖೆಗೆ ಏಪ್ರಿಲ್‌ನಲ್ಲಿ 77 ಜೀಪುಗಳನ್ನು ಖರೀದಿಸಲು ಉದ್ದೇಶಿಸಲಾಗಿದೆ. ನಿರೀಕ್ಷಕರು ಹಾಗೂ ವೃತ್ತ ನಿರೀಕ್ಷಕರಿಗೆ 300 ಬೈಕ್ ಖರೀದಿ ಪ್ರಕ್ರಿಯೆಗೂ ಚಾಲನೆ ನೀಡಲಾಗಿದೆ. ಪ್ರತಿ ಅಬಕಾರಿ ಉಪ ಆಯುಕ್ತರ ಕಚೇರಿಗೆ 4 ಶಸ್ತ್ರಾಸ್ತ್ರಗಳನ್ನು ಒದಗಿಸಲಾಗುವುದು. ಗಾಂಜಾ, ಅಫೀಮು ಸೇರಿದಂತೆ ಮಾದಕವಸ್ತು ಮಾರಾಟದ ವಿರುದ್ಧವೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ. ರಾಜ್ಯದ ವಿವಿಧ ಕಡೆ ಹಳ್ಳಿಗಳಲ್ಲಿ ಗಾಂಜಾ ಬೆಳೆಯುತ್ತಿರುವುದು ಗಮನಕ್ಕೆ ಬಂದಿದೆ. ಪೊಲೀಸ್ ಇಲಾಖೆ ಸಹಯೋಗದಲ್ಲಿ ಕಾರ್ಯಾಚರಣೆ ನಡೆಸಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವರ ಬದಲಾವಣೆ ಕುರಿತ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಅದು ಮುಖ್ಯಮಂತ್ರಿಯ ಪರಮಾಧಿಕಾರ' ಎಂದರು.

ಸಿ.ಡಿ ಪ್ರಕರಣದಲ್ಲಿ ರಮೇಶ ಜಾರಕಿಹೊಳಿ ಅವರನ್ನು ಬೆಂಬಲಿಸುವಿರಾ ಎಂಬ ಪ್ರಶ್ನೆಗೆ, 'ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ. ನಾನು ಅವರ ಪರವಾಗಿ ನಿಲ್ಲುತ್ತೇನೆ. ಆದರೆ, ನಾನು ರಾಜಕೀಯದಲ್ಲಿ ಇನ್ನೂ ಚಿಕ್ಕವನು. ಆ ಬಗ್ಗೆ ಬಹಿರಂಗವಾಗಿ ಪ್ರತಿಕ್ರಿಯೆ ನೀಡುವುದಿಲ್ಲ' ಎಂದರು.

ಎನ್‌.ಎಸ್‌. ಲಕ್ಷ್ಮೀನಾರಾಯಣ ಭಟ್ಟರಿಗೆ ಗೀತ ಗೌರವ

'ಸುಗಮ ಸಂಗೀತ ಕ್ಷೇತ್ರಕ್ಕೆ ಸೀಮಿತಗೊಳಿಸದಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತ್ಯ ಲೋಕಕ್ಕೂ ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು ಬಹಳ ಕೊಡುಗೆ ನೀಡಿದ್ದಾರೆ. ಕೇವಲ ಸುಗಮ ಸಂಗೀತ ಕ್ಷೇತ್ರಕ್ಕೆ ಅವರನ್ನು ಸೀಮಿತಗೊಳಿಸಬಾರದು' ಎಂದು ಕವಿ ಬಿ.ಆರ್. ಲಕ್ಷ್ಮಣರಾವ್ ಅಭಿಪ್ರಾಯಪಟ್ಟರು.

ಸಂಗೀತ ಧಾಮ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ಭಾವಕವಿ ಡಾ.ಎನ್. ಎಸ್.ಲಕ್ಷ್ಮೀನಾರಾಯಣ ಭಟ್ಟರಿಗೆ 'ಗೀತ ಗೌರವ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಲಕ್ಷ್ಮೀನಾರಾಯಣ ಭಟ್ಟರು ಹಲವು ಪ್ರಮುಖ ಸಾಹಿತ್ಯಗಳ ಭಾಷಾಂತರದಲ್ಲೂ ಮೇಲುಗೈ ಸಾಧಿಸಿದ್ದರು. ಇದು, ಅವರಲ್ಲಿದ್ದ ಕಾವ್ಯ ಕುತೂಹಲ ಮತ್ತು ಭಾಷಾಂತರ ಪ್ರತಿಭೆಗಳಿಗೆ ನಿದರ್ಶನ. ಭಟ್ಟರ ಅನುವಾದದಿಂದ ಕನ್ನಡ ಕಾವ್ಯ ಸಮೃದ್ಧಗೊಂಡಿದೆ' ಎಂದರು.

ಕಾರ್ಯಕ್ರಮದಲ್ಲಿ ಆರ್‌.ಕೆ.ನಲ್ಲೂರು ಪ್ರಸಾದ್, ವೈ.ಕೆ.ಮುದ್ದುಕೃಷ್ಣ, ಬಿ.ಆರ್‌. ಲಕ್ಷ್ಮಣರಾವ್ ಹಾಗೂ ಎನ್‌.ಎಸ್‌.ಲಕ್ಷ್ಮೀನಾರಾಯಣ ಭಟ್ಟರ ಪತ್ನಿ ಜ್ಯೋತಿ ಅವರು ಎನ್‌.ಎಸ್‌.ಲಕ್ಷ್ಮೀನಾರಾಯಣ ಭಟ್ಟರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

'ಇಂತಹ ವ್ಯಕ್ತಿಯನ್ನು ಸುಗಮ ಸಂಗೀತ ಕ್ಷೇತ್ರಕ್ಕೆ ಸೀಮಿತಗೊಳಿಸದೆ, ಸಾಹಿತ್ಯ ಲೋಕದಲ್ಲಿನ ಅವರ ಪಾತ್ರವನ್ನೂ ಪರಿಚಯಿಸುವ ಕೆಲಸವನ್ನು ಸಾಹಿತ್ಯ ಅಕಾಡೆಮಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳು ಮಾಡಬೇಕು' ಎಂದು ಒತ್ತಾಯಿಸಿದರು.

ಗಾಯಕ ವೈ.ಕೆ.ಮುದ್ದುಕೃಷ್ಣ, 'ಭಟ್ಟರು ಸುಗಮ ಸಂಗೀತಕ್ಕೆ ದೊಡ್ಡ ಪರಿಕಲ್ಪನೆ ಸೃಷ್ಟಿಸಿದವರು. ಇಲ್ಲದಿದ್ದರೆ, ಅನೇಕರಿಗೆ ಹಾಡುವ ಅವಕಾಶಗಳು ಸಿಗುತ್ತಿರಲಿಲ್ಲ. ಭಟ್ಟರಿಗೆ ಸೌಂದರ್ಯ ಪ್ರಜ್ಞೆಯೂ ಹೆಚ್ಚಾಗಿತ್ತು. ಯಾವುದೇ ಕಾರ್ಯಕ್ರಮಕ್ಕೆ ಹೋದರೂ, `ವಾಷ್ ರೂಂ ಎಲ್ಲಿದೆ' ಎಂದು ಕೇಳಿಕೊಂಡು ಹೋಗಿ, ತಲೆಬಾಚಿಕೊಂಡು, ಮುಖಕ್ಕೆ ಪೌಡರ್ ಹಚ್ಚಿಕೊಂಡು ಅಚ್ಚುಕಟ್ಟಾಗಿ ತಯಾರಾಗಿ ಬರುತ್ತಿದ್ದರು' ಎಂದು ಅವರಲ್ಲಿನ ಸೌಂದರ್ಯ ಪ್ರಜ್ಞೆಯನ್ನು ನೆನಪಿಸಿದರು.

ಗೀತ ಗಾಯನದಲ್ಲಿ ಕೆ.ಎಸ್. ಸುರೇಖಾ, ಮೃತ್ಯುಂಜಯ ದೊಡ್ಡವಾಡ, ಸುಪ್ರಿಯಾ ರಘುನಂದನ್, ಸೃಷ್ಟಿ ನಾಡಿಗ್, ಇಂಚರ ಪ್ರವೀಣ್‌ಕುಮಾರ್ ಸೇರಿದಂತೆ ಹಲವು ಗಾಯಕರು ಹಾಗೂ ಸಂಗೀತ ಧಾಮದ ವಿದ್ಯಾರ್ಥಿಗಳು ಲಕ್ಷ್ಮೀನಾರಾಯಣ ಭಟ್ಟರ ರಚನೆಯ ಗೀತೆಗಳನ್ನು ಹಾಡಿದರು. ವಿಮರ್ಶಕ ಎಚ್.ಎಸ್.ಸತ್ಯನಾರಾಯಣ ನುಡಿನಮನ ಸಲ್ಲಿಸಿದರು.

ಕೆ–ಎಸ್‌ಇಟಿ ಪರೀಕ್ಷೆ ಮುಂದೂಡಲು ಒತ್ತಾಯ

ಬೆಂಗಳೂರು: ಮೈಸೂರು ವಿಶ್ವವಿದ್ಯಾಲಯವು ಉಪನ್ಯಾಸಕರ ಅರ್ಹತೆಗಾಗಿ ನಡೆಸುವ ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆ (ಕೆಎಸ್‌ಇಟಿ)-2021 ಹಾಗೂ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದ (ಇಗ್ನೊ) ಬಿ.ಇಡಿ ಪ್ರವೇಶ ಪರೀಕ್ಷೆಯು ಒಂದೇ ದಿನ ನಿಗದಿಯಾಗಿದೆ. ಇದರಿಂದಾಗಿ ವಿದ್ಯಾರ್ಥಿಗಳು ಗೊಂದಲಕ್ಕೆ ಒಳಗಾಗಿದ್ದಾರೆ.

'ಎರಡೂ ಪರೀಕ್ಷೆಗಳು ಏಪ್ರಿಲ್ 11ಕ್ಕೆ ನಿಗದಿಯಾಗಿವೆ. ಕೆಎಸ್‌ಇಟಿ ಪರೀಕ್ಷೆ ಬರೆಯಲು ಇಚ್ಛಿಸುವವರು ಬಿ.ಇಡಿ ಪ್ರವೇಶ ಪರೀಕ್ಷೆ ಬರೆಯುವ ಅವಕಾಶ ಕಳೆದುಕೊಳ್ಳಬೇಕಾಗಿದೆ. ಇದರಿಂದ ಸಾವಿರಾರು ಮಂದಿಗೆ ತೊಂದರೆಯಾಗಿದೆ. ಹೀಗಾಗಿ ಮೈಸೂರು ವಿಶ್ವವಿದ್ಯಾಲಯವು ಕೆಎಸ್‌ಇಟಿ ಪರೀಕ್ಷೆಯನ್ನು ಒಂದು ವಾರದ ಮಟ್ಟಿಗೆ ಮುಂದೂಡಬೇಕು. ಆಗ ಮಾತ್ರ ಎಲ್ಲಾ ವಿದ್ಯಾರ್ಥಿಗಳು ಪರೀಕ್ಷೆಗೆ ಬರೆಯಲು ಅವಕಾಶ ಸಿಗಲಿದೆ' ಎಂದು ವಿದ್ಯಾರ್ಥಿಗಳು ಮನವಿ ಮಾಡಿದ್ದಾರೆ.

ನಗರದಲ್ಲಿ ಇಂದು

ವಸಂತೋತ್ಸವ: ಉದ್ಘಾಟನೆ–ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ಅಧ್ಯಕ್ಷತೆ– ಕೆ.ಮುರಳೀಧರ್, ಅತಿಥಿಗಳು– ಅಶೋಕ್ ಎನ್.ಛಲವಾದಿ, ಚಂದ್ರಶೇಖರ್, ರವೀಂದ್ರನಾಥ್ ಸಿರಿವರ, ರೂಪಾ ರಾಜೇಶ್, ಮಾಲೂರು ವಿಜಿ, ಪದಗೌರವ–ರವೀಂದ್ರ ಸೋರಗಾಂವಿ, ಜೋಗಿಲ ಸಿದ್ಧರಾಜು, ಸಿ.ಎಂ. ನರಸಿಂಹ ಮೂರ್ತಿ, ಆಯೋಜನೆ– ಪದ, ಸಹಕಾರ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ಕೇಶವ ಕಲ್ಪ, ಮಲ್ಲೇಶ್ವರ, ಸಂಜೆ 5

ನಾಗಾಭರಣ

ಗುರುಪಾದ ಬೇಲೂರು ಅವರ 'ಪೋರ್ಡಿ', 'ಬರ್ಬರಿಕ' ಮತ್ತು 'ರೂಢಿ' ಪುಸ್ತಕಗಳ ಬಿಡುಗಡೆ ಹಾಗೂ ಬಿ.ಜಿ.ಗುರುಪಾದ ಸ್ವಾಮಿ ಅವರಿಗೆ ಬೀಳ್ಕೊಡುಗೆ: ಉದ್ಘಾಟನೆ ಮತ್ತು ಪುಸ್ತಕ ಬಿಡುಗಡೆ–ಕವಿ ಸಿದ್ಧಲಿಂಗಯ್ಯ, ಅತಿಥಿಗಳು–ಎಚ್. ರವಿಕುಮಾರ್, ಸಾಹಿತಿ ಕಂನಾಡಿಗಾ ನಾರಾಯಣ್, ನಟ ವಿನೋದ್ ಪ್ರಭಾಕರ್, ಎ.ರಮೇಶ ಉಡುಪ, ಆಯೋಜನೆ– ನವ ಕರ್ನಾಟಕ ಪಬ್ಲಿಕೇಷನ್ಸ್ ಮತ್ತು ಕಾಡಾ ನಿರ್ದೇಶನಾಲಯ, ಸ್ಥಳ–ಕೆಇಎ ಪ್ರಭಾತ್ ರಂಗಮಂದಿರ ಸಭಾಂಗಣ, ಬಸವೇಶ್ವರ ನಗರ, ಸಂಜೆ 6

ವಿನೋದ್ ಪ್ರಭಾಕರ್

'ಪ್ರಾಜೆಕ್ಟ್ ನಗ್ನ' ನಾಟಕ ಪ್ರದರ್ಶನ: ಪ್ರಸ್ತುತಿ–ಅಂತರಂಗ ತಂಡ, ಆಯೋಜನೆ–ಅಂತರಂಗ ಹವ್ಯಾಸಿ ನಾಟಕ ತಂಡ, ಸ್ಥಳ–ರಂಗಶಂಕರ, ಸಂಜೆ 7.30

ವ್ಯಾಸತೀರ್ಥ ಗುರುಸಾರ್ವಭೌಮರ ಆರಾಧನಾ ಮಹೋತ್ಸವ: ಬೆಳಿಗ್ಗೆ 8ಕ್ಕೆ ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿ ಸುಬುಧೇಂದ್ರತೀರ್ಥ ಸ್ವಾಮೀಜಿ ಹಾಗೂ ಕೇಶವನಿಧಿ ತೀರ್ಥ ಶ್ರೀಪಾದರಿಗೆ ಪೂರ್ಣಕುಂಭ ಸ್ವಾಗತ, 8.30ಕ್ಕೆ ಶ್ರೀಮದ್ದಶಪ್ರಮತಿ ದರ್ಶನ ಪ್ರಕಾಶಿನೀ ವಿದ್ವತ್ ಸಭೆ: ಭಾಗವಹಿಸುವವರು – ವಿದ್ವಾನ್ ರಾಜಾ ಎಸ್. ಗಿರಿಯಾಚಾರ್ಯ, ಹೊಳವನಹಳ್ಳಿ ಶ್ರೀನಿವಾಸಾಚಾರ್ಯ, ಸಂಜೆ 5ಕ್ಕೆ 'ಕನಕ-ಪುರಂದರ ಸಾಹಿತ್ಯದ ನೇತಾರರು ಶ್ರೀ ವ್ಯಾಸರಾಜ ಗುರುಸಾರ್ವಭೌಮರು' ಗೋಷ್ಠಿ ಉದ್ಘಾಟನೆ:ಭಾಗವಹಿಸುವವರು– ಕೇಶವನಿಧಿ ತೀರ್ಥ ಶ್ರೀಪಾದರು, ಆಯೋಜನೆ– ಗುರುರಾಘವೇಂದ್ರ ಸೇವಾ ಟ್ರಸ್ಟ್, ಸ್ಥಳ–ಶ್ರೀರಾಘವೇಂದ್ರ ಸ್ವಾಮಿಗಳ ಮಠ, ಕೋಣನಕುಂಟೆ. (ಏಪ್ರಿಲ್ 2ರವರೆಗೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ)

ಸುಬುಧೇಂದ್ರ ತೀರ್ಥ ಸ್ವಾಮೀಜಿ

ಐಷಾರಾಮಿ ಕಾರಿನಲ್ಲಿ ತಹಶೀಲ್ದಾರ್ ಓಡಾಟ: ಟೀಕೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ತಹಶೀಲ್ದಾರ್ ಕಚೇರಿಯನ್ನು ಕಾರ್ಪೊರೇಟ್ ಕಚೇರಿ ಮಾದರಿಯಲ್ಲಿ ಮರುವಿನ್ಯಾಸ ಮಾಡಿ ಸುದ್ದಿಯಾಗಿರುವ ಕೆ.ಆರ್.ಪುರ ತಹಶೀಲ್ದಾರ್ ಅಜಿತ್ ಕುಮಾರ್ ಅವರು ಸರ್ಕಾರ ನೀಡಿರುವ ವಾಹನಗಳನ್ನು ಬಳಸದೆ ಸರ್ಕಾರಿ ಕೆಲಸಕ್ಕೂ ಐಷಾರಾಮಿ ವಾಹನಗಳಲ್ಲಿ ಓಡಾಡುತ್ತಿರುವುದು ಸಾರ್ವಜನಿಕರ ಟೀಕೆಗೆ ಗುರಿಯಾಗಿದೆ.

ತಮ್ಮ ಸ್ವಂತದ ಮಹಿಂದ್ರಾ ಥಾರ್ ಜೀಪು, ಫಾರ್ಚೂನರ್ ಕಾರು ಬಳಸುತ್ತಿದ್ದಾರೆ. ಹೀಗಾಗಿ, ಸರ್ಕಾರದ ಟಾಟಾ ಸುಮೊ ವಾಹನ ಶೆಡ್‌ನಿಂದ ಹೊರಕ್ಕೆ ತೆಗೆದಿಲ್ಲ. ಕಾರಣ ಅದು ಅಲ್ಲೇ ತುಕ್ಕು ಹಿಡಿಯುತ್ತಿದೆ.

ತಹಶೀಲ್ದಾರ್ ಬಳಸುವ ಮಹೇಂದ್ರ ಥಾರ್ ಕಾರು

'ಇವರು ಈ ರೀತಿ ಐಷಾರಾಮಿ ಕಾರುಗಳಲ್ಲಿ ಓಡಾಡುವುದನ್ನು ನೋಡಿದರೆ ಸರ್ಕಾರಿ ಅಧಿಕಾರಿಯೋ, ಖಾಸಗಿ ಕಂಪನಿ ಅಧಿಕಾರಿಯೊ ಎಂಬ ಅನುಮಾನ ಮೂಡುತ್ತಿದೆ. ಸರ್ಕಾರಿ ವಾಹನಗಳು ಕೆಟ್ಟಿದ್ದರೆ ಸರ್ಕಾರದ ಹಣದಲ್ಲೇ ದುರಸ್ತಿ ಮಾಡಿಸಿಕೊಳ್ಳಬಹುದಲ್ಲವೇ' ಎಂದು ಪಟ್ಟಂದೂರು ಅಗ್ರಹಾರದ ಮಂಜುನಾಥ್ ಪ್ರಶ್ನಿಸಿದರು.

'20 ವರ್ಷಕ್ಕಿಂತ ಹಳೆಯದಾದ ಸರ್ಕಾರದ ವಾಹನ ಸುಮಾರು 5 ಲಕ್ಷ ಕಿ.ಮೀ ಕ್ರಮಿಸಿದೆ. ಬಳಕೆಗೆ ಯೋಗ್ಯವಾಗದ ಕಾರಣ ಪರಿಶೀಲಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಅಲ್ಲದೆ ಜಿಲ್ಲಾಧಿಕಾರಿ ಅವರ ಗಮನಕ್ಕೂ ತರಲಾಗಿದೆ. ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಯಾವ ಕೆಲಸವನ್ನೂ ಮಾಡುವುದಿಲ್ಲ' ಎಂದು ಅಜಿತ್ ಕುಮಾರ್ ಸ್ಪಷ್ಟಪಡಿಸಿದರು.

ನೇರ ನೇಮಕಾತಿ: ಆರ್ಥಿಕ ಇಲಾಖೆ ಸಮ್ಮತಿ ಕಡ್ಡಾಯ

ಬೆಂಗಳೂರು: 'ಯಾವುದೇ ಇಲಾಖೆ ಹುದ್ದೆಗಳ ಭರ್ತಿಗೆ 2021–22ನೇ ಸಾಲಿನಲ್ಲಿ ನಡೆಸುವ ನೇರ ನೇಮಕಾತಿಗಳಿಗೆ ಆರ್ಥಿಕ ಇಲಾಖೆಯಿಂದ ಅನುಮತಿ ಪಡೆಯುವುದು ಕಡ್ಡಾಯ' ಎಂದು ಆರ್ಥಿಕ ಇಲಾಖೆಯ ಕಾರ್ಯದರ್ಶಿ ಏಕ್‌ರೂಪ್ ಕೌರ್ ತಿಳಿಸಿದ್ದಾರೆ.

ಕೋವಿಡ್ ಕಾರಣಕ್ಕೆ 2020–21ನೇ ಸಾಲಿನ ಎಲ್ಲ ನೇರ ನೇಮಕಾತಿಗಳಿಗೆ ತಡೆ ನೀಡಿ 2020ರ ಜುಲೈ 6ರಂದು ಆರ್ಥಿಕ ಇಲಾಖೆ ಆದೇಶ ಹೊರಡಿಸಿತ್ತು. ಹುದ್ದೆಗಳನ್ನು ಭರ್ತಿ ಮಾಡಲು ಸಹಮತಿ ನೀಡಬೇಕೆಂದು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದ ಹಲವು ಇಲಾಖೆಗಳು, ಈ ಆದೇಶದಿಂದ ವಿನಾಯಿತಿ ನೀಡುವಂತೆ ಕೋರಿದ್ದವು. ಅಂಥ ಪ್ರಸ್ತಾವನೆಗಳ ಪೈಕಿ, ಕೆಲವು ಪ್ರಸ್ತಾವನೆಗಳಿಗೆ 2021ರ ಏಪ್ರಿಲ್ 1ರ ನಂತರ ನೇಮಕಾತಿ ಆದೇಶ ನೀಡಲು ಆರ್ಥಿಕ ಇಲಾಖೆ ತಿಳಿಸಿತ್ತು.

ಇದೀಗ ಈ ಬಗ್ಗೆ ಮತ್ತೆ ಸುತ್ತೋಲೆ ಹೊರಡಿಸಿರುವ ಆರ್ಥಿಕ ಇಲಾಖೆ, 'ನೇಮಕಾತಿಗೆ ಆದೇಶ ನೀಡಿದ ಪ್ರಸ್ತಾವನೆಗಳನ್ನು ಮರು ಪರಿಶೀಲನೆಗೆ ಸಲ್ಲಿಸಬೇಕು. ಅನುಮತಿ ಪಡೆದ ನಂತರವೇ ನೇಮಕಾತಿ ಆದೇಶ ನೀಡಬೇಕು' ಎಂದು ಸ್ಪಷ್ಟಪಡಿಸಿದೆ.

B / ARBI / Regn. 2557 / 72-73 Dt: 28th March 1973

ವಿಶ್ವಭಾರತಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ(ರಿ.)

ನಂ. 35, ರತ್ನವಿಲಾಸ ರಸ್ತೆ, ಬಸವನಗುಡಿ, ಬೆಂಗಳೂರು - 560 004.

ಸಂಘದ ಐದನೇ ಹಂತ ಸಚ್ಚಿದಾನಂದನಗರ ಬಡಾವಣೆಯ ಒಟ್ಟು ವಿಸ್ತೀರ್ಣ ಜಾಗಕ್ಕೆ ಸಂಬಂಧಿಸಿದಂತೆ ಗೌರವ ಉಚ್ಚ ನ್ಯಾಯಾಲಯವು ಕೋರ್ಟ್ ಕಮೀಷನರ್ಸ್‌ರವರನ್ನು ನೇಮಕ ಮಾಡಿರುವ ಬಗ್ಗೆ ಸಾರ್ವಜನಿಕ ಪ್ರಕಟಣೆ

ಮಾನ್ಯ ಸದಸ್ಯರಲ್ಲಿ ಸಂಘವು ಮನವಿ ಮಾಡುವುದೇನೆಂದರೆ. ದಿನಾಂಕ: 19.03.2021 ರಂದು ಸಂಘದವತಿಯಿಂದ ವಿಜಯ ಕರ್ನಾಟಕ ಮತ್ತು ಪ್ರಜಾವಾಣಿ ಕನ್ನಡ ದಿನಪತ್ರಿಕೆಗಳಲ್ಲಿ ಮತ್ತು ದಿನಾಂಕ 20.03.2021 ರಂದು ಡೆಕ್ಕನ್ ಹೆರಾಲ್ಡ್ ಇಂಗ್ಲೀಷ್ ದಿನಪತ್ರಿಕೆಯಲ್ಲಿ ಗೌರವ ಉಚ್ಚ ನ್ಯಾಯಾಲಯದ **W.P. No. 752/2021, c/w W.P. No. 1689/2021, W.P. No. 4659/2021, W.P. No. 48116/2019** ದಿನಾಂಕ 06.03.2021ರಲ್ಲಿ ಆದೇಶ ನೀಡಿರುವಂತೆ, ಸಂಘವು ಪತ್ರಿಕಾ ಪ್ರಕಟಣೆ ಮೂಲಕ ಸಂಘದ ಐದನೇ ಹಂತ ಸಚ್ಚಿದಾನಂದನಗರ ಬಡಾವಣೆಗೆ ಸಂಬಂಧಿಸಿದ ಸದಸ್ಯರುಗಳಿಗೆ "07 ದಿನಗಳ ಒಳಗಾಗಿ" ತಮ್ಮ ತಮ್ಮ ನಿವೇಶನಗಳಿಗೆ ಸಂಬಂಧಿಸಿದ ದಾಖಲಾತಿ ಮತ್ತು ಅಹವಾಲುಗಳನ್ನು ಗೌರವ ಉಚ್ಚ ನ್ಯಾಯಾಲಯವು ನಿಯೋಜಿಸಿರುವ ಕಮೀಷನರ್ಸ್‌ಗಳ ಸಮ್ಮುಖದಲ್ಲಿ ಸಲ್ಲಿಸಲು ಮನವಿ ಮಾಡಿರುವುದು ಸರಿಯಷ್ಟೇ. ಆದಾಗಿ ಕಣ್ತಪ್ಪಿನಿಂದಾಗಿ ದಿನಾಂಕ: 19.03.2021 ಮತ್ತು 20.03.2021ರ ಮೇಲಿನ ಪತ್ರಿಕಾ ಪ್ರಕಟಣೆಗಳಲ್ಲಿ ಸದಸ್ಯರುಗಳಿಗೆ "07 ದಿನಗಳ ಒಳಗಾಗಿ" ದಾಖಲಾತಿಗಳನ್ನು ಸಲ್ಲಿಸಲು ಅಂತಿಮ ಗಡುವೆಂದು ತಿಳಿಸಲಾಗಿದ್ದು. ಸದರಿ **"07 ದಿನಗಳ ಒಳಗಾಗಿ"** ಎನ್ನುವುದರ ಬದಲಾಗಿ **"4 ವಾರಗಳ ಒಳಗಾಗಿ"** ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳಬೇಕಾಗಿ ಈ ಮೂಲಕ ಸದಸ್ಯರಲ್ಲಿ ಸಂಘವು ಮನವಿ ಮಾಡಿಕೊಳ್ಳುತ್ತಿದೆ. ಈ ಹಿನ್ನಲೆಯಲ್ಲಿ ದಿನಾಂಕ **17.04.2021ರ ವರೆಗೆ ಪ್ರತಿ ಸೋಮವಾರ, ಬುಧವಾರ ಮತ್ತು ಶನಿವಾರಗಳಂದು ಮಧ್ಯಾಹ್ನ 2 ಗಂಟೆಯಿಂದ ಸಂಜೆ 5.30ರವರೆಗೆ** ಗೌರವ ಉಚ್ಚ ನ್ಯಾಯಾಲಯದಿಂದ ನಿಯೋಜನೆಗೊಂಡಿರುವ ಗೌರವಾನ್ವಿತ ಕಮೀಷನರ್ಸ್‌ರವರುಗಳು ಸಂಘದಲ್ಲಿ ಹಾಜರಿದ್ದು, ಸಂಘದ ಐದನೇ ಹಂತದ ಬಡಾವಣೆಗೆ ಸೇರಿದ ಸದಸ್ಯರುಗಳು ತಮ್ಮ ತಮ್ಮ ನಿವೇಶನಗಳಿಗೆ ಸಂಬಂದಿಸಿದಂತೆ ದಾಖಲಾತಿಗಳ ಸಹಿತ, ಖುದ್ದಾಗಿ ಸಂಘಕ್ಕೆ ಆಗಮಿಸಿ, ಗೌರವಾನ್ವಿತ ಕೋರ್ಟ್ ಕಮೀಷನರ್ಸ್‌ಗಳಿಗೆ ತಮ್ಮ ದಾಖಲಾತಿ ಮತ್ತು ಅಹವಾಲುಗಳನ್ನು ಸಲ್ಲಿಸಲು ಮನವಿ ಮಾಡಿಕೊಳ್ಳುತ್ತಿದೆ.

ಇಂತಿ ತಮ್ಮ ವಿಶ್ವಾಸಿ,
ಸಹಿ/–
ಕಾರ್ಯದರ್ಶಿ
(ಆಡಳಿತಾಧಿಕಾರಿಗಳ ಸೂಚನೆ ಮೇರೆಗೆ)

ದಿನಾಂಕ: **30.03.2021**
ಸ್ಥಳ : ಬೆಂಗಳೂರು

ಕಲಾ ಗಂಗೋತ್ರಿ ರಂಗತಂಡಕ್ಕೆ 50ನೇ ವರ್ಷದ ಸಂಭ್ರಮ

ಹೊಸ 'ಮುಖ್ಯಮಂತ್ರಿ' ಹಳೆ 'ಮುಖ್ಯಮಂತ್ರಿ'ಯಂತಲ್ಲ!

ಪ್ರಜಾವಾಣಿ ವಾರ್ತೆ

ಬೆಂಗಳೂರು: 30ನೇ ವಯಸ್ಸಿನಲ್ಲೇ ರಾಜ್ಯದ ಶಾಶ್ವತ 'ಮುಖ್ಯಮಂತ್ರಿ' ಆದ ಚಂದ್ರು ಅವರು ಇದೀಗ 68ನೇ ವಯಸ್ಸಿನಲ್ಲಿ 'ಮತ್ತೆ ಮುಖ್ಯಮಂತ್ರಿ'ಯಾಗಲು ಸಜ್ಜಾಗಿದ್ದಾರೆ.

ಕಲಾ ಗಂಗೋತ್ರಿ ರಂಗತಂಡವು 50 ವರ್ಷ ಪೂರೈಸಿರುವ ಸಂದರ್ಭದಲ್ಲೇ ಏ.4ರಂದು ಹೊಸ ನಾಟಕ 'ಮತ್ತೆ ಮುಖ್ಯಮಂತ್ರಿ' ಪ್ರದರ್ಶನಗೊಳ್ಳಲಿದೆ. ಈ ಕುರಿತು ಸುದ್ದಿಗೋಷ್ಠಿ ನಡೆಸಿದ ಮುಖ್ಯಮಂತ್ರಿ ಚಂದ್ರು, 'ಕಲಾ ಗಂಗೋತ್ರಿ ರಂಗತಂಡಕ್ಕೆ 50ನೇ ವರ್ಷದ ಸಂಭ್ರಮದಲ್ಲಿ ಏ.2ರಿಂದ ಏ.4ರವರೆಗೆ ಪ್ರತಿದಿನ ಸಂಜೆ 7 ಗಂಟೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಸುವರ್ಣ ರಂಗ ಹಬ್ಬ ನಡೆಯಲಿದೆ. ಏ.2ರಂದು ಮುಖ್ಯಮಂತ್ರಿ, ಏ.3ರಂದು ಜನಪ್ರಿಯ ಸಂಸಾರಿಕ ನಾಟಕ ಮೈಸೂರು ಮಲ್ಲಿಗೆ ಹಾಗೂ ಏ.4ರಂದು ಮತ್ತೆ ಮುಖ್ಯಮಂತ್ರಿ ಪ್ರದರ್ಶನಗೊಳ್ಳಲಿದೆ' ಎಂದರು.

'ಮುಖ್ಯಮಂತ್ರಿ' ಚಂದ್ರು

ಸಿ.ಡಿ ಹಾವಳಿ ಇಲ್ಲ!: 'ಭಾರತಕ್ಕೆ ಸ್ವಾತಂತ್ರ್ಯ ದೊರಕಿ 75 ವರ್ಷ ಕಳೆದ ಹಿನ್ನೆಲೆಯಲ್ಲಿ ಹೊಸ ಮುಖ್ಯಮಂತ್ರಿ ಮಾಡಬೇಕು ಎಂದೆನಿಸಿತು. ಈ ಹಿಂದಿನ ಮುಖ್ಯಮಂತ್ರಿ ಹಿಂದಿ ಮೂಲದ್ದು. ಇದರಲ್ಲಿನ ಮುಖ್ಯಮಂತ್ರಿ ಸಕಲಕಲಾವಲ್ಲಭ. ಇದರಲ್ಲಿ ಮನರಂಜನೆ, ಪಿತೂರಿ, ಕುತಂತ್ರ ಎಲ್ಲವೂ ಇತ್ತು. ಈ ಬಾರಿ ಹೇಗೂ ವಯಸ್ಸಾಗಿದೆ. ವಿವಾದ ಆದರೂ ಪರವಾಗಿಲ್ಲ, ವ್ಯಕ್ತಿಗಳ ಹೆಸರನ್ನು ಹೇಳದೆ ಇಂದಿನ ವಸ್ತುಸ್ಥಿತಿಯನ್ನು ಜನರಿಗೆ ಪ್ರದರ್ಶಿಸುತ್ತಿದ್ದೇವೆ. ಒಂದು ವಿಚಾರ ಸಿ.ಡಿ ಹಾವಳಿ ಇದರಲ್ಲಿ ಇಲ್ಲ. ಸಿ.ಡಿ ಹಾವಳಿಯನ್ನು ಪ್ರೇಕ್ಷಕರಿಗೆ ಅಷ್ಟು ಅಸಹ್ಯವಾಗಿ ತೋರಿಸಲು ಸಾಧ್ಯವಿಲ್ಲ' ಎಂದು ಮುಗುಳ್ನಕ್ಕರು.

ಕಳೆದ ಒಂದೂವರೆ ವರ್ಷದಲ್ಲಿ 'ಮುಖ್ಯಮಂತ್ರಿ' 35 ಪ್ರದರ್ಶನಗಳನ್ನು ಕಂಡಿದೆ. ಏ.2ಕ್ಕೆ ಇದರ 735ನೇ ಪ್ರದರ್ಶನ. 1000 ಪ್ರದರ್ಶನ ನೀಡುವ ಗುರಿ ಇದೆ

'ಮುಖ್ಯಮಂತ್ರಿ' ಚಂದ್ರು

'ರಾಜಕಾರಣಿಗಳಿಗೆ ಈ ಹಿಂದೆ ಇದ್ದ ನೈತಿಕತೆ, ಇವತ್ತಿನ ನೈತಿಕತೆ, ಮುಖ್ಯಮಂತ್ರಿ ಹೇಗಿರಬೇಕು ಮುಂತಾದ ವಿಷಯಗಳು ಇದರಲ್ಲಿದ್ದು, 2 ಗಂಟೆಯ ನಾಟಕ ಇದಾಗಿರಲಿದೆ. ಕನ್ನಡ ಪ್ರಾಧ್ಯಾಪಕರಾಗಿದ್ದ ಡಾ.ಕೆ.ವೈ. ನಾರಾಯಣಸ್ವಾಮಿ ಅವರು ಇದನ್ನು ರಚಿಸಿದ್ದಾರೆ. ಕೆಲವರಿಗೆ ಈ ಕಥೆ ತಿವಿಯಬಹುದು' ಎಂದರು.

ಹೊಸ ನಾಟಕದ ಕುರಿತು ಮಾತನಾಡಿದ ನಿರ್ದೇಶಕ ಡಾ.ಬಿ. ವಿ.ರಾಜಾರಂ, 'ಮೊದಲ 'ಮುಖ್ಯಮಂತ್ರಿ'ಯಲ್ಲಿ ಮತ್ತೆ ಗದ್ದುಗೆಯನ್ನು ಏರುವ ಚಾಣಾಕ್ಯ ಮುಖ್ಯಮಂತ್ರಿಯನ್ನು ನೋಡಿದ್ದೀರಿ. ಮತ್ತೆ ಮುಖ್ಯಮಂತ್ರಿ ವಿಭಿನ್ನವಾದ ನಾಟಕ. ಗದ್ದುಗೆ ಬಿಡಬೇಕು ಎನ್ನುವ ಮುಖ್ಯಮಂತ್ರಿ ಇಲ್ಲಿರಲಿದ್ದಾರೆ. ಶೀಲವಂತ ಹೊಸ ಮುಖ್ಯಮಂತ್ರಿ ಹೆಸರು. ಸಾಮಾನ್ಯ ಜನರಿಗೂ ಈ ರೀತಿ ಮುಖ್ಯಮಂತ್ರಿ ಇರಬೇಕು ಎನ್ನುವ ಆಸೆ ಮೂಡಬೇಕು. ಈ ರೀತಿ ಪಾತ್ರವನ್ನು ಇಲ್ಲಿ ಸೃಷ್ಟಿಸಿದ್ದೇವೆ. ಸಮಾಜದಲ್ಲಿ ನಡೆಯುತ್ತಿರುವ ಚದುರಂಗದಾಟವನ್ನು ಇಲ್ಲಿ ತೋರಿಸಿದ್ದೇವೆ' ಎಂದರು.

ಖಾಸಗೀಕರಣದತ್ತ ಮೊದಲ ಹೆಜ್ಜೆ: ಟೆಂಡರ್ ಆಹ್ವಾನಕ್ಕೆ ಸಾರಿಗೆ ನೌಕರರ ಫೆಡರೇಷನ್ ವಿರೋಧ

ಬಿಎಂಟಿಸಿಯಿಂದ 1,500 ಬಸ್ ಗುತ್ತಿಗೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 1,500 ಖಾಸಗಿ ಬಸ್‌ಗಳನ್ನು ಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳಲು ಬಿಎಂಟಿಸಿ ಮುಂದಾಗಿದ್ದು, ಇದು ಸಂಸ್ಥೆಯನ್ನು ಖಾಸಗೀಕರಣಗೊಳಿಸುವ ನಿಟ್ಟಿನಲ್ಲಿ ಇಟ್ಟಿರುವ ಮೊದಲ ಹೆಜ್ಜೆ ಎಂದು ಸಾರಿಗೆ ನೌಕರರ ಫೆಡರೇಷನ್ ಆರೋಪಿಸಿದೆ.

'ಗ್ರಾಸ್ ಕಾಸ್ಟ್ ಕಂಟ್ರ್ಯಾಕ್ಟ್ (ಜಿಸಿಸಿ) ಮಾದರಿಯಲ್ಲಿ ಡೀಸೆಲ್ ಬಸ್‌ಗಳನ್ನು ಗುತ್ತಿಗೆ ಆಧಾರದಲ್ಲಿ ಕಾರ್ಯಾಚರಣೆಗೆ ಬಳಸಲು ಆಸಕ್ತ ಮತ್ತು ಅರ್ಹ ಬಿಡ್ಡುದಾರರಿಂದ ಅಥವಾ ಒಕ್ಕೂಟದಿಂದ ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಏ.12 ಕೊನೆಯ ದಿನವಾಗಿದ್ದು, ಏ. 23ರಂದು ಬೆಳಿಗ್ಗೆ 11.30ಕ್ಕೆ ಆರ್ಥಿಕ ಬಿಡ್ ತೆರೆಯಲಾಗುವುದು' ಎಂದು ಟೆಂಡರ್ ಅಧಿಸೂಚನೆಯಲ್ಲಿ ಬಿಎಂಟಿಸಿ ತಿಳಿಸಿದೆ.

ಇದರ ಪ್ರಕಾರ, ಖಾಸಗಿಯವರಿಂದ ಬಸ್‌ಗಳನ್ನು ಪಡೆದು ಪ್ರತಿ ಕಿಲೋ ಮೀಟರ್‌ಗೆ ಇಂತಿಷ್ಟು ಹಣ ನಿಗದಿ ಮಾಡಲಾಗುತ್ತದೆ. ಖಾಸಗಿ ಸಂಸ್ಥೆಗಳು ಸಲ್ಲಿಸುವ ಬಿಡ್ ಆಧರಿಸಿ ದರ ನಿರ್ಧಾರ ಆಗಲಿದೆ. ಬಸ್ ಪೂರೈಸುವ ಸಂಸ್ಥೆಯೇ ಅವುಗಳ ನಿರ್ವಹಣೆ ಮಾಡಲಿದ್ದು, ಬಸ್ ಸೇವೆಯಲ್ಲಿ ಸಂಗ್ರಹವಾಗುವ ಪ್ರಯಾಣ ಶುಲ್ಕವನ್ನು ಬಿಎಂಟಿಸಿ ಪಡೆಯುತ್ತದೆ.

ಒಂದೂವರೆ ದಶಕದ ಹಿಂದೆ ಈ ಪ್ರಯೋಗ ನಡೆದಿತ್ತು. ಸಾವಿರಕ್ಕೂ ಹೆಚ್ಚು ಖಾಸಗಿ ಬಸ್‌ಗಳನ್ನು ಗುತ್ತಿಗೆ ಆಧಾರದಲ್ಲಿ ಪಡೆದು, ಸೇವೆ ನೀಡಲಾಗಿತ್ತು. ಆದರೆ, ಈ ಕ್ರಮದಿಂದ ಬಿಎಂಟಿಸಿ ಮತ್ತು ಖಾಸಗಿ ಸಂಸ್ಥೆಗಳಿಗೆ ಯಾವುದೇ ಲಾಭವಾಗದ ಕಾರಣ ರದ್ದುಗೊಳಿಸಲಾಗಿತ್ತು. ಈಗ ಮತ್ತದೇ ಮಾದರಿಯನ್ನು ಕೆಲವು ಮಾರ್ಪಾಡುಗಳೊಂದಿಗೆ ಪರಿಚಯಿಸಲಾಗುತ್ತಿದೆ.

ಈ ನಡುವೆ ಕೇಂದ್ರ ಸರ್ಕಾರದ ಫೇಮ್-2 ಯೋಜನೆ ಅನುದಾನದಡಿ ಗುತ್ತಿಗೆ ಆಧಾರದಲ್ಲಿ 300 ವಿದ್ಯುತ್ ಚಾಲಿತ ಬಸ್‌ಗಳನ್ನು ಪರಿಚಯಿಸಲು ಉದ್ದೇಶಿಸಿದ್ದು, ಇದರ ಟೆಂಡರ್ ಪ್ರಕ್ರಿಯೆಯೂ ಚಾಲ್ತಿಯಲ್ಲಿದೆ. ಮುಷ್ಕರದ ಸಂದರ್ಭದಲ್ಲಿ ಸಾರ್ವಜನಿಕರಿಗೆ ತೊಂದರೆ ಆಗದಂತೆ ತಾತ್ಕಲಿಕ ಪರ್ಮಿಟ್ ನೀಡಲು ಮ್ಯಾಕ್ಸಿ ಕ್ಯಾಬ್, ಬಸ್ ಮತ್ತು ಮಿನಿ ಬಸ್‌ಗಳ ಮಾಲೀಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಈ ಎಲ್ಲಾ ಬೆಳವಣಿಗೆಗಳು ಸಾರಿಗೆ ನೌಕರರಲ್ಲಿ ಆತಂಕ ಸೃಷ್ಟಿಸಿದ್ದು, ಸಾರ್ವಜನಿಕ ವಲಯದಲ್ಲೂ ವಿರೋಧ ವ್ಯಕ್ತವಾಗಿದೆ.

ನಿರ್ಧಾರ ವಾಪಸ್ ಪಡೆಯದಿದ್ದರೆ ಹೋರಾಟ

'ಬಿಎಂಟಿಸಿಯನ್ನು ಕ್ರಮೇಣ ಖಾಸಗೀಕರಣ ಮಾಡುವ ಹುನ್ನಾರದಂತಿರುವ ಈ ನಿರ್ಧಾರವನ್ನು ಸರ್ಕಾರ ಕೂಡಲೇ ವಾಪಸ್ ಪಡೆಯಬೇಕು' ಎಂದು ಸಾರಿಗೆ ನೌಕರರ ಫೆಡರೇಷನ್ (ಸಿಐಟಿಯು) ಒತ್ತಾಯಿಸಿದೆ.

ಲಕ್ಷಾಂತರ ವಿದ್ಯಾರ್ಥಿಗಳಿಗೆ ರಿಯಾಯಿತಿ ಪಾಸುಗಳನ್ನು ಬಿಎಂಟಿಸಿ ನೀಡಿದೆ. ವಿವಿಧ ಜನ ವಿಭಾಗಗಳಿಗೆ ಹಲವು ರೀತಿಯ ರಿಯಾಯಿತಿ ಪಾಸುಗಳನ್ನು ನೀಡಲಾಗಿದೆ. ಇದರ ಬಾಕಿ ₹3,400 ಕೋಟಿಯನ್ನು ಸರ್ಕಾರ ನೀಡಿಲ್ಲ ಎಂದು ಹೇಳಿದೆ.

'ನಗರದಲ್ಲಿ 1,250 ಎಕರೆ ಜಾಗವನ್ನು ಬಿಎಂಟಿಸಿ ಹೊಂದಿದೆ. ಹತ್ತಾರು ಟಿಟಿಎಂಸಿ ಕಟ್ಟಡಗಳು, ಬಸ್ ನಿಲ್ದಾಣಗಳು, 50 ಡಿಪೊಗಳು, 6,500 ಬಸ್‌ಗಳು, 35 ಸಾವಿರ ಕಾರ್ಮಿಕರನ್ನು ಸಂಸ್ಥೆ ಹೊಂದಿದೆ. ಇಷ್ಟು ದೊಡ್ಡ ಸಂಸ್ಥೆಯನ್ನು ಖಾಸಗೀಕರಣ ಮಾಡಲು ಹೊರಟಿರುವುದು ಜನರಿಗೆ ಬಿಜೆಪಿ ಸರ್ಕಾರ ಮಾಡುತ್ತಿರುವ ದ್ರೋಹ' ಎಂದು ಒಕ್ಕೂಟವು ಆರೋಪಿಸಿದೆ.

'ಈ ನಿರ್ಧಾರದಿಂದ ಸರ್ಕಾರ ಹಿಂದೆ ಸರಿಯದಿದ್ದಲ್ಲಿ ತೀವ್ರ ಸ್ವರೂಪದ ಹೋರಾಟ ನಡೆಸಲಾಗುವುದು. ಬೆಂಗಳೂರಿನ ದುಡಿಯುವ ಜನ, ವಿದ್ಯಾರ್ಥಿಗಳು ಈ ಹೋರಾಟಕ್ಕೆ ಕೈಜೋಡಿಸಬೇಕು' ಎಂದು ಮನವಿ ಮಾಡಿದೆ.

ಸುದ್ದಿ 2 ನಿಮಿಷ

ಸಾರಿಗೆ ಮುಷ್ಕರದಿಂದ ಆದ ಹಾನಿ: ವರದಿ ಕೇಳಿದ ಹೈಕೋರ್ಟ್

ಬೆಂಗಳೂರು: ಸಾರಿಗೆ ಸಂಸ್ಥೆಗಳ ಸಂಘಟನೆಗಳು 2020ರಲ್ಲಿ ನಡೆಸಿದ ಪ್ರತಿಭಟನೆಗಳ ಸಂದರ್ಭದಲ್ಲಿ ದಾಖಲಾದ ಪ್ರಕರಣಗಳ ತನಿಖೆಯ ಸ್ಥಿತಿಗತಿ ಬಗ್ಗೆ ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

'₹2.6 ಕೋಟಿ ನಷ್ಟವಾಗಿದ್ದು, ಅದನ್ನು ವಾಪಸ್ ಪಡೆಯಲು ನೌಕರರ ಸಂಘಗಳ ಪದಾಧಿಕಾರಿಗಳ ವಿರುದ್ಧ ಮೊಕದ್ದಮೆ ದಾಖಲಿಸಲಾಗಿದೆ' ಎಂದು ಬಿಎಂಟಿಸಿ ಪರ ವಕೀಲರು ಮಾಹಿತಿ ನೀಡಿದರು.

ತನಿಖೆಯ ವಿವರಗಳನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ವಿಚಾರಣೆಯನ್ನು ಜೂನ್ 4ಕ್ಕೆ ಮುಂದೂಡಿತು.

ನಗರದ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ 'ಸಮರ್ಪಣ' ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದು, '2020ರ ಡಿಸೆಂಬರ್ 11ರಿಂದ 14ರವರೆಗೆ ನಡೆದ ಮುಷ್ಕರದ ಸಂದರ್ಭದಲ್ಲಿ 23 ಬಸ್‌ಗಳಿಗೆ ಹಾನಿಯಾಗಿ ₹7.9 ಕೋಟಿ ನಷ್ಟವಾಗಿತ್ತು' ಎಂದು ತಿಳಿಸಿತ್ತು.

ಅತ್ಯಾಚಾರ: ಮಲತಂದೆ ಬಂಧನ

ಬೆಂಗಳೂರು: ಬಾಲಕಿ (15 ವರ್ಷ) ಮೇಲೆ ಅತ್ಯಾಚಾರ ಎಸಗಿದ್ದ ಆರೋಪದಡಿ, ಆಕೆಯ ಮಲತಂದೆಯನ್ನು ನಗರದ ಪೊಲೀಸರು ಬಂಧಿಸಿದ್ದಾರೆ.

ಬಾಲಕಿಯ ತಾಯಿ ನೀಡಿದ್ದ ದೂರು ಆಧರಿಸಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು.

'ಮೊದಲ ಪತಿಯನ್ನು ತೊರೆದಿದ್ದ ಬಾಲಕಿಯ ತಾಯಿ, 32 ವರ್ಷದ ಆರೋಪಿಯನ್ನು ಎರಡನೇ ಮದುವೆಯಾಗಿದ್ದರು. ಗರ್ಭಿಣಿಯಾಗಿದ್ದ ತಾಯಿ, ಕಳೆದ ವರ್ಷ ಹೆರಿಗೆಗೆಂದು ಆಸ್ಪತ್ರೆಗೆ ದಾಖಲಾಗಿದ್ದರು. ಮನೆಯಲ್ಲಿ ಯಾರೂ ಇಲ್ಲದ ವೇಳೆ ಬಾಲಕಿ ಮೇಲೆ ಆರೋಪಿ, ಅತ್ಯಾಚಾರ ಎಸಗಿದ್ದ. ಈ ವಿಚಾರವನ್ನು ಯಾರಿಗೂ ಹೇಳದಂತೆ ಬೆದರಿಸಿದ್ದ. ಇತ್ತೀಚೆಗೆ ಬಾಲಕಿಗೆ ಹೊಟ್ಟೆ ನೋವು ಕಾಣಿಸಿಕೊಂಡಿದ್ದು, ಆಸ್ಪತ್ರೆಗೆ ಕರೆದೊಯ್ದು ತಪಾಸಣೆ ಮಾಡಿಸಿದಾಗ ಕೃತ್ಯ ಬಯಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಾಹನ ಡಿಕ್ಕಿ: ಕರಡಿ ಸಾವು

ಮೊಳಕಾಲ್ಮುರು: ತಾಲ್ಲೂಕಿನ ದೇವಸಮುದ್ರ ಕ್ರಾಸ್ ಬಳಿಯ ರಾಷ್ಟ್ರೀಯ ಹೆದ್ದಾರಿ-150 'ಎ'ನಲ್ಲಿ ಸೋಮವಾರ ರಾತ್ರಿ ವಾಹನವೊಂದು ಡಿಕ್ಕಿ ಹೊಡೆದು ಗಂಡು ಕರಡಿಯೊಂದು ಸ್ಥಳದಲ್ಲೇ ಮೃತಪಟ್ಟಿದೆ.

ಸಮೀಪದ ವಕೀಲ ಆರ್.ಎಂ. ಅಶೋಕ್ ಅವರಿಗೆ ಸೇರಿದ ತೋಟದ ಎದುರು ರಾತ್ರಿ 11ರ ಸುಮಾರು ಘಟನೆ ನಡೆದಿದೆ. ಮೃತ ಕರಡಿಯು 6 ವರ್ಷ ವಯಸ್ಸಿನದ್ದಾಗಿದೆ ಎಂದು ತಾಲ್ಲೂಕು ವಲಯ ಅರಣ್ಯಾಧಿಕಾರಿ ನಾಗೇಂದ್ರ ನಾಯಕ 'ಪ್ರಜಾವಾಣಿ'ಗೆ ತಿಳಿಸಿದರು.

ಮಂಗಳವಾರ ಪಶುವೈದ್ಯ ರಫೀಕ್ ನೇತೃತ್ವದಲ್ಲಿ ತಪಾಸಣೆ ನಡೆಸಿದ ನಂತರ ಕರಡಿಯ ಕಳೇಬರವನ್ನು ದಹನ ಮಾಡಲಾಯಿತು.

ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ಚಾಲಕ ? • ವಿಮಾನ ನಿಲ್ದಾಣದಲ್ಲಿ ಪ್ರತಿಭಟನೆ

ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಚಾಲಕ ಪ್ರತಾಪ್

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೊರ ಭಾಗದಲ್ಲಿ ಪ್ರತಾಪ್ ಎಂಬುವರು ಕಾರಿನಲ್ಲೇ ಮೈ ಮೇಲೆ ಪೆಟ್ರೋಲ್ ಸುರಿದುಕೊಂಡು ಮಂಗಳವಾರ ಸಂಜೆ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

'ರಾಮನಗರದ ಪ್ರತಾಪ್, ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಗೆ (ಕೆಎಸ್‌ಟಿಡಿಸಿ) ಗುತ್ತಿಗೆ ಅಡಿಯಲ್ಲಿ ಟ್ಯಾಕ್ಸಿ ಚಲಾಯಿಸುತ್ತಿದ್ದರು. ತೀವ್ರವಾಗಿ ಗಾಯಗೊಂಡಿರುವ ಅವರನ್ನು ನಿಲ್ದಾಣ ಸಮೀಪದ ಆಸ್ಪತ್ರೆಯೊಂದಕ್ಕೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಲಾಗಿದೆ. ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ಪ್ರತಾಪ್, ಸಾಲ ಮಾಡಿ ಕಾರು ಖರೀದಿಸಿದ್ದರು. ಅದರ ದುಡಿಮೆಯಿಂದ ಬಂದ ಹಣದಲ್ಲೇ ಜೀವನ ನಿರ್ವಹಣೆ ಮಾಡುತ್ತಿದ್ದರು. ಆದರೆ, ಇತ್ತೀಚೆಗೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರು ಎನ್ನಲಾಗಿದೆ. ಅದರಿಂದ ಬೇಸತ್ತಿದ್ದ ಪ್ರತಾಪ್, ವಿಮಾನ ನಿಲ್ದಾಣದ ಹೊರಭಾಗದಲ್ಲಿರುವ ಟ್ಯಾಕ್ಸಿ ನಿಲುಗಡೆ ಸ್ಥಳದಲ್ಲಿ ತಮ್ಮ ಕಾರಿನೊಳಗೆ ಕುಳಿತೇ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು.'

'ಸ್ಥಳದಲ್ಲಿದ್ದ ಚಾಲಕರೇ ಅವರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಅವರ ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಪ್ರತಿಭಟನೆ: ಆತ್ಮಹತ್ಯೆ ಯತ್ನ ಸುದ್ದಿ ತಿಳಿಯುತ್ತಿದ್ದಂತೆ ವಿಮಾನ ನಿಲ್ದಾಣದ ಟ್ಯಾಕ್ಸಿ ನಿಲುಗಡೆ ಸ್ಥಳದಲ್ಲಿ ಸೇರಿದ್ದ ಚಾಲಕರು, ಪ್ರತಿಭಟನೆ ನಡೆಸಿದರು.

'ಓಲಾ, ಉಬರ್ ಹಾಗೂ ಇತರೆ ಕಂಪನಿಗಳಡಿ ಚಾಲಕರು ಕಾರು ಓಡಿಸುತ್ತಿದ್ದಾರೆ. ಅಂಥ ಕಾರುಗಳಲ್ಲಿ ಪ್ರಯಾಣಿಸಲು ಕಿ.ಮೀ.ಗೆ ₹ 10 ದರ ನಿಗದಿ ಮಾಡಲಾಗಿದೆ. ಆದರೆ, ಕೆಎಸ್‌ಟಿಡಿಸಿ ಟ್ಯಾಕ್ಸಿಗಳಲ್ಲಿ ಪ್ರಯಾಣಿಸಲು ಕಿ.ಮೀ.ಗೆ ₹ 24 ದರ ನಿಗದಿಯಾಗಿದೆ. ದರ ಹೆಚ್ಚಾಗಿದ್ದರಿಂದ ಪ್ರಯಾಣಿಕರು, ಕೆಎಸ್‌ಟಿಡಿಸಿ ಟ್ಯಾಕ್ಸಿಯಲ್ಲಿ ಪ್ರಯಾಣಿಸುತ್ತಿಲ್ಲ. ಇದರಿಂದ ಚಾಲಕರಿಗೆ ಪ್ರಯಾಣಿಕರೇ ಸಿಗುತ್ತಿಲ್ಲ. ದುಡಿಮೆಯೂ ತೀರಾ ಕಡಿಮೆಯಾಗಿದ್ದು, ಚಾಲಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಾಲದ ಕಂತು ತುಂಬಲು ಹಾಗೂ ಕುಟುಂಬ ನಿರ್ವಹಿಸಲು ಸಾಕಷ್ಟು ಕಷ್ಟಪಡುತ್ತಿದ್ದಾರೆ' ಎಂದೂ ಪ್ರತಿಭಟನಕಾರರು ಅಳಲು ತೋಡಿಕೊಂಡರು.

'ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ವಿಮಾನ ನಿಲ್ದಾಣದಲ್ಲಿರುವ ಎಲ್ಲ ಟ್ಯಾಕ್ಸಿಗಳಿಗೆ ಒಂದೇ ಪ್ರಯಾಣ ದರ ನಿಗದಿ ಮಾಡಬೇಕು. ಇಲ್ಲದಿದ್ದರೆ, ಪ್ರತಾಪ್ ರೀತಿಯಲ್ಲೇ ಮತ್ತಷ್ಟು ಚಾಲಕರು ಆತ್ಮಹತ್ಯೆಗೆ ಯತ್ನಿಸಿದರೂ ಆಶ್ಚರ್ಯವಿಲ್ಲ' ಎಂದೂ ಅವರು ಹೇಳಿದರು.

ಚಿತ್ರಾವಳಿ

ಸಿರಿ ಬೆಳಕು ಸೇವಾ ಟ್ರಸ್ಟ್ ವತಿಯಿಂದ ವಿಜಯನಗರದಲ್ಲಿ ಮಂಗಳವಾರ ಏರ್ಪಡಿಸಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಹಿಳಾ ಸಾಧಕರನ್ನು ಸನ್ಮಾನಿಸಲಾಯಿತು. ಶೈಲಜಾ ಸೋಮಣ್ಣ, ಟ್ರಸ್ಟ್‌ನ ಅಧ್ಯಕ್ಷೆ ಪ್ರೇಮಾ ಶಾಂತವೀರಯ್ಯ ಹಾಗೂ ಟ್ರಸ್ಟ್‌ನ ಪದಾಧಿಕಾರಿಗಳು ಇದ್ದರು.

ಎನ್‌.ಆರ್‌.ಕಾಲೊನಿಯ ಆಚಾರ್ಯ ಪಾಠಶಾಲಾ (ಎಪಿಎಸ್) ಕಲೆ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನಲ್ಲಿ ಮಂಗಳವಾರ ನಡೆದ ಕಾಲೇಜು ವಾರ್ಷಿಕೋತ್ಸವದಲ್ಲಿ ಮಿಸೆಸ್ ಏಷಿಯಾ ಇಂಟರ್‌ನ್ಯಾಷನಲ್ ಪ್ರತಿಭಾ ಸೌಂಶಿಮಠ್ ಅವರನ್ನು ಸನ್ಮಾನಿಸಲಾಯಿತು. ಎಪಿಎಸ್ ಸಮೂಹ ಸಂಸ್ಥೆಗಳ ಅಧ್ಯಕ್ಷ ಟಿ.ವಿ. ಮಾರುತಿ, ಕಾರ್ಯದರ್ಶಿ ಎ.ಆರ್‌.ಆಚಾರ್ಯ, ಸಂಸ್ಥೆಯ ರೂವಾರಿ ಎ.ಪಿ. ಆಚಾರ್ಯ, ಜಂಟಿ ಕಾರ್ಯದರ್ಶಿಗಳಾದ ಪಿ.ಕೃಷ್ಣಸ್ವಾಮಿ, ಪ್ರೊ.ಪ್ರಕಾಶ್, ಎಪಿಎಸ್ ಪಿ.ಯು ಕಾಲೇಜಿನ ಮುಖ್ಯಸ್ಥ ಕೆ.ಮೋಹನ್ ದೇವ್ ಆಳ್ವ, ಪ್ರಾಂಶುಪಾಲ ಎಸ್‌. ನಾಗರಾಜ್, ಸಾಂಸ್ಕೃತಿಕ ಸಮಿತಿಯ ಸಿಂಧೂ ಹಾಗೂ ದಿವ್ಯಾ ಇದ್ದರು

ಅಂಜನಾಪುರದಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿಗೆ ಶಾಸಕ ಎಂ.ಕೃಷ್ಣಪ್ಪ ಮಂಗಳವಾರ ಚಾಲನೆ ನೀಡಿದರು. ಸ್ಥಳೀಯ ಮುಖಂಡರಾದ ಸೋಮಶೇಖರ್, ಲೋಕೇಶ್, ಲಕ್ಷ್ಮಮ್ಮ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಎ.ಕದರಿಪತಿ, ಸಹಾಯಕ ಎಂಜಿನಿಯರ್ ವಿ.ತಿಮ್ಮಯ್ಯ ಇದ್ದರು.

ಮಹಿಳಾ ದಿನಾಚರಣೆ ಅಂಗವಾಗಿ ಡಿ.ಎಚ್‌.ರಾಜಣ್ಣ ನೀಲಾಂಬಿಕೆ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಸಂಗೀತೋತ್ಸವವನ್ನು ದೀಪ ಬೆಳಗುವ ಮೂಲಕ ಉದ್ಘಾಟಿಸಲಾಯಿತು. ಶಿಕ್ಷಣ ತಜ್ಞೆ, ಗೀತಾ ರಾಮಾನುಜಂ, ಲೇಖಕಿಯರ ಸಂಘದ ಅಧ್ಯಕ್ಷೆ ವನಮಾಲ ಸಂಪನ್ನಕುಮಾರ್, ಶಿವಚಾರಿಣಿಯರ ಸಮಾಜದ ಅಧ್ಯಕ್ಷೆ ರೇಣುಕಾ ಶಂಕರ್, ಲೇಖಕಿ ಪಾರ್ವತಿ ಸಪ್ನಾ, ಅಪೆಕ್ಸ್ ಬ್ಯಾಂಕ್‌ನ ವ್ಯವಸ್ಥಾಪಕಿ ಅಶ್ವಿನಿ ಹಾಗೂ ಟ್ರಸ್ಟ್‌ನ ಅಧ್ಯಕ್ಷೆ ಆರ್‌.ನೀಲಾಂಬಿಕೆ ಇದ್ದಾರೆ.

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿರ್ದೇಶಕರ ಮಂಡಳಿ ಸಭೆಯು ಸಂಸ್ಥೆಯ ಅಧ್ಯಕ್ಷೆ ಸವಿತಾ ವಿ.ಅಮರಶೆಟ್ಟಿ ಅಧ್ಯಕ್ಷತೆಯಲ್ಲಿ ಬಹುಮಹಡಿಗಳ ಕಟ್ಟಡದ ಸಭಾಂಗಣದಲ್ಲಿ ಮಂಗಳವಾರ ನಡೆಯಿತು. ಸಭೆಯಲ್ಲಿ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯ, ತೋಟಗಾರಿಕೆ ಇಲಾಖೆ ನಿರ್ದೇಶಕಿ ಬಿ.ಫೌಜಿಯಾ ತರನಮ್, ಮಂಡಳಿಯ ನಿರ್ದೇಶಕರಾದ ಮಂಜುನಾಥ್, ವಿ.ರಾಜು ತಿಮ್ಮಯ್ಯ ಹಾಗೂ ಇತರರು ಇದ್ದರು.

ನಗರಾಭಿವೃದ್ಧಿ ಇಲಾಖೆ ಆದೇಶಕ್ಕೆ ಕಿಮ್ಮತ್ತು ನೀಡದ ಬಿಬಿಎಂಪಿ: ಆರೋಪ

ವೆಂಕಟಾಚಲಪತಿ ವಿರುದ್ಧ ಕ್ರಮಕ್ಕೆ ಮೀನಮೇಷ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ಲೋಕಾಯುಕ್ತ ತನಿಖೆಗೆ ಸಹಕರಿಸದ ಬಿಬಿಎಂಪಿ ಜಂಟಿ ಆಯುಕ್ತ (ಕಂದಾಯ) ವೆಂಕಟಾಚಲಪತಿ ಅವರಿಗೆ ಹಿಂಬಡ್ತಿ ನೀಡಬೇಕು ಎಂಬ ನಗರಾಭಿವೃದ್ಧಿ ಇಲಾಖೆಯ ಆದೇಶ ಜಾರಿಗೆ ಪಾಲಿಕೆ ಹಿಂದೇಟು ಹಾಕುತ್ತಿದೆ ಎಂಬ ಆರೋಪ ವ್ಯಕ್ತವಾಗಿದೆ.

ನಗರಾಭಿವೃದ್ಧಿ ಇಲಾಖೆಯು 2019 ನ.21ರಂದು ಈ ಆದೇಶ ಹೊರಡಿಸಿತ್ತು. ಶಿಸ್ತುಕ್ರಮಕ್ಕೆ ಒಳಗಾಗಬೇಕಾದ ಅಧಿಕಾರಿ ಅದೇ ಹುದ್ದೆಯಲ್ಲೇ ಮುಂದುವರೆದಿದ್ದಾರೆ. ಇನ್ನೂ ಈ ಆದೇಶ ಜಾರಿಯಾಗದ ಬಗ್ಗೆ ಎಸಿಬಿ ಅಧಿಕಾರಿಗಳೂ ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಸುಬ್ಬು ಹೆಗ್ಡೆ ಎಂಬವರು, ಮೆ. ನಕೋಡಾ ಕನ್‌ಸ್ಟ್ರಕ್ಷನ್ಸ್ ಲಿಮಿಟೆಡ್ ಸಂಸ್ಥೆಯ 'ಅಸ್ತ್ರ ವಾಲ್ ಮಾರ್ಕ್' ವಸತಿ ಸಮುಚ್ಚಯ ಕಟ್ಟಡ ನಿರ್ಮಾಣಕ್ಕೆ (ತಳ ಮಹಡಿ, ನೆಲ ಮಹಡಿ ಸೇರಿ 16 ಅಂತಸ್ತುಗಳ ಕಟ್ಟಡ) ಸುಳ್ಳು ದಾಖಲೆ ಆಧರಿಸಿ 2014ರ ಮಾ 12ರಂದು ಅನುಮತಿ ನೀಡಲಾಗಿದೆ ಎಂದು ಆರೋಪಿಸಿ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಈ ಬಗ್ಗೆ ವಿಚಾರಣೆ ಕೈಗೆತ್ತಿಕೊಂಡಿದ್ದ ಲೋಕಾಯುಕ್ತರು ಕೋರಿದ್ದ ಮಾಹಿತಿಯನ್ನು ಆಗ ಉಪ ಆಯುಕ್ತರಾಗಿದ್ದ (ಕಂದಾಯ) ವೆಂಕಟಾಚಲಪತಿ ಅವರು ನೀಡಿರಲಿಲ್ಲ. ತನಿಖೆಗೆ ಅಸಹಕಾರ ನೀಡಿದ್ದನ್ನು ಗಂಭೀರವಾಗಿ ಪರಿಗಣಿಸಿದ್ದ ಲೋಕಾಯುಕ್ತರು 1966ರ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮ ಉಲ್ಲಂಘನೆಗಾಗಿ ಅಧಿಕಾರಿ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿದ್ದರು.

ವೆಂಕಟಾಚಲಪತಿ ಅವರ ಕರ್ತವ್ಯ ಲೋಪ ಇಲಾಖಾ ವಿಚಾರಣೆಯಲ್ಲೂ ಸಾಬೀತಾಗಿತ್ತು. 'ತಪ್ಪಿತಸ್ಥ ಅಧಿಕಾರಿ ಈಗಿನ ಹುದ್ದೆಗಿಂತ ಕೆಳಗಿನ ಹುದ್ದೆಗೆ ಹಿಂಬಡ್ತಿ ನೀಡಬೇಕು. ಅವರಿಗೆ ಮೂರು ವರ್ಷ ಯಾವುದೇ ಬಡ್ತಿ ನೀಡಬಾರದು' ಎಂದು ವಿಚಾರಣೆ ಸಮಿತಿ ಶಿಫಾರಸು ಮಾಡಿತ್ತು. ಈ ಬಗ್ಗೆ ಸಮಜಾಯಿಷಿ ಕೇಳಿ ಬಿಬಿಎಂಪಿ ಆಯುಕ್ತರು ಅವರಿಗೆ 2019ರ ಆ 17ರಂದು ನೋಟಿಸ್ ನೀಡಿದ್ದರು. ಅವರು ನೀಡಿದ್ದ ಸಮಜಾಯಿಷಿಯಲ್ಲಿ 'ಲೋಕಾಯುಕ್ತ ವಿಚಾರಣಾಧಿಕಾರಿಗಳ ವರದಿಯ ಶಿಫಾರಸುಗಳನ್ನು ತಳ್ಳಿ ಹಾಕುವ ಸ್ಪಷ್ಟ ಅಂಶಗಳು ಇಲ್ಲ' ಎಂಬ ಕಾರಣಕ್ಕೆ ಅವರಿಗೆ ದಂಡನೆ ವಿಧಿಸಲು ನಗರಾಭಿವೃದ್ಧಿ ಇಲಾಖೆ ಕ್ರಮ ಕೈಗೊಂಡಿತ್ತು. 'ವೆಂಕಟಾಚಲಪತಿ ಅವರಿಗೆ ಹಿಂಬಡ್ತಿ ನೀಡಬೇಕು ಹಾಗೂ ಮೂರು ವರ್ಷ ಬಡ್ತಿ ನೀಡಬಾರದು' ಎಂದು ಸ್ಪಷ್ಟಪಡಿಸಿತ್ತು.

ಈ ಬಗ್ಗೆ 'ಪ್ರಜಾವಾಣಿ' 2021ರ ಫೆ.18ರ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿ ಗಮನ ಸೆಳೆದಿತ್ತು. ಆ ಬಳಿಕವೂ ಬಿಬಿಎಂಪಿಯು ಅಧಿಕಾರಿ ವಿರುದ್ಧ ಕ್ರಮ ಕೈಗೊಂಡಿಲ್ಲ.

ಗುಜರಾತಿನ ಯುವಕ-ಯುವತಿ ಪೊಲೀಸ್ ವಶಕ್ಕೆ

ಮೂಡುಬಿದಿರೆ: ಬಸ್‌ನಲ್ಲಿ ಮುಂಬೈಗೆ ಪ್ರಯಾಣಿಸುತ್ತಿದ್ದ ಗುಜರಾತಿನ ಯುವಕ ಮತ್ತು ಯುವತಿಯನ್ನು ಬಜರಂಗ ದಳ ಕಾರ್ಯಕರ್ತರ ದೂರಿನ ಮೇರೆಗೆ ಮೂಡುಬಿದಿರೆ ಪೊಲೀಸರು ಸೋಮವಾರ ವಶಕ್ಕೆ ಪಡೆದಿದ್ದಾರೆ.

ಇವರಿಬ್ಬರು ಗುಜರಾತಿನ ವಡ್ನಾಗರ್ ಗ್ರಾಮದವರು ಎನ್ನಲಾಗಿದೆ. ಯುವತಿ ಹಿಂದೂ ಧರ್ಮಕ್ಕೆ ಸೇರಿದ್ದು, ಮಂಗಳೂರಿನ ಕಾಲೇಜೊಂದರ ವಿದ್ಯಾರ್ಥಿನಿ. ಯುವತಿಯನ್ನು ಮಂಗಳೂರಿನ ಮಹಿಳಾ ಸ್ವೀಕಾರ ಕೇಂದ್ರಕ್ಕೆ ಕಳಿಸಿಕೊಡಲಾಗಿದೆ. ಯುವಕನನ್ನು ಕರೆದೊಯ್ಯಲು ಆತನ ಪಾಲಕರು ಮೂಡುಬಿದಿರೆಗೆ ಬರುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಡತ ವಿಲೇವಾರಿ ಅಭಿಯಾನ

ಯಲಹಂಕ: ಬೆಂಗಳೂರು ಉತ್ತರ ಹಾಗೂ ಯಲಹಂಕ ತಾಲ್ಲೂಕು ಕಚೇರಿಗಳ ಕಡತ ವಿಲೇವಾರಿ ಅಭಿಯಾನ ಏ.1ರಿಂದ 12ರವರೆಗೆ ನಡೆಯಲಿದೆ ಎಂದು ಶಾಸಕ ಎಸ್.ಆರ್.ವಿಶ್ವನಾಥ್ ತಿಳಿಸಿದರು.

ತಾಲ್ಲೂಕು ಕಚೇರಿಯಲ್ಲಿ ನಡೆದ ಸಭೆಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, 'ಈ ಎರಡೂ ತಾಲ್ಲೂಕು ಕಚೇರಿಗಳಲ್ಲಿ ಒಂದು ವರ್ಷಕ್ಕಿಂತ ಮೇಲ್ಪಟ್ಟ ಪ್ರಕರಣಗಳು ಬಾಕಿ ಇದ್ದು, ತಡಮಾಡದೆ ಇತ್ಯರ್ಥಪಡಿಸುವಂತೆ ವಿಷಯ ಸೂಚಕರಿಗೆ ಸೂಚನೆ ನೀಡಲಾಗಿದೆ' ಎಂದರು.

ಬೆಳಿಗ್ಗೆ 9.30ರಿಂದ ಸಂಜೆ 6.30ರವರೆಗೆ ಈ ಅಭಿಯಾನ ನಡೆಯಲಿದ್ದು, ಈ ಅವಧಿಯಲ್ಲಿ ಮಧ್ಯಾಹ್ನ 3 ಗಂಟೆಯವರೆಗೆ ಸಾರ್ವಜನಿಕರ ಪ್ರವೇಶಕ್ಕೆ ಅವಕಾಶ ಇರುವುದಿಲ್ಲ. ಅತಿಜರೂರಿದ್ದರೆ ಮಾತ್ರ ಶಿರಸ್ತೇದಾರ್ ಅವರನ್ನು ಭೇಟಿ ಮಾಡಬಹುದಾಗಿದೆ ಎಂದು ವಿಶ್ವನಾಥ್ ಮಾಹಿತಿ ನೀಡಿದರು.

ಕರಡಿ ದಾಳಿ: 7 ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಿಂದ ಭಾನುವಾರ ತಪ್ಪಿಸಿಕೊಂಡಿದ್ದ ಕರಡಿ ಮಂಗಳವಾರ ಸುತ್ತಮುತ್ತಲಿನ ವಿವಿಧ ಗ್ರಾಮಗಳಲ್ಲಿ ಕಾಣಿಸಿಕೊಂಡಿದ್ದು, ಏಳಕ್ಕೂ ಹೆಚ್ಚು ಜನರನ್ನು ಪರಚಿ ಗಾಯಗೊಳಿಸಿದೆ.

ಮಹಿಳೆ,ವೃದ್ಧ, ಭದ್ರತಾ ಸಿಬ್ಬಂದಿ ಮತ್ತು ಪೊಲೀಸ್ ಸೇರಿದಂತೆ 7 ಜನರು ಗಾಯಗೊಂಡಿದ್ದು, ಕರಡಿ ಶೋಧ ಕಾರ್ಯಾಚರಣೆ ಮುಂದುವರಿದಿದೆ.

ಮಂಗಳವಾರ ಬೆಳಗಿನ ಜಾವ 3ಗಂಟೆಗೆ ಕಾಚನಾಯಕನಹಳ್ಳಿ ಕಾರ್ಖಾನೆಯೊಂದರ ಬಳಿ ಕಾಣಿಸಿಕೊಂಡ ಕರಡಿ ಅಲ್ಲಿದ್ದ ಭದ್ರತಾ ಸಿಬ್ಬಂದಿಯೊಬ್ಬರ ಮೇಲೆ ದಾಳಿ ಮಾಡಿದೆ. ಕರಡಿ ಓಡಾಡುತ್ತಿರುವ ದೃಶ್ಯಗಳು ಸಿಸಿಟಿವಿಯಲ್ಲಿ ಸೆರೆಯಾಗಿವೆ.

ರಾಷ್ಟ್ರೀಯ ಹೆದ್ದಾರಿ ದಾಟಿ ಚಂದಾಪುರದ ಕೆಇಬಿ ಕಚೇರಿ ಬಳಿ ಕೆಲಹೊತ್ತು ಸುತ್ತಾಡಿದ ಬಳಿಕ ಶೆಟ್ಟಿಹಳ್ಳಿಯಲ್ಲಿ ನಾಲ್ವರ ಮೇಲೆ ದಾಳಿ ನಡೆಸಿ, ಗಾಯಗೊಳಿಸಿದೆ.

ಬೆಳಗಿನ ಜಾವ ತಟ್ನಹಳ್ಳಿಯಲ್ಲಿ ನಾರಾಯಣರೆಡ್ಡಿ ಎಂಬ ವೃದ್ಧ ಮತ್ತು ಬಿಹಾರ ಮೂಲದ ಸುಹಾಲ್ ಎಂಬುವರನ್ನು ಕಚ್ಚಿ ಗಾಯಗೊಳಿಸಿದೆ. ಇಲ್ಲಿಯೇ ಅರಣ್ಯ ಇಲಾಖೆಯ ಸಿಬ್ಬಂದಿಗೆ ಕರಡಿ ಕಾಣಿಸಿಕೊಂಡಿದೆ. ತಕ್ಷಣ ಇಲಾಖೆಯ ಆರು ತಂಡ ತಟ್ನಹಳ್ಳಿ, ಮಾಯಸಂದ್ರ, ಸಮಂದೂರು, ಶೆಟ್ಟಿಹಳ್ಳಿ ಸೇರಿದಂತೆ ವಿವಿಧ ಕಡೆ ಕರಡಿ ಸೆರೆ ಹಿಡಿಯುವ ಕಾರ್ಯಾಚರಣೆಯಲ್ಲಿ ತೊಡಗಿವೆ. ವಲಯ ಅರಣ್ಯಾಧಿಕಾರಿಗಳಾದ ಕೃಷ್ಣ, ಗಣೇಶ್, ವೈದ್ಯಾಧಿಕಾರಿ ಡಾ.ಉಮಾಶಂಕರ್, ಡಾ.ಮಂಜುನಾಥ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಾರೆ. ತುಮಕೂರು ಸಿದ್ಧಗಂಗಾ ಮಠದ ಬಳಿ ಸಂರಕ್ಷಿಸಿ ಕರಡಿಯನ್ನು ಭಾನುವಾರ ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ತರಲಾಗಿತ್ತು. ಬೋನಿನಿಂದ ಸ್ಥಳಾಂತರಿಸುವ ವೇಳೆ ಕರಡಿ ತಪ್ಪಿಸಿಕೊಂಡಿತ್ತು.



ಕಾಚನಾಯಕನಹಳ್ಳಿಯ ಬಳಿ ಸಿಸಿಟಿವಿಯೊಂದರಲ್ಲಿ ಪತ್ತೆಯಾಗಿರುವ ಕರಡಿ

ನೇತ್ರದಾನ ಪ್ರತಿಜ್ಞೆ ತೆಗೆದುಕೊಂಡ ನಟ ಶಿವರಾಜ್‌ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂದೆ ಡಾ.ರಾಜ್‌ಕುಮಾರ್ ಅವರಂತೆಯೇ ನೇತ್ರದಾನಕ್ಕೆ ಮುಂದಾಗಿರುವ ನಟ ಶಿವರಾಜ್‌ಕುಮಾರ್ ಅವರು ಮಂಗಳವಾರ ನೇತ್ರದಾನದ ಪ್ರತಿಜ್ಞೆ ತೆಗೆದುಕೊಂಡಿದ್ದಾರೆ.

ಇತ್ತೀಚೆಗೆ ರಾಷ್ಟ್ರೀಯ ಪ್ರಶಸ್ತಿ ಪಡೆದ ಕನ್ನಡ ಚಿತ್ರ 'ಅಕ್ಷಿ'ಯ ತಂಡವನ್ನು, ನಾರಾಯಣ ನೇತ್ರಾಲಯ ಹಾಗೂ ಡಾ.ರಾಜ್‌ಕುಮಾರ್ ಕಣ್ಣಿನ ಬ್ಯಾಂಕ್ ಮಂಗಳವಾರ ಸನ್ಮಾನಿಸಿತು. ಇದೇ ವೇಳೆ ನೇತ್ರದಾನದ ಪ್ರತಿಜ್ಞೆ ತೆಗೆದುಕೊಂಡ ಶಿವರಾಜ್‌ಕುಮಾರ್ ಅವರಿಗೆ 'ಐ ಡೋನರ್ ಕಾರ್ಡ್' ಅನ್ನು ಆಸ್ಪತ್ರೆಯು ನೀಡಿತು.

'ಈ ಹಿಂದೆಯೇ ನೇತ್ರದಾನದ ಪ್ರತಿಜ್ಞೆ ತೆಗೆದುಕೊಂಡಿದ್ದೆ. ಅಧಿಕೃತವಾಗಿ ಇಂದು ಕಾರ್ಡ್ ಪಡೆದಿದ್ದೇನೆ. ನೇತ್ರದಾನ ಮಾಡಿರುವುದು ಖುಷಿಯಾಗಿದೆ. ಇದು ಎಲ್ಲರ ಕರ್ತವ್ಯ. ನೇತ್ರದಾನದ ಕುರಿತು ಅಪ್ಪಾಜಿ ಹೇಳಿದ ಮಾತು ಎಲ್ಲರಿಗೂ ದೊಡ್ಡ ಸ್ಫೂರ್ತಿ. ಬದುಕನ್ನು ಚೆನ್ನಾಗಿ ನೋಡಿದವರು ಅವರು. ಅವರು ಹೇಳಿದ ಮಾತನ್ನು ನಾವು ಪಾಲಿಸಲೇಬೇಕು. ಬಹಳ ಪ್ರೀತಿಯಿಂದ, ಭಾವನಾತ್ಮಕವಾಗಿ ಅವರು ನೇತ್ರದಾನದ ಕರೆ ನೀಡಿದ್ದರು' ಎಂದು ಶಿವರಾಜ್‌ಕುಮಾರ್ ಹೇಳಿದರು.

'ಅಕ್ಷಿ ಚಿತ್ರತಂಡದೊಂದಿಗೆ ವೇದಿಕೆ ಹಂಚಿಕೊಂಡಿರುವುದಕ್ಕೆ ಹೆಮ್ಮೆ ಇದೆ. ಈ ಚಲನಚಿತ್ರದ ವಿಷಯವು ನನ್ನ ಹೃದಯಕ್ಕೆ ಬಹಳ ಹತ್ತಿರವಾಗಿದೆ ಮತ್ತು ನಾರಾಯಣ ನೇತ್ರಾಲಯದ ಧ್ಯೇಯೋದ್ದೇಶವನ್ನು ಇದು ಪ್ರತಿಪಾದಿಸುತ್ತಿದೆ. ನೇತ್ರದಾನ ಕುರಿತು ಸಿನಿಮಾ ಮುಖಾಂತರ ಜನರಿಗೆ ಜಾಗೃತಿ, ಶಿಕ್ಷಣ ನೀಡಲು ಪ್ರಯತ್ನಿಸುತ್ತಿರುವ ಈ ಪ್ರಯತ್ನ ಶ್ಲಾಘನೀಯ' ಎಂದು ಆಸ್ಪತ್ರೆಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ.ಕೆ.ಭುಜಂಗ ಶೆಟ್ಟಿ ಹೇಳಿದರು.

ಡಾ.ಕೆ.ಭುಜಂಗ ಶೆಟ್ಟಿ ಅವರು ನಟ ಶಿವರಾಜ್‌ಕುಮಾರ್ ಅವರಿಗೆ ನೇತ್ರದಾನದ ಕಾರ್ಡ್ ವಿತರಿಸಿದರು.

ಶಾಸಕ ಕೆ.ಆರ್‌. ರಮೇಶ್ ಕುಮಾರ್ ಅಭಿಮತ

'ಕನ್ನಡ ಚಿಂತನೆಗೆ ಹೊಸತನ ನೀಡಿದ ಡಿ.ಆರ್‌.ಎನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡದ ಚಿಂತನೆಗಳಿಗೆ ಡಿ.ಆರ್. ನಾಗರಾಜ್ ಅವರು ಹೊಸ ತಾತ್ವಿಕ ಮಾದರಿಗಳನ್ನು ನೀಡಿದರು. ಅವರು ಕಾಲದ ಪರೀಕ್ಷೆ ಗೆದ್ದ ಜ್ಞಾನಿ' ಎಂದು ಶಾಸಕ ಕೆ.ಆರ್. ರಮೇಶ್ ಕುಮಾರ್ ತಿಳಿಸಿದರು.

ಸಂಸ ಥಿಯೇಟರ್ ನಗರದಲ್ಲಿ ಹಮ್ಮಿಕೊಂಡ ಡಿ.ಆರ್. ನಾಗರಾಜ್ 67 ಕಾರ್ಯಕ್ರಮದಲ್ಲಿ ಕಿರಂ ಪ್ರಕಾಶನ ಹೊರತಂದ 'ಅನನ್ಯ ಪ್ರತಿಭೆಯ ಪರಿ' ವಿಮರ್ಶಾ ಬರಹಗಳ ಸಂಕಲನವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

'ನಾನು ಡಿ.ಆರ್. ನಾಗರಾಜ್ ಅವರನ್ನು ಮೊದಲ ಬಾರಿಗೆ ಪಿ. ಲಂಕೇಶ್ ಅವರ ಕಚೇರಿಯಲ್ಲಿ ನೋಡಿದ್ದೆ. 1994ರಲ್ಲಿ ವಿಧಾನ ಸಭಾಧ್ಯಕ್ಷನಾಗಿದ್ದಾಗ ಬೆಂಗಳೂರು ವಕೀಲರ ಸಂಘವು ಭ್ರಷ್ಟಾಚಾರ ವಿಷಯಕ್ಕೆ ಸಂಬಂಧಿಸಿದಂತೆ ಆಯೋಜಿಸಿದ ವಿಚಾರ ಸಂಕಿರಣದಲ್ಲಿ ಭಾಗವಹಿಸಿ, 'ಸೃಷ್ಟಿಯಲ್ಲಿ ಕಾಗದ ತಿನ್ನುವ ಪ್ರಾಣಿ ಕತ್ತೆ ಮಾತ್ರ. ಹಾಗಾಗಿ, ಹಣವನ್ನು ತಿನ್ನುವವರೆಲ್ಲ ಕತ್ತೆಗಳು' ಎಂದು ಹೇಳಿದೆ. ಪತ್ರಿಕೆಗಳಲ್ಲಿ ಇದು ದೊಡ್ಡ ಸುದ್ದಿಯಾಯಿತು. ಆಗ ದೂರವಾಣಿ ಕರೆ ಮಾಡಿದ ನಾಗರಾಜ್, 'ರಾಜ್ಯದಲ್ಲಿ ಇಂತಹ ಕತ್ತೆಗಳು ಎಷ್ಟಿವೆ ಎಂದು ಅಂದಾಜಿದೆಯೇ ನಿಮಗೆ' ಎಂದು ಪ್ರಶ್ನಿಸಿದ್ದರು. ಜಗತ್ತಿನ ಎಲ್ಲ ವಿಚಾರಗಳನ್ನು ತಿಳಿದುಕೊಂಡಿದ್ದ ಅವರು 46ನೇ ವಯಸ್ಸಿಗೆ ನಮ್ಮಿಂದ ದೂರವಾದರು' ಎಂದು ಬೇಸರ ವ್ಯಕ್ತಪಡಿಸಿದರು.

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಜಾಫೆಟ್ ಮಾತನಾಡಿ, 'ನನಗೆ ತಾತ್ವಿಕ ಆಯಾಮ ಕಲಿಸಿದ ಗುರು ಅವರು. ನನ್ನ ಮತ್ತು ಅವರ ಸಂಬಂಧ ಬಸವಣ್ಣ ಹಾಗೂ ಅಲ್ಲಮಪ್ರಭುವಿನ ಸಂಬಂಧದಂತಿತ್ತು. ಅವರು ಜ್ಞಾನದ ಮೂಲಕ ಅಮರತ್ವ ಪಡೆದಿದ್ದಾರೆ' ಎಂದರು.

ವಿಮರ್ಶಾ ಬರಹಗಳ ಸಂಕಲನ ಕುರಿತು ಮಾತನಾಡಿದ ಸಂಸ್ಕೃತಿ ಚಿಂತಕ ಅಗ್ರಹಾರ ಕೃಷ್ಣಮೂರ್ತಿ, 'ನಾಗರಾಜ್ ಅವರ ವಿಮರ್ಶೆಯ ಚಿಂತನೆಗಳು ಇಂದಿಗೂ ಪ್ರಸಿದ್ಧವಾಗಿವೆ. ಅನೇಕ ಯುವ ವಿಮರ್ಶಕರನ್ನು, ಚಿಂತಕರನ್ನು ಬೆಳೆಸುವಲ್ಲಿ ಸಹಾಯಕವಾಗಿವೆ. ಈ ಕೃತಿಯು ಕನ್ನಡ ವಿಮರ್ಶಾ ಜಗತ್ತಿಗೆ ಬಹುಮುಖ್ಯವಾದ ಕೃತಿ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿಮರ್ಶಕಿ ಎಂ.ಎಸ್. ಆಶಾದೇವಿ, 'ನನ್ನ ಆಲೋಚನೆ ಮತ್ತು ಬರವಣಿಗೆಯನ್ನು ಸಂಪೂರ್ಣವಾಗಿ ಬದಲಿಸಿದ ಅವರು, ನನ್ನ ವ್ಯಕ್ತಿತ್ವವನ್ನು ಒಡೆದು ಕೂಡಿಸಿದರು. ಯು.ಆರ್. ಅನಂತಮೂರ್ತಿ ಹೇಳಿದಂತೆ ಡಿ.ಆರ್. ಎನ್. ತೃತೀಯ ಜಗತ್ತಿನ ದಾರ್ಶನಿಕರಾಗಿದ್ದಾರೆ' ಎಂದರು.

ಸಂಸ ಥಿಯೇಟರ್ ನಗರದಲ್ಲಿ ಹಮ್ಮಿಕೊಂಡ ಡಿ.ಆರ್‌. ನಾಗರಾಜ್ 67 ಕಾರ್ಯಕ್ರಮದಲ್ಲಿ ಕಿ.ರಂ ಪ್ರಕಾಶನ ಹೊರತಂದ 'ಅನನ್ಯ ಪ್ರತಿಭೆಯ ಪರಿ' ವಿಮರ್ಶಾ ಬರಹಗಳ ಸಂಕಲನವನ್ನು ಶಾಸಕ ಕೆ.ಆರ್‌. ರಮೇಶ್ ಕುಮಾರ್ ಬಿಡುಗಡೆ ಮಾಡಿದರು. ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ, ಪ್ರೊ. ಜಾಫೆಟ್, ಸಂಸ್ಕೃತಿ ಚಿಂತಕ ಅಗ್ರಹಾರ ಕೃಷ್ಣಮೂರ್ತಿ, ಕವಿ ಸಿದ್ಧಲಿಂಗಯ್ಯ, ಡಿ.ಆರ್‌. ನಾಗರಾಜ್ ಅವರ ಪುತ್ರಿ ಅಮೂಲ್ಯ ನಾಗರಾಜ್, ವಿಮರ್ಶಕಿ ಎಂ.ಎಸ್‌. ಆಶಾದೇವಿ, ಕೃತಿಯ ಸಂಪಾದಕ ಶಿವರಾಜ್ ಬ್ಯಾಡರಹಳ್ಳಿ, ಸಂಸ ಥಿಯೇಟರ್‌ನ ಸಂಸ ಸುರೇಶ್, ರಂಗ ಸಂಘಟಕ ರುದ್ರೇಶ್ ಅದರಂಗಿ ಹಾಗೂ ಪ್ರಕಾಶಕ ಜೆ.ವಿ. ಧನಂಜಯ ಇದ್ದರು.

ಕೆಪಿಸಿ: ದಾಖಲೆಯ ವಿದ್ಯುತ್ ಉತ್ಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಗಮವು ಇದೇ 27ರಂದು ದೈನಂದಿನ ವಿದ್ಯುತ್ ಉತ್ಪಾದನೆಯಲ್ಲಿ ಗರಿಷ್ಠ 12.171 ಕೋಟಿ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡುವ ಮೂಲಕ ಸಾರ್ವಕಾಲಿಕ ದಾಖಲೆಯನ್ನು ನಿರ್ಮಿಸಿದೆ.

ಇದರಲ್ಲಿ ಶಾಖೋತ್ಪನ್ನ ವಿದ್ಯುತ್ ಘಟಕಗಳಿಂದ 8.025 ಕೋಟಿ ಯೂನಿಟ್ ಉತ್ಪಾದನೆಯೂ ಸೇರಿದೆ ಎಂದು ಕೆಪಿಸಿಎಲ್ ಪ್ರಕಟಣೆ ತಿಳಿಸಿದೆ.

ಇದೇ ತಿಂಗಳ 25 ರಂದು ಸಾಧಿಸಿದ್ದ ತನ್ನದೇ ದಾಖಲೆಗಳಾದ ಶಾಖೋತ್ಪನ್ನ ವಿದ್ಯುತ್ ಉತ್ಪಾದನೆಯಿಂದ 7.733 ಕೋಟಿ ಯೂನಿಟ್ ಹಾಗೂ ಇತರೆ ಮೂಲಗಳಿಂದ 4 ಕೋಟಿ ಯುನಿಟ್ ಉತ್ಪಾದನೆಯೊಂದಿಗೆ ಒಟ್ಟು 11.722 ಕೋಟಿ ಯೂನಿಟ್ ದೈನಂದಿನ ವಿದ್ಯುತ್ ಉತ್ಪಾದನೆಯನ್ನು ಹಿಂದಿಕ್ಕಿದೆ ಎಂದು ಹೇಳಿದೆ.

ಕೆಪಿಸಿಎಲ್‌ನ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿನ ಘಟಕಗಳು ಸುಮಾರು 30 ವರ್ಷಗಳಷ್ಟು ಹಳೆಯ ಘಟಕಗಳಾಗಿವೆ. ಇವುಗಳ ಉತ್ತಮ ಉತ್ಪಾದನಾ ಸಾಮರ್ಥ್ಯದಿಂದ ಸ್ಥಾವರ ಕಾರ್ಯಕ್ಷಮತೆ ಪ್ರಮಾಣ ಶೇ 95 ಕ್ಕಿಂತಲೂ ಅಧಿಕವಾಗಿದ್ದು, ಬೇಸಿಗೆಯ ಈ ದಿನಗಳಲ್ಲಿ ರಾಜ್ಯದ ವಿದ್ಯುತ್ ಜಾಲಕ್ಕೆ ಕೆಪಿಸಿಎಲ್‌ನಿಂದ ಶೇ 55 ರಿಂದ 60 ರಷ್ಟು ವಿದ್ಯುತ್ ಪೂರೈಕೆ ಮಾಡಲು ಸಾಧ್ಯವಾಗುತ್ತಿದೆ ಎಂದು ಹೇಳಿದೆ.

'₹ 10 ಕೋಟಿ ಪಡೆದು ಮುಸ್ಲಿಂ ಅಭ್ಯರ್ಥಿ ಕಣಕ್ಕಿಳಿಸಿದ ಎಚ್‌ಡಿಕೆ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು ಬಿಜೆಪಿಯಿಂದ ₹ 10 ಕೋಟಿ ಪಡೆದು ಬಸವಕಲ್ಯಾಣ ವಿಧಾನಸಭಾ ಉಪ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದಾರೆ' ಎಂದು ಕಾಂಗ್ರೆಸ್ ಶಾಸಕ ಜಮೀರ್ ಅಹಮ್ಮದ್ ಆರೋಪಿಸಿದರು.

'₹ 10 ಕೋಟಿಯಲ್ಲಿ ಅಭ್ಯರ್ಥಿಗೆ ₹ 2 ಕೋಟಿ ಕೊಟ್ಟಿದ್ದಾರೆ' ಎಂದು ಇಲ್ಲಿ ಮಂಗಳವಾರ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಆಪಾದಿಸಿದರು.

ಕರ್ನಾಟಕ ಪಬ್ಲಿಕ್ ಶಾಲೆಯ 10 ವಿದ್ಯಾರ್ಥಿಗಳಿಗೆ ಕೋವಿಡ್ ದೃಢ

ಕೆ.ಆರ್.ಪುರ: ಕೆಪಿಎಸ್‌ಗೆ ಒಂದು ವಾರ ರಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್.ಪುರ ಕರ್ನಾಟಕ ಪಬ್ಲಿಕ್ ಸ್ಕೂಲ್‌ನ (ಕೆಪಿಎಸ್) 10 ವಿದ್ಯಾರ್ಥಿಗಳಲ್ಲಿ ಕೋವಿಡ್ ಇರುವುದು ದೃಢಪಟ್ಟಿದ್ದು ಈ ಶಾಲೆಗೆ ಏಳು ದಿನಗಳ ರಜೆ ಘೋಷಿಸಲಾಗಿದೆ.

ಸೋಂಕು ಹರಡುವುದನ್ನು ತಡೆಗಟ್ಟುವ ಸಲುವಾಗಿ ಶಾಲೆಯ ಎಲ್ಲ ವಿದ್ಯಾರ್ಥಿಗಳು, ಶಿಕ್ಷಕ ವರ್ಗದವರು, ಹಾಗೂ ಬೋಧಕೇತರ ಸಿಬ್ಬಂದಿ ಕಡ್ಡಾಯವಾಗಿ ಕೋವಿಡ್ ಪರೀಕ್ಷೆಗೆ ಒಳಪಡಬೇಕು ಎಂದು ಮಹದೇವಪುರದ ವಲಯದ ಜಂಟಿ ಆಯುಕ್ತ ವೆಂಕಟಾಚಲಪತಿ ಅವರು ಸೂಚನೆ ನೀಡಿದ್ದಾರೆ.

‘ಒಂದರಿಂದ 12ನೇ ತರಗತಿವರೆಗೆ ಇರುವ ಈ ಶಾಲೆಯಲ್ಲಿ ಮಾರ್ಚ್ 24ರಂದು 243 ವಿದ್ಯಾರ್ಥಿಗಳ ಮೂಗಿನ ದ್ರವದ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಅದರಲ್ಲಿ ಒಬ್ಬರಿಗೆ ಕೋವಿಡ್ ದೃಢಪಟ್ಟಿತ್ತು. ಮಾ. 25ರಂದು 146 ಮಂದಿಯ ಮೂಗಿನ ದ್ರವದ ಮಾದರಿ ಪರೀಕ್ಷೆ ನಡೆಸಿದಾಗ 9 ಮಂದಿಗೆ ಸೋಂಕು ಇರುವುದು ಖಚಿತಪಟ್ಟಿದೆ. ಸೋಂಕು ಕಂಡುಬಂದ 9 ವಿದ್ಯಾರ್ಥಿಗಳು 9ನೇ ತರಗತಿಯವರು ಹಾಗೂ ಒಬ್ಬ ವಿದ್ಯಾರ್ಥಿ 8ನೇ ತರಗತಿಯವರು’ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಈ ಶಾಲೆಯ ಪದವಿ ಪೂರ್ವ ವಿಭಾಗದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರನ್ನು ಸೇರಿಸಿ ಮತ್ತೆ 550 ಮಂದಿಯ ಮೂಗಿನ ದ್ರವವನ್ನು ಸೋಮವಾರ ಸಂಗ್ರಹಿಸಲಾಗಿದ್ದು, ಅದರ ಪರೀಕ್ಷಾ ವರದಿ ಇನ್ನಷ್ಟೇ ಕೈಸೇರಬೇಕಿದೆ. ಒಟ್ಟು 949 ಮಂದಿಯ ಪರೀಕ್ಷೆ ನಡೆಸಿದಂತಾಗಿದೆ.

ಒಂದೇ ದಿನ 1984 ಮಂದಿಗೆ ಸೋಂಕು: ಬಿಬಿಎಂಪಿ ವ್ಯಾಪ್ತಿಯಲ್ಲಿ ಬುಧವಾರ ಒಂದೇ ದಿನ 1984 ಮಂದಿ ಸೋಂಕು ಹೊಂದಿರುವುದು ದೃಢ ಪಟ್ಟಿದೆ. ಈ ಪೈಕಿ 1110 ಮಂದಿ ಪುರುಷರು ಹಾಗೂ 874 ಮಂದಿ ಮಹಿಳೆಯರು.

ಮಾರ್ಚ್‌ನಲ್ಲಿ 26 ಸಾವಿರ ಮಂದಿಗೆ ಸೋಂಕು: 2020ರ ಅಕ್ಟೋಬರ್‌ನಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ 1.19 ಲಕ್ಷ ಮಂದಿಯಲ್ಲಿ ಸೋಂಕು ಪತ್ತೆಯಾಗಿತ್ತು. 2021ರ ಫೆಬ್ರುವರಿ ತಿಂಗಳಲ್ಲಿ ಸೋಂಕು ಪತ್ತೆ ಪ್ರಮಾಣ 6,813ಕ್ಕೆ ಇಳಿದಿತ್ತು. 2020ರ ಜುಲೈ ನಂತರ ಅತಿ ಕಡಿಮೆ ಸೋಂಕು ಪತ್ತೆ ಪ್ರಮಾಣ ಇದಾಗಿತ್ತು. ಆದರೆ, ಮಾರ್ಚ್‌ನಲ್ಲಿ ಮತ್ತೆ 26,052 ಮಂದಿಯಲ್ಲಿ ಸೋಂಕು ಪತ್ತೆಯಾಗಿದೆ.

‘ಸೋಂಕು ನಿಯಂತ್ರಣಕ್ಕೆ ಬಿಗಿ ಕ್ರಮ ಕೈಗೊಂಡಿದ್ದೇವೆ. ನಿತ್ಯ 50 ಸಾವಿರಕ್ಕೂ ಹೆಚ್ಚು ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸುತ್ತಿದ್ದೇವೆ. ಸೋಂಕಿತರ ಜೊತೆ ನೇರ ಸಂಪರ್ಕ ಹೊಂದಿದವರನ್ನೆಲ್ಲ ಪತ್ತೆ ಹಚ್ಚಿ ಅವರಿಗೂ ಕೋವಿಡ್ ಪರೀಕ್ಷೆ ನಡೆಸುತ್ತಿದ್ದೇವೆ’ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಫೆಬ್ರುವರಿ ತಿಂಗಳಲ್ಲಿ ಬಿಬಿಎಂಪಿ 7.27 ಲಕ್ಷ ಮಂದಿಗೆ ಕೋವಿಡ್ ಪರೀಕ್ಷೆ ನಡೆಸಿತ್ತು. ಮಾರ್ಚ್‌ನಲ್ಲಿ ಇದುವರೆಗೆ 12.54 ಲಕ್ಷ ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿದೆ.

ಸೋಂಕು ಪತ್ತೆ ದರವೂ ಹೆಚ್ಚಳ

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಪರೀಕ್ಷೆ ಮಾಡಿಸಿಕೊಂಡವರಲ್ಲಿ ಸೋಂಕು ಪತ್ತೆ ದರವು 2020ರ ಜುಲೈನಲ್ಲಿ ಶೇ23.84ಕ್ಕೆ ಏರಿತ್ತು. ಅದು 2021ರ ಜನವರಿ ವೇಳೆಗೆ ಶೇ 0.94ಕ್ಕೆ ಇಳಿದಿತ್ತು. ಮಾರ್ಚ್ ತಿಂಗಳಲ್ಲಿ ಸೋಂಕು ಪತ್ತೆ ದರವು ಮತ್ತೆ 2.08ಕ್ಕೆ ಹೆಚ್ಚಳವಾಗಿದೆ. ಇದು ಬಿಬಿಎಂಪಿ ಅಧಿಕಾರಿಗಳ ಕಳವಳಕ್ಕೆ ಕಾರಣವಾಗಿದೆ.

ಮರಣ ದರ ಇಳಿಕೆ: 2020ರ ಜುಲೈನಲ್ಲಿ ಕೋವಿಡ್ ಸೋಂಕಿತರ ಮರಣ ದರವು ಶೇ 1.84ಕ್ಕೆ ಏರಿಕೆ ಕಂಡಿತ್ತು. ಅದೀಗ ಶೇ 0.45ಕ್ಕೆ ಇಳಿದಿದೆ.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ



ಸೋಂಕು ಹೆಚ್ಚಳ: ಕಟ್ಟುನಿಟ್ಟಿನ ಕ್ರಮಕ್ಕೆ ಕಮಿಷನರ್ ಸೂಚನೆ

ಬೆಂಗಳೂರು: ನಗರದಲ್ಲಿ ದಿನದಿಂದ ದಿನಕ್ಕೆ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚುತ್ತಿದ್ದು, ರಾಜ್ಯ ಸರ್ಕಾರ ರೂಪಿಸಿರುವ ನಿಯಮ ಪಾಲಿಸದ ಸಾರ್ವಜನಿಕರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು ಪೊಲೀಸರಿಗೆ ಸೂಚನೆ ನೀಡಿದ್ದಾರೆ.

ಈ ಬಗ್ಗೆ ನಗರದ ಪೊಲೀಸ್ ಠಾಣೆ ಹಾಗೂ ಇನ್‌ಸ್ಪೆಕ್ಟರ್‌ಗಳಿಗೆ ನೆನಪೋಲೆ ಕಳುಹಿಸಿದ್ದಾರೆ.

‘ಪ್ರತಿಯೊಂದು ಠಾಣೆ ವ್ಯಾಪ್ತಿಯಲ್ಲೂ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಹಾಗೂ ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ) ನೇತೃತ್ವದಲ್ಲಿ ತಂಡ ರಚಿಸಬೇಕು. ಮಾರುಕಟ್ಟೆ, ಮಾಲ್, ಬಸ್ ನಿಲ್ದಾಣ, ತಂಗುದಾಣ, ಉದ್ಯಾನ ಸೇರಿದಂತೆ ಜನ ಹೆಚ್ಚು ಸೇರುವ ಸ್ಥಳಗಳಲ್ಲಿ ಸುತ್ತಾಡಬೇಕು. ಮಾಸ್ಕ್ ಧರಿಸದ ಹಾಗೂ ಅಂತರ ಕಾಯ್ದುಕೊಳ್ಳದವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದೂ ಹೇಳಿದ್ದಾರೆ.

‘ಮಾರುಕಟ್ಟೆ ವ್ಯಾಪಾರಿಗಳ ಸಂಘಟನೆ, ಪಬ್ ಮತ್ತು ರೆಸ್ಟೋರೆಂಟ್‌ಗಳ ಮಾಲೀಕರಿಗೆ ನಿಯಮ ಪಾಲಿಸುವಂತೆ ತಿಳಿಸಬೇಕು. ಸಾರ್ವಜನಿಕರಲ್ಲೂ ಅರಿವು ಮೂಡಿಸಬೇಕು’ ಎಂದೂ ಕಮಿಷನರ್ ಹೇಳಿದ್ದಾರೆ.

ವೈದ್ಯಕೀಯ ಪ್ರವಾಸೋದ್ಯಮಕ್ಕೆ ಹೊಡೆತ ನೀಡಿದ ಕೋವಿಡ್

• ವರುಣ್ ಹೆಗಡೆ

ಬೆಂಗಳೂರು: ಕೋವಿಡ್ ಕಾಣಿಸಿಕೊಂಡ ಬಳಿಕ ಅಂತರರಾಷ್ಟ್ರೀಯ ಪ್ರಯಾಣಕ್ಕೆ ನಿರ್ಬಂಧ ವಿಧಿಸಿದ ಪರಿಣಾಮ ವಿದೇಶಿ ರೋಗಿಗಳಿಗೆ ಚಿಕಿತ್ಸೆ ಪಡೆಯಲು ನಗರಕ್ಕೆ ಬರಲು ತೊಡಕುಗಳು ಎದುರಾಗಿದ್ದವು. ಇದರಿಂದಾಗಿ ವೈದ್ಯಕೀಯ ಪ್ರವಾಸೋದ್ಯಮ ಸಂಪೂರ್ಣ ನೆಲಕಚ್ಚಿದ್ದು, ಆಸ್ಪತ್ರೆಗಳ ವರಮಾನದಲ್ಲಿ ಶೇ 30ರಷ್ಟು ಕಡಿತವಾಗಿದೆ.

ವೈದ್ಯಕೀಯ ಪ್ರವಾಸೋದ್ಯಮದಲ್ಲಿ ದೆಹಲಿ ಬಳಿಕ ಸಿಲಿಕಾನ್ ಸಿಟಿ ಬೆಂಗಳೂರು ದೇಶದಲ್ಲಿಯೇ ಮುಂಚೂಣಿಯಲ್ಲಿದೆ. ಅಗ್ಗದ ಮತ್ತು ಗುಣಮಟ್ಟದ ಚಿಕಿತ್ಸೆಗಳು ಇಲ್ಲಿನ ಆಸ್ಪತ್ರೆಗಳಲ್ಲಿ ದೊರೆಯುತ್ತವೆ ಎಂಬ ಕಾರಣಕ್ಕೆ ಪ್ರತಿ ವರ್ಷ 50 ಸಾವಿರಕ್ಕೂ ಅಧಿಕ ವಿದೇಶಿಯರು ಇಲ್ಲಿಗೆ ಬರುತ್ತಿದ್ದರು. ಅವರಲ್ಲಿ ಹೆಚ್ಚಿನವರು ಹೃದಯ ಸಂಬಂಧಿ ಸಮಸ್ಯೆ, ಮೂಳೆ ಮುರಿತ, ಮೂತ್ರಪಿಂಡ ಸಮಸ್ಯೆಯಂತಹ ಕಾಯಿಲೆಗಳಿಗೆ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಇದರಿಂದ ಇಲ್ಲಿನ ಆಸ್ಪತ್ರೆಗಳ ವಾರ್ಷಿಕ ವರಮಾನ ಹೆಚ್ಚಳವಾಗುವುದರ ಜತೆಗೆ ವೈದ್ಯಕೀಯ ಪ್ರವಾಸೋದ್ಯಮ ಕೂಡ ಪ್ರಗತಿ ಹೊಂದುತ್ತಿತ್ತು. ಆದರೆ, ಕೋವಿಡ್ ಕಾಣಿಸಿಕೊಂಡ ಬಳಿಕ ವಿದೇಶಿಯರಿಗೆ ಚಿಕಿತ್ಸೆಗೆ ಇಲ್ಲಿಗೆ ಬರಲು ಸಾಧ್ಯವಾಗುತ್ತಿಲ್ಲ. ತುರ್ತಾಗಿ ಚಿಕಿತ್ಸೆ ಅಗತ್ಯ ಇರುವವರು ಕೂಡ ಕ್ವಾರಂಟೈನ್‌ಗೆ ಒಳಪಡುವುದೂ ಸೇರಿದಂತೆ ವಿವಿಧ ನಿರ್ಬಂಧಗಳು ಇರುವುದರಿಂದ ಚಿಕಿತ್ಸೆಗೆ ಬರುತ್ತಿಲ್ಲ.

ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್), ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ ಸೇರಿದಂತೆ ವಿವಿಧ ಸರ್ಕಾರಿ ವೈದ್ಯಕೀಯ ಸಂಸ್ಥೆಗಳು ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಅದೇ ರೀತಿ, ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫಾನಾ) ಅಡಿಯಲ್ಲಿ 500ಕ್ಕೂ ಅಧಿಕ ಆಸ್ಪತ್ರೆಗಳು ನಗರದಲ್ಲಿ ಸೇವೆ ನೀಡುತ್ತಿವೆ. ಮಣಿಪಾಲ್, ಆಸ್ಟರ್, ಅಪೋಲೊ, ಫೋರ್ಟಿಸ್, ಕೊಲಂಬಿಯಾ ಏಷ್ಯಾ, ನಾರಾಯಣ ಹೆಲ್ತ್ ಸಿಟಿ, ಎಂ.ಎಸ್. ರಾಮಯ್ಯ, ಸಕ್ರಾ ವರ್ಲ್ಡ್ ಸೇರಿದಂತೆ ಪ್ರಮುಖ ಖಾಸಗಿ ಆಸ್ಪತ್ರೆಗಳ ಸಮೂಹವು ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಿಯರಿಗೆ ಚಿಕಿತ್ಸೆ ಒದಗಿಸುತ್ತಿದ್ದವು.

ಆಫ್ರಿಕನ್ ದೇಶಗಳಿಂದ ಅಧಿಕ: ಮಣಿಪಾಲ್ ಆಸ್ಪತ್ರೆಗಳಿಗೆ ಪ್ರತಿ ವರ್ಷ 15 ಸಾವಿರಕ್ಕೂ ಅಧಿಕ ಹಾಗೂ ನಾರಾಯಣ ಹೆಲ್ತ್ ಸಿಟಿಗೆ 10 ಸಾವಿರಕ್ಕೂ ಅಧಿಕ ವಿದೇಶಿಯರು ಚಿಕಿತ್ಸೆಗಾಗಿ ಬರುತ್ತಿದ್ದರು. ಯುರೋಪಿನ ಹಾರ್ಟ್ ಜರ್ನಲ್ ಈ ಹಿಂದೆ ಜಯದೇವ ಹೃದ್ರೋಗ ಆಸ್ಪತ್ರೆಯನ್ನು ‘ವಿಶ್ವದ ಶ್ರೇಷ್ಠ ಹೃದಯ ಕೇಂದ್ರ’ ಎಂದು ಬಣ್ಣಿಸಿ, ಅಮೆರಿಕದ ಪ್ರಜೆಯೊಬ್ಬರು 10 ವರ್ಷಗಳ ಹಿಂದೆ ಕೇವಲ ₹ 92ಕ್ಕೆ ಚಿಕಿತ್ಸೆ ಪಡೆದಿದ್ದನ್ನು ಉಲ್ಲೇಖಿಸಿತ್ತು. ಏಷ್ಯಾ ಹಾಗೂ ಆಫ್ರಿಕನ್ ದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಚಿಕಿತ್ಸೆಗೆ ಇಲ್ಲಿಗೆ ಬರುತ್ತಿದ್ದರು.

‘ಕೋವಿಡ್ ಬಳಿಕ ವೈದ್ಯಕೀಯ ಪ್ರವಾಸೋದ್ಯಮ ಸಂಪೂರ್ಣ ಕುಸಿತ ಕಂಡಿದೆ. ಗುಣಮಟ್ಟದ ಚಿಕಿತ್ಸೆ ಅಗ್ಗದ ದರದಲ್ಲಿ ದೊರೆಯುತ್ತದೆ ಎಂಬ ಕಾರಣಕ್ಕೆ ವಿದೇಶಿಯರು ಇಲ್ಲಿಗೆ ಬರುತ್ತಿದ್ದರು. ಕೋವಿಡ್ ಬಳಿಕ ವಿಸಾ ದೊರೆಯದಿರುವುದು ಸೇರಿದಂತೆ ವಿವಿಧ ಕಾರಣಗಳಿಂದ ಇಲ್ಲಿಗೆ ಬರಲು ಸಾಧ್ಯವಾಗುತ್ತಿಲ್ಲ. ಹಲವರು ಚಿಕಿತ್ಸೆಯನ್ನು ಮುಂದೂಡುತ್ತಿದ್ದಾರೆ’ ಎಂದು ಫಾನಾ ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.

ಕ್ಯಾನ್ಸರ್ ಚಿಕಿತ್ಸೆಗೆ ಬರದ ಆಫ್ರಿಕಾದ ರೋಗಿಗಳು

ಕ್ಯಾನ್ಸರ್ ಕಾಯಿಲೆಗೆ ಚಿಕಿತ್ಸೆ ಒದಗಿಸುವ ಸಂಬಂಧ ನಗರದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಪೂರ್ವ ಆಫ್ರಿಕಾದ ಬುರುಂಡಿ ದೇಶದ ಜತೆಗೆ 2019ರಲ್ಲಿ ಒಪ್ಪಂದ ಮಾಡಿಕೊಂಡಿತ್ತು. ಬುರುಂಡಿ ದೇಶದ ವಿದೇಶಾಂಗ ಸಚಿವಾಲಯದ ಅಧಿಕಾರಿಗಳನ್ನು ಒಳಗೊಂಡ ನಿಯೋಗ ಸಂಸ್ಥೆಗೆ ಭೇಟಿ ನೀಡಿ ಇಲ್ಲಿನ ಚಿಕಿತ್ಸೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿತ್ತು. ಒಪ್ಪಂದದ ಪ್ರಕಾರ ವರ್ಷಕ್ಕೆ 300ರಿಂದ 500 ರೋಗಿಗಳನ್ನು ಚಿಕಿತ್ಸೆಗೆ ಕಳುಹಿಸಬೇಕಿತ್ತು. ಆದರೆ, ಕೋವಿಡ್ ಕಾರಣ ಆ ದೇಶದಿಂದ ರೋಗಿಗಳು ಇಲ್ಲಿಗೆ ಬಂದಿಲ್ಲ.

‘ನೇಪಾಳ ಸೇರಿದಂತೆ ಕೆಲ ದೇಶಗಳಿಂದ ರೋಗಿಗಳು ಕ್ಯಾನ್ಸರ್ ಚಿಕಿತ್ಸೆಗೆ ಈ ಹಿಂದೆ ಬರುತ್ತಿದ್ದರು. ಕೋವಿಡ್ ಕಾಣಿಸಿಕೊಂಡ ಬಳಿಕ ವಿದೇಶದಿಂದ ರೋಗಿಗಳು ಬರುತ್ತಿಲ್ಲ. ಸಂಸ್ಥೆಗೆ ಬರುವ ಎಲ್ಲ ರೋಗಿಗಳಿಗೆ ಕೋವಿಡ್ ಪರೀಕ್ಷೆ ನಡೆಸಿ, ಚಿಕಿತ್ಸೆ ಒದಗಿಸಲಾಗುತ್ತಿದೆ’ ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದರು.

ಈ ಸಂದರ್ಭದಲ್ಲಿ ಇಲ್ಲಿನ ಕೊರೊನಾ ಸೋಂಕಿತರು ಹಾಗೂ ಕೋವಿಡೇತರ ರೋಗಿಗಳಿಗೆ ಚಿಕಿತ್ಸೆ ಒದಗಿಸುವುದು ನಮ್ಮ ಆದ್ಯತೆ. ನಿರ್ಬಂಧಗಳು ಇರುವ ಕಾರಣ ವಿದೇಶದಿಂದ ಚಿಕಿತ್ಸೆಗೆ ರೋಗಿಗಳು ಬರುತ್ತಿಲ್ಲ.

ಡಾ.ಸಿ.ಎನ್. ಮಂಜುನಾಥ್
ನಿರ್ದೇಶಕ, ಜಯದೇವ ಹೃದ್ರೋಗ ಸಂಸ್ಥೆ

ಬೈಟ್‌ಡಾನ್ಸ್ ಖಾತೆಗಳು ಸ್ಥಗಿತ

ನವದೆಹಲಿ (ರಾಯಿಟರ್ಸ್): ತೆರಿಗೆ ವಂಚನೆಯ ಆರೋಪದ ಅಡಿ ಬೈಟ್‌ಡಾನ್ಸ್ ಕಂಪನಿಯ ಕನಿಷ್ಠ ಎರಡು ಬ್ಯಾಂಕ್ ಖಾತೆಗಳನ್ನು ಕೇಂದ್ರದ ಅಧಿಕಾರಿಗಳು ಸ್ಥಗಿತಗೊಳಿಸಿದ್ದಾರೆ. ಇದನ್ನು ಪ್ರಶ್ನಿಸಿ ಬೈಟ್‌ಡಾನ್ಸ್ ಕಂಪನಿಯು ನ್ಯಾಯಾಲಯದ ಮೊರೆ ಹೋಗಿದೆ.

ಬೈಟ್‌ಡಾನ್ಸ್ ಕಂಪನಿಯು ಭಾರತದಲ್ಲಿ ಅಂದಾಜು 1,300 ನೌಕರರನ್ನು ಹೊಂದಿದೆ.

ಖಾತೆಗಳನ್ನು ಸ್ಥಗಿತಗೊಳಿಸಲು ಕೇಂದ್ರ ಸರ್ಕಾರವು ಮಾರ್ಚ್ ಮಧ್ಯ ಭಾಗದಲ್ಲೇ ಆದೇಶಿಸಿದೆ ಎಂದು ಮೂಲಗಳು ತಿಳಿಸಿವೆ.

ಬೈಟ್‌ಡಾನ್ಸ್ ಕಂಪನಿಯು ಅಭಿವೃದ್ಧಿಪಡಿಸಿದ ಜನಪ್ರಿಯ ಆ್ಯಪ್ ‘ಟಿಕ್‌ಟಾಕ್’ ಅನ್ನು ಕೇಂದ್ರವು ಈ ಹಿಂದೆಯೇ ನಿಷೇಧಿಸಿದೆ.

‘ಬ್ಯಾಂಕ್ ಖಾತೆ ಸ್ಥಗಿತಗೊಳಿಸಿರುವ ಕಾರಣ ಭಾರತದಲ್ಲಿನ ನಮ್ಮ ಅಷ್ಟೂ ವಹಿವಾಟುಗಳು ನಿಂತಿವೆ. ಕೇಂದ್ರದ ಕ್ರಮವು ವಾಣಿಜ್ಯ ಚಟುವಟಿಕೆಗಳನ್ನು ಮುಕ್ತವಾಗಿ ನಡೆಸುವ ನಮ್ಮ ಹಕ್ಕಿನ ಉಲ್ಲಂಘನೆ’ ಎಂದು ಬೈಟ್‌ಡಾನ್ಸ್ ಕಂಪನಿಯು ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿಯಲ್ಲಿ ಹೇಳಿದೆ.

ಎರಡನೇ ಅಲೆಗೆ ನಿರ್ಲಕ್ಷ್ಯವೇ ಕಾರಣ: ಕೇಂದ್ರ ಆರೋಗ್ಯ ಸಚಿವಾಲಯ

ಕೋವಿಡ್: ಅಸಮರ್ಪಕ ಪರೀಕ್ಷೆ ಕೆಲ ರಾಜ್ಯಗಳ ವಿರುದ್ಧ ಅಸಮಾಧಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಾರಾಷ್ಟ್ರ, ಪಂಜಾಬ್ ಸೇರಿದಂತೆ ಹಲವು ರಾಜ್ಯಗಳು ಅಗತ್ಯವಿರುವಷ್ಟು ಪರೀಕ್ಷೆಗಳನ್ನು ಮಾಡದಿರುವುದು ಹಾಗೂ ಕೋವಿಡ್–19 ದೃಢಪಟ್ಟವರ ಪ್ರತ್ಯೇಕವಾಸಕ್ಕೆ ಕ್ರಮ ಕೈಗೊಳ್ಳದಿರುವುದಕ್ಕೆ ಕೇಂದ್ರ ಆರೋಗ್ಯ ಸಚಿವಾಲಯ ಅಸಮಾಧಾನ ವ್ಯಕ್ತಪಡಿಸಿದೆ.

ಈ ವಿಷಯದಲ್ಲಿನ ವೈಫಲ್ಯವೇ ಕೋವಿಡ್ ಪ್ರಕರಣಗಳು ಹೆಚ್ಚಿ, ಎರಡನೇ ಅಲೆ ಆರಂಭಗೊಳ್ಳಲು ಕಾರಣ ಎಂದು ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ.

ಛತ್ತೀಸಗಡ, ಮಧ್ಯಪ್ರದೇಶ ರಾಜ್ಯ ಸರ್ಕಾರಗಳು ಸಹ ಈ ವಿಷಯದಲ್ಲಿ ವಿಫಲವಾಗಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕೋವಿಡ್–19 ದೃಢಪಟ್ಟ ವ್ಯಕ್ತಿಗಳು ಇತರರೊಂದಿಗೆ ಸಂಪರ್ಕಕ್ಕೆ ಬಾರದೇ ತಮ್ಮ ಮನೆಯಲ್ಲಿಯೇ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆಯೇ ಎಂಬುದನ್ನು ಖಾತ್ರಿ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಅಂಥ ವ್ಯಕ್ತಿಗಳಿಗಾಗಿ ಸಾಂಸ್ಥಿಕ ಕ್ವಾರಂಟೈನ್ ವ್ಯವಸ್ಥೆಯನ್ನು ಕೂಡಲೇ ಜಾರಿಗೊಳಿಸಬೇಕು ಎಂದು ಅಧಿಕಾರಿಗಳು ಎಲ್ಲ ರಾಜ್ಯ ಸರ್ಕಾರಗಳಿಗೆ ಸೂಚಿಸಿದ್ದಾರೆ.

ಅಧಿಕ ಸಂಖ್ಯೆಯ ಪ್ರಕರಣಗಳು ವರದಿಯಾಗಿರುವ ಪ್ರದೇಶಗಳನ್ನು ಕಂಟೈನ್ಮೆಂಟ್ ವಲಯಗಳೆಂದು ಘೋಷಿಸಿ, ಸೋಂಕಿತರು ಮನೆಯಲ್ಲಿಯೇ ಪ್ರತ್ಯೇಕವಾಗಿ ಇರುವಂತೆ ನೋಡಿಕೊಂಡರೆ ಸಾಲದು. ಕಂಟೈನ್ಮೆಂಟ್‌ಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಕನಿಷ್ಠ ಎರಡು ವಾರಗಳ ಅವಧಿಗೆ ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದೂ ಅಧಿಕಾರಿಗಳು ಸೂಚಿಸಿದ್ದಾರೆ.

ಪೊಲೀಸ್ ಕಾಯ್ದೆಯಡಿ ನೀಡಲಾದ ಅಧಿಕಾರ ಚಲಾಯಿಸುವ ಮೂಲಕ ಕೋವಿಡ್–19 ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಕ್ರಮ ಕೈಗೊಳ್ಳಬೇಕು. ಹೆಚ್ಚು ಪ್ರಕರಣಗಳು ಕಂಡು ಬಂದ ಜಿಲ್ಲೆಗಳಲ್ಲಿ ಮುಂದಿನ ಎರಡು ವಾರಗಳಲ್ಲಿ ಶೇ 100ರಷ್ಟು ಲಸಿಕೆ ಹಾಕಲು ಕ್ರಮ ಕೈಗೊಳ್ಳುವಂತೆಯೂ ಸಚಿವಾಲಯ ಸೂಚಿಸಿದೆ.

ಸಾಂದರ್ಭಿಕ ಚಿತ್ರ

ಪಿಂಚಣಿ ಪರಿಷ್ಕರಣೆಗೆ ಆಗ್ರಹಿಸಿ ನಬಾರ್ಡ್ ಸಿಬ್ಬಂದಿ ಮುಷ್ಕರ

ನವದೆಹಲಿ (ಪಿಟಿಐ): ಪಿಂಚಣಿ ಪರಿಷ್ಕರಣೆಗೆ ಒತ್ತಾಯಿಸಿ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ (ನಬಾರ್ಡ್) ಅಧಿಕಾರಿಗಳು, ನೌಕರರು ಮತ್ತು ನಿವೃತ್ತ ನೌಕರರು ಮಂಗಳವಾರ ಒಂದು ದಿನದ ಮುಷ್ಕರ ನಡೆಸಿದರು.

ನಬಾರ್ಡ್‌ನ ಅಧಿಕಾರಿಗಳು, ನೌಕರರು ಮತ್ತು ನಿವೃತ್ತ ಸಿಬ್ಬಂದಿಯ ಸಂಯುಕ್ತ ವೇದಿಕೆಯ (ಯುಎಫ್‌ಒಇಆರ್‌ಎನ್) ಅಡಿಯಲ್ಲಿ ಮುಷ್ಕರ ನಡೆಯಿತು. 2001ರಿಂದಲೂ ಪಿಂಚಣಿ ಪರಿಷ್ಕರಣೆ ಬಾಕಿ ಇದೆ. ಆರ್‌ಬಿಐ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ 2012ರಲ್ಲಿ ಪಿಂಚಣಿ ಪರಿಷ್ಕರಿಸಲಾಗಿದೆ. ಆದರೆ, ನಬಾರ್ಡ್‌ನ ಪಿಂಚಣಿ ಸಮಸ್ಯೆಯ ಕುರಿತು ಹಣಕಾಸು ಸಚಿವಾಲಯವು ಇನ್ನಷ್ಟೇ ನಿರ್ಧಾರ ತೆಗೆದುಕೊಳ್ಳಬೇಕಿದೆ.



ಜೈಲಿನೊಳಗೆ ಮೊಬೈಲ್, ನಗದು ಪತ್ತೆ

ಪ್ರಜಾವಾಣಿ ವಾರ್ತೆ

ರಾಮನಗರ: ಇಲ್ಲಿನ ಜಿಲ್ಲಾ ಕಾರಾಗೃಹದಲ್ಲಿ ಮಂಗಳವಾರ ಮುಂಜಾನೆ ಪೊಲೀಸರು ಶೋಧ ನಡೆದಿದ್ದು, ಮೊಬೈಲ್, ನಗದು ಸೇರಿದಂತೆ ವಿವಿಧ ವಸ್ತುಗಳು ಪತ್ತೆಯಾಗಿವೆ. ಅಪಾರ ಪ್ರಮಾದಲ್ಲಿ ತಂಬಾಕು ಉತ್ಪನ್ನಗಳೂ ಸಿಕ್ಕಿವೆ.

ಮುಂಜಾನೆ 6 ಗಂಟೆ ಸುಮಾರಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಿರೀಶ್ ನೇತೃತ್ವದ ತಂಡವು ಜೈಲಿನಲ್ಲಿ ತಪಾಸಣೆ ಶುರು ಮಾಡಿತು. ಐವತ್ತಕ್ಕೂ ಹೆಚ್ಚು ಸಿಬ್ಬಂದಿ ಕಾರಾಗೃಹದ ಪ್ರತಿ ಸೆಲ್‌ನಲ್ಲೂ ಹುಡುಕಾಟ ನಡೆಸಿದರು.

ಈ ಸಂದರ್ಭ 54 ಸಾವಿರ ರೂಪಾಯಿ ನಗದು, ಐದು ಮೊಬೈಲ್, ಐದು ಸಿಮ್, ಚಾಕು, ಹುಕ್ಕಾ ಪೈಪ್‌ಗಳು, ಗಾಂಜಾ ಪುಡಿ ಸಿಕ್ಕಿವೆ. ಇದಲ್ಲದೆ 70 ಪ್ಯಾಕ್ ಸಿಗರೇಟ್, ಬೀಡಿ, ಗುಟ್ಕಾ ಮೊದಲಾದ ಉತ್ಪನ್ನಗಳು ಸಹ ಪೊಲೀಸರಿಗೆ ದೊರೆತಿವೆ.

ಒಂದು ವರ್ಷದ ಲೆಕ್ಕ: 2 ಎಕರೆ 32 ಗುಂಟೆ ವಿಸ್ತೀರ್ಣದಲ್ಲಿ ಇರುವ ಜೈಲಿನಲ್ಲಿ ಸದ್ಯ ಸುಮಾರು 180 ಕೈದಿಗಳು ಇದ್ದಾರೆ. ಇಲ್ಲಿ ಒಟ್ಟು ಎಂಟು ಬ್ಯಾರಕ್‌ಗಳು ಇದ್ದು, 150 ಕೈದಿಗಳನ್ನು ಇಡಬಹುದಾಗಿದೆ. ಸಾಮರ್ಥ್ಯಕ್ಕಿಂತ ಹೆಚ್ಚಿನ ಬಂಧಿಗಳು ಇಲ್ಲಿದ್ದಾರೆ.

2020ರ ಏಪ್ರಿಲ್‌ನಲ್ಲಿ ಇಲ್ಲಿನ ಕೈದಿಗಳನ್ನು ಬೆಂಗಳೂರಿಗೆ ಸ್ಥಳಾಂತರ ಮಾಡಲಾಗಿದ್ದು, ಪಾದರಾಯನಪುರ ಗಲಭೆ ಆರೋಪಿಗಳನ್ನು ಇಲ್ಲಿಗೆ ಕರೆತರಲಾಗಿತ್ತು.

ಅವರಿಗೆ ಕೋವಿಡ್ ಸೋಂಕು ತಗುಲಿದ ಹಿನ್ನೆಲೆಯಲ್ಲಿ ಮತ್ತೆ ಇಲ್ಲಿಂದ ಸ್ಥಳಾಂತರ ಮಾಡಲಾಯಿತು.

ಸುಮಾರು 28 ದಿನಗಳ ಕಾಲ ಜೈಲಿನ ಬಾಗಿಲು ಮುಚ್ಚಿತ್ತು. ನಂತರ ಇಲ್ಲಿಗೆ ಹಿಂದೆ ಇದ್ದ ಕೈದಿಗಳನ್ನು ಹಂತಹಂತವಾಗಿ ಸ್ಥಳಾಂತರ ಮಾಡಲಾಗಿತ್ತು. ಹೀಗಾಗಿ ಕಳೆದ ಒಂದು ವರ್ಷದಲ್ಲಿ ಹಂತಹಂತವಾಗಿ ಇಲ್ಲಿನ ಕೈದಿಗಳು ಜಾಲ ವಿಸ್ತರಿಸಿಕೊಂಡಿದ್ದು, ಅಪಾರ ಪ್ರಮಾಣದಲ್ಲಿ ನಿಷೇಧಿತ ವಸ್ತುಗಳನ್ನು ಒಳಗೆ ತಂದಿರುವುದು ಪೊಲೀಸರಿಗೆ ಆಶ್ಚರ್ಯ ತಂದಿದೆ.

ದಾಳಿ ಸಂದರ್ಭ ಜೈಲಿನಲ್ಲಿ ದೊರೆತ ವಸ್ತುಗಳು

‘ಭಾರತದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ’

ವಾಷಿಂಗ್ಟನ್ (ಪಿಟಿಐ): ಕಾನೂನು ಬಾಹಿರ ಹಾಗೂ ಜನಾಂಗೀಯ ಹತ್ಯೆಗಳು, ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಮಾಧ್ಯಮಗಳ ಮೇಲಿನ ನಿಯಂತ್ರಣ, ಭ್ರಷ್ಟಾಚಾರ ಹಾಗೂ ಧಾರ್ಮಿಕ ಸ್ವಾತಂತ್ರ್ಯದ ಉಲ್ಲಂಘನೆ ಸೇರಿದಂತೆ ಭಾರತದಲ್ಲಿ ಮಾನವ ಹಕ್ಕುಗಳ ಕುರಿತಾದ ಸಮಸ್ಯೆಗಳು ವ್ಯಾಪಕವಾಗಿವೆ ಎಂದು ಅಮೆರಿಕದ ವರದಿಯೊಂದು ತಿಳಿಸಿದೆ.

ಅಮೆರಿಕದ ಸಂಸತ್ತಿನ ’2020ರ ಅವಧಿಯಲ್ಲಿ ವಿಶ್ವದಲ್ಲಿ ಮಾನವ ಹಕ್ಕುಗಳ ಪಾಲನೆ‘ ಕುರಿತಾದ ವರದಿಯಲ್ಲಿ ಜಮ್ಮು ಹಾಗೂ ಕಾಶ್ಮೀರದಲ್ಲಿ ಮಾನವ ಹಕ್ಕುಗಳ ಪರಿಸ್ಥಿತಿಯು ಸುಧಾರಣೆ ಕಂಡಿದೆ ಎಂದು ಉಲ್ಲೇಖಿಸಿದೆ.

ಜಮ್ಮು ಹಾಗೂ ಕಾಶ್ಮೀರದಲ್ಲಿ ಕೆಲವು ಭದ್ರತಾ ಹಾಗೂ ಸಂವಹನ ಸಂಪರ್ಕ ನಿರ್ಬಂಧಗಳನ್ನು ತೆಗೆದು ಹಾಕಿ ಸಹಜ ಸ್ಥಿತಿ ಸ್ಥಾಪಿಸಲು ಸರ್ಕಾರ ಅನೇಕ ಕ್ರಮಗಳನ್ನು ತೆಗೆದುಕೊಂಡಿತು. ಸರ್ಕಾರವು ಅನೇಕ ರಾಜಕೀಯ ಕಾರ್ಯಕರ್ತರನ್ನು ಬಿಡುಗಡೆಗೊಳಿಸಿದೆ ಎಂದು ವರದಿಯಲ್ಲಿನ ಭಾರತ ವಿಭಾಗದಲ್ಲಿ ತಿಳಿಸಿದೆ.

ಜನವರಿಯಲ್ಲಿ ಸರ್ಕಾರವು ಜಮ್ಮುವಿನಲ್ಲಿ ಭಾಗಶಃ ಅಂತರ್ಜಾಲ ಸೌಲಭ್ಯ ಒದಗಿಸಿದರೂ, ಜಮ್ಮು–ಕಾಶ್ಮೀರದ ಬಹುಭಾಗಗಳಲ್ಲಿ ಹೈ ಸ್ಪೀಡ್ 4ಜಿ ಮೊಬೈಲ್ ಇಂಟರ್‌ನೆಟ್ ಬಳಕೆಗೆ ನಿರ್ಬಂಧವನ್ನು ಮುಂದುವರಿಸಿತು. ಚುನಾವಣಾ ಕ್ಷೇತ್ರಗಳನ್ನು ಮರು ವಿಂಗಡಿಸುವ ಪ್ರಸ್ತಾಪ ಸರ್ಕಾರ ಮಾಡಿದರೂ, ಸ್ಥಳೀಯ ವಿಧಾನಸಭೆ ಚುನಾವಣೆಗೆ ದಿನಾಂಕ ಘೋಷಿಸಲಿಲ್ಲ. ಸ್ಥಳೀಯ ಜಿಲ್ಲಾ ಅಭಿವೃದ್ಧಿ ಮಂಡಳಿ ಚುನಾವಣೆ ಡಿಸೆಂಬರ್‌ನಲ್ಲಿ ನಡೆದಿದ್ದು, ಕಾಶ್ಮೀರದಲ್ಲಿನ ವಿರೋಧ ಪಕ್ಷಗಳ ಒಕ್ಕೂಟವು ಹೆಚ್ಚಿನ ಸ್ಥಾನ ಗೆದ್ದಿತು ಎಂದು ವರದಿಯಲ್ಲಿ ತಿಳಿಸಿದೆ.

ಬೆಳೆ ವಿಮೆ: ಕುಂದುಕೊರತೆ ಪರಿಹಾರ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆಯ ಮಾರ್ಗಸೂಚಿಯಂತೆ ರೈತರು, ಬ್ಯಾಂಕುಗಳು, ವಿಮೆ ಕಂಪನಿಗಳು ಮತ್ತು ಸಂಬಂಧಿಸಿದ ಇಲಾಖೆಗಳ ಕುಂದು ಕೊರತೆ ಆಲಿಸಿ ಪರಿಹಾರ ಒದಗಿಸಲು ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಕುಂದುಕೊರತೆ ಪರಿಹಾರ ಸಮಿತಿ ರಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ಸಮಿತಿಗೆ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ಅಧ್ಯಕ್ಷ, ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಸದಸ್ಯ ಕಾರ್ಯದರ್ಶಿಯಾಗಿದ್ದು, ಇತರ ಆರು ಮಂದಿ ಸದಸ್ಯರು ಇರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ ಅಧ್ಯಕ್ಷರಾಗಿದ್ದು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಹ ಅಧ್ಯಕ್ಷ, ಕೃಷಿ ಇಲಾಖೆಯ ಜಿಲ್ಲಾ ಜಂಟಿ ನಿರ್ದೇಶಕ ಸದಸ್ಯ ಕಾರ್ಯದರ್ಶಿ ಮತ್ತು ಎಂಟು ಮಂದಿ ಸದಸ್ಯರು ಇರುತ್ತಾರೆ.

ರಾಜ್ಯಮಟ್ಟದ ಸಮಿತಿಗೆ ಕೃಷಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷರು, ತೋಟಗಾರಿಕೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸಹ ಅಧ್ಯಕ್ಷರು, ಕೃಷಿ ಇಲಾಖೆಯ ನಿರ್ದೇಶಕರು ಸದಸ್ಯ ಕಾರ್ಯದರ್ಶಿ ಮತ್ತು ಇತರ 10 ಮಂದಿ ಸದಸ್ಯರು ಇರುತ್ತಾರೆ. ಈ ಮೂರು ಸಮಿತಿಗಳ ಸದಸ್ಯರಲ್ಲಿ ಜಿಲ್ಲಾ ಲೀಡ್ ಬ್ಯಾಂಕು ಅಧಿಕಾರಿಗಳು, ರೈತರ ಮತ್ತು ವಿಮೆ ಕಂಪನಿಗಳ ಪ್ರತಿನಿಧಿಗಳೂ ಇರುತ್ತಾರೆ.

ರೈತರು, ಬ್ಯಾಂಕುಗಳು, ವಿಮೆ ಕಂಪನಿಗಳು ಮತ್ತು ಇಲಾಖೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕು ವ್ಯಾಪ್ತಿಯಲ್ಲಿ ಕುಂದುಕೊರತೆಗಳನ್ನು ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಏಳು ದಿನಗಳ ಒಳಗೆ ಪರಿಹರಿಸಲು ಕ್ರಮ ತೆಗೆದುಕೊಳ್ಳಬೇಕು. ಸಾಧ್ಯವಾಗದೇ ಇದ್ದರೆ ಆ ದೂರನ್ನು ತಾಲ್ಲೂಕುಮಟ್ಟದ ಸಮಿತಿಯ ಮುಂದಿಡಬೇಕು. ಈ ಸಮಿತಿ ಏಳು ದಿನಗಳ ಒಳಗೆ ಪರಿಹರಿಸಬೇಕು. ಸಾಧ್ಯವಾಗದೇ ಇದ್ದರೆ ಜಿಲ್ಲಾ ಮಟ್ಟದ ಸಮಿತಿಗೆ ದೂರನ್ನು ಸಲ್ಲಿಸಬೇಕು. ಅಲ್ಲಿಯೂ ಪರಿಹಾರ ಸಾಧ್ಯವಾಗದೇ ಇದ್ದರೆ ರಾಜ್ಯಮಟ್ಟದ ಸಮಿತಿ ಪರಿಹಾರ ಕಂಡುಕೊಳ್ಳಬೇಕು. ಕುಂದುಕೊರತೆಗಳನ್ನು ಕಾಲಮಿತಿಯಲ್ಲಿ ಪರಿಹರಿಸಲು ಸಮಿತಿಗಳು ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ದುಬಾರೆ ಶಿಬಿರದಿಂದ ವರ್ಷದ ಹಿಂದೆ ಮದವೇರಿ ಓಡಿದ್ದ ಸಾಕಾನೆ

ಸಂಗಾತಿ ಜೊತೆಗಿದ್ದ ‘ಕುಶ’ನ ಸೆರೆ

ಪ್ರಜಾವಾಣಿ ವಾರ್ತೆ

ಕುಶಾಲನಗರ: ಸಂಗಾತಿಯನ್ನು ಅರಸಿ, ಕೊಡಗಿನ ದುಬಾರೆ ಸಾಕಾನೆ ಶಿಬಿರದಿಂದ ವರ್ಷದ ಹಿಂದೆ ಕಾಡಿಗೆ ತೆರಳಿದ್ದ ‘ಕುಶ’ ಹೆಸರಿನ ಗಂಡಾನೆಯನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಮಂಗಳವಾರ ಯಶಸ್ವಿಯಾಗಿದ್ದಾರೆ.

ಸಾಕಾನೆ ಶಿಬಿರದಲ್ಲಿ ಕಟ್ಟಿಹಾಕಿದ್ದ ‘ಕುಶ’ ಆನೆಗೆ ಮದವೇರಿ ಸರಪಳಿ ಕಿತ್ತುಕೊಂಡು ಸಂಗಾತಿ ಅರಸಿಕೊಂಡು ಕಾಡಿಗೆ ತೆರಳಿತ್ತು. ದುಬಾರೆ ಸಾಕಾನೆಗಳು ಮದವೇರಿದಾಗ ಕಾಡಿಗೆ ಹೋಗಿ, ಹೆಣ್ಣಾನೆಗಳ ಸಂಗ ಮಾಡಿ ಮತ್ತೆ ಶಿಬಿರಕ್ಕೆ ಹಿಂತಿರುಗುವುದು ಸಾಮಾನ್ಯ. ಆದರೆ, ಕಾಡಿಗೆ ಹೋಗಿದ್ದ ‘ಕುಶ’ ಮಾತ್ರ ಶಿಬಿರಕ್ಕೆ ಮರಳದೇ ಕಾಡಾನೆಗಳೊಂದಿಗೇ ವಾಸ್ತವ್ಯ ಮಾಡಿತ್ತು.

ತಿಂಗಳು ಕಳೆದರೂ ಶಿಬಿರಕ್ಕೆ ಬಾರದೇ ಇದ್ದುದರಿಂದ ಅರಣ್ಯ ಸಿಬ್ಬಂದಿ ಹಾಗೂ ಮಾವುತರು, ಅದನ್ನು ಮರಳಿ ಶಿಬಿರಕ್ಕೆ ಕರೆ ತರಲು ಆಗಿನಿಂದ ನಿರಂತರ ಪ್ರಯತ್ನ ನಡೆಸಿದ್ದರು. ‘ಕುಶ’ ಕೂಡ ಸಂಗಾತಿ ಬಿಟ್ಟು ಶಿಬಿರಕ್ಕೆ ಮರಳಲು ಮನಸ್ಸು ಮಾಡಿರಲಿಲ್ಲ.

ವರ್ಷದ ಬಳಿಕ ಪತ್ತೆಯಾದ ‘ಕುಶ’ ಆನೆ

ಶಿಬಿರದ ಆಸುಪಾಸಿನ ಅರಣ್ಯ ಪ್ರದೇಶದಲ್ಲಿಯೇ ಅಲೆದಾಟ ನಡೆಸುತ್ತಿದ್ದರೂ, ಶಿಬಿರದ ಕಡೆ ತಿರುಗಿ ಕೂಡ ನೋಡುತ್ತಿರಲಿಲ್ಲ. ಆನೆ ಪತ್ತೆ ಹಚ್ಚಿದರೂ ಅದನ್ನು ಕರೆತರಲು, ಸಂಗಾತಿ ಹೆಣ್ಣಾನೆ ಕೂಡ ಬಿಡುತ್ತಿರಲಿಲ್ಲ. ‘ಕುಶ’ನ ಹತ್ತಿರ ಹೋದರೆ ಹೆಣ್ಣಾನೆ ತೀವ್ರ ವಿರೋಧ ವ್ಯಕ್ತಪಡಿಸುತ್ತಿತ್ತು. ಇದರೊಂದಿಗೆ ‘ಕುಶ’ ಕೂಡ, ಅರಣ್ಯ ಸಿಬ್ಬಂದಿಯ ಕಣ್ಣು ತಪ್ಪಿಸಿ ಕಾಡಿನಲ್ಲಿ ಅಲೆದಾಡುತ್ತಿತ್ತು.

ದುಬಾರೆ ಶಿಬಿರದ ‘ಪ್ರಶಾಂತ್’, ‘ಧನಂಜಯ’, ‘ಸುಗ್ರೀವ’ ಮತ್ತು ‘ಲಕ್ಷ್ಮಣ’ ಹೆಸರಿನ ಸಾಕಾನೆಗಳ ಸಹಾಯದಿಂದ, ಮಂಗಳವಾರ ಬೆಳಿಗ್ಗೆ ಕಾರ್ಯಾಚರಣೆ ನಡೆಯಿತು. ಕುಶಾಲನಗರ ವಲಯದ ಮೀನುಕೊಲ್ಲಿ ವ್ಯಾಪ್ತಿ ಅರಣ್ಯದಲ್ಲಿ ಕಾಡಾನೆಗಳೊಂದಿಗೆ ಇದ್ದ ಕುಶನನ್ನು ಬೇರ್ಪಡಿಸಿ, ಸೆರೆ ಹಿಡಿಯುವಲ್ಲಿ ಕಾರ್ಯಾಚರಣೆ ತಂಡವು ಯಶಸ್ವಿಯಾಯಿತು.

‘ಸಂಗಾತಿ ನೆನೆದು ರೋದನ’

ಸಂಗಾತಿಯಿಂದ ಬಲವಂತವಾಗಿ ಬೇರ್ಪಡಿಸಿದ ಕುಶನನ್ನು ಬಂಧಿಸಲಾಗಿದ್ದು, ಇದೀಗ ‘ಕುಶ’ ಸಂಗಾತಿ ನೆನೆದು ರೋದಿಸುತ್ತಿದ್ದಾನೆ.

ಕುಶಾಲನಗರ ವಲಯ ಅರಣ್ಯಾಧಿಕಾರಿ ಅನನ್ಯ ಕುಮಾರ್ ಹಾಗೂ ಡಿಎಫ್‌ಒ ಪ್ರಭಾಕರನ್ ಮಾರ್ಗದರ್ಶನದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಿ ಆನೆ ಪತ್ತೆ ಹಾಗೂ ಸೆರೆ ಹಿಡಿಯಲು ಕ್ರಮ ಕೈಗೊಳ್ಳಲಾಗಿತ್ತು.

ಹುಣಸೂರು ವನ್ಯಜೀವಿ ವಿಭಾಗದ ವೈದ್ಯಾಧಿಕಾರಿ ಡಾ.ಮುಜೀಬ್, ಉಪ ವಲಯ ಅರಣ್ಯಾಧಿಕಾರಿ ಕೆ.ಪಿ.ರಂಜನ್, ಕೆ.ಎಸ್.ಸುಬ್ರಾಯ, ಮಾವುತರು, ಕಾವಾಡಿಗರು ಹಾಗೂ ಅರಣ್ಯ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ರ‍್ಯಾಗಿಂಗ್ ಆರೋಪ

ಚಾಮರಾಜನಗರ: ಇಲ್ಲಿನ ಸರ್ಕಾರಿ ವೈದ್ಯಕೀಯ ಕಾಲೇಜಿನ ಹಾಸ್ಟೆಲ್‌ನಲ್ಲಿ, ಮೊದಲ ವರ್ಷದ ವಿದ್ಯಾರ್ಥಿಯೊಬ್ಬನಿಗೆ ರ‍್ಯಾಗಿಂಗ್ ಮಾಡಿರುವ ಬಗ್ಗೆ ಚಾಮರಾಜನಗರ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಾಗಿಲ್ಲ.

ಪೊಲೀಸರು ಆರೋಪಿ ವಿದ್ಯಾರ್ಥಿಗಳ ವಿಚಾರಣೆ ನಡೆಸಿರುವ ಪೊಲೀಸರು, ಅವರಿಂದ ಮುಚ್ಚಳಿಕೆ ಪತ್ರ ಬರೆಸಿಕೊಂಡಿದ್ದಾರೆ. ವೈದ್ಯಕೀಯ ಕಾಲೇಜಿನ ಡೀನ್, ಹಿರಿಯ ವಿದ್ಯಾರ್ಥಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಅನಿತಾ ಬಿ ಹದ್ದಣ್ಣವರ, ಮಂಗಳವಾರ ಕಾಲೇಜಿಗೆ ಭೇಟಿ ನೀಡಿ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳೊಂದಿಗೆ ಮಾತನಾಡಿದ್ದಾರೆ.

ರ‍್ಯಾಗಿಂಗ್ ಮಾಡಿದ್ದಾರೆ ಎನ್ನಲಾದ ಏಳು ವಿದ್ಯಾರ್ಥಿಗಳ ಪೋಷಕರನ್ನು ಕಾಲೇಜಿಗೆ ಬರಲು ಹೇಳಿರುವ ಆಡಳಿತ ಮಂಡಳಿ, ಅವರ ಎದುರು ವಿದ್ಯಾರ್ಥಿಗಳಿಗೆ ಅಂತಿಮ ಎಚ್ಚರಿಕೆ ನೀಡಲು ನಿರ್ಧರಿಸಿದೆ. ಕಾಲೇಜಿನ ದ್ವಿತೀಯ ಹಾಗೂ ತೃತೀಯ ವರ್ಷದ ಒಟ್ಟು ಏಳು ಮಂದಿ ವಿದ್ಯಾರ್ಥಿಗಳು, ತುಮಕೂರು ಮೂಲದ ಪ್ರಥಮ ವರ್ಷದ ವಿದ್ಯಾರ್ಥಿಯೊಬ್ಬನಿಗೆ ರ‍್ಯಾಗಿಂಗ್ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಆಸ್ತಿ ತೆರಿಗೆ: ಇಂದು ಕಟ್ಟದಿದ್ದರೆ ದುಪ್ಪಟ್ಟು ದಂಡ

ಒಂದನೇ ಪುಟದಿಂದ

‘ಅದಲ್ಲದೇ 832 ಮಂದಿ ಚಲನ್ ಡೌನ್‌ಲೋಡ್ ಮಾಡಿದ್ದಾರೆ. ಎಲ್ಲ ಸೇರಿಸಿದರೆ ಮಂಗಳವಾರ ರಾತ್ರಿ ವರೆಗಿನ ಅಂಕಿ ಅಂಶಗಳ ಪ್ರಕಾರ ಆಸ್ತಿ ತೆರಿಗೆಯಿಂದ ₹ 2,808 ಕೋಟಿ ಬಿಬಿಎಂಪಿ ಖಜಾನೆಗೆ ಸೇರಲಿದೆ. ಈಗಾಗಲೇ ಚಲನ್ ಡೌನ್ ಲೋಡ್ ಮಾಡಿರುವ ಮೊತ್ತವೂ ಪಾವತಿಯಾದರೆ ತೆರಿಗೆ ಸಂಗ್ರಹ ಇನ್ನಷ್ಟು ಹೆಚ್ಚಳವಾಗಲಿದೆ. ತೆರಿಗೆ ಪಾವತಿಗೆ ಕೊನೇ ದಿನವಾದ ಬುಧವಾರ ₹ 40 ಕೋಟಿ ತೆರಿಗೆ ಸಂಗ್ರಹವಾಗುವ ನಿರೀಕ್ಷೆ ಇದೆ’ ಎಂದು ಅವರು ಮಾಹಿತಿ ನೀಡಿದರು.

ಬಿಬಿಎಂಪಿಯು 2020–21ನೇ ಸಾಲಿನ ಬಜೆಟ್‌ನಲ್ಲಿ ಹಳೆ ಬಾಕಿ ಸೇರಿ ಒಟ್ಟು ₹ 3500 ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ನಿಗದಿಪಡಿಸಲಾಗಿತ್ತು.

ಆಸ್ತಿ ತೆರಿಗೆ ಸಂಗ್ರಹದ ವಾರ್ಷಿಕ ಗುರಿಗೆ ಹೋಲಿಸಿದರೆ ₹ 650 ಕೋಟಿಗಳಷ್ಟು ತೆರಿಗೆ ಸಂಗ್ರಹ ಕಡಿಮೆ ಆಗಲಿದೆ. ಆದರೆ, ಇದರಲ್ಲಿ ಹಳೆ ಬಾಕಿಯೂ ಸೇರಿದೆ.

ಒಟ್ಟು 7.44 ಲಕ್ಷ ಆಸ್ತಿ ಮಾಲೀಕರು ಹಿಂದಿನ ವರ್ಷಗಳ ತೆರಿಗೆಯನ್ನೂ ಬಾಕಿ ಉಳಿಸಿಕೊಂಡಿದ್ದರು. ನ್ಯಾಯಾಲಯದ ಆದೇಶಗಳ ಮೂಲಕ ತೆರಿಗೆಯ ಭಾಗಶಃ ಮೊತ್ತ ಪಾವತಿ ಆಗಿರುವ ಪ್ರಮಾಣ ₹ 55 ಕೋಟಿಗಳಷ್ಟಿದೆ.

ನಿಧನ ವಾರ್ತೆ

ನಟಿ ಪ್ರೇಮಾಗೆ ಪಿತೃವಿಯೋಗ

ನಾಪೋಕ್ಲು (ಕೊಡಗು ಜಿಲ್ಲೆ): ಚಿತ್ರ ನಟಿ ನೆರವಂಡ ಪ್ರೇಮಾ ಅವರ ತಂದೆ ನೆರವಂಡ ಚೆಟ್ಟಿಚ್ಚ (75) ಸೋಮವಾರ ನಿಧನರಾಗಿದ್ದು, ಮೃತರ ಅಂತ್ಯಕ್ರಿಯೆ ಮಡಿಕೇರಿ ತಾಲ್ಲೂಕಿನ ಮೂರ್ನಾಡು ಸಮೀಪದ ಕುಂಬಳದಾಳು ಗ್ರಾಮದ ಅವರ ಸ್ವಂತ ಜಮೀನಿನಲ್ಲಿ ಮಂಗಳವಾರ ನೆರವೇರಿತು.

ಕುಂಬಳದಾಳು ಗ್ರಾಮದ ನಿವಾಸಿಯಾಗಿದ್ದ ಅವರು, ಬೆಂಗಳೂರಿನಲ್ಲಿ ನೆಲೆಸಿದ್ದರು. ಕೆಲವು ದಿನಗಳಿಂದ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು.

ಮೃತರಿಗೆ ನಟಿ ಪ್ರೇಮಾ ಸೇರಿದಂತೆ ಇಬ್ಬರು ಪುತ್ರಿಯರು ಹಾಗೂ ಪುತ್ರ, ಕ್ರಿಕೆಟಿಗ ಎನ್.ಸಿ.ಅಯ್ಯಪ್ಪ ಇದ್ದಾರೆ. ನೆರವಂಡ ಕುಟುಂಬಸ್ಥರು, ಗ್ರಾಮಸ್ಥರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಸಾರಿಗೆ ನೌಕರರ ಮುಷ್ಕರ: ದಿನಕ್ಕೊಂದು ಮಾದರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಪ್ರಿಲ್ 7ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಮುಂದಾಗಿರುವ ಸಾರಿಗೆ ನೌಕರರು, ಏ. 1ರಿಂದಲೇ ದಿನಕ್ಕೊಂದು ರೀತಿಯಲ್ಲಿ ವಿಭಿನ್ನ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದಾರೆ.

ಏ.1ರಂದು ನೌಕರರು ತೋಳಿಗೆ ಕಪ್ಪುಪಟ್ಟಿ ಕಟ್ಟಿಕೊಂಡು ಕರ್ತವ್ಯ ನಿರ್ವಹಿಸುವ ಮೂಲಕ ಸಾರ್ವಜನಿಕರು ಮತ್ತು ಸರ್ಕಾರದ ಗಮನ ಸೆಳೆಯಲಿದ್ದಾರೆ. ಏ.2ರಂದು ಸಾರ್ವಜನಿಕ ಪ್ರದೇಶಗಳಲ್ಲಿ ಕಾಫಿ, ಟೀ, ಬಜ್ಜಿ, ಬೋಂಡ ತಯಾರಿಸಿ ಮಾರಾಟ ಮಾಡಲಿದ್ದಾರೆ. 3ರಂದು ನೌಕರರು ಮತ್ತು ಕುಟುಂಬ ಸದಸ್ಯರು ಎಲ್ಲಾ ನಗರಗಳ ಮುಖ್ಯ ವೃತ್ತಗಳಲ್ಲಿ ಮಾನವ ಸರಪಳಿ ನಿರ್ಮಿಸಿ ಭಿತ್ತಿ ಪತ್ರ ಪ್ರದರ್ಶನ ಮಾಡುವರು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ ತಿಳಿಸಿದೆ.

'ಏ.4ರಂದು ಸಾರ್ವಜನಿಕರಿಗೆ ಕರ ಪತ್ರ ಹಂಚುವುದು, ಫೇಸ್‌ಬುಕ್, ಟ್ವಿಟರ್ ಅಭಿಯಾನ ನಡೆಸಲಾಗುವುದು. 5ರಂದು ಧರಣಿ ಸತ್ಯಾಗ್ರಹ, 6ರಂದು ಸಾಮೂಹಿಕ ಉಪವಾಸ ಸತ್ಯಾಗ್ರಹ ನಡೆಸಲಾಗುವುದು' ಎಂದು ಕೂಟದ ಅಧ್ಯಕ್ಷ ಆರ್. ಚಂದ್ರಶೇಖರ್ ವಿವರಿಸಿದ್ದಾರೆ.

'ಬೇಡಿಕೆಗಳನ್ನು ಈಡೇರಿಸಿದ್ದೇವೆ ಎಂದು ಸರ್ಕಾರ ಬಿಂಬಿಸುತ್ತಿದೆ. ಆದರೆ, ಆರನೇ ವೇತನ ಆಯೋಗದ ಶಿಫಾರಸು ಬಗ್ಗೆ ಈವರೆಗೆ ಯಾವುದೇ ತೀರ್ಮಾನ ಕೈಗೊಂಡಿಲ್ಲ' ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ಸಾರಿಗೆ ನೌಕರರಿಗೆ ಸರ್ಕಾರಿ ಶಿಕ್ಷಕರಂತೆ ಅಂತರ ನಿಗಮ ವರ್ಗಾವಣೆ ಪದ್ಧತಿ ಜಾರಿಗೆ ತರಬೇಕು ಎಂಬ ಬೇಡಿಕೆಗೆ ಹಲವು ನಿಬಂಧನೆಗಳನ್ನು ಹೇರಿ ಶೇ 2ರಷ್ಟು ಮಾತ್ರ ವರ್ಗಾವಣೆಗೆ ಅವಕಾಶ ನೀಡಲಾಗಿದೆ. ಬಾಟಾ, ಭತ್ಯೆ ಮತ್ತು ಓಟಿ ನೀಡುವ ಭರವಸೆ ಹಳೇ ಪದ್ಧತಿಯಲ್ಲೇ ಮುಂದುವರಿದಿದೆ. ಎನ್‌ಐಎನ್‌ಸಿ ರದ್ದು ಮಾಡುವ ಭರವಸೆ ಈಡೇರಿಲ್ಲ. ಎಚ್‌ಆರ್‌ಎಂಎಸ್ ಪದ್ಧತಿ ಇನ್ನೂ ಜಾರಿಯಾಗಿಲ್ಲ' ಎಂದು ವಿವರಿಸಿದ್ದಾರೆ.

'ವೇತನ ಪರಿಷ್ಕರಿಸಿದರೆ ಮುಷ್ಕರ ವಾಪಸ್'

'ಆರನೇ ವೇತನ ಆಯೋಗದ ಶಿಫಾರಸಗಳನ್ನು 2020ರ ಜನವರಿ 1ರಿಂದ ಅನ್ವಯವಾಗುವಂತೆ ವೇತನ ಪರಿಷ್ಕರಣೆ ಆದೇಶ ಹೊರಡಿಸಿದರೆ ಮುಷ್ಕರ ವಾಪಸ್ ಪಡೆಯುತ್ತೇವೆ. ಇಲ್ಲದಿದ್ದರ ಎಸ್ಮಾ ಜಾರಿಗೂ ಹೆದರದೆ ಮುಷ್ಕರ ನಡೆಸುತ್ತೇವೆ. ಸಾರ್ವಜನಿಕರಿಗೆ ಆಗುವ ತೊಂದರೆಗೆ ರಾಜ್ಯ ಸರ್ಕಾರವೇ ಹೊಣೆಯಾಗಲಿದೆ' ಎಂದುಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

'ವೇತನ ಪರಿಷ್ಕರಣೆ: 2ರಂದು ತೀರ್ಮಾನ'

ಕಲಬುರ್ಗಿ: ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ನೌಕರರು ಮುಷ್ಕರದ ಸಂದರ್ಭದಲ್ಲಿ ಇರಿಸಿದ್ದ ಪ್ರಮುಖ ಬೇಡಿಕೆ 6ನೇ ವೇತನ ಆಯೋಗದಂತೆ ವೇತನ ನೀಡುವ ಬಗ್ಗೆ ಏಪ್ರಿಲ್ 2ರ ಸಭೆಯಲ್ಲಿ ತೀರ್ಮಾನಿಸಲಾಗುವುದು ಎಂದು ಸಾರಿಗೆ ಖಾತೆ ಹೊಂದಿರುವ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ತಿಳಿಸಿದರು.

'ಮತ್ತೆ ಮುಷ್ಕರ ನಡೆಸುವುದಾಗಿ ನೌಕರರ ಸಂಘಟನೆ ತಿಳಿಸಿದೆ. ಸಂಘಟನೆ ಪ್ರಮುಖರೊಂದಿಗೆ ಮಾತುಕತೆ ನಡೆಸಿದ್ದೇವೆ' ಎಂದು ಇಲ್ಲಿ ತಿಳಿಸಿದರು.

ಕರ್ತವ್ಯಕ್ಕೆ ಗೈರಾದರೆ ವೇತನ ಕಡಿತ: ಮುಷ್ಕರಕ್ಕೆ ಸಾರಿಗೆ ನೌಕರರು ಪಟ್ಟುಹಿಡಿರುವ ಬೆನ್ನಲ್ಲೇ ಕರ್ತವ್ಯಕ್ಕೆ ಗೈರಾಗುವವರ ವೇತನ ಕಡಿತಗೊಳಿಸಿ ಶಿಸ್ತು ಕ್ರಮ ಜರುಗಿಸುವ ಎಚ್ಚರಿಕೆಯನ್ನು ಕೆಎಸ್‌ಆರ್‌ಟಿಸಿ ನೀಡಿದೆ. 'ಏಪ್ರಿಲ್ 7ರಿಂದ ಬಸ್‌ಗಳ ಕಾರ್ಯಾಚರಣೆ ಸಾಮಾನ್ಯ ಸ್ಥಿತಿಗೆ ಬರುವ ತನಕ ಕೆಲಸಕ್ಕೆ ಗೈರಾಗುವ ನೌಕರರ ವಿರುದ್ಧ 'ಕೆಲಸ ಮಾಡದಿದ್ದಾಗ ವೇತನವಿಲ್ಲ' ಎಂಬ ತತ್ವದ ಅನ್ವಯ ಕ್ರಮ ಕೈಗೊಳ್ಳಲಾಗುವುದು' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ಆದೇಶದಲ್ಲಿ ಹೇಳಿದ್ದಾರೆ.

ಸುಧಾ ಯುಗಾದಿ ಪ್ರಬಂಧ ಸ್ಪರ್ಧೆ: ಮುಸ್ತಾಫ ಪ್ರಥಮ

ಪ್ರಜಾವಾಣಿ ವಾರ್ತೆ

ಮುಸ್ತಾಫ್ ಅರ್ಪಣಾ ಯೋಗೀಂದ್ರ

ಬೆಂಗಳೂರು: 'ಸುಧಾ ಯುಗಾದಿ ಪ್ರಬಂಧ ಸ್ಪರ್ಧೆ 2021'ರ ಫಲಿತಾಂಶ ಪ್ರಕಟಗೊಂಡಿದ್ದು, ಮಂಗಳೂರಿನ ಕೆ.ಎಚ್. ಮುಸ್ತಾಫ ಅವರ 'ಲೋಕಲ್‌ಲಾರಿ ಅದ್ದಂಇಕನೆಂಬ ಉಪ್ಪಾಪ' ರಚನೆ ಮೊದಲ ಬಹುಮಾನ ಪಡೆದಿದೆ. ಹೈದರಾಬಾದ್‌ನ ಹೆಚ್.ಎಸ್. ಅರ್ಪಣಾ ಅವರ 'ಊರಿಲ್ಲದವರು' ಹಾಗೂ ಬ್ರಿಟನ್ ಕನ್ನಡಿಗ ಯೋಗೀಂದ್ರ ಮರವಂತೆ ಅವರ 'ನನ್ನ ಕಿಟಕಿ' ಪ್ರಬಂಧಗಳು ಕ್ರಮವಾಗಿ ಎರಡು ಮತ್ತು ಮೂರನೇ ಬಹುಮಾನ ಪಡೆದಿವೆ.

ಮೊದಲ ಮೂರು ಬಹುಮಾನ ಪಡೆದ ಪ್ರಬಂಧಗಳಿಗೆ ಕ್ರಮವಾಗಿ ₹10,000, ₹5,000 ಹಾಗೂ ₹3,000 ನಗದು ದೊರೆಯಲಿದೆ.

ನಂದಿನಿ ಹೆದ್ದುರ್ಗ (ದಿಸ್ ಪೀಪಲ್ ವಿಲ್ ನೆವರ್ ಚೇಂಜ್), ನಳಿನಿ ಭೀಮಪ್ಪ (ನೀರಿರಲು ಮನೆಯಲ್ಲಿ), ಬುಕ್ಕೆಟ್ಟಿ ಪ್ರವೀಣ (ನಮ್ಮೂರ ಒರತೆ), ಸಂತೆಬೆನ್ನೂರು ಫೈಜ್ನಟ್ರಾಜ್ (ಗುರುವೇ ನಿನ್ನ ಪಾದಕೆ) ಹಾಗೂ ಗೀತಾ ಪಿ.ಎಸ್. ('ಒಲೆ ಮಹಾತ್ಮೆ') ಅವರ ಪ್ರಬಂಧಗಳು ತೀರ್ಪುಗಾರರ ಮೆಚ್ಚುಗೆ ಪಡೆದಿವೆ.

ಮುನ್ನೂರಕ್ಕೂ ಹೆಚ್ಚು ಪ್ರಬಂಧಗಳು ಸ್ಪರ್ಧೆಗೆ ಬಂದಿದ್ದು, ಹಿರಿಯ ಲೇಖಕ ಅಗ್ರಹಾರ ಕೃಷ್ಣಮೂರ್ತಿ ಹಾಗೂ ವಿಮರ್ಶಕಿ ತಾರಿಣಿ ಶುಭದಾಯಿನಿ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದ್ದರು.

'ಸುಧಾ ಯುಗಾದಿ ಸಂಚಿಕೆ 2021' ಸದ್ಯದಲ್ಲೇ ಮಾರುಕಟ್ಟೆಗೆ ಬರಲಿದೆ. ಪ್ರತಿ ವರ್ಷವೂ ಸಾಹಿತ್ಯದ ಹೊಸ ರುಚಿಯನ್ನು ಓದುಗರಿಗೆ ಪರಿಚಯಿಸುವ ಪ್ರಯತ್ನವನ್ನು 'ಸುಧಾ ಯುಗಾದಿ ಸಂಚಿಕೆ'ಗಳು ನಿರಂತರವಾಗಿ ಮಾಡುತ್ತಿದ್ದು, ಪ್ರಬಂಧ, ಕಥೆ, ಕಾವ್ಯ ಪ್ರಕಾರಗಳ ಹೊಸ ಫಸಲು ವಿಶೇಷ ಸಂಚಿಕೆಯಲ್ಲಿದೆ.

ಐಡಿಬಿಐ ಬ್ಯಾಂಕ್
CIN:L65190MH2004GOI148838
ಐಡಿಬಿಐ ಬ್ಯಾಂಕ್ ಲಿ., ಮಿಷನ್ ರಸ್ತೆ ಶಾಖೆ: ರಿಟೈಲ್ ರಿಕವರಿ, 3ನೇ ಮಹಡಿ, ಐಡಿಬಿಐ ಹೌಸ್, # 58, ಮಿಷನ್ ರಸ್ತೆ, ಬೆಂಗಳೂರು–560027. ವೆಬ್‌ಸೈಟ್: www.idbibank.in

ವಾಸ್ತುಶಿಲ್ಪಿಗಳು ಮತ್ತು ಸೂಚನಾ ಫಲಕಗಳ ಗುತ್ತಿಗೆದಾರರ ಎಂಪ್ಯಾನೆಲ್‌ಮೆಂಟ್‌ಗಾಗಿ ಪೂರ್ವ ಅರ್ಹತೆ

ಐಡಿಬಿಐ ಬ್ಯಾಂಕ್ ಲಿಮಿಟೆಡ್ ಕರ್ನಾಟಕ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಶಾಖೆ/ಕಚೇರಿ/ಕೇಂದ್ರ/ವಸತಿಗೃಹ/ಘಟಕಗಳ ಮತ್ತು ಯಾವುದಾದರೂ ಹೊಸ ಸ್ಥಳಗಳಲ್ಲಿಯ ಶಾಖೆಗಳ ಸ್ಥಳಾಂತರ/ ನವೀಕರಣ ಕಾಮಗಾರಿಗಳಿಗಾಗಿ ವಾಸ್ತುಶಿಲ್ಪಿಗಳು ಮತ್ತು ಸೂಚನಾ ಫಲಕಗಳ ಗುತ್ತಿಗೆದಾರರ ಎಂಪ್ಯಾನೆಲ್‌ಗಾಗಿ ಪ್ರಸ್ತಾವನೆ ಸಲ್ಲಿಸಿದೆ. ಮೇಲಿನ ಕ್ಷೇತ್ರದಲ್ಲಿ ಪರಿಣಿತಿಯನ್ನು ಹೊಂದಿರುವ ಆಸಕ್ತ ಗುತ್ತಿಗೆದಾರರು ಎಲ್ಲಾ ಅಗತ್ಯ ಪೂರಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕ : 15.04.2021. ಪ್ರೊಫಾರ್ಮ ಮತ್ತು ಇತರೆ ವಿವರಗಳನ್ನು ನಮ್ಮ ವೆಬ್‌ಸೈಟ್: www.idbibank.in under Notices-Tendersನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಕಾರ್ಯಸೂಚಿ, ತಿದ್ದುಪಡಿ, ದಿನಾಂಕಗಳ ವಿಸ್ತರಣೆ, ಸ್ಪಷ್ಟನೆಗಳು, ಅರ್ಜಿದಾರರ ಪ್ರಶ್ನೆಗಳಿಗೆ ಉತ್ತರಗಳು ಯಾವುದಾದರೂ ಇದ್ದಲ್ಲಿ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸ್ಥಳ: ಬೆಂಗಳೂರು ಸಹಿ/–
ದಿನಾಂಕ: 31.03.2021 ಚೀಫ್ ಜನರಲ್ ಮ್ಯಾನೇಜರ್ – ಬೆಂಗಳೂರು ವಲಯ

ಪಂಚಾಯತ್ ರಾಜ್ ಆಯುಕ್ತಾಲಯ
ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಬೆಂಗಳೂರು–560009
ಇ–ಮೇಲ್: prcdeputysecreatryadm@gmail.com

ಕಡತ ಸಂಖ್ಯೆ: ಕೆಪಿಆರ್‌ಸಿ/ಸಿಎಸ್‌ಎಂ/40/2020 ದಿನಾಂಕ: 29–03–2021

ಟೆಂಡರ್ ಪ್ರಕಟಣೆ

ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವ ಸಲುವಾಗಿ ಇ–ಟೆಂಡರ್ ಮೂಲಕ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿಯನ್ನು ಸಲ್ಲಿಸುವ ಪ್ರಕ್ರಿಯೆಯು ದಿನಾಂಕ: **31.03.2021** ರಿಂದ ಪ್ರಾರಂಭವಾಗಿ **09.04.2021** ರಂದು ಮುಕ್ತಾಯಗೊಳ್ಳುತ್ತದೆ. ಇಚ್ಛೆಯುಳ್ಳ ಟೆಂಡರ್‌ದಾರರು **www.eproc.karnataka.gov.in** ಮೂಲಕ ದಿನಾಂಕ: **09.04.2021ರ ಸಂಜೆ 4.00 ಗಂಟೆಯೊಳಗೆ** ಅರ್ಜಿಯನ್ನು ಸಲ್ಲಿಸಬಹುದಾಗಿದೆ ಹಾಗೂ ಹೆಚ್ಚಿನ ವಿವರಗಳಿಗೆ ಆಯುಕ್ತಾಲಯವನ್ನು ಸಂಪರ್ಕಿಸಬಹುದಾಗಿದೆ.

DIPR/DDU/YC/3277/2020-21 ಸಹಿ/– ಉಪಕಾರ್ಯದರ್ಶಿ (ಆಡಳಿತ)

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ರಾಮನಗರ ಜಿಲ್ಲಾ ಪಂಚಾಯತ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ರಾಮನಗರ ವಿಭಾಗ, ರಾಮನಗರ.

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂ.49/ಕಾಅ/ಗ್ರಾ.ಕು.ನೀ.&ನೈ.ವಿ/ರಾ/ಟೆಂಡರ್/ ಸ.ಇಂ–4/JJM/3087-3097/2020-21 ದಿನಾಂಕ: 24.03.2021

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ **JJM** ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ರಾಮನಗರ ಜಿಲ್ಲೆಯ ಕನಕಪುರ ಮತ್ತು ಮಾಗಡಿ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ವಿವರಗಳು ಕಾಮಗಾರಿಗಳನ್ನು ನಿರ್ವಹಿಸಲು ಈ ಕೆಳಕಂಡಂತಿವೆ. ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ: **ರೂ.172.43 ಲಕ್ಷಗಳು,** ಇ.ಎಂ.ಡಿ: **ರೂ.2.59 ಲಕ್ಷಗಳು,** ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ: **ರೂ.104.09 ಲಕ್ಷಗಳು,** ಇ.ಎಂ.ಡಿ: **ರೂ.2.00 ಲಕ್ಷಗಳು,** ಕಾಲಾವಧಿ: **06** ತಿಂಗಳು. ಬಿಡ್ ಪೂರ್ವಭಾವಿ ಸಭೆ: **01.04.2021 ಬೆಳಗ್ಗೆ: 11.00 ಗಂಟೆಗೆ,** ಸ್ಥಳ: ಕಾರ್ಯಪಾಲಕ ಅಭಿಯಂತರರ ಕಛೇರಿ, 3ನೇ ಮಹಡಿ, ಪಂಚಾಯತ್ ಭವನ, ರಾಮನಗರ. ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ ದಿನಾಂಕ: **12.04.2021 ಸಂಜೆ 5.30 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **15.04.2021 ಬೆಳಗ್ಗೆ 11.00 ಗಂಟೆಯ** ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ: **17.04.2021 ಬೆಳಗ್ಗೆ 11.00 ಗಂಟೆಯ** ನಂತರ. ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ/ವೆಬ್‌ಸೈಟ್ **www.eproc.karnataka.gov.in** ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ವಾಸಾಸಂಇ/ರಾಮನಗರ/ಶಿರಡಿ ಸಾಯಿ/561/2020–21 ರಾಮನಗರ ವಿಭಾಗ, ರಾಮನಗರ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ತೋಟಗಾರಿಕೆ ಅಧೀಕ್ಷಕರ ಕಚೇರಿ (ಪಶ್ಚಿಮ), 8ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003.
ಸಂಖ್ಯೆ: ತೋ.ಅ(ಪ)/ಪಿಆರ್/01–02/2020–21 ದಿನಾಂಕ: 30.03.2021

ಟೆಂಡರ್ ರದ್ದುಪಡಿಸಿರುವ ಬಗ್ಗೆ

ಈ ಕಚೇರಿಯ ಪ್ರಕಟಣಾ ಸಂಖ್ಯೆ: ತೋ.ಅ(ಪ)ಇ–ಟೆಂಡರ್/ಪಿಆರ್/01/2020–21 ಮತ್ತು ಪ್ರಕಟಣಾ ಸಂಖ್ಯೆ: ತೋ.ಅ(ಪ)ಇ–ಟೆಂಡರ್/ಪಿಆರ್/02/2020–21 ದಿನಾಂಕ: 26.03.2021 ರಲ್ಲಿ 2020–21 ಸಾಲಿನ ಪಶ್ಚಿಮ ವಲಯದ ಉದ್ಯಾನವನಗಳ ನಿರ್ವಹಣೆ ಕೆಲಸಗಳಿಗಾಗಿ ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಿಸಲಾಗಿತ್ತು. ಸದರಿ ಟೆಂಡರ್ ಪ್ರಕಟಣೆಯ ದಿನಾಂಕ: 26.03.2021 ರಂದು ಡೆಕ್ಕನ್ ಹೆರಾಲ್ಡ್ ಆಂಗ್ಲ ದಿನ ಪತ್ರಿಕೆ, ಪ್ರಜಾವಾಣಿ ಮತ್ತು ಉದಯವಾಣಿ ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುತ್ತದೆ.

ತಾಂತ್ರಿಕ ಕಾರಣಗಳಿಂದಾಗಿ ಸದರಿ ಪ್ರಕಟಣೆಗಳನ್ನು ರದ್ದುಪಡಿಸಲಾಗಿದೆ. ಮುಂದಿನ ಪ್ರಕಟಣೆಯನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು.

ಸಹಿ/–
ತೋಟಗಾರಿಕೆ ಅಧೀಕ್ಷಕರು (ಪಶ್ಚಿಮ)

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ ಗ್ರೀನ್ ಟಾಕ್ | ಪ್ರಕೃತಿ ಮಡಿಲ ಮಾತು

ಕೆರೆ ಹರಾಜಾಗಿತ್ತು...

ಬೆಂಗಳೂರಿನಲ್ಲಿ ಸಾಲ ವಸೂಲಿಗೆ ಬ್ಯಾಂಕ್ ಕೆರೆಯನ್ನೇ ಹರಾಜು ಮಾಡಿತ್ತು. 12 ವರ್ಷ ಕಾನೂನು ಹೋರಾಟ ಮಾಡಿದರೂ, 83ರ ಇಳಿವಯಸ್ಸಿನಲ್ಲಿ ಇಂದಿಗೂ ಹೋರಾಟ ನಿಂತಿಲ್ಲ...

https://bit.ly/2PH8QpU

'ಪ್ರತಿ ಬುಧವಾರ 'ಇನ್‌ಸ್ಪೆಕ್ಷನ್ ಡೇ'

ಉಡುಪಿ: ಆರೋಗ್ಯ ಇಲಾಖೆಯಲ್ಲಿ ಪ್ರತಿ ಬುಧವಾರ 'ಇನ್‌ಸ್ಪೆಕ್ಷನ್ ಡೇ' ನಡೆಯಲಿದ್ದು, ಸಚಿವರಿಂದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರವರೆಗೂ ಅವರವರ ಕಾರ್ಯಕ್ಷೇತ್ರ ವ್ಯಾಪ್ತಿಯ ವ್ಯವಸ್ಥೆಯನ್ನು ಖುದ್ದು ಪರಿಶೀಲಿಸಿ ಸರಿಪಡಿಸಬೇಕು ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಮಂಗಳವಾರ ಹೇಳಿದರು.

ಆರೋಗ್ಯ ಕ್ಷೇತ್ರದ ಗುಣಮಟ್ಟ ಸುಧಾರಣೆ ಹೆಚ್ಚಿಸಲು 'ಇನ್‌ಸ್ಪೆಕ್ಷನ್ ಡೇ' ಮುಂದಿನ ವಾರದಿಂದ ಜಾರಿ ಬರಲಿದೆ. ನಿತ್ಯದ ಇಲಾಖಾ ಚಟುವಟಿಕೆಗಳ ಕುರಿತು ಅಧಿಕಾರಿಗಳು ಡೈರಿಯಲ್ಲಿ ನಮೂದಿಸಬೇಕು. ವೇತನ, ಭತ್ಯೆ ಹೆಚ್ಚಳ, ಬಡ್ತಿ ನೀಡುವಾಗ ಈ ಅಂಶಗಳನ್ನು ಪರಿಗಣಿಸಲಾಗುವುದು ಎಂದರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ.
Ph No.08539-220054
ಕ್ರ.ಸಂ: ಕಾನಿಇಂ/ಸನೀಮತ್ತುಅ.ಅ.ವಿ/ಕೊಪ್ಪಳ/ತಾಶಾ/2020–21/830 ದಿ:26.03.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೊಪ್ಪಳ ಜಿಲ್ಲೆಯ 01 ಕಾಮಗಾರಿ ಮತ್ತು ರಾಯಚೂರು ಜಿಲ್ಲೆಯ 02 ಕಾಮಗಾರಿಗಳಿಗೆ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರ್‌ಗಿಟ್ಟ ಕನಿಷ್ಟ ಮೊತ್ತ ರೂ. 13.51 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. 44.62 ಲಕ್ಷಗಳಿರುತ್ತದೆ. ಟೆಂಡರ್‌ಗಳನ್ನು ದಿನಾಂಕ: 29.03.2021 ರಿಂದ 06.04.2021 ಸಂಜೆ 5.30 ಗಂಟೆಯವರೆಗೆ ಸಲ್ಲಿಸಬಹುದು. ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ಡನ್ನು ದಿನಾಂಕ: 08.04.2021 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಕಾಮಗಾರಿ ವಿವರ ಇತ್ಯಾಧಿಗಳನ್ನು "ಇ–ಪ್ರಕ್ಯೂರ್‌ಮೆಂಟ್. ಹೆಲ್ಪ್ ಡೆಸ್ಕ್‌ನಿಂದ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃಧ್ಧಿ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/514/ಎಂಸಿಎ/2020–21

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಚಿತ್ರದುರ್ಗ
ಸಂಖ್ಯೆ: ಕಾಇಂ:ಲೋವಿಚಿ:ಟೆಂಡರ್ ವಿಸ್ತರಣೆ–117:2020–21/3967 ದಿ:22.03.2021

ಇ–ಟೆಂಡರ್ ವಿಸ್ತರಣೆ

ಈ ಮೂಲಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ ಈ ಕಛೇರಿ ಇ–ಟೆಂಡರ್ ಪ್ರಕಟಣೆ ಸಂಖ್ಯೆ: ಕಾಇಂ:ಲೋವಿಚಿ: ಟೆಂಡರ್–117:2020–21 ದಿನಾಂಕ: 12.03.2021 ರಲ್ಲಿ ಆಹ್ವಾನಿಸಿದ ಕಾಮಗಾರಿಗಳ ಟೆಂಡರ್ ಅವಧಿಯನ್ನು ಈ ಕೆಳಕಂಡಂತೆ ಮರು ನಿಗಧಿಪಡಿಸಿದೆ.
ಕಾಮಗಾರಿಯ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ:– ಟೆಂಡರ್ ಬಗ್ಗೆ ವಿಚಾರಿಸಲು/ ಮಾಹಿತಿ ಪಡೆಯಲು ಕೊನೆಯ ದಿನಾಂಕ 31.03.2021 ಸಮಯ 17–30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 01.04.2021 ಸಮಯ 16–00 ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 03.04.2021 ಸಮಯ 16–01 ಅರ್ಹ ಗುತ್ತಿಗೆದಾರರು ವೆಬ್‌ಸೈಟ್ **www.eproc.karnataka.gov.in/eportal/index.seam** ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

DIPR/CTA/MCA/928/2020-21 ಸಹಿ/– ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ, ಚಿತ್ರದುರ್ಗ.

ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಛೇರಿ
ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್
ಕಮಲಾಪುರ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.
(ಕರ್ನಾಟಕ ಮೃಗಾಲಯ ಪ್ರಾಧಿಕಾರದ ಒಂದು ಘಟಕ)

ಸಂಖ್ಯೆ:ಅಬಿವಾಮೃ/ಟೆ.ಕಾ./ಹು.ಆ./ವಿವ-90/67/2020-21 ದಿನಾಂಕ: 29-03-2021

ಇ–ಟೆಂಡರ್ ಪ್ರಕಟಣೆ

2020–21ನೇ ಸಾಲಿನಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಶ್ರೀ ಅಟಲ್ ಬಿಹಾರಿ ವಾಜಪೇಯಿ ಮೃಗಾಲಯದಲ್ಲಿ ಹುಲಿ ಆವರಣ ನಿರ್ಮಾಣ ಸಂಬಂಧ ಕಾಮಗಾರಿಗೆ ಕರ್ನಾಟಕ ಅರಣ್ಯ ಇಲಾಖೆ/ಕೆ.ಪಿ.ಡಬ್ಲ್ಯೂ.ಡಿ./ಸಿ.ಪಿ.ಡಬ್ಲ್ಯೂ.ಡಿ./ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ನಿಯಮ 2000 ಮತ್ತು ಕಾಯ್ದೆ 1999ರ ಇ–ಪೋರ್ಟಲ್ ಪ್ರಕಾರ ಟೆಂಡರ್ ಕರೆಯಲಾಗಿದೆ.

ಕ್ರಮ ಸಂಖ್ಯೆ	ಇಂಡೆಂಟ್ ಸಂಖ್ಯೆ
1	ZAK/2020-21/OW/WORK_INDENT442

ಈ ಟೆಂಡರ್ ಪ್ರಕಟಣೆ ಪ್ರತಿಯು www.eproc.Karnataka.gov.in ಇಲ್ಲಿ ಲಭ್ಯವಿರುತ್ತದೆ. ಟೆಂಡರ್ ವಿವರಗಳು ಇ–ಪ್ರಕ್ಯೂರಮೆಂಟ್‌ನಲ್ಲಿ ಲಭ್ಯವಾಗುವ ದಿನಾಂಕ: **29–03–2021, ಕೊನೆಯ ದಿನಾಂಕ: 07–04–2021 ಸಾಯಂಕಾಲ 5.00 ಗಂಟೆವರೆಗೆ.** ತಾಂತ್ರಿಕ ಬಿಡ್ ಟೆಂಡರ್ ತೆರೆಯುವ ದಿನಾಂಕ: **09–04–2021 ಸಾಯಂಕಾಲ 5.05 ಗಂಟೆಗೆ** ಮತ್ತು ಆರ್ಥಿಕ ಬಿಡ್ ಟೆಂಡರ್ ತೆರೆಯುವ ದಿನಾಂಕ: **11–04–2021 ಸಾಯಂಕಾಲ 4.05 ಗಂಟೆಯ ನಂತರ.** ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಹಾಕಿರುವ ಟೆಂಡರ್ ಪ್ರಕಟಣೆಯಿಂದ ಪಡೆಯಬಹುದು.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಶ್ರೀ ಅಟಲ್‌ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್, ಕಮಲಾಪುರ. ಹೊಸಪೇಟೆ ತಾ॥. ಬಳ್ಳಾರಿ ಜಿಲ್ಲೆ.
ವಾಸಾಸಂಇ/ಬಳ್ಳಾರಿ–ಹೊಸಪೇಟೆ/31/ ಅಲಕ್‌ನಂದ/2020-21

DR.SHIVARAMA KARANTHA PILIKULA NISARGA DHAMA
Administrative Office, Moodushedde, Vamanjoor Post, Mangalore–575028 Ph: 2263565
No. PND.CR: 206/PND-Tenders/2020-21 Date: 29.03.2021

TENDER NOTIFICATION

Tenders are invited by the undersigned from eligible contractors for the work at Dr. Shivarama Karantha Pilikula Nisargadhama, Mangaluru.

Name of work: **(1)** Purchase of Anasthesia machine (through e-procurement only) Approx. value of work **Rs. 4.14 Lakhs (2)** Providing water supply line and sprinkler to creation of green belt area Phase II in Pilikula Biological Park.(PBP) (e-proc only) Approx. value of work **Rs. 1.62 Lakhs (3)** Clearing /weeding grass in creation of Green Belt Phase II plots in PBP. (through e-proc only) Approx. value of work **Rs.1.49 Lakhs (4)** Purchase of surgery table and compound microscope to PBP Approx. value of work **Rs. 0.88 Lakhs (5)** Fencing from Nursery green house to Urban Eco Park gate. Approx. value of work **Rs. 0.48 Lakhs (6)** Replacing HDPE rain water pipe near Zoo entrance gate. Approx. value of work **Rs. 0.40 Lakhs**

Cost of document Rs.: Sl.No. 1 to 3 **Refer e-portal** & Sl.No. 4 to 6 **Rs. 500/-**.
Eligibility: Sl.No. 1&4 **Authorised dealer** & Sl No. 2,3,5, 6 **PWD Class IV and above Civil Contractors**. Period of completion: Sl.No. 1 to 5 - 15 days & Sl.No.6 - 1month.

Last date for submission of tender on **15.04.2021 upto 4.00 P.M.** Tender documents will be issued for Sl.No. **4 to 6, are from 08.04.2021 to 15.04.2021 upto 3.00 P.M.** and will be opened on same day at **4.30 PM**. and for Sl.No.1 & 3 on **16.04.2021** at **4.30 PM.** For further details and terms/ conditions etc. contact above office during office hours or the website **www.pilikula.com**

Sd/- Executive Director

ಕರ್ನಾಟಕ ಸರ್ಕಾರ
ಕೆಶಿಪ್ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ
(ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಪಿಡಬ್ಲ್ಯೂಡಿ ಅನೆಕ್ಸ್ ಬಿಲ್ಡಿಂಗ್, ಕೆ.ಆರ್. ಸರ್ಕಲ್, ಬೆಂಗಳೂರು – 560 001.
ದೂರವಾಣಿ : 080–22226262,080–2212 6758/59/60/61, ಫ್ಯಾಕ್ಸ್: 080–22229666
ಇ–ಮೇಲ್: piukship@gmail.com

ಸಂಖ್ಯೆ. ಪಿಐಯು/ಕೆಶಿಪ್–IV/ಇಎಪಿ/ಆರ್‌ಎಫ್‌ಪಿ/ಎಸ್‌ಓಸಿ/2020–21/3336 ದಿನಾಂಕ : 29–03–2021

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್)

ಕರ್ನಾಟಕ ಸಂಪರ್ಕ – ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ – IV (ಕೆಶಿಪ್– IV) ಕ್ಯುಸಿಬಿಎಸ್ (ಲಂಪ್‌ಸಮ್) ನ ಅಡಿಯಲ್ಲಿ ರಸ್ತೆಗಳ ಆದ್ಯತೆ ನೀಡಿಕೆ, ಆರ್ಥಿಕ ಶಕ್ಯತೆ ವರದಿಗಳ ತಯಾರಿಕೆ, ಸಂಗ್ರಹಣಾ ದಾಖಲೆಗಳ ತಯಾರಿಕೆಗಳಿಗಾಗಿ ಡಿಪಿಆರ್ ಸಮಾಲೋಚಕರನ್ನು (ಸಮಾಲೋಚನಾ ಸೇವೆಗಳು) ನಿಯೋಜಿಸಲು ಸಮಾಲೋಚಕರ ಆಯ್ಕೆಯ ಸಂಗ್ರಹಣೆ.

1) ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಕೆಶಿಪ್) ಇವರು ಕರ್ನಾಟಕ ಸಂಪರ್ಕ – ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ – IV (ಕೆಶಿಪ್– IV) ಕ್ಯುಸಿಬಿಎಸ್ (ಲಂಪ್‌ಸಮ್) ನ ಅಡಿಯಲ್ಲಿ ರಸ್ತೆಗಳ ಆದ್ಯತೆ ನೀಡಿಕೆ, ಆರ್ಥಿಕ ಶಕ್ಯತೆ ವರದಿಗಳ ತಯಾರಿಕೆ ಮತ್ತು ಸಂಗ್ರಹಣಾ ದಾಖಲೆಗಳ ತಯಾರಿಕೆಗಳಿಗಾಗಿ ಡಿಪಿಆರ್ ಸಮಾಲೋಚಕರನ್ನು (ಸಮಾಲೋಚನಾ ಸೇವೆಗಳು) ನಿಯೋಜಿಸಲು ನೆರವು ನೀಡಲು ಹೆಸರಾಂತ ಸಮಾಲೋಚನಾ ಸಂಸ್ಥೆಗಳಿಂದ ತಾಂತ್ರಿಕ ಮತ್ತು ಆರ್ಥಿಕ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

ಆರ್‌ಎಫ್‌ಪಿ ಸಂಖ್ಯೆ.	ಗುತ್ತಿಗೆಯ ವಿವರಗಳು	ಸಮಾಲೋಚನಾ ಸೇವೆಗಳ ಅವಧಿ
ಕೆಶಿಪ್– IV–ಇಎಪಿ/ಆರ್‌ಎಫ್‌ಪಿ/ಎಸ್‌ಓಸಿ	**2943 ಕಿ.ಮೀ.ಗಳಿಗಾಗಿ ಕರ್ನಾಟಕ ಸಂಪರ್ಕ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ – IV (ಕೆಶಿಪ್ – IV) ಕ್ಯುಸಿಬಿಎಸ್ (ಲಂಪ್‌ಸಮ್) ನ ಅಡಿಯಲ್ಲಿ ರಸ್ತೆಗಳ ಆದ್ಯತೆ ನೀಡಿಕೆ, ಆರ್ಥಿಕ ಶಕ್ಯತೆ ವರದಿಗಳ ತಯಾರಿಕೆ, ಸಂಗ್ರಹಣಾ ದಾಖಲೆಗಳ ತಯಾರಿಕೆಗಳಿಗಾಗಿ ಡಿಪಿಆರ್ ಸಮಾಲೋಚಕರನ್ನು (ಸಮಾಲೋಚನಾ ಸೇವೆಗಳು) ನಿಯೋಜಿಸಲು ಸಮಾಲೋಚಕರ ಆಯ್ಕೆ**	6 ತಿಂಗಳು

(2) ಇ–ಪ್ರೊಕ್ ಇಂಡೆಂಟ್ ಸಂಖ್ಯೆ. ಪಿಐಯು/ಕೆಶಿಪ್– IV/ಐಇ/ಇಎಪಿ/ಆರ್‌ಎಫ್‌ಪಿ/ಎಸ್‌ಓಸಿ/2020–21/3336 ದಿನಾಂಕ : 29–03–2021 (3) ಗುಣಮಟ್ಟ ಮತ್ತು ವೆಚ್ಚ ಆಧಾರಿತ ಆಯ್ಕೆ ವಿಧಾನ (ಕ್ಯುಸಿಬಿಎಸ್) ಆಧಾರದಲ್ಲಿ ಆಯ್ಕೆಯು ನಡೆಯಲಿದೆ. (4) ಇಚ್ಛೆಯುಳ್ಳ ಅರ್ಜಿದಾರರು ಬಿಡ್ಡಿಂಗ್ ದಾಖಲೆಗಳನ್ನು (ಆರ್‌ಎಫ್‌ಪಿ) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.eproc.karnataka.gov.in** ನಲ್ಲಿ ದಿನಾಂಕ : 31–03–2021 ರಿಂದ ಪಡೆಯಬಹುದು. (5) ಆರ್‌ಎಫ್‌ಪಿ ಆಹ್ವಾನ ಪತ್ರದಲ್ಲಿ ಸೂಚಿತವಾದ ಅರ್ಹತಾ ಅಗತ್ಯತೆಗಳಿಗೆ ಸರಿಹೊಂದುವ ಅರ್ಜಿದಾರರು ಭಾಗವಹಿಸಬಹುದು. (6) ಪ್ರಸ್ತಾವನೆ–ಪೂರ್ವ ಸಭೆಯು ದಿನಾಂಕ : **16–04–2021 ರಂದು 11.30 ಗಂಟೆಗೆ** ನಡೆಯಲಿದೆ. ಟೆಂಡರ್ ದಾಖಲೆಗಳಿಗೆ ಸಂಬಂಧಿಸಿದಂತೆ ವಿಚಾರಣೆಗಳನ್ನು ದಿನಾಂಕ : 08–04–2021ಕ್ಕೆ ಮುಂಚಿತವಾಗಿ ಬರಹದಲ್ಲಿ / ಇಮೇಲ್ ಮೂಲಕ ಸಲ್ಲಿಸಬೇಕು. (7) ತಾಂತ್ರಿಕ ಮತ್ತು ಆರ್ಥಿಕ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **29–04–2021, 17.00 ಗಂಟೆಗಳು. (8)** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : **03–05–2021 ರಂದು 11.30 ಗಂಟೆಗೆ. (9)** ಆರ್‌ಎಫ್‌ಪಿ ದಾಖಲೆಯಲ್ಲಿನ ಸೂಚನೆಗಳಿಗೆ ಅನುಸಾರವಾಗಿ ತಾಂತ್ರಿಕ ಪ್ರಸ್ತಾವನೆ, ಇಎಂಡಿ ಮತ್ತು ಆರ್ಥಿಕ ಪ್ರಸ್ತಾವನೆಯನ್ನು ಇ–ನಮೂನೆಯಲ್ಲಿ ಸಲ್ಲಿಸಬೇಕು.
ದಯವಿಟ್ಟು ಗಮನಿಸಿ, ಇನ್ನು ಮುಂದೆ ಕಾರ್ಯಚಟುವಟಿಕೆಗಳಲ್ಲಿ ಯಾವುದೇ ಬದಲಾವಣೆಗಳಿದ್ದರೂ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ ಮತ್ತು ಬದಲಾವಣೆಗಳನ್ನು ಇ–ಪೋರ್ಟಲ್ / ಕೆಶಿಪ್ ವೆಬ್‌ಸೈಟ್ **https://www.kship.in** ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–
ಯೋಜನಾ ನಿರ್ದೇಶಕರು,
ವಾ.ಸಂ.ಇ/ಬೆಂ.ನಗರ/RO. No. 3266/2020–21 ಕೆಶಿಪ್, ಬೆಂಗಳೂರು.

ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಬೊಮ್ಮನಹಳ್ಳಿ ಯೋಜನೆ ವಿಭಾಗ, ಬೇಗೂರು ಮುಖ್ಯರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು– 560 068
ಸಂಖ್ಯೆ: ಬೃಬೆಂಮಪಾ/ಕಾಪಾಅ/ಬೊಯೋವಿ/ಟೆಂಡರ್–3/2020–21 ದಿನಾಂಕ: 29.03.2021

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
(ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ–4) (ದ್ವಿಲಕೋಟೆ ಟೆಂಡರ್)

ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ಯೋಜನೆ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಬಿಡಬ್ಲ್ಯೂಎಸ್‌ಎಸ್‌ಬಿ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್ /ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (₹.ಲಕ್ಷಗಳಲ್ಲಿ)
	ಪ್ಯಾಕೇಜ್–1	
1.	ದೇವರಚಿಕ್ಕನಹಳ್ಳಿಯಲ್ಲಿ ಆಟದ ಮೈದಾನವನ್ನು ಅಭಿವೃದ್ಧಿ ಮಾಡುವುದು.	1100.00
	ಪ್ಯಾಕೇಜ್–2	
2.	1. ವಾರ್ಡ್ ಸಂಖ್ಯೆ–175ರ ದೇವರಚಿಕ್ಕನಹಳ್ಳಿ ಈಜುಕೊಳದಲ್ಲಿ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. 2. ಬೊಮ್ಮನಹಳ್ಳಿ ಕ್ಷೇತ್ರದ ಬೃ.ಬೆಂ.ಮ.ಪಾಲಿಕೆ ಬೊಮ್ಮನಹಳ್ಳಿ ವಲಯದಲ್ಲಿ ಈಜುಕೊಳ ನಿರ್ಮಾಣ ಮಾಡುವುದು.	1400.00
	ಪ್ಯಾಕೇಜ್–3	
3.	1. ಬೊಮ್ಮನಹಳ್ಳಿ ಕ್ಷೇತ್ರದ ಬೃ.ಬೆಂ.ಮ.ಪಾಲಿಕೆ ವಾರ್ಡ್ ಸಂಖ್ಯೆ–175ರ ಆಡಿಟೋರಿಯಮ್‌ನಲ್ಲಿ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. 2. ಬೊಮ್ಮನಹಳ್ಳಿ ಕ್ಷೇತ್ರದ ಬೃ.ಬೆಂ.ಮ.ಪಾಲಿಕೆ ವಾರ್ಡ್ ಸಂಖ್ಯೆ–175ರಲ್ಲಿ ಆಡಿಟೋರಿಯಮ್ ನಿರ್ಮಾಣ ಮಾಡುವುದು.	1700.00
	ಪ್ಯಾಕೇಜ್–4	
4.	1. ಬೊಮ್ಮನಹಳ್ಳಿ ವಾರ್ಡ್ ಸಂಖ್ಯೆ–175ರ ದೇವರಚಿಕ್ಕನಹಳ್ಳಿ ಬಿಡಿಎ ಬಡಾವಣೆಯ ಉದ್ಯಾನವನದಲ್ಲಿ ಸಮಗ್ರ ಅಭಿವೃದ್ಧಿ ಮಾಡುವುದು. 2. ಬೊಮ್ಮನಹಳ್ಳಿ ವಾರ್ಡ್ ಸಂಖ್ಯೆ–175ರ ದೇವರಚಿಕ್ಕನಹಳ್ಳಿಯ ಉದ್ಯಾನ–ವನದಲ್ಲಿ ಸುಧಾರಣೆ ಮತ್ತು ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. 3. ವಾರ್ಡ್ ಸಂಖ್ಯೆ–186 ಜರಗನಹಳ್ಳಿಯ ಸತ್ಯ ಗಣಪತಿ ದೇವಸ್ಥಾನದ ಹಿಂಭಾಗ ಆಟದ ಮೈದಾನದಲ್ಲಿ ಗ್ಯಾಲರಿ ನಿರ್ಮಾಣ ಮತ್ತು ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 4. ವಾರ್ಡ್ ಸಂಖ್ಯೆ–186 ಜರಗನಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಹೆಚ್ಚುವರಿ ತರಗತಿ ಕೊಠಡಿ ಬ್ಲಾಕ್‌ಗಳ ನಿರ್ಮಾಣ ಹಾಗೂ ಹೆಚ್ಚುವರಿ ಸಲಕರಣೆಗಳನ್ನು ಒದಗಿಸುವುದು. 5. ವಾರ್ಡ್ ಸಂಖ್ಯೆ–188 ಬಿಳೇಕಹಳ್ಳಿಯಲ್ಲಿ ಆಟದ ಮೈದಾನಕ್ಕೆ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. 6. ವಾರ್ಡ್ ಸಂಖ್ಯೆ–189 ಹೊಂಗಸಂದ್ರದಲ್ಲಿ 4ನೇ ಮುಖ್ಯರಸ್ತೆಯ ಸ್ಮಶಾನದ ಬಳಿ ಗ್ರಂಥಾಲಯ, ಬೆಂಗಳೂರು ಒನ್ ಮತ್ತು ಬೃ.ಬೆಂ.ಮ.ಪಾಲಿಕೆ ಕಚೇರಿ ಕಟ್ಟಡ ನಿರ್ಮಾಣ ಮಾಡುವುದು. 174, 186, 189, 191 (2ನೇ ಕರೆ)	1000.00
5.	ಸ್ವಚ್ಛ ಭಾರತ ಆಟದ ಮೈದಾನದಲ್ಲಿ ಆರ್‌ಸಿಸಿ ತಡೆಗೋಡೆ ನಿರ್ಮಾಣ ಮಾಡುವುದು. (ಈ ಮುಂಚಿನ ಲ್ಯಾಂಡ್‌ಫಿಲ್ ಸೈಟ್)	400.00
ಇಎಂಡಿ (₹.ಲಕ್ಷಗಳಲ್ಲಿ)	ಇಎಂಡಿ ಘೋಷಣೆ ಪ್ರಮಾಣ ಪತ್ರ	

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **30.04.2021**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (2) ಬಿಡ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಬೊಮ್ಮನಹಳ್ಳಿ ಯೋಜನೆ ವಿಭಾಗ, ಬೇಗೂರು ಮುಖ್ಯರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು–560 068 ಇಲ್ಲಿ ದಿನಾಂಕ **17.04.2021**ರ ಬೆಳಿಗ್ಗೆ **11:00** ಗಂಟೆಗೆ ನಡೆಸಲಾಗುವುದು. (3) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: **12.04.2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (4) ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **30.04.2021**ರ ಸಂಜೆ **4:00** ಗಂಟೆಗೆ ಅಥವಾ ಮುಂಚಿತವಾಗಿ. (5) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಬೊಮ್ಮನಹಳ್ಳಿ ಯೋಜನೆ ವಿಭಾಗ ಇಲ್ಲಿ ದಿನಾಂಕ **03.05.2021**ರ ಬೆಳಿಗ್ಗೆ **11:30** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು – ಬೊಮ್ಮನಹಳ್ಳಿ ಯೋಜನೆ ವಿಭಾಗ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಿಮ್ಮ ಉತ್ತರವು ಎ ಬಿ ಸಿ ಸಾಲಿನ ಕ್ರಮದಲ್ಲ ಇದ್ದು, ಪ್ರತಿ ಸಾಲು ಎಡದಿಂದ ಬಲಕ್ಕೆ ಇರಬೇಕು.

ಮಾದರಿ ಉದಾಹರಣೆಗೆ ಇಲ್ಲಿ ಸ್ಕ್ಯಾನ್ ಮಾಡಿ

ಪ್ರಜಾವಾಣಿ ಚಿತ್ರಬಂಧ

ಕಣ್ಣಿಗೆ ಗೊಂದಲವಾಗಿ ಕಾಣುವ ಚಿತ್ರವನ್ನು ಕಲ್ಪನೆಯಲ್ಲಿ ಚಿತ್ರಿಸಿ ಬಹುಮಾನ ಗೆಲ್ಲಿ

ಹೆಚ್ಚು ಹೆಚ್ಚು ಭಾಗವಹಿಸಿ ಬಂಪರ್ ಬಹುಮಾನವನ್ನು ಗೆಲ್ಲುವ ಅವಕಾಶ ನಿಮ್ಮದಾಗಿಸಿಕೊಳ್ಳಿ. ಈ ಸ್ಪರ್ಧೆಯು ಒಂದು ವಾರಕ್ಕೆ ಮೂರು ದಿನಗಳು ಮಾತ್ರ ಪ್ರಕಟವಾಗುವುದು.

ಬಂಪರ್ ಬಹುಮಾನ* ONE PLUS 7 PRO ಮೊಬೈಲ್

14 ಅದೃಷ್ಟಶಾಲಿಗಳಿಗೆ, ಪ್ರತಿದಿನ ₹500 ಬೆಲೆಯ ಅಮೆಜಾನ್ ಗಿಫ್ಟ್ ವೌಚರ್

ಸರಿಯಾದ ಉತ್ತರದ ಕ್ರಮವನ್ನು PVCB A <3ಸಂಖ್ಯೆ> B <3ಸಂಖ್ಯೆ> C <3ಸಂಖ್ಯೆ> ಎಂದು ಟೈಪ್ ಮಾಡಿ, ಇಂದು ರಾತ್ರಿ 8ರೊಳಗೆ 9246020020ಗೆ SMS ಮಾಡಿ.

ಉತ್ತರಿಸುವ ಕ್ರಮದ ಉದಾಹರಣೆ: PVCB A143 B276 C859

ನಿನ್ನೆಯ ಉತ್ತರ: A851 B692 C374

*ಷರತ್ತುಗಳು ಅನ್ವಯ

ಯುವತಿ ಹೇಳಿಕೆ ಪಡೆಯಲು ಅನುಮತಿ ಕೋರಿದ ತನಿಖಾಧಿಕಾರಿ ಕವಿತಾ

ವಿಚಾರಣೆ: ಕ್ಷಣಕ್ಷಣದ ಕುತೂಹಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿಗೆ ಸಂಬಂಧಿಸಿದ್ದೆನ್ನಲಾದ ವಿಡಿಯೊದಲ್ಲಿರುವ ಸಂತ್ರಸ್ತ ಯುವತಿಯು ನ್ಯಾಯಾಧೀಶರ ಮುಂದೆ ಹಾಜರು ಹಾಗೂ ನಂತರದ ಬೆಳವಣಿಗೆಗಳು ಕ್ಷಣಕ್ಷಣದ ಕುತೂಹಲಕ್ಕೆ ಮಂಗಳವಾರ ಕಾರಣವಾಗಿತ್ತು.

'ತನಿಖಾಧಿಕಾರಿ ಬದಲು ನೇರವಾಗಿ ನ್ಯಾಯಾಲಯಕ್ಕೆ ಹಾಜರಾಗಿ ಸಿಆರ್‌ಪಿಸಿ ಸೆಕ್ಷನ್ 164ರಡಿ ಹೇಳಿಕೆ ದಾಖಲಿಸಬಹುದೆ' ಎಂಬ ಪ್ರಶ್ನೆ ಹಲವರಲ್ಲಿತ್ತು. ಹೀಗಾಗಿ, ನ್ಯಾಯಾಲಯದಲ್ಲಿ ವಿಚಾರಣೆ ಏನಾಗಬಹುದೆಂಬ ಕುತೂಹಲ ಮೂಡಿತ್ತು.

ಯುವತಿ ಪರ ವಕೀಲ ಕೆ.ಎನ್. ಜಗದೀಶ್‌ಕುಮಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ 24ನೇ ಎಸಿಎಂಎಂ ನ್ಯಾಯಾಲಯ, 'ಸಿಆರ್‌ಪಿಸಿ ಸೆಕ್ಷನ್ 164ರಡಿ ಮೊದಲು ನ್ಯಾಯಾಲಯ ಹೇಳಿಕೆ ದಾಖಲು ಮಾಡಿಕೊಳ್ಳಲಿದೆ. ಅದಾದ ನಂತರ, ಪ್ರಕರಣದ ತನಿಖಾಧಿಕಾರಿಯು ಯುವತಿ ಹೇಳಿಕೆ ಪಡೆಯಬಹುದು' ಎಂದು ಆದೇಶಿಸಿತು.

ವಾದ ಮಂಡಿಸಿದ್ದ ಜಗದೀಶ್‌ಕುಮಾರ್ ಹಾಗೂ ಅವರ ತಂಡದಲ್ಲಿದ್ದ ವಕೀಲರು, 'ಪ್ರಕರಣ ಗಂಭೀರವಾಗಿದೆ. ಆರೋಪಿ ಮಾಜಿ ಸಚಿವರಾಗಿದ್ದು, ಪ್ರಭಾವಿ ಆಗಿದ್ದಾರೆ. ಮಾಧ್ಯಮಗಳ ಮೂಲಕ ಹಾಗೂ ಬಹಿರಂಗವಾಗಿಯೇ ಯುವತಿಗೆ ಜೀವ ಬೆದರಿಕೆ ಹಾಕುತ್ತಿದ್ದಾರೆ. ಪ್ರಕರಣದ ಸಂತ್ರಸ್ತೆ ಜೀವ ಭಯದಲ್ಲಿದ್ದಾರೆ. ಈ ಬಗ್ಗೆ ಸಂತ್ರಸ್ತೆ, ಸುಪ್ರೀಂಕೋರ್ಟ್ ಹಾಗೂ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವರಿಗೆ ಪತ್ರ ಬರೆದಿದ್ದಾರೆ' ಎಂದರು.

'ಎಸ್‌ಐಟಿ, ರಾಜ್ಯ ಸರ್ಕಾರ ಹಾಗೂ ಪೊಲೀಸರು ಆರೋಪಿ ಪರವೇ ಕೆಲಸ ಮಾಡುತ್ತಿದ್ದು, ಅವರ ಮೇಲೆ ಸಂತ್ರಸ್ತೆಗೆ ವಿಶ್ವಾಸವಿಲ್ಲ. ನ್ಯಾಯಾಲಯದ ಮೇಲೆ ವಿಶ್ವಾಸವಿದ್ದು, ಹೇಳಿಕೆ ದಾಖಲಿಸಿಕೊಳ್ಳಲು ಅವಕಾಶ ನೀಡಬೇಕು. ಜೊತೆಗೆ, ಯುವತಿ ಹಾಗೂ ಅವರ ಕುಟುಂಬದವರಿಗೆ ಸೂಕ್ತ ಭದ್ರತೆ ನೀಡಲು ಸರ್ಕಾರಕ್ಕೆ ಸೂಚಿಸಬೇಕು' ಎಂದು ವಾದಿಸಿದರು.

ಮೆಮೊ ಸಲ್ಲಿಸಿದ್ದ ತನಿಖಾಧಿಕಾರಿ ಎಂ.ಸಿ.ಕವಿತಾ, 'ಇದುವರೆಗೂ ಯುವತಿ ಮುಖ ನೋಡಿಲ್ಲ. ನೋಟಿಸ್ ನೀಡಿದರೂ ಹೇಳಿಕೆ ನೀಡಲು ಹಾಜರಾಗಿಲ್ಲ. ಅವರಿಂದ ಮೊದಲು ಹೇಳಿಕೆ ಪಡೆಯಬೇಕು. ಅದಕ್ಕೆ ಅನುಮತಿ ನೀಡಿ' ಎಂದು ಕೋರಿದರು.

'ಸಿಆರ್‌ಪಿಸಿ 164ರಡಿ ಹೇಳಿಕೆ ದಾಖಲಿಸಲು ನಿಮ್ಮ ಆಕ್ಷೇಪ ಇದೆಯಾ' ಎಂದು ನ್ಯಾಯಾಧೀಶರು ಪ್ರಶ್ನಿಸಿದರು. ಅದಕ್ಕೆ ತನಿಖಾಧಿಕಾರಿ, 'ಇಲ್ಲ' ಎಂದರು. ಪೊಲೀಸರು ಆಕ್ಷೇಪಣೆ ಇಲ್ಲದ್ದನ್ನು ಪರಿಗಣಿಸಿ ನ್ಯಾಯಾಲಯ, ಯುವತಿ ಹೇಳಿಕೆ ಸಂಗ್ರಹಕ್ಕೆ ಆದೇಶಿಸಿತು.

ಸಂತ್ರಸ್ತೆ ನಂಬಿಕೆ ಗಳಿಸಲು ಪೊಲೀಸರ ಯತ್ನ: 'ಎಸ್‌ಐಟಿ ಅಧಿಕಾರಿಗಳು ಹಾಗೂ ಪೊಲೀಸರು, ಆರೋಪಿ ಪರ ಇದ್ದಾರೆ' ಎಂದು ಯುವತಿ ಇತ್ತೀಚೆಗೆ ವಿಡಿಯೊವೊಂದರಲ್ಲಿ ಆರೋಪಿಸಿದ್ದರು. ಹೀಗಾಗಿ, ಅರ್ಜಿ ವಿಚಾರಣೆ ಮುನ್ನವೇ ಸಭೆ ನಡೆಸಿದ್ದ ಪೊಲೀಸರು ಹಾಗೂ ಎಸ್‌ಐಟಿ ಅಧಿಕಾರಿಗಳು, ನ್ಯಾಯಾಲಯಕ್ಕೆ ಮೆಮೊ ಮಾತ್ರ ಸಲ್ಲಿಸಿ, ಆಕ್ಷೇಪಣೆ ದಾಖಲಿಸದಿರಲು ತೀರ್ಮಾನಿಸಿದ್ದರು ಎಂದು ಗೊತ್ತಾಗಿದೆ.

ಕೊನೆ ಕ್ಷಣದಲ್ಲಿ ಸ್ಥಳ ಬದಲು

ಯುವತಿ ಹೇಳಿಕೆ ದಾಖಲಿಸುವ ಸಂಬಂಧ ಅವರ ಪರ ವಕೀಲರು, ನೃಪತುಂಗ ರಸ್ತೆಯಲ್ಲಿರುವ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಹೀಗಾಗಿ, ಅಲ್ಲಿಗೆ ಯುವತಿ ಹಾಜರಾಗಬಹುದೆಂದು ಎಲ್ಲರೂ ಅಂದುಕೊಂಡಿದ್ದರು. ಆದರೆ, ಕೊನೆ ಕ್ಷಣದಲ್ಲಿ ಸ್ಥಳ ಬದಲಿಸಿ ವಸಂತನಗರದ ನ್ಯಾಯಾಲಯಕ್ಕೆ ಹೇಳಿಕೆ ದಾಖಲು ಪ್ರಕ್ರಿಯೆ ನಡೆಯಿತು.

ಅರ್ಜಿ ಮಾನ್ಯ ಮಾಡಿದ್ದ ನ್ಯಾಯಾಧೀಶರು, 'ಯುವತಿ ಎಲ್ಲಿ ಹಾಗೂ ಯಾವಾಗ ಹೇಳಿ ನೀಡಲು ಸಿದ್ಧರಿದ್ದಾರೆ' ಎಂದು ವಕೀಲರನ್ನು ಪ್ರಶ್ನಿಸಿದರು.

ಅದಕ್ಕೆ ವಕೀಲರು, 'ಇದೊಂದು ಗಂಭೀರ ಪ್ರಕರಣ. ನಿಮ್ಮ ನ್ಯಾಯಾಲಯದ ಎದುರು ಮಾಧ್ಯಮದವರು, ಸಾರ್ವಜನಿಕರು ಹಾಗೂ ಪೊಲೀಸರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದಾರೆ. ಇಲ್ಲಿ ಹೇಳಿಕೆ ಪಡೆಯಲು ಭದ್ರತೆ ಸಮಸ್ಯೆ ಉಂಟಾಗಬಹುದು. ಹೀಗಾಗಿ, ಬೇರೆಡೆ ಹೇಳಿಕೆ ಪಡೆಯಲು ಮನವಿ ಮಾಡುತ್ತೇನೆ ' ಎಂದರು. ಅದೇ ಕಾರಣಕ್ಕೆ, ವಸಂತನಗರದ (ಟ್ಯಾಂಕ್ ಬಂಡ್ ರಸ್ತೆ) ಗುರುನಾನಕ್ ಭವನ ಬಳಿ ನಿರ್ಮಿಸಿದ್ದ ವಿಶೇಷ ನ್ಯಾಯಾಲಯದಲ್ಲಿ ಹೇಳಿಕೆ ಪಡೆಯಲು ನ್ಯಾಯಾಧೀಶರು ತೀರ್ಮಾನಿಸಿದರು. ವಕೀಲರ ಜೊತೆ ಕಾರಿನಲ್ಲಿ ಬಂದ ಯುವತಿ, ನ್ಯಾಯಾಧೀಶರ ಆಗಮನಕ್ಕೂ ಮುನ್ನವೇ ನ್ಯಾಯಾಲಯದಲ್ಲಿ ಹಾಜರಿದ್ದರು. ವಿಶೇಷ ಭದ್ರತೆ ಮಾಡಿದ್ದು, ಆ ಮಾರ್ಗದಲ್ಲಿ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿತ್ತು.

'ಆರೋಪಿ ಬಂಧನ ಯಾವಾಗ?'

'ಅತ್ಯಾಚಾರ ಪ್ರಕರಣ ಸಂಬಂಧ ಸಂತ್ರಸ್ತೆ, ಧೈರ್ಯವಾಗಿ ನ್ಯಾಯಾಲಯದ ಎದುರು ಹೇಳಿಕೆ ನೀಡಿದ್ದಾರೆ. ಈಗಲಾದರೂ ಪೊಲೀಸರು ಎಚ್ಚೆತ್ತು, ಆರೋಪಿಯನ್ನು ಬಂಧಿಸಿ ತಮ್ಮ ಕಾನೂನಿನ ಬಗ್ಗೆ ನಿಷ್ಠೆ ತೋರಿಸಬೇಕು' ಎಂದು ಸಂತ್ರಸ್ತೆ ಪರ ವಕೀಲ ಕೆ.ಎನ್. ಜಗದೀಶ್‌ಕುಮಾರ್ ಹೇಳಿದರು.

ಆಡುಗೋಡಿಯಲ್ಲಿರುವ ವಿಶೇಷ ವಿಚಾರಣಾ ಕೊಠಡಿ ಎದುರು ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಯುವತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಜವಾಬ್ದಾರಿ ನಿರ್ವಹಿಸಿದ್ದೇವೆ. ದೂರು ನೀಡಿಲ್ಲ. ಯುವತಿ ಒತ್ತಡಕ್ಕೆ ಒಳಗಾಗಿದ್ದಾಳೆ ಎಂಬ ಸುದ್ದಿಗೆ ತೆರೆ-ಎಳೆದಿದ್ದೇವೆ. ಪ್ರಕರಣದ ಆರೋಪಿ ರಾಜಾರೋಷವಾಗಿ ಓಡಾಡುತ್ತಿದ್ದಾರೆ. ಸರ್ಕಾರ, ಆರೋಪಿ ಬಂಧಿಸುವತ್ತ ಗಮನ ಹರಿಸಬೇಕು' ಎಂದರು.

'ಯುವತಿ, ಪ್ರಾಪ್ತ ವಯಸ್ಕರಾಗಿದ್ದು, ಸ್ವಂತ ತೀರ್ಮಾನ ಕೈಗೊಳ್ಳುವ ಸ್ವಾತಂತ್ರ್ಯವಿದೆ. ಹೀಗಾಗಿ, ಪೋಷಕರು ದಾಖಲಿಸಿರುವ ಅಪಹರಣ ಪ್ರಕರಣವೂ ಮಾನ್ಯವಾಗುವುದಿಲ್ಲ' ಎಂದರು.

ಅತ್ಯಾಚಾರ: ಸಂತ್ರಸ್ತೆ 'ಪ್ರಮಾಣ'

ಒಂದನೇ ಪುಟದಿಂದ

'ಯುವತಿಯನ್ನು ಸಿಆರ್‌ಪಿಸಿ 161ರಡಿ ಧ್ವನಿ ಮಾದರಿ ಪರೀಕ್ಷೆಗೆ ಒಳಪಡಿಸಲು ಅನುಮತಿ ನೀಡಿ' ಎಂದು ಕೋರಿ ತನಿಖಾಧಿಕಾರಿ ಕವಿತಾ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಅರ್ಜಿ ಮಾನ್ಯ ಮಾಡಿದ ನ್ಯಾಯಾಲಯ, ಪರೀಕ್ಷೆಗೆ ಅನುಮತಿ ನೀಡಿತು.

ಎಸ್‌ಐಟಿ ವಿಚಾರಣೆ ಸಾಧ್ಯತೆ: ರಮೇಶ ಜಾರಕಿಹೊಳಿ ನೀಡಿರುವ ದೂರು ಆಧರಿಸಿ ಸದಾಶಿವನಗರ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ಸಂಬಂಧ ಯುವತಿಯನ್ನು ವಿಚಾರಣೆಗೆ ಒಳಪಡಿಸಲು ಎಸ್‌ಐಟಿ ಸಿದ್ಧತೆ ಮಾಡಿಕೊಳ್ಳುತ್ತಿದೆ. ಯುವತಿಯನ್ನು ವಿಚಾರಣೆ ನಡೆಸಲು ಅನುಮತಿ ಕೋರಿ ಎಸ್‌ಐಟಿ ಅಧಿಕಾರಿಗಳು ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಅನುಮತಿ ಸಿಗುವ ವಿಶ್ವಾಸವಿದ್ದ ಎಸ್‌ಐಟಿ ಮುಖ್ಯಸ್ಥ ಸೌಮೆಂದು ಮುಖರ್ಜಿ, ಜಂಟಿ ಕಮಿಷನರ್ ಸಂದೀಪ ಪಾಟೀಲ್ ಹಾಗೂ ಇತರೆ ಅಧಿಕಾರಿಗಳು ನ್ಯಾಯಾಲಯಕ್ಕೆ ಬಂದಿದ್ದರು.

ಆದರೆ, ಅನುಮತಿ ಸಿಗದ ಕಾರಣ ಅಧಿಕಾರಿಗಳು ವಾಪಸ್ ಹೋದರು. ಇದೀಗ ಯುವತಿಗೆ ಮತ್ತೊಂದು ನೋಟಿಸ್ ನೀಡಲಾಗಿದೆ. ಯುವತಿಯೇ ಸ್ವಯಂಪ್ರೇರಣೆಯಿಂದ ವಿಚಾರಣೆಗೆ ಹಾಜರಾಗುವ ಸಾಧ್ಯತೆ ಇದೆ. ಹೀಗಾಗಿ, ಎಸ್‌ಐಟಿ ಪ್ರಶ್ನಾವಳಿಗಳನ್ನು ತಯಾರಿಸಿಕೊಂಡಿರುವುದಾಗಿ ಮೂಲಗಳು ಹೇಳಿವೆ.

ವಿಟಿಯು ಘಟಿಕೋತ್ಸವ ಏ.3ರಂದು; ಪ್ರೊ.ಆಶುತೋಷ್‌ಗೆ ಗೌರವ ಡಾಕ್ಟರೇಟ್

ಅಸ್ಮಥ್ ಶರ್ಮೀನ್‌ಗೆ 13 ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ವಿಭಾಗದ ವಿದ್ಯಾರ್ಥಿನಿ ಅಸ್ಮಥ್ ಶರ್ಮೀನ್ ಅತಿ ಹೆಚ್ಚು ಅಂದರೆ 13 ಚಿನ್ನದ ಪದಕ ಗಳಿಸಿ 'ಚಿನ್ನದ ಯುವತಿ'ಯಾಗಿ ಸಾಧನೆ ತೋರಿದ್ದಾರೆ' ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ಕುಲಪತಿ ಡಾ. ಕರಿಸಿದ್ದಪ್ಪ ತಿಳಿಸಿದರು.

ಅಸ್ಮಥ್

ಗಗನಾ ರೆಡ್ಡಿ

ಸನ್ನಿಧಿ

ಡಿ. ಅರುಣ್

ಭೂಮಿಕಾ

ಅಪೂರ್ವಾ

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, 'ಬೆಂಗಳೂರಿನ ಬಿಎಂಎಸ್ ತಾಂತ್ರಿಕ ಸಂಸ್ಥೆಯ ಮೆಕ್ಯಾನಿಕಲ್ ವಿಭಾಗದ ಅರುಣ ಡಿ., ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ತಾಂತ್ರಿಕ ಸಂಸ್ಥೆಯ ಎಲೆಕ್ಟ್ರಾನಿಕ್ ಅಂಡ್ ಕಮ್ಯುನಿಕೇಷನ್ ವಿಭಾಗದ ಗಗನಾ ರೆಡ್ಡಿ, ಮೈಸೂರಿನ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಿಕಲ್ ವಿಭಾಗದ ಎಚ್. ಆರ್. ಅಪೂರ್ವಾ ತಲಾ 7 ಚಿನ್ನದ ಪದಕ ಗಳಿಸಿದ್ದಾರೆ' ಎಂದರು.

'ಬೆಂಗಳೂರಿನ ವೇಮನ ತಾಂತ್ರಿಕ ಸಂಸ್ಥೆಯ ಎ. ಸನ್ನಿಧಿ 6, ಬೆಂಗಳೂರಿನ ಬಿಎನ್‌ಎಂಐಟಿ ಎಂಬಿಎ ಕಾಲೇಜಿನ ಕೆ.ಎಂ. ಭೂಮಿಕಾ, ಬೆಂಗಳೂರಿನ ಬಿಐಟಿ ಎಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಾನಿಕ್ಸ್ ಅಂಡ್ ಇನ್‌ಸ್ಟ್ರುಮೆಂಟೇಷನ್ ವಿಭಾಗದ ಸೀಮಾ ಹೆಗಡೆ, ಬೆಂಗಳೂರಿನ ಆರ್‌ಎನ್‌ಎಸ್‌ಐಟಿಯ ಮಾಹಿತಿ ವಿಜ್ಞಾನ ವಿಭಾಗದ ಪಿ. ಯುಕ್ತಾ, ಮಂಗಳೂರಿನ ಶ್ರೀನಿವಾಸ್ ತಾಂತ್ರಿಕ ಸಂಸ್ಥೆಯ ನ್ಯಾನೊಟೆಕ್ನಾಲಜಿ ವಿಭಾಗದ ಜುನೇದ್ ಖಾನ್ ತಲಾ 4 ಚಿನ್ನದ ಪದಕ, ಮಂಗಳೂರಿನ ಸಂತ ಜೋಸೆಫ್ ಎಂಜಿನಿಯರಿಂಗ್ ಕಾಲೇಜಿನ ಡಿಸಿಲ್ವಾ ಡಯಾನೋ ಡೇನಿಯಲ್ ಹಾಗೂ ದಾವಣಗೆರೆಯ ಯುಬಿಡಿಟಿ ಎಂಜಿನಿಯರಿಂಗ್ ಕಾಲೇಜಿನ ಎಂ.ಬಿ. ಪ್ರಿಯಾ ತಲಾ 3 ಚಿನ್ನದ ಪದಕಗಳನ್ನು ಗಳಿಸಿದ್ದಾರೆ' ಎಂದು ಅವರು ಮಾಹಿತಿ ನೀಡಿದರು.

'ಕೊರೊನಾ ಸಂಕಷ್ಟದಿಂದಾಗಿ ಕಾಲೇಜುಗಳಲ್ಲಿ ಆನ್‌ಲೈನ್‌ನಲ್ಲಿ ತರಗತಿ ಮಾತ್ರ ನಡೆಸಲಾಗಿದೆ. ಈ ಬಾರಿ ಒಟ್ಟಾರೆಯಾಗಿ ಎಲ್ಲ ಕೋರ್ಸ್‌ಗಳಲ್ಲಿ ಸರಾಸರಿ ಶೇ. 81.62ರಷ್ಟು ಫಲಿತಾಂಶ ಬಂದಿದೆ. ಹೋದ ವರ್ಷ ಈ ಪ್ರಮಾಣ ಶೇ 78.08ರಷ್ಟಿತ್ತು' ಎಂದು ಹೇಳಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) 20ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಲಾಗುತ್ತಿದ್ದು, 63,160 ಬಿ.ಇ., 892 ಬಿ.ಆರ್ಕ್., 4,817 ಎಂಬಿಎ, 1,248 ಎಂಸಿಎ, 1,704 ಎಂ.ಟೆಕ್, 77 ಎಂ.ಆರ್ಕ್ ಹಾಗೂ 278 ಪಿಜಿ ಡಿಪ್ಲೊಮಾ ಪದವಿ ಪ್ರದಾನ ಮಾಡಲಾಗುವುದು. ಸಂಶೋಧನಾ ಅಧ್ಯಯನ ಪೂರ್ಣಗೊಳಿಸಿದ 635 ವಿದ್ಯಾರ್ಥಿಗಳಿಗೆ 635 ಪಿಎಚ್.ಡಿ., ಐವರಿಗೆ 'ಎಂ.ಎಸ್ಸಿ (ಎಂಜಿನಿಯರಿಂಗ್) ಬೈ ರಿಸರ್ಚ್' ಮತ್ತು ಮೂವರಿಗೆ ಸಂಯುಕ್ತ ದ್ವಿಪದವಿ (ಇಂಟಿಗ್ರೇಟೆಡ್ ಡುಯಲ್ ಡಿಗ್ರಿ) ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಕುಲಸಚಿವರಾದ ಪ್ರೊ.ಎ.ಎಸ್. ದೇಶಪಾಂಡೆ ಹಾಗೂ ಪ್ರೊ.ಬಿ.ಈ. ರಂಗಸ್ವಾಮಿ ಇದ್ದರು.

ಫಲಿತಾಂಶ ಮಾಹಿತಿ			
ಪದವಿ	ಹಾಜರಾದವರು	ಉತ್ತೀರ್ಣ	ಶೇಕಡಾವಾರು
ಬಿ.ಇ/ಬಿ.ಟೆಕ್	78185	63160	80.78
ಬಿ.ಆರ್ಕ್	951	892	93.80
ಎಂ.ಟೆಕ್	1847	1704	92.26
ಎಂಬಿಎ	5714	4817	84.30
ಎಂಸಿಎ	1319	1248	94.62
ಎಂ.ಆರ್ಕ್	77	77	100

ವಿಶ್ವವಿದ್ಯಾಲಯದಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ಹಣಕಾಸಿನ ದುರ್ಬಳಕೆ ಆಗಿಲ್ಲ

ಡಾ.ಕೆ. ಕರಿಸಿದ್ದಪ್ಪ ಕುಲಪತಿ, ವಿಟಿಯು

ವಾರ್ಷಿಕ ಘಟಿಕೋತ್ಸವ ಏ.3ಕ್ಕೆ

'ವಿಟಿಯು 20ನೇ ವಾರ್ಷಿಕ ಘಟಿಕೋತ್ಸವವನ್ನು ಇಲ್ಲಿನ ಜ್ಞಾನಸಂಗಮ ಕ್ಯಾಂಪಸ್‌ನಲ್ಲಿ ಏ.3ರಂದು ಮಧ್ಯಾಹ್ನ 12ಕ್ಕೆ ಆಯೋಜಿಸಲಾಗಿದೆ' ಎಂದು ಡಾ.ಕರಿಸಿದ್ದಪ್ಪ ತಿಳಿಸಿದರು.

'ರಾಜ್ಯಪಾಲ ವಜುಭಾಯಿ ಆರ್. ವಾಲಾ ಅಧ್ಯಕ್ಷತೆ ವಹಿಸುವರು. ರಕ್ಷಣಾ ಇಲಾಖೆಯ ಮಾಜಿ ವೈಜ್ಞಾನಿಕ ಸಲಹೆಗಾರ ಡಾ.ವಿ.ಕೆ. ಆತ್ರೆ ಘಟಿಕೋತ್ಸವ ಭಾಷಣ ಮಾಡುವರು. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಪ್ರೊ.ಅಶುತೋಷ್ ಶರ್ಮಾ ಅವರಿಗೆ 'ಡಾಕ್ಟರ್ ಆಫ್ ಸೈನ್ಸ್' ಗೌರವ ಪದವಿ ಪ್ರದಾನ ಮಾಡಲಾಗುವುದು' ಎಂದರು.

'ಕೋವಿಡ್–19 ಕಾರಣದಿಂದ ಅಗತ್ಯ ಸುರಕ್ಷತಾ ಕ್ರಮಗಳನ್ನು ಅನುಸರಿಸಲಾಗುವುದು. ಸಭಾಂಗಣದಲ್ಲಿ ನೂರು ಮಂದಿಗೆ ಮಾತ್ರ ಅವಕಾಶ ಇರಲಿದೆ. ಎಲ್ಲ ಎಂಜಿನಿಯರಿಂಗ್ ಕಾಲೇಜುಗಳಲ್ಲೂ ಕಾರ್ಯಕ್ರಮ ನೇರಪ್ರಸಾರ ಮಾಡಲಾಗುವುದು' ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

'ಪ್ರಚೋದನಕಾರಿ ಹೇಳಿಕೆ ನೀಡಿಲ್ಲ'

ಹುಬ್ಬಳ್ಳಿ: 'ಕೇಂದ್ರ ಸರ್ಕಾರದ, ರೈತರಿಗೆ ಮಾರಕವಾಗಿರುವ ಕೃಷಿ ಕಾಯ್ದೆಯ ಕಾನೂನು ವಿರುದ್ಧ ಹೋರಾಡಲು ಕರೆ ಕೊಟ್ಟಿದ್ದೇನೆಯೇ ಹೊರತು, ಕಾನೂನು ಉಲ್ಲಂಘಿಸುವಂತೆ ಹೇಳಿಲ್ಲ' ಎಂದು ಸಂಯುಕ್ತ ಕಿಸಾನ್ ಮೋರ್ಚಾ ನಾಯಕ ರಾಕೇಶ್ ಟಿಕಾಯತ್ ಮಂಗಳವಾರ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರೈತರ ಅಸ್ತಿತ್ವಕ್ಕೆ ಧಕ್ಕೆ ತರುವ ಕಾಯ್ದೆ ವಿರುದ್ಧ ಗಟ್ಟಿ ಧ್ವನಿ ಎತ್ತಬೇಕು. ಅದನ್ನು ವಿರೋಧಿಸಿ ಒಗ್ಗಟ್ಟಿನಿಂದ ಹೋರಾಡಬೇಕೆಂದು ಶಿವಮೊಗ್ಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೇಳಿದ್ದೆ. ಹೋರಾಟಕ್ಕೆ ಕರೆ ನೀಡುವುದು ಪ್ರಚೋದನಕಾರಿ ಹೇಳಿಕೆಯೇ?' ಎಂದು ಪ್ರಶ್ನಿಸಿದರು.

'ಮೀಸಲಾತಿ ಸಿಗುವವರೆಗೆ ಹೋರಾಟ ನಿಲ್ಲದು'

ಲಕ್ಷ್ಮೇಶ್ವರ (ಗದಗ): 'ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಸಿಗುವವರೆಗೆ ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆ ಇಲ್ಲ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭರವಸೆ ಆಧರಿಸಿ ತಾತ್ಕಾಲಿಕವಾಗಿ ಧರಣಿ ನಿಲ್ಲಿಸಲಾಗಿದೆ' ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಮಂಗಳವಾರ ಹೇಳಿದರು.

ಇಲ್ಲಿ ತಾಲ್ಲೂಕು ಪಂಚಮಸಾಲಿ ಸೇವಾ ಸಮಿತಿ ಆಶ್ರಯದಲ್ಲಿ ನಡೆದ 'ಶರಣು ಶರಣಾರ್ಥಿ' ಸಮಾರಂಭದಲ್ಲಿ ಮಾತನಾಡಿದ ಅವರು, 'ಒಂದು ವೇಳೆ ಸರ್ಕಾರ ಮೀಸಲಾತಿ ನೀಡಲು ಹಿಂದೇಟು ಹಾಕಿದರೆ ಅ.15ರಿಂದ ಮತ್ತೆ ಧರಣಿ ಪ್ರಾರಂಭಿಸಲಾಗುವುದು. ಈ ಬಾರಿ 20 ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸುತ್ತಾರೆ' ಎಂದು ಹೇಳಿದರು.

'ಮುಖ್ಯಮಂತ್ರಿ ಮೀಸಲಾತಿ ನೀಡಲು ಮನಸ್ಸು ಮಾಡಿದ್ದಾರೆ. ಪಂಚಮಸಾಲಿ ಸಮಾಜದ ಬೆಂಬಲ ಇಲ್ಲದೆ ಸರ್ಕಾರ ನಡೆಯದು ಎಂಬುದು ಅವರಿಗೂ ಗೊತ್ತಿದೆ. ನಮ್ಮ ಬೇಡಿಕೆ ಬೇಗನೇ ಈಡೇರಬೇಕಾದರೆ ಪಂಚಮಸಾಲಿ ಸಮಾಜದ ಶಾಸಕರು, ಸಂಸದರು ಒತ್ತಡ ಹಾಕಬೇಕು' ಎಂದು ಹೇಳಿದರು.

15ರಿಂದ ಬಿಸಿಯೂಟ ಆರಂಭಿಸಿ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ

ಬೆಂಗಳೂರು: 6ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಏಪ್ರಿಲ್ 15ರಿಂದ ಮಧ್ಯಾಹ್ನದ ಬಿಸಿಯೂಟ ಆರಂಭಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಕೋವಿಡ್ ಎರಡನೇ ಅಲೆ ಗಮನದಲ್ಲಿಟ್ಟುಕೊಂಡು ಬಿಸಿಯೂಟ ಆರಂಭಿಸುತ್ತಿಲ್ಲ ಎಂಬ ಸರ್ಕಾರ ಉತ್ತರವನ್ನು ಪರಿಶೀಲಿಸಿದ ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ಹೊರಡಿಸಿತು.

'ಶಾಲೆಗೆ ಹಾಜರಾಗುತ್ತಿರುವ ಮಕ್ಕಳಿಗೆ ಬಿಸಿಯೂಟ ನೀಡಬೇಕು' ಎಂದು ನಿರ್ದೇಶನ ನೀಡಲು ಕೋರಿ ಎಂ. ರಾಧಾ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ಪೀಠ ವಿಚಾರಣೆ ನಡೆಸಿತು.

ಶಾಲೆಗಳ ಸದ್ಯದ ಸ್ಥಿತಿಗತಿ ವರದಿಯನ್ನು ಸರ್ಕಾರ ಮಂಗಳವಾರ ಸಲ್ಲಿಸಿತು. 'ಆಹಾರ ಬೇಯಿಸಿ ಬಡಿಸುವುದರಿಂದ ಸೋಂಕು ಹರಡಬಹುದು ಎಂಬ ಕಾರಣಕ್ಕೆ ಬಿಸಿಯೂಟ ಆರಂಭಿಸಿಲ್ಲ. ಏಪ್ರಿಲ್ 10 ರಿಂದ ಜೂನ್ 10ರವರೆಗಿನ 47 ದಿನಗಳ ಕಾಲದ ಆಹಾರ ಭತ್ಯೆ ನೀಡಲು ಆರ್ಥಿಕ ನೆರವು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ' ಎಂದು ವರದಿಯಲ್ಲಿ ತಿಳಿಸಿದೆ.

'ಶಾಲೆಗಳನ್ನು ತೆರೆದಿರುವ ಸಂದರ್ಭದಲ್ಲಿ ಊಟದ ಭತ್ಯೆ ನೀಡಲು ಆಗುವುದಿಲ್ಲ. ಏಪ್ರಿಲ್ 15ರಿಂದ ಬಿಸಿಯೂಟ ಆರಂಭಿಸುವ ನಿರ್ಧಾರ ಕೈಗೊಂಡು ಏ.8ರೊಳಗೆ ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂದು ಪೀಠ ತಿಳಿಸಿದೆ.

ಜಿಲ್ಲಾ ಉಸ್ತುವಾರಿ: 17ರ ನಂತರ ಬದಲಾವಣೆ: ಸಿ.ಎಂ

ಹುಬ್ಬಳ್ಳಿ: 'ರಾಜ್ಯದಲ್ಲಿ ಉಪ ಚುನಾವಣೆ ಮುಗಿಯುವವರೆಗೂ ಜಿಲ್ಲೆಯ ಉಸ್ತುವಾರಿ ಸಚಿವರನ್ನು ಬದಲಾವಣೆ ಮಾಡುವುದಿಲ್ಲ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಮಂಗಳವಾರ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸದ್ಯ ಚುನಾವಣೆ ಕಡೆಗೆ ಗಮನ ಹರಿಸಿದ್ದೇವೆ. ಚುನಾವಣೆಯಲ್ಲಿ ಗೆಲುವು ಮುಖ್ಯ. ಏ.17ರ ನಂತರ ಬದಲಾವಣೆ ಮಾಡಲಾಗುವುದು' ಎಂದರು.

ಕೋವಿಡ್ ಲಸಿಕೆ; ಗುರಿಗಿಂತ ಶೇ 50 ಸಾಧನೆ ಮಾಡಿದ ಮೂರು ಜಿಲ್ಲೆಗಳು

ಬೀದರ್, ಕಲಬುರ್ಗಿ ಕಳಪೆ ಸಾಧನೆ

• ಮನೋಜಕುಮಾರ್ ಗುದ್ದಿ

ಕಲಬುರ್ಗಿ: ಕೋವಿಡ್ ಲಸಿಕೆ ನೀಡುವ ವಿಚಾರದಲ್ಲಿ ಕಲ್ಯಾಣ ಕರ್ನಾಟಕದ ಎರಡು ಜಿಲ್ಲೆಗಳು ಕಳಪೆ ಸಾಧನೆ ಮಾಡಿದ್ದು, ಬೀದರ್ ಶೇ 31.03 ಹಾಗೂ ಕಲಬುರ್ಗಿ ಶೇ 50ರಷ್ಟು ಮಾತ್ರ ಗುರಿ ತಲುಪಲು ಸಾಧ್ಯವಾಗಿದೆ.

ಇದರಿಂದ ಆತಂಕಗೊಂಡ ಕಲಬುರ್ಗಿ ಜಿಲ್ಲಾಡಳಿತ, ಲಸಿಕೆಗಾಗಿ ಜನರನ್ನು ಸಮೀಪದ ಆರೋಗ್ಯ ಕೇಂದ್ರಗಳಿಗೆ ಕರೆತರಲು ಕೋವಿಡ್ ನಿಧಿಯಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವಾಹನ ವ್ಯವಸ್ಥೆ ಮಾಡಿದೆ. ಆದರೆ, ಈ ವಾಹನಗಳಲ್ಲಿ ಬರಲು ಜನ ಹಿಂದೇಟು ಹಾಕುತ್ತಿರುವ ಸಂಗತಿ ಬೆಳಕಿಗೆ ಬಂದಿದೆ.

ಕಲಬುರ್ಗಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಲಸಿಕೆ ಪಡೆಯಲು 45 ವರ್ಷ ಮೀರಿದ ಜನರನ್ನು ನಗರ ಆರೋಗ್ಯ ಕೇಂದ್ರಗಳತ್ತ ಕರೆ ತರಲು ಆರೋಗ್ಯ ಇಲಾಖೆ ಸಿಬ್ಬಂದಿ, ಪಾಲಿಕೆಯ ಆರೋಗ್ಯ ಘಟಕದ ಸಿಬ್ಬಂದಿ ಅಷ್ಟೇ ಅಲ್ಲದೇ ರಾಷ್ಟ್ರೀಯ ಸ್ವಯಂ ಸೇವಾ ಯೋಜನೆ (ಎನ್ಎಸ್ಎಸ್)ಯ ಸ್ವಯಂ ಸೇವಕರನ್ನು ಬಳಸಿಕೊಳ್ಳಲಾಗುತ್ತಿದೆ.

> **ಕಲಬುರ್ಗಿ ಜಿಲ್ಲೆಯಲ್ಲಿ ಮಹಾರಾಷ್ಟ್ರದಿಂದ ವಲಸೆ ಬಂದವರಿಂದ ಹೆಚ್ಚು ಸೋಂಕಿನ ಪ್ರಕರಣ ಕಂಡು ಬರುತ್ತಿವೆ. ಸಾರ್ವಜನಿಕರು ಸ್ವಯಂ ಪ್ರೇರಣೆಯಿಂದ ಲಸಿಕೆ ಪಡೆಯಲು ಮುಂದಾಗಬೇಕು**
> **ವಿ. ವಿಜಯಾ ಜ್ಯೋತ್ಸ್ನಾ**
> ಕಲಬುರ್ಗಿ ಜಿಲ್ಲಾಧಿಕಾರಿ

‘ಕಲಬುರ್ಗಿ ಹಾಗೂ ಬೀದರ್ ಜಿಲ್ಲೆಗಳಲ್ಲಿ ಕೋವಿಡ್ ಎರಡನೇ ಅಲೆ ಶುರುವಾಗಿದ್ದು, ನಿತ್ಯ ಸರಾಸರಿ ಎರಡೂ ಜಿಲ್ಲೆಗಳಲ್ಲಿ 150ರಿಂದ 200 ಪ್ರಕರಣಗಳು ವರದಿಯಾಗುತ್ತಿವೆ. ಒಂದು ಆಸ್ಪತ್ರೆಗೆ ನಿತ್ಯ ಒಳರೋಗಿಗಳಾಗಿ ದಾಖಲಾಗುವ ನಾಲ್ವರಲ್ಲಿ ಮೂವರಿಗೆ ಕೋವಿಡ್ ಸೋಂಕು ಕಾಣಿಸಿಕೊಳ್ಳುತ್ತಿದೆ’ ಎಂದು ಹೆಸರು ಬಹಿರಂಗ ಪಡಿಸಲು ಒಲ್ಲದ ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

ಈ ಕುರಿತು ಪ್ರತಿಕ್ರಿಯೆ ನೀಡಿದ ಕಲಬುರ್ಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ರಾಜಶೇಖರ ಮಾಲಿ, ‘1.97 ಲಕ್ಷ ಜನರಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದ್ದು, ಜಿಲ್ಲಾಸ್ಪತ್ರೆ, ತಾಲ್ಲೂಕು ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ ಸೇರಿದಂತೆ 135 ಕಡೆ ಲಸಿಕಾ ಕೇಂದ್ರಗಳನ್ನು ತೆರೆದಿದ್ದೇವೆ. ಏಪ್ರಿಲ್ 1ರಿಂದ ಉಪ ಆರೋಗ್ಯ ಕೇಂದ್ರಗಳಲ್ಲಿಯೂ ಲಸಿಕೆ ದೊರೆಯಲಿದೆ’ ಎಂದರು.

ಕೋವಿಡ್ ಲಸಿಕೆ ಗುರಿ ಸಾಧನೆ (ಮಾ 29ರ ಅಂಕಿ ಸಂಖ್ಯೆ)

ಜಿಲ್ಲೆ	ಶೇಕಡಾ ಪ್ರಮಾಣ
ಬಳ್ಳಾರಿ	100
ಕೊಡಗು	100
ಶಿವಮೊಗ್ಗ	100
ಹಾಸನ	98.55
ದಕ್ಷಿಣ ಕನ್ನಡ	93.42
ಚಿಕ್ಕಮಗಳೂರು	93.41
ದಾವಣಗೆರೆ	92.22
ಮಂಡ್ಯ	90.52
ಧಾರವಾಡ	90.20
ಕೊಪ್ಪಳ	89.58
ಹಾವೇರಿ	87.32
ಯಾದಗಿರಿ	86.36
ರಾಮನಗರ	83.08
ಮೈಸೂರು	82
ಚಿಕ್ಕಬಳ್ಳಾಪುರ	80.33
ಚಿತ್ರದುರ್ಗ	75.58
ಗದಗ	73.81
ತುಮಕೂರು	72
ಚಾಮರಾಜನಗರ	69.35
ಉಡುಪಿ	68.75
ವಿಜಯಪುರ	68.66
ರಾಯಚೂರು	62.50
ಉತ್ತರ ಕನ್ನಡ	56.53
ಕೋಲಾರ	56.34
ಬಾಗಲಕೋಟೆ	54.55
ಬೆಳಗಾವಿ	53.29
ಬೆಂಗಳೂರು ಗ್ರಾಮಾಂತರ	52
ಕಲಬುರ್ಗಿ	50
ಬೆಂಗಳೂರು ನಗರ	48.94
ಬೀದರ್	31.03

ಆಧಾರ: ಎಚ್‌ಡಬ್ಲುಸಿ ಪೋರ್ಟಲ್

ಮಾಸ್ಕ್ ಧರಿಸದವರಿಗೆ ಸ್ಥಳದಲ್ಲೇ ದಂಡ: ಡಿಜಿಸಿಎ ಸೂಚನೆ

ನವದೆಹಲಿ: ಕೋವಿಡ್–19 ಪ್ರಸರಣ ತಡೆಯುವ ಸಂಬಂಧ ಜಾರಿಗೊಳಿಸಿರುವ ಮಾರ್ಗಸೂಚಿಗಳನ್ನು ಪಾಲನೆ ಮಾಡದ ವಿಮಾನ ಪ್ರಯಾಣಿಕರಿಗೆ ಸ್ಥಳದಲ್ಲಿಯೇ ದಂಡ ವಿಧಿಸುವಂತೆ ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಮಂಗಳವಾರ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಡಿಜಿಸಿಎ ಇಂಥ ಸೂಚನೆ ನೀಡಿದೆ. ಅಲ್ಲದೇ, ವಿಮಾನ ನಿಲ್ದಾಣಗಳಲ್ಲಿ ಕಣ್ಗಾವಲನ್ನು ಚುರುಕುಗೊಳಿಸುವಂತೆ ವಿಮಾನ ನಿಲ್ದಾಣಗಳ ನಿರ್ವಹಣೆ ಮಾಡುತ್ತಿರುವ ಸಂಸ್ಥೆಗಳಿಗೆ ರವಾನಿಸಿರುವ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

21 ಸಾವು 2,975 ಹೊಸ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಜತೆಗೆ ಸೋಂಕಿಗೆ ಮೃತಪಡುವವರ ಸಂಖ್ಯೆ ಕೂಡ ಏರಿಕೆ ಕಂಡಿದೆ. ಮತ್ತೆ 21 ಮಂದಿ ಸಾವಿಗೀಡಾಗಿರುವುದು ಮಂಗಳವಾರ ದೃಢಪಟ್ಟಿದೆ. ಕಳೆದ ನಾಲ್ಕೂವರೆ ತಿಂಗಳಿನಲ್ಲಿ 24 ಗಂಟೆಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಮರಣ ಪ್ರಕರಣಗಳು ಇವಾಗಿವೆ.

ಕಳೆದ ವರ್ಷ ಜೂನ್ ಬಳಿಕ ಏರಿಕೆ ಕಂಡಿದ್ದ ಮರಣ ಪ್ರಮಾಣ ದರ ನವೆಂಬರ್ ಎರಡನೇ ವಾರದ ಬಳಿಕ ಇಳಿಕೆ ಕಂಡಿತ್ತು. ಆದರೆ, ಕಳೆದ ಒಂದು ವಾರದಿಂದ ಮೃತಪಡುವವರ ಸಂಖ್ಯೆ ಕೂಡ ಹೆಚ್ಚಳವಾಗಿದ್ದು, ಮರಣ ಪ್ರಮಾಣ ದರ ಶೇ 0.70ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿ 1,984 ಸೇರಿದಂತೆ ರಾಜ್ಯದಲ್ಲಿ ಹೊಸದಾಗಿ 2,975 ಪ್ರಕರಣಗಳು ದೃಢಪಟ್ಟಿವೆ. ಕಲಬುರ್ಗಿ (156), ಮೈಸೂರು (111), ಬೀದರ್ (102) ಜಿಲ್ಲೆಯಲ್ಲಿ ಕೂಡ ಅಧಿಕ ಸಂಖ್ಯೆಯಲ್ಲಿ ಸೋಂಕಿತರು ಪತ್ತೆಯಾಗಿದ್ದಾರೆ. ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 9.92 ಲಕ್ಷ ದಾಟಿದೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ 11 ಮಂದಿ, ಮೈಸೂರಿನಲ್ಲಿ ಮೂವರು, ಬೆಂಗಳೂರು ಗ್ರಾಮಾಂತರದಲ್ಲಿ ಇಬ್ಬರು, ಮಂಡ್ಯ, ಕಲಬುರ್ಗಿ, ಹಾಸನ, ಚಿಕ್ಕಮಗಳೂರು ಹಾಗೂ ಬೀದರ್‌ನಲ್ಲಿ ತಲಾ ಒಬ್ಬರು ಸಾವಿಗೀಡಾಗಿರುವುದು ಖಚಿತಪಟ್ಟಿದೆ. ಮೃತರ ಸಂಖ್ಯೆ 12,541ಕ್ಕೆ ತಲುಪಿದೆ. ಸದ್ಯ 240 ಮಂದಿ ಐಸಿಯುನಲ್ಲಿದ್ದಾರೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 25 ಸಾವಿರದ ಗಡಿ (25,541) ದಾಟಿದೆ. 1,262 ಸೋಂಕಿತರು ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಸಂಖ್ಯೆ 9.54 ಲಕ್ಷ ದಾಟಿದೆ. ದಿನದ ಅವಧಿಯಲ್ಲಿ 1.06 ಲಕ್ಷ ಮಂದಿಗೆ ಪರೀಕ್ಷೆ ಮಾಡಲಾಗಿದೆ.

45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಗುರುವಾರದಿಂದ (ಏ.1) ರಾಜ್ಯದಲ್ಲಿಯೂ 45 ಮೇಲ್ಪಟ್ಟವರಿಗೆ ಕೋವಿಡ್ ಲಸಿಕೆ ವಿತರಣೆ ಪ್ರಾರಂಭವಾಗಲಿದೆ. ಈ ಸಂಬಂಧ ಆರೋಗ್ಯ ಉಪ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿದಂತೆ ವಿವಿಧೆಡೆ ಲಸಿಕೆ ವಿತರಣೆಗೆ ಆರೋಗ್ಯ ಇಲಾಖೆ ಸಿದ್ಧತೆ ಮಾಡಿಕೊಂಡಿದೆ.

ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವ ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ವಿತರಿಸಲು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಶಿಫಾರಸು ಮಾಡಿದೆ. ಹೀಗಾಗಿ, ಇಲಾಖೆಯು ದಿನದ ಗುರಿಯನ್ನು 3 ಲಕ್ಷಕ್ಕೆ ಹಾಕಿಕೊಂಡಿದೆ. ಸದ್ಯ 3,500ಕ್ಕೂ ಅಧಿಕ ಕೇಂದ್ರಗಳಲ್ಲಿ ಲಸಿಕೆ ವಿತರಣೆ ಮಾಡಲಾಗುತ್ತಿದೆ. ರಾಜ್ಯದ 8,871 ಆರೋಗ್ಯ ಉಪ ಕೇಂದ್ರಗಳನ್ನು ಕೂಡ ಹಂತ ಹಂತವಾಗಿ ಲಸಿಕೆ ಕೇಂದ್ರಗಳನ್ನಾಗಿ ಪರಿವರ್ತಿಸಲು ಇಲಾಖೆ ನಿರ್ಧರಿಸಿದೆ. ಈ ಮೂಲಕ ಗುರಿ ಸಾಧಿಸಲು ಯೋಜನೆ ರೂಪಿಸಿದೆ. ‘ಕೋವಿನ್’ ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಿಕೊಂಡು ಅಥವಾ ನೇರವಾಗಿ ಕೇಂದ್ರಗಳಿಗೆ ಭೇಟಿ ನೀಡಿ ಲಸಿಕೆ ಪಡೆದುಕೊಳ್ಳಬಹುದಾಗಿದೆ.

ಮಂಗಳವಾರ 3,048 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಣೆ ಅಭಿಯಾನ ನಡೆದಿದೆ. ಮಧ್ಯಾಹ್ನ 3.30ರ ವೇಳೆಗೆ 37,686 ಮಂದಿಗೆ ಲಸಿಕೆ ವಿತರಣೆ ಮಾಡಲಾಗಿದೆ. ಲಸಿಕೆ ಪಡೆದವರಲ್ಲಿ 29,314 ಮಂದಿ ಹಿರಿಯ ನಾಗರಿಕರಾಗಿದ್ದಾರೆ. ಈವರೆಗೆ 35.90 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ. 5.57 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ 3.40 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. 60 ವರ್ಷ ಮೇಲ್ಪಟ್ಟವರಲ್ಲಿ 18.17 ಲಕ್ಷ ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. 45 ರಿಂದ 60 ವರ್ಷದೊಳಗಿನ ಕೋವಿಡೇತರ ಕಾಯಿಲೆ ಎದುರಿಸುತ್ತಿರುವವರಲ್ಲಿ 5.62 ಲಕ್ಷ ಮಂದಿ ಲಸಿಕೆ ಪಡೆದುಕೊಂಡಿದ್ದಾರೆ.

‘ಅಮೆರಿಕ ಕಂಪನಿಗಳ ಹೂಡಿಕೆಗೆ ಪೂರಕ ನೀತಿ’

ಪ್ರಜಾವಾಣಿ ವಾರ್ತೆ



ಡಾ.ಸಿ.ಎನ್. ಅಶ್ವತ್ಥನಾರಾಯಣ

ಬೆಂಗಳೂರು: ‘ಇಡೀ ದೇಶದಲ್ಲಿಯೇ ಮೊತ್ತಮೊದಲಿಗೆ ಎಂಜಿನಿಯರಿಂಗ್ ಸಂಶೋಧನೆ ಮತ್ತು ಅಭಿವೃದ್ಧಿ (ಇಆರ್ ಆ್ಯಂಡ್ ಡಿ) ನೀತಿಯನ್ನು ರಾಜ್ಯ ಸರ್ಕಾರ ಪ್ರಕಟಿಸಿದ್ದು, ಇದರಿಂದ ಅಮೆರಿಕ ಕಂಪನಿಗಳ ಹೂಡಿಕೆಗೆ ಹೆಚ್ಚು ಅನುಕೂಲವಾಗಲಿದೆ’ ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಕೇರಳದಲ್ಲಿನ ಚುನಾವಣಾ ಪ್ರಚಾರದ ಮಧ್ಯೆ, ಭಾರತ- ಅಮೆರಿಕ ಕಾರ್ಯತಂತ್ರದ ಸಹಭಾಗಿತ್ವ ವೇದಿಕೆ ಹಮ್ಮಿಕೊಂಡಿದ್ದ ವರ್ಚುವಲ್ ಸಭೆಯಲ್ಲಿ ತಿರುವನಂತಪುರದಿಂದಲೇ ಪಾಲ್ಗೊಂಡು ಮಾತನಾಡಿದ ಅವರು, ‘ಕೈಗಾರಿಕಾಭಿವೃದ್ಧಿಗೆ ಈ ನೀತಿ ಹೆಚ್ಚು ಪೂರಕವಾಗಲಿದೆ. ಅತ್ಯುತ್ತಮ ಮಾನವ ಸಂಪನ್ಮೂಲ ಸೃಷ್ಟಿಗೂ ಸಹಾಯವಾಗಲಿದೆ’ ಎಂದು ಅಭಿಪ್ರಾಯಪಟ್ಟರು.

‘ಹೊಸ ಉದ್ಯಮಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಎಲ್ಲ ರೀತಿಯ ಸಹಕಾರ ನೀಡುತ್ತಿದೆ. ರಾಜ್ಯದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ, ಭಾರತೀಯ ತಾಂತ್ರಿಕ ಸಂಸ್ಥೆ ಹಾಗೂ ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯಂಥ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳಿವೆ. ಹೀಗಾಗಿ, ಉತ್ಕೃಷ್ಟ ಮಾನವ ಸಂಪನ್ಮೂಲಕ್ಕೂ ರಾಜ್ಯದಲ್ಲಿ ಕೊರತೆ ಇಲ್ಲ’ ಎಂದರು.

‘ನೀತಿ ಆಯೋಗದ ಆವಿಷ್ಕಾರ ಸೂಚ್ಯಂಕದಲ್ಲಿ ರಾಜ್ಯವು 2019 ಮತ್ತು 2020ರಲ್ಲಿ ಮೊದಲ ಸ್ಥಾನದಲ್ಲಿದೆ. ಅದೇ ರೀತಿ ಎಲೆಕ್ಟ್ರಾನಿಕ್ಸ್ ವ್ಯವಸ್ಥೆ ವಿನ್ಯಾಸ ಮತ್ತು ನಿರ್ವಹಣೆ, ಅನಿಮೇಷನ್, ವಿಷ್ಯುಯೆಲ್ ಎಫೆಕ್ಟ್ಸ್, ಗೇಮ್ಸ್ ಮತ್ತು ಕಾಮಿಕ್ಸ್ ಕ್ಷೇತ್ರದಲ್ಲೂ ರಾಜ್ಯ ದಾಪುಗಾಲಿಡುತ್ತಿದೆ ಎಂದರು.

ವರ್ಚುಯಲ್ ಸಭೆಯಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ. ರಮಣರೆಡ್ಡಿ, ಭಾರತದಲ್ಲಿರುವ ಸ್ಯಾನ್‌ಫ್ರಾನ್ಸಿಸ್ಕೋ ರಾಜ್ಯದ ಕಾನ್ಸುಲ್ ಜನರಲ್ ಡಾ.ಟಿ.ವಿ. ನಾಗೇಂದ್ರ ಪ್ರಸಾದ್, ಉಪ ಕಾನ್ಸುಲ್ ಜನರಲ್ ರಾಜೇಶ್ ನಾಯಕ್, ಅಮೆರಿಕ-ಭಾರತ ಕಾರ್ಯತಂತ್ರ ವೇದಿಕೆಯ ಅಧ್ಯಕ್ಷ ಜಾನ್ ಚಾಂಬರ್ಸ್, ಇದೇ ವೇದಿಕೆಯ ವೆಸ್ಟ್ ಕೋಸ್ಟ್ ವಿಭಾಗದ ಮುಖ್ಯಸ್ಥೆ ದೀಪ್ತಿ ದೇಸಾಯಿ ಇದ್ದರು.

ದಾವಣಗೆರೆಯ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಪಾಲಿಕೆ ಸದಸ್ಯ ವಿರೇಶ ಅವರ ಹುಟ್ಟುಹಬ್ಬದ ಅಂಗವಾಗಿ ಆಯೋಜಿಸಿದ್ದ ಕುಸ್ತಿ ಪಂದ್ಯಾವಳಿಯಲ್ಲಿ ಸೆಣಸಾಡುತ್ತಿರುವ ಕುಸ್ತಿಪಟುಗಳು –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

‘ಕೋವಿಡ್: ಗಂಡಾಂತರದಲ್ಲಿ ದೇಶ’

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್–19 ಪರಿಸ್ಥಿತಿ ಮತ್ತಷ್ಟೂ ಹದಗೆಡುತ್ತಿದೆ. ಇಡೀ ದೇಶವೇ ಗಂಡಾಂತರಕ್ಕೆ ಸಿಲುಕುವ ಅಪಾಯವಿದ್ದು, ಯಾರೂ ಮೈಮರೆಯಬಾರದು ಎಂದು ಕೇಂದ್ರ ಸರ್ಕಾರ ಮಂಗಳವಾರ ಹೇಳಿದೆ.

ಕೋವಿಡ್ ಪ್ರಕರಣಗಳು ಹೆಚ್ಚಾಗಿ ವರದಿಯಾಗಿರುವ 10 ಜಿಲ್ಲೆಗಳ ಪೈಕಿ 8 ಜಿಲ್ಲೆಗಳು ಮಹಾರಾಷ್ಟ್ರದಲ್ಲಿಯೇ ಇವೆ. ದೆಹಲಿಯಲ್ಲಿ ಕೂಡ ಪ್ರಕರಣಗಳು ಹೆಚ್ಚುತ್ತಿದ್ದು, ಅದನ್ನೂ ಸಹ ಒಂದು ಜಿಲ್ಲೆಯಂದೇ ಪರಿಗಣಿಸಲಾಗಿದೆ ಎಂದು ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಪುಣೆ ಜಿಲ್ಲೆಯಲ್ಲಿ ಈವರೆಗೆ ಒಟ್ಟು 59,475 ಪ್ರಕರಣಗಳು ವರದಿಯಾಗಿವೆ. ಮುಂಬೈ (46,248), ನಾಗಪುರ (45,322), ಠಾಣೆ (35,264), ನಾಸಿಕ್ (26,553), ಔರಂಗಾಬಾದ್ (21,282), ಬೆಂಗಳೂರು ನಗರ (16,259), ನಾಂದೇಡ್ (15,171), ದೆಹಲಿ (8,032) ಹಾಗೂ ಅಹ್ಮದ್‌ನಗರ (7,952) ಗರಿಷ್ಠ ಪ್ರಕರಣಗಳು ಕಂಡು ಬಂದ ಜಿಲ್ಲೆಗಳಾಗಿವೆ’ ಎಂದು ಅವರು ಮಾಹಿತಿ ನೀಡಿದರು.

‘ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರಕರಣಗಳು ಹೆಚ್ಚುತ್ತಿವೆ. ಹೀಗಾಗಿ ಆರ್‌ಟಿ–ಪಿಸಿಆರ್ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯ ಇದೆ’ ಎಂದು ಭೂಷಣ್ ಹೇಳಿದರು.

ಕೋವಿಡ್‌ನಿಂದಾಗಿ ಒಂದು ವರ್ಷದಿಂದ ಸ್ಥಗಿತಗೊಂಡಿದ್ದ ಸಂಚಾರ

ಬೆಂಗಳೂರು–ಶ್ರೀನಗರಕ್ಕೆ ವಿಮಾನ ಸಂಚಾರ ಪುನರಾರಂಭ

ಪ್ರಜಾವಾಣಿ ವಾರ್ತೆ

ಶ್ರೀನಗರ: ‘ಕೋವಿಡ್ 19‘ ನಂತರ ಒಂದು ವರ್ಷದ ಕಾಲ ಸ್ಥಗಿತಗೊಂಡಿದ್ದ ಬೆಂಗಳೂರು – ಶ್ರೀನಗರ ನಡುವಿನ ನೇರ ವಿಮಾನ ಹಾರಾಟ ಪುನಃ ಆರಂಭವಾಗಿದ್ದು, ಸೋಮವಾರ ಮಧ್ಯಾಹ್ನ 3.35ಕ್ಕೆ ಬೆಂಗಳೂರಿನಿಂದ ಹೊರಟ ಇಂಡಿಗೊ ವಿಮಾನ ಸಂಜೆ 7ಕ್ಕೆ ಶ್ರೀನಗರದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿಯಿತು.

‘ರಾತ್ರಿ ವಿಮಾನಗಳ ಸಂಚಾರ ಆರಂಭವಾಗಿದ್ದು, ಇದು ಸ್ಥಳೀಯರಿಗೆ ಮತ್ತು ಪ್ರವಾಸಿಗರಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ‘ ಎಂದು ಶ್ರೀನಗರ ವಿಮಾನ ನಿಲ್ದಾಣ ಪ್ರಾಧಿಕಾರದ (ಎಎಐ) ನಿರ್ದೇಶಕ ಸಂತೋಷ್ ಧೋಕ್ ಹೇಳಿದ್ದಾರೆ.

ಬೆಂಗಳೂರು-ಶ್ರೀನಗರ ನಡುವೆ ಪ್ರತಿ ದಿನ ವಿಮಾನಗಳು ಹಾರಾಟ ನಡೆಸಲಿವೆ. ಇದರ ಜತೆಗೆ ವಿವಿಧ ವಿಮಾನಯಾನ ಸಂಸ್ಥೆಗಳು ಶ್ರೀನಗರ ಮತ್ತು ಕೋಲ್ಕತ್ತಾ, ಅಹಮದಾಬಾದ್ ಮತ್ತು ಮುಂಬೈನಂತಹ ವಿವಿಧ ನಗರಗಳ ನಡುವೆ ನೇರ ವಿಮಾನ ಹಾರಾಟ ಆರಂಭಿಸಿವೆ ಎಂದು ಸಂತೋಷ್ ತಿಳಿಸಿದ್ದಾರೆ.

ನಾಳೆಯಿಂದ ವಿಮಾನಯಾನ ಟಿಕೆಟ್ ದರ ದುಬಾರಿ

ನವದೆಹಲಿ: ವಿಮಾನ ನಿಲ್ದಾಣಗಳಲ್ಲಿ ಭದ್ರತೆ ಹೆಚ್ಚಳ, ಪ್ರಯಾಣಿಕರು ಮತ್ತು ಅವರ ಲಗೇಜ್‌ಗಳ ತಪಾಸಣೆ ಸೇರಿದಂತೆ ವಿವಿಧ ಭದ್ರತಾ ಸೇವೆಗಳಿಗೆ ನೀಡುವ ‘ವಿಮಾನಯಾನ ಭದ್ರತಾ ಶುಲ್ಕ(ಎಎಸ್‌ಎಫ್) ನಾಗರಿಕ ವಿಮಾನಯಾನ ನಿಯಂತ್ರಕರು ಹೆಚ್ಚಿಸಿರುವ ಹಿನ್ನೆಲೆಯಲ್ಲಿ, ಗುರುವಾರದಿಂದ (ಏಪ್ರಿಲ್ 1) ವಿಮಾನಯಾನದ ಟಿಕೆಟ್‌ಗಳು ದುಬಾರಿಯಾಗಲಿವೆ.

‘ದೇಶದೊಳಗೆ ಸಂಚರಿಸುವ ಪ್ರತಿ ಪ್ರಯಾಣಿಕರಿಗೆ ವಿಮಾನಯಾನ ಭದ್ರತಾ ಶುಲ್ಕ ₹200, ಅಂತರರಾಷ್ಟ್ರೀಯ ಪ್ರಯಾಣಿಕರಿಗೆ 12ಡಾಲರ್ ಅಥವಾ ಅಷ್ಟೇ ಬೆಲೆಯ ಭಾರತೀಯ ರೂಪಾಯಿಯನ್ನು ನಿಗದಿಪಡಿಸಲಾಗಿದೆ. ಇದುವರೆಗೆ ₹ 160 ಮತ್ತು 5.20 ಡಾಲರ್ ಶುಲ್ಕ ಇತ್ತು‘ ಎಂದು ನಾಗರಿಕ ವಿಮಾನಯಾನ ನಿರ್ದೇಶನಾಲಯ ತಿಳಿಸಿದೆ.

ಹೊಸ ವಿಮಾನಯಾನ ಭದ್ರತಾ ಶುಲ್ಕ ಏಪ್ರಿಲ್ 1ರಿಂದ ಖರೀದಿಸುವ ಟಿಕೆಟ್‌ಗಳಿಗೆ ಅನ್ವಯವಾಗಲಿದೆ ಎಂದು ನಾಗರಿಕ ವಿಮಾನಯಾನ ನಿಯಂತ್ರಕರು ತಿಳಿಸಿದ್ದಾರೆ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ವಿಮಾನಯಾನ ಭದ್ರತಾ ಶುಲ್ಕವನ್ನು ಏರಿಕೆ ಮಾಡಲಾಗಿತ್ತು.

ಉಡಾನ್: 22 ಹೊಸ ವಿಮಾನ ಹಾರಾಟ

ನವದೆಹಲಿ (ಪಿಟಿಐ): ಕಡಿಮೆ ದರದಲ್ಲಿ ವಿಮಾನ ಪ್ರಯಾಣ ಸೌಲಭ್ಯ ಹಾಗೂ ಸಣ್ಣ ನಗರಗಳಿಗೆ ಸಂಪರ್ಕ ಕಲ್ಪಿಸುವ ಉದ್ದೇಶದ ‘ಉಡಾನ್’ ಯೋಜನೆಯಡಿ ಕಳೆದ ಮೂರು ದಿನಗಳಲ್ಲಿ ಹೊಸದಾಗಿ 22 ವಿಮಾನಗಳ ಹಾರಾಟ ಆರಂಭವಾಗಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ಮಂಗಳವಾರ ಹೇಳಿದೆ.

ಕರ್ನೂಲ್–ಬೆಂಗಳೂರು, ಆಗ್ರಾ–ಬೆಂಗಳೂರು ನಡುವೆ ಸೇರಿದಂತೆ ಒಟ್ಟು 22 ವಿಮಾನಗಳು ಹಾರಾಟ ಆರಂಭಿಸಿವೆ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ತಂತ್ರಜ್ಞಾನ



ಸ್ಮಾರ್ಟ್‌ಫೋನ್ ಸುರಕ್ಷತೆಗಿರಲಿ ಕಾಳಜಿ

ಇಂದು ಸ್ಮಾರ್ಟ್‌ಫೋನೇ ನಮ್ಮ ಸರ್ವಸ್ವ. ವೈಯಕ್ತಿಕ ಬಳಕೆಗಷ್ಟೇ ಅಲ್ಲದೆ, ನಿತ್ಯದ ವಹಿವಾಟಿಗೂ ಅದು ಅತ್ಯಗತ್ಯ. ಹೀಗಿರುವಾಗ ಅದರ ರಕ್ಷಣೆ ಮತ್ತು ಸುರಕ್ಷತೆಗೆ ಒಂದಷ್ಟು ಎಚ್ಚರಿಕೆಗಳು ಇರಲೇಬೇಕಲ್ಲವೇ?

ವಿಶ್ವನಾಥ ಎಸ್.

ಕರೆ ಮಾಡಲು ಮತ್ತು ಟೆಕ್ಸ್ಟ್ ಮೆಸೇಜ್ ಕಳುಹಿಸಲಷ್ಟೇ ಸೀಮಿತವಾಗಿದ್ದ ಸೆಲ್‌ಫೋನ್ ಇಂದು ನಮ್ಮ ನಿತ್ಯಜೀವನದ ಅವಿಭಾಜ್ಯ ಅಂಗವಾಗಿಬಿಟ್ಟಿದೆ. ಅಲಾರ್ಮ್, ಫಿಟ್‌ನೆಸ್ ಟ್ರ್ಯಾಕರ್, ಕ್ಯಾಲ್ಕುಲೇಟರ್, ಕಂಪ್ಯೂಟರ್, ಲ್ಯಾಪ್‌ಟಾಪ್ ಹೀಗೆ ಇನ್ನೂ ಅನೇಕ ಸಾಧನಗಳ ಬಹುತೇಕ ಕೆಲಸಗಳನ್ನು ಸ್ಮಾರ್ಟ್‌ಫೋನ್ ಒಂದೇ ನಿರ್ವಹಿಸುತ್ತಿದೆ. ಹೀಗಾಗಿ, ಒಂದು ಹೊತ್ತಿನ ಊಟವನ್ನಾದರೂ ಬಿಡಬಹುದು, ಫೋನ್ ಬಿಟ್ಟು ಇರಲಾಗದು. ಒಂದರ್ಥದಲ್ಲಿ ಇದರಲ್ಲಿ ನಮ್ಮ ಸರ್ವಸ್ವವನ್ನೇ ಇಟ್ಟಿರುತ್ತೇವೆ. ಹೀಗಿರುವಾಗ ಇಂತಹ ಸ್ಮಾರ್ಟ್‌ಫೋನ್ ಅನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುವ ಬಗ್ಗೆಯೂ ಹೆಚ್ಚು ಗಮನ ವಹಿಸಬೇಕಾದ ಅಗತ್ಯ ಮತ್ತು ಅನಿವಾರ್ಯ ಇದ್ದೇ ಇದೆ.

ಸಾರ್ವಜನಿಕ ವೈ–ಫೈ ಬಗ್ಗೆ ಎಚ್ಚರ

ಸಾರ್ವಜನಿಕವಾಗಿ ಲಭ್ಯವಾಗುವ ವೈ–ಫೈ ಸೇವೆಗಳನ್ನು ಆದಷ್ಟೂ ಬಳಸದೇ ಇರುವುದೇ ಒಳಿತು. ಇಂತಹ ಕಡೆಗಳಲ್ಲಿ ಬಳಕೆದಾರರ ಮಾಹಿತಿಗೆ ಸುರಕ್ಷತೆಯ ಖಾತರಿ ಇರುವುದಿಲ್ಲ. ಮೊಬೈಲ್‌ನಲ್ಲಿ ಬ್ಯಾಂಕಿಂಗ್ ವಹಿವಾಟು ನಡೆಸುವಾಗ ಮೊಬೈಲ್ ಡೇಟಾ ಅಥವಾ ಮನೆಯಲ್ಲಿ ಇರುವ ವೈ–ಫೈ ಹಾಟ್‌ಸ್ಪಾಟ್ ಅನ್ನೇ ಬಳಸಿ.

ಸ್ಕ್ರೀನ್ ಲಾಕ್: ಸ್ಮಾರ್ಟ್‌ಫೋನ್ ಬಳಸುವವರಲ್ಲಿ ಹಲವರು ಸ್ಕ್ರೀನ್ ಲಾಕ್ ಬಗ್ಗೆ ಹೆಚ್ಚು ಗಮನ ಕೊಡುವುದೇ ಇಲ್ಲ. ತಕ್ಷಣಕ್ಕೆ ಬಳಸಲು ಅನುಕೂಲ ಆಗಬೇಕು ಎನ್ನುವ ಏಕೈಕ ಕಾರಣಕ್ಕೆ ಕೆಲವರು ಪವರ್ ಬಟನ್ ಮುಟ್ಟಿದಾಕ್ಷಣ ಸ್ಕ್ರೀನ್ ತೆರೆಯುವಂತೆ ಇಟ್ಟುಕೊಂಡಿದ್ದರೆ, ಇನ್ನೂ ಕೆಲವರು ಸ್ವೈಪ್ ಆಯ್ಕೆ ಇಟ್ಟುಕೊಂಡಿರುತ್ತಾರೆ. ಇದರಿಂದ ಮೊಬೈಲ್‌ಗೆ ಸುರಕ್ಷತೆ ಸಿಗುವುದಿಲ್ಲ. ಇವುಗಳಿಗೆ ಬದಲಾಗಿ ಕಷ್ಟವಾದ ಪಾಸ್‌ವರ್ಡ್ ಅಥವಾ ಪ್ಯಾಟರ್ನ್ ಇಟ್ಟುಕೊಳ್ಳುವುದು ಸೂಕ್ತ. ಈಗಂತೂ ಎಲ್ಲಾ ಸ್ಮಾರ್ಟ್‌ಫೋನ್‌ಗಳಲ್ಲಿಯೂ ಫೇಸ್‌ಐಡಿ ಮತ್ತು ಫಿಂಗರ್‌ಪ್ರಿಂಟ್ ಅನ್‌ಲಾಕ್ ಆಯ್ಕೆಗಳು ಇರುವುದರಿಂದ ಈ ಆಯ್ಕೆಗಳನ್ನು ಬಳಸಿದರೆ ತಕ್ಷಣಕ್ಕೆ ಯಾರೂ ನಮ್ಮ ಮೊಬೈಲ್ ದುರುಪಯೋಗಪಡಿಸಿಕೊಳ್ಳಲು ಆಗುವುದಿಲ್ಲ.

ಸಾಫ್ಟ್‌ವೇರ್ ಅಪ್‌ಡೇಟ್: ಸ್ಕ್ರೀನ್ ಲಾಕ್ ಮಾಡುವುದರಿಂದ ಬೇರೆಯವರು ನಮ್ಮ ಫೋನ್ ಬಳಸಲು ಆಗುವುದಿಲ್ಲ ಎನ್ನುವುದು ಸರಿ. ಆದರೆ ಹ್ಯಾಕರ್‌ಗಳಿಂದ ರಕ್ಷಣೆ ಪಡೆಯಲು ಇಷ್ಟು ಸಾಲುವುದಿಲ್ಲ. ಕಾರ್ಯಾಚರಣಾ ವ್ಯವಸ್ಥೆಯನ್ನು (ಒಎಸ್) ಆಗಾಗ್ಗೆ ಅಪ್‌ಡೇಟ್ ಮಾಡುತ್ತಿರಬೇಕು. ವರದಿಗಳ ಪ್ರಕಾರ, ಆಂಡ್ರಾಯ್ಡ್ ಫೋನ್‌ಗಳು ಹ್ಯಾಕಿಂಗ್‌ಗೆ ಒಳಗಾಗುವ ಪ್ರಮಾಣ ಹೆಚ್ಚು. ಹೀಗಾಗಿ ಒಎಸ್ ಅಪ್‌ಡೇಟ್ ಬಗ್ಗೆ ಹೆಚ್ಚಿನ ಗಮನ ಅಗತ್ಯ. ಆದರೆ ಬಹಳಷ್ಟು ಜನರು ಒಎಸ್ ಆಟೊಮೆಟಿಕ್ ಅಪ್‌ಡೇಟ್ ಅನ್ನು ಆಫ್ ಮಾಡಿರುತ್ತಾರೆ. ಹೀಗೆ ಮಾಡುವುದರಿಂದ ಕಂಪನಿಯು ನೀಡುವ ಸಾಫ್ಟ್‌ವೇರ್ ಅಪ್‌ಡೇಟ್ ನೋಟಿಫಿಕೇಷನ್ ಬರುವುದೇ ಇಲ್ಲ. ಫೋನ್‌ಗೆ ಸುರಕ್ಷತೆ ಬೇಕು ಎಂದಾದರೆ ಆಟೊಮೆಟಿಕ್ ಅಪ್‌ಡೇಟ್ ಸದಾ ಆನ್ ಆಗಿರುವುದು ಒಳಿತು.

ವೈಯಕ್ತಿಕ ಲಾಗಿನ್ ಮತ್ತು ಪಾವತಿ ಮಾಹಿತಿಗಳನ್ನು ಸೇವ್ ಮಾಡದಿರಿ: ಬ್ರೌಸರ್ ಬಳಸುವಾಗ ಯೂಸರ್‌ನೇಮ್ ಮತ್ತು ಪಾಸ್‌ವರ್ಡ್ ಆಟೊ ಸೇವ್ ಆಗುವಂತೆ ಮಾಡಬೇಡಿ. ಲಾಗಿನ್ ಆಗುವ ಸಂದರ್ಭದಲ್ಲಿ ಪಾಸ್‌ವರ್ಡ್ ನೀಡಿದ ಬಳಿಕ ಅದರ ಕೆಳಗೆ Remember for next time ಎನ್ನುವಲ್ಲಿ ರೈಟ್ ಟಿಕ್ ಆಗಿರುತ್ತದೆ. ಅದನ್ನು ಅನ್‌ಟಿಕ್ ಮಾಡಿ. ಫೇಸ್‌ಬುಕ್ ಲಾಗಿನ್ ಆಗುವಾಗ ರಿಮೆಂಬರ್ ಮೈ ಪಾಸ್‌ವರ್ಡ್ ಎನ್ನುವ ಸೂಚನೆ ಬರುತ್ತದೆ. ಅದಕ್ಕೆ ಒಪ್ಪಿಗೆ ನೀಡಿದರೆ ಮುಂದೆಂದೂ ನೀವು ಫೇಸ್‌ಬುಕ್ ಬಳಸುವಾಗ ಪಾಸ್‌ವರ್ಡ್ ನೀಡುವ ಪ್ರಮೇಯವೇ ಬರುವುದಿಲ್ಲ. ಅದೇ ರೀತಿ ಆನ್‌ಲೈನ್ ಪೇಮೆಂಟ್ ಮಾಡುವಾಗಲೂ ನಮ್ಮ ಡೆಬಿಟ್ ಕಾರ್ಡ್‌ನ ಮಾಹಿತಿಗಳು ಸೇವ್ ಆಗುವಂತೆ ಮಾಡುತ್ತೇವೆ. ಫೋನ್ ಹ್ಯಾಕ್ ಆದರೆ, ಫೇಸ್‌ಬುಕ್ ಪಾಸ್‌ವರ್ಡ್, ಡೆಬಿಟ್ ಕಾರ್ಡ್ ಮಾಹಿತಿಗಳು ಹ್ಯಾಕರ್ ಕೈಗೆ ಸುಲಭವಾಗಿ ಸಿಗುತ್ತವೆ.

ಅಧಿಕೃತ ಮೂಲಗಳಿಂದಲೇ ಆ್ಯಪ್ ಡೌನ್‌ಲೋಡ್: ಯಾವುದೇ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡುವುದಿದ್ದರೂ ಅಧಿಕೃತ ಮೂಲಗಳನ್ನೇ ಬಳಸಿ. ಆಂಡ್ರಾಯ್ಡ್ ಆಗಿದ್ದರೆ ಗೂಗಲ್ ಪ್ಲೇ ಸ್ಟೋರ್, ಆ್ಯಪಲ್ ಫೋನ್ ಆಗಿದ್ದರೆ ಐಒಎಸ್ ಬಳಸಿ. ಹೀಗೆ ಮಾಡುವುದರಿಂದ ಮಾಲ್‌ವೇರ್, ಫಿಶಿಂಗ್, ಹ್ಯಾಕಿಂಗ್ ಸಾಧ್ಯತೆಗಳು ಕಡಿಮೆ. ಹಣ ಪಾವತಿ ಅಥವಾ ವರ್ಗಾವಣೆಗೆ ಆದಷ್ಟೂ ಬ್ಯಾಂಕ್‌ಗಳು ನೀಡುವ ಆ್ಯಪ್‌ಗಳು, ಪೇಟಿಎಂ, ಗೂಗಲ್ ಪೇ, ಫೋನ್ ಪೇ ತರಹದ ಅಧಿಕೃತ ಆ್ಯಪ್‌ಗಳನ್ನೇ ಬಳಸಿ.

ಈ ಮೇಲೆ ಹೇಳಿದ ಎಲ್ಲವೂ ನಮಗೆ ಗೊತ್ತಿರುವುದೇ. ಆದರೆ, ಮರೆವು ಅಥವಾ ನಿರ್ಲಕ್ಷ್ಯದಿಂದ ಬಹಳಷ್ಟನ್ನು ನಾವು ಅನುಸರಿಸುವುದೇ ಇಲ್ಲ. ಊರು ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದಂತೆ ಆಗಬಾರದು ಅಲ್ವೇ?

Nokia 3.4 ಉತ್ತಮ ಬ್ಯಾಟರಿ, ಆಕರ್ಷಕ ವಿನ್ಯಾಸದ ಬಜೆಟ್ ಫೋನ್

ನೋಕಿಯಾ 3.4 ಪ್ಯೂರ್ ಆಂಡ್ರಾಯ್ಡ್ ಫೋನ್. ಬಲ ಚಿತ್ರ: ಪ್ರಧಾನ ಕ್ಯಾಮೆರಾ ಸೆಟಪ್

ಕೋವಿಡ್‌-19 ಕಾಟದ ಲಾಕ್‌ಡೌನ್ ಘೋಷಣೆಯಾಗಿ ಒಂದು ವರ್ಷ ಆಗುತ್ತಿರುವಂತೆಯೇ ಸ್ಮಾರ್ಟ್‌ಫೋನ್ ಕಂಪನಿಗಳು ಹೊಸ ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಧಾವಂತದಿಂದ ಬಿಡುಗಡೆ ಮಾಡಲಾರಂಭಿಸಿವೆ. ಇದೀಗ ನೋಕಿಯಾ 3.4 ಹಾಗೂ ನೋಕಿಯಾ 5.4 ಬಿಡುಗಡೆಯಾಗಿದ್ದು, ಪ್ರಜಾವಾಣಿಗೆ ದೊರೆತ ನೋಕಿಯಾ 3.4 ಸಾಧನ ಹೇಗಿದೆ? ಇಲ್ಲಿದೆ ವಿಮರ್ಶೆ.

ಅವಿನಾಶ್ ಬಿ.

ವಿಮರ್ಶೆ

ಇತ್ತೀಚೆಗಷ್ಟೇ ನೋಕಿಯಾ 2.4 ಬಿಡುಗಡೆ ಮಾಡಿದ್ದ ಹೆಚ್‌ಎಂಡಿ ಗ್ಲೋಬಲ್ ಕಂಪನಿ, ಇದೀಗ ನೋಕಿಯಾ 3.4 ಹಾಗೂ ನೋಕಿಯಾ 5.4 ಬಿಡುಗಡೆಗೊಳಿಸಿದ್ದು, ಪ್ರಜಾವಾಣಿಗೆ ದೊರೆತ ನೋಕಿಯಾ 3.4 ಸಾಧನ ಹೇಗಿದೆ? ಇಲ್ಲಿದೆ ವಿಮರ್ಶೆ.

ವೈಶಿಷ್ಟ್ಯಗಳು ಮತ್ತು ವಿನ್ಯಾಸ

ನೋಕಿಯಾ 2.4 ಕೈಯಲ್ಲಿ ಹಿಡಿಯಲು ದೊಡ್ಡದಾಯಿತು ಎಂದುಕೊಂಡಿದ್ದವರಿಗೆ ಕೊಂಚ ಚಿಕ್ಕದಾಗಿರುವ ನೋಕಿಯಾ 3.4 ಹಿಡಿಸಬಹುದು. ಕೈಗೆಟಕುವ ಬೆಲೆಯಲ್ಲಿರುವ (₹11,999) ಈ ಆಧುನಿಕ ವೈಶಿಷ್ಟ್ಯಗಳಿರುವ ಸ್ಮಾರ್ಟ್‌ಫೋನ್ ಕ್ವಾಲ್‌ಕಂ ಸ್ನ್ಯಾಪ್‌ಡ್ರ್ಯಾಗನ್ 460 ಪ್ರೊಸೆಸರ್ ಅನ್ನು ಬಳಸುತ್ತಿದ್ದು, 4000 mAh ಬ್ಯಾಟರಿ ಹೊಂದಿದೆ. ಪ್ಯೂರ್ ಆಂಡ್ರಾಯ್ಡ್ ಅಂದರೆ ಯಾವುದೇ ಅನ್ಯ ಆ್ಯಪ್‌ಗಳಿಲ್ಲದೆ ಪರಿಶುದ್ಧವಾದ ಆಂಡ್ರಾಯ್ಡ್ 10 ಕಾರ್ಯಾಚರಣಾ ವ್ಯವಸ್ಥೆ, ಮುಂಭಾಗದಲ್ಲಿ 8 ಮೆಗಾಪಿಕ್ಸೆಲ್ ಲೆನ್ಸ್ ಹಾಗೂ ಪ್ರಧಾನ ಕ್ಯಾಮೆರಾದಲ್ಲಿ 13 + 5 + 2 ಮೆಗಾಪಿಕ್ಸೆಲ್ ಸಾಮರ್ಥ್ಯ ಹೊಂದಿರುವ ಲೆನ್ಸ್‌ನ ಕ್ಯಾಮೆರಾಗಳಿವೆ.

6.39 ಇಂಚು ಸ್ಕ್ರೀನ್, ಹೋಲ್ ಪಂಚ್ ವಿನ್ಯಾಸದ ನಾಚ್ (ಸ್ಕ್ರೀನ್ ಮೇಲೆ ಸೆಲ್ಫೀ ಕ್ಯಾಮೆರಾಕ್ಕಾಗಿ ಇರುವ ಮುಕ್ತಸ್ಥಳ) ಸ್ಕ್ರೀನ್‌ನ ಎಡಮೂಲೆಯಲ್ಲಿದೆ. ಹಿಂಭಾಗದಲ್ಲಿ ತ್ರಿವಳಿ ಕ್ಯಾಮೆರಾ ಸೆಟಪ್‌ಗಿರುವ ವೃತ್ತಾಕಾರದ ಮಾಡ್ಯೂಲ್, ಫಿಂಗರ್‌ಪ್ರಿಂಟ್ ಸ್ಕ್ಯಾನರ್ ಇದ್ದು, 180 ಗ್ರಾಂ ತೂಕ ಹಾಗೂ ಯುಎಸ್‌ಬಿ ಟೈಪ್ ಸಿ ಚಾರ್ಜಿಂಗ್ ಪೋರ್ಟ್ ಇದೆ.

ಫುಲ್ ಹೆಚ್‌ಡಿ + ರೆಸೊಲ್ಯುಶನ್ ಡಿಸ್‌ಪ್ಲೇ, 4ಜಿಬಿ RAM ಹಾಗೂ 64GB ಸಂಗ್ರಹಣಾ ಸಾಮರ್ಥ್ಯವಿದ್ದು, ಒಂದೇ ಮಾಡೆಲ್ ಮಾರುಕಟ್ಟೆಗೆ ಬಂದಿರುವುದು ವಿಶೇಷ.

4ಜಿಬಿ RAM ಹಾಗೂ ಸ್ನ್ಯಾಪ್‌ಡ್ರ್ಯಾಗನ್ 460 ಪ್ರೊಸೆಸರ್‌ಗಳ ಹೊಂದಾಣಿಕೆಯಿಂದಾಗಿ ಆ್ಯಪ್‌ಗಳು ಕ್ಷಿಪ್ರವಾಗಿಯೇ ಲೋಡ್ ಆಗಲು ತೊಂದರೆಯಾಗಲಿಲ್ಲ. ಫಿಂಗರ್‌ಪ್ರಿಂಟ್ ಸ್ಕ್ಯಾನರ್ ಅಂತೂ ತುಂಬ ವೇಗವಾಗಿ ಕೆಲಸ ಮಾಡಿದೆ. ಅದೇ ರೀತಿ ಮುಖ ಗುರುತಿಸುವ ಫೇಸ್ ರೆಕಗ್ನಿಶನ್ ತಂತ್ರಜ್ಞಾನ ಸುಲಲಿತವಾಗಿದೆ. 4000 mAh ಬ್ಯಾಟರಿ ಎರಡು ದಿನಗಳ ಸಾಮಾನ್ಯ ಬಳಕೆಗೆ ಸಾಕಾಯಿತು. 5W ಚಾರ್ಜರ್ ಜೊತೆಗೆ ನೀಡಲಾಗಿದ್ದು, ಚಾರ್ಜಿಂಗ್‌ನ ವೇಗವು ಈಗಿನ ಅಗತ್ಯತೆಗೆ ಪೂರಕವಾಗಿಲ್ಲ ಅಂತನ್ನಿಸಿತು. ಪೂರ್ತಿ ಚಾರ್ಜ್ ಆಗಲು ಸುಮಾರು ಎರಡುವರೆ ಗಂಟೆಗೂ ಹೆಚ್ಚು ಸಮಯ ಬೇಕಾಯಿತು.

ಕ್ಯಾಮೆರಾ

13 + 5 + 2 ಮೆಗಾಪಿಕ್ಸೆಲ್ ಸಾಮರ್ಥ್ಯದ ಪ್ರಧಾನ ಕ್ಯಾಮೆರಾ ಸೆಟಪ್, 8 ಮೆಗಾಪಿಕ್ಸೆಲ್ ಸೆಲ್ಫೀ ಕ್ಯಾಮೆರಾ ಇದೆ. ಫೋಟೊಗಳು ಈ ಬಜೆಟ್‌ನ ಫೋನ್‌ಗಳಿಗೆ ಹೋಲಿಸಿದರೆ ಚೆನ್ನಾಗಿಯೇ ಬಂದಿವೆ. ಫೋಟೋಗಳಿಗೆ ಲೋಗೋ ರೀತಿಯಲ್ಲಿ ನಮ್ಮದೇ ಮುದ್ರೆ ಬಳಸುವ ಆಯ್ಕೆ ವಿಶೇಷವಾಗಿ ಗಮನ ಸೆಳೆಯುತ್ತದೆ.

ಒಟ್ಟಿನಲ್ಲಿ, ಹೊಸ ಆಂಡ್ರಾಯ್ಡ್ ಅಪ್‌ಡೇಟ್‌ಗಳಿರುವ, ಬ್ಲಾಟ್‌ವೇರ್‌ಗಳಿಲ್ಲದ ಶುದ್ಧ ಕಾರ್ಯಾಚರಣಾ ವ್ಯವಸ್ಥೆಯ ನೋಕಿಯಾ 3.4 ಅತ್ಯಾಧುನಿಕ ತಂತ್ರಾಂಶಗಳನ್ನು ಹೊಂದಿದೆ. ಅತ್ಯುತ್ತಮ ಬಿಲ್ಡ್ ಗುಣಮಟ್ಟ, ಆಕರ್ಷಕ ವಿನ್ಯಾಸ ಹೊಂದಿದ್ದು, ನಿತ್ಯದ ಸ್ಮಾರ್ಟ್ ಫೋನ್ ಸಂಬಂಧಿತ ಚಟುವಟಿಕೆಗಳಿಗೆ ಅನುಕೂಲಕರವೇ ಆಗಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

0^0 ಮತ್ತು 90^0 ಯ ತ್ರಿಕೋನಮಿತಿ ಅನುಪಾತಗಳು

ಗಣಿತ

ಎಸ್ಸೆಸ್ಸೆಲ್ಸಿ

ABC ಯಲ್ಲಿ $\lfloor A = 0^o$ ಆದರೆ $AC = BC$ ಆಗುತ್ತದೆ BC ಯು ಸೊನ್ನೆಗೆ ಸಮೀಪವಾಗುತ್ತದೆ.

ಇದು ನಮಗೆ $A = 0^0$ ಆದಾಗ SinA ಮತ್ತು CosA ಬೆಲೆಗಳನ್ನು ವ್ಯಾಖ್ಯಾನಿಸಲು $\sin 0^0 = 0$ ಮತ್ತು $\cos 0^0 = 1$ ಎಂದು ವ್ಯಾಖ್ಯಾನಿಸುತ್ತೇವೆ.

$$ton0^o = \frac{Sin0^o}{Cos0^o} = 0,\ Cot0^o = \frac{1}{ton0^o}$$

ನಿರ್ದಿಷ್ಟವಾಗಿ ವ್ಯಕ್ತಪಡಿಸಿಲ್ಲ.

$$sec0^o = \frac{1}{cos0^o} \text{ ಮತ್ತು } Cosee0^o = \frac{1}{sin0^o}$$

ನಿರ್ದಿಷ್ಟವಾಗಿ ವ್ಯಕ್ತಪಡಿಸಿಲ್ಲ.

ಹಾಗೆಯೇ $\lfloor A$ ಯು 90^0 ಆದರೆ $AC = BC$ ಆಗುತ್ತದೆ. ಆಗ AB ಯ ಅಳತೆ ಸೊನ್ನೆಗೆ ಹತ್ತಿರವಾಗುತ್ತದೆ. ಆದ್ದರಿಂದ CosA ಯು ಸೊನ್ನೆಗೆ ಹತ್ತಿರವಾಗುತ್ತದೆ.

ಆದ್ದರಿಂದ $\sin 90^0 = 1$ ಮತ್ತು $\cos 90^0 = 0$ ಎಂದು ವ್ಯಾಖ್ಯಾನಿಸುತ್ತೇವೆ.

$\lfloor A$	0^o	30^o	45^o	60^o	90^o
Sin A	0	$1/2$	$\frac{1}{\sqrt{2}}$	$\frac{\sqrt{3}}{2}$	1
CosA	1	$\frac{\sqrt{3}}{2}$	$\frac{1}{\sqrt{2}}$	$1/2$	0
tonA	0	$\frac{1}{\sqrt{3}}$	1	$\sqrt{3}$	N.D
CosecA	N.D	2	$\sqrt{2}$	$\frac{2}{\sqrt{3}}$	1
SecA	1	$\frac{2}{\sqrt{3}}$	$\sqrt{2}$	2	N.D
CotA	N.D	$\sqrt{3}$	1	$\frac{1}{\sqrt{3}}$	0

ಉದಾಹರಣೆ:

Δ ABC ಯಲ್ಲಿ B ಶೃಂಗದಲ್ಲಿ ಲಂಬಕೋನ ಏರ್ಪಟ್ಟಿದೆ. $AB = 5cm$ ಮತ್ತು $ACB = 30^0$ BC ಮತ್ತು AC ಬಾಹುಗಳ ಉದ್ದ ಕಂಡುಹಿಡಿಯಿರಿ.



ಪರಿಹಾರ BC ಯ ಉದ್ದವನ್ನು ಕಂಡುಹಿಡಿಯಲು ನಾವು BC ಮತ್ತು AB ದತ್ತಯನ್ನು ಒಳಗೊಂಡ ತ್ರಿಕೋನ ಮಿತಿ ಅನುಪಾತವನ್ನು ಪರಿಗಣಿಸೋಣ.

$$ton\ c = \frac{AB}{BC}$$

$$ton30^o = \frac{5}{BC}$$

$$\frac{1}{\sqrt{3}} = \frac{5}{BC}$$

$$BC = 5\sqrt{3}\ cm$$

AC ಉದ್ದವನ್ನು ಕಂಡು ಹಿಡಿಯಲು

$$Sin30^o = \frac{AB}{AC}$$

$$\frac{1}{2} = \frac{5}{AC}$$

$$A = 10cm$$

ಉದಾಹರಣೆ: ΔPQR ನಲ್ಲಿ $\lfloor Q = 90^o$, $PQ = 3cm$ ಮತ್ತು $PR = 6cm$ QPR ಮತ್ತು PQR ಕಂಡು ಹಿಡಿಯಿರಿ.



$PQ = 3cm$ ಮತ್ತು $PR = 6cm$

ಪರಿಹಾರ: ದತ್ತ:

$$Sin\ R = \frac{PQ}{PR}$$

$$Sin\ R \frac{3}{6} = 1/2$$

ಪೂರಕ ಕೋನಗಳ ತ್ರಿಕೋನ ಮಿತಿ ಅನುಪಾತಗಳು ಎರಡು ಕೋನಗಳ ಮೊತ್ತ 90^0 ಗೆ ಸಮವಾಗಿದ್ದರೆ ಅವು ಪೂರಕ ಕೋನಗಳಾಗಿರುತ್ತವೆ ಎಂಬುದನ್ನು ತಿಳಿದಿದೆ.



$\lfloor A + \lfloor C = 90^o$, ಆದ್ದರಿಂದ ಇವು ಅಂತಹ ಒಂದು ಜೋಡಿಯಾಗಿದೆ.

$$SinA = \frac{BC}{AC},\ COSA = \frac{AB}{AC}\ \ tonA = \frac{BC}{AB}$$

$$Cosec\ A = \frac{AC}{BC},\ Sec\ A = \frac{AC}{AB}\ \ CotA = \frac{AB}{BC}$$

$\lfloor C = 90^o - \lfloor A$ ದ ತ್ರಿಕೋನ ಮಿತಿ ಅನುಪಾತಗಳನ್ನು ಬರೆಯೋಣ. 90^0- A ಗೆ ಅಭಿಮುಖ ಬಾಹು ಮತ್ತು BC ಯು ಪಾರ್ಶ್ವ ಬಾಹು ಆಗಿದೆ ಎಂಬುದನ್ನು ಕಂಡುಕೊಳ್ಳುವಿರಿ.

$$Sin(90 - A) = \frac{AC}{BC},\ cos = (90 - A)\frac{BC}{AC},\ ton(90^o - A)\frac{AB}{BC}$$

$$cosec(90^o - A) = \frac{AC}{BC},\ sec = (90^o - A)\frac{AC}{BC},\ cot(90^o - A)\frac{BC}{AB}$$

ಆದ್ದರಿಂದ

$$Sin\left(90^o - A\right) = cosA$$

$$ton\ (90^o - A = cot\ A$$

$$See\ (90^o - A) = coset\ A$$

$$cos\ (90^o - A) = sin\ A$$

$$cot\ (90^o - A) = ton\ A$$

$$cosec(90^o - A = see\ A$$

ಉದಾಹರಣೆ: ಮೌಲ್ಯೀಕರಿಸಿ

$$\frac{ton\ 65^o}{cot25^o}$$

ಪರಿಹಾರ:

$$cot\ A = ton(90 = A)$$

$$cot\ 25 = ton\ (90 - 25^o) = ton\ 65^o$$

ಅಂದರೆ

$$\frac{ton\ 65^o}{cot\ (25^o)} = \frac{ton\ 65^o}{cot\ (65^o)} = 1$$

ಉದಾಹರಣೆ:

$$SinsA = \cos(A - 26^o),\ 3A$$

ಲಘು ಕೋನವಾದರೆ A ಬೆಲೆ ಕಂಡು ಹಿಡಿಯಿರಿ

ಪರಿಹಾರ: ದತ್ತ

$$Sin3A = \cos(A - 26)$$

$$Sin(sA) = \cos(90^o - 3A)$$

$$\cos(90^o - 3A) = \cos(A - 26^o$$

$$90^o - 3A^o = A - 26^o$$

$$A = 29^o$$

ಪ್ರಜಾವಾಣಿ ನೋಡಿಯೊ
ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮದ ಗಣಿತಶಾಸ್ತ್ರ ವಿಭಾಗದ 'ಟ್ರಯಾಂಗಲ್ಸ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://bit.ly/3u7YoH6

ದ್ಯುತಿ ವಿದ್ಯುತ್ ಪರಿಣಾಮ ಮತ್ತು ಬೆಳಕಿನ ಅಲೆ ಸಿದ್ಧಾಂತ (ಮುಂದುವರಿದ ಭಾಗ)

ಭೌತಶಾಸ್ತ್ರ

ದ್ವಿತೀಯ ಪಿಯುಸಿ

ಈ ಸಿದ್ಧಾಂತದ ಪ್ರಕಾರ, ಲೋಹದ ಮೇಲ್ಮೈ ಮೇಲೆ ವಿಕಿರಣವು ಬಿದ್ದಾಗ ಮೇಲ್ಮೈ ಮೇಲಿರುವ ಸ್ವತಂತ್ರ ಎಲೆಕ್ಟ್ರಾನ್‌ಗಳು ವಿಕಿರಣ ಚೈತನ್ಯವನ್ನು ನಿರಂತರವಾಗಿ ಹೀರಿಕೊಳ್ಳುತ್ತವೆ. ವಿಕಿರಣ ತೀವ್ರತೆ ಹೆಚ್ಚಾದಂತೆ ವಿದ್ಯುತ್ ಮತ್ತು ಕಾಂತಕ್ಷೇತ್ರಗಳ ವಿಸ್ತಾರವು ಹೆಚ್ಚಾಗುತ್ತದೆ ಮತ್ತು ಎಲೆಕ್ಟ್ರಾನ್‌ಗಳ ಗರಿಷ್ಠ ಶಕ್ತಿಯೂ ಹೆಚ್ಚಾಗುತ್ತದೆ.

ಈ ನಿಯಮದ ಪ್ರಕಾರ ಪ್ರತಿಯೊಂದು ಎಲೆಕ್ಟ್ರಾನ್ ಕಾರ್ಯಫಲನ ϕ_o ಕ್ಕಿಂತ ಸಾಕಷ್ಟು ಅಧಿಕವಾದ ಶಕ್ತಿಯನ್ನು ಹೀರಿಕೊಂಡು ಲೋಹದಿಂದ ಹೊರಸೂಸಲು ಕೆಲ ಗಂಟೆಗಳು ಬೇಕಾಗಬಹುದು ಎಂದು ವಿವರಿಸಿತು. ಆದರೆ ದ್ಯುತಿ ವಿದ್ಯುತ್ ಉತ್ಸರ್ಜನೆ ಕ್ಷಣ ಮಾತ್ರದ ವಿದ್ಯಮಾನ. ಆದ್ದರಿಂದ ಈ ಸಿದ್ಧಾಂತವು ವಿದ್ಯುತ್ ಉತ್ಸರ್ಜನೆಯ ಮೂಲಭೂತ ಲಕ್ಷಣಗಳನ್ನು ವಿವರಿಸಲು ಅಸಮರ್ಥವಾಗಿದೆ.

ಐನ್‌ಸ್ಟೀನ್‌ನ ದ್ಯುತಿ ಸಮೀಕರಣ: ವಿಕಿರಣದ ಶಕ್ತಿ ಕಣ ಸಿದ್ಧಾಂತ

ಈ ಸಿದ್ಧಾಂತದ ಪ್ರಕಾರ ವಿಕಿರಣ ಶಕ್ತಿಯು ವಿಘಟಿತ ಘಟಕಗಳಿಂದ ನಿರ್ಮಿಸಲ್ಪಟ್ಟಿದ್ದು, ಅದನ್ನು 'ವಿಘಟಿತ ಶಕ್ತಿ ಘಟಕ' ಎನ್ನುತ್ತೇವೆ.

ಪ್ರತಿ ಘಟಕದ ಶಕ್ತಿಯು hv ಆಗಿದ್ದು ಇಲ್ಲಿ h - ಪ್ಲಾಂಕನ ಸ್ಥಿರಾಂಕವಾದರೆ v - ಆವೃತ್ತಿಯಾಗಿದೆ. ದ್ಯುತಿ ವಿದ್ಯುತ್ ಪರಿಣಾಮದಲ್ಲಿ ಎಲೆಕ್ಟ್ರಾನ್ ಒಂದು ಘಟಕದ ಸಂಪೂರ್ಣ hv ಶಕ್ತಿಯನ್ನು ಹೀರಿಕೊಳ್ಳುತ್ತದೆ. ಎಲೆಕ್ಟ್ರಾನ್ ತಾನು ಹೀರಿಕೊಂಡ ಶಕ್ತಿಯ ಘಟಕವು ಅದರ ಕಾರ್ಯಫಲನ ϕ_o ಕ್ಕಿಂತ ಅಧಿಕವಾದಾಗ ಎಲೆಕ್ಟ್ರಾನ್‌ಗಳು ಹೆಚ್ಚಿನ ಚಲನ ಶಕ್ತಿಯೊಂದಿಗೆ ಹೊರಹೊಮ್ಮುತ್ತವೆ.

$$K_{max} = hv - \phi_o ------ (1)$$

- ಈ ಸಮೀಕರಣವನ್ನು 'ಐನ್‌ಸ್ಟೀನ್' ಸಮೀಕರಣ ಎನ್ನುವರು.

ಇಲ್ಲಿ K_{max} ವಿಕಿರಣ ಆವೃತ್ತಿಯ ಮೇಲೆ ಅವಲಂಬಿಸಿದ್ದು ತೀವ್ರತೆಯ ಮೇಲೆ ಸ್ವತಂತ್ರವಾಗಿದೆ.

- ತೀವ್ರತೆಯು ಹೆಚ್ಚಾದಂತೆ ಪ್ರತೀ ಸೆಕೆಂಡಿಗೆ ಹೊರಹೊಮ್ಮುವ ಎಲೆಕ್ಟ್ರಾನ್‌ಗಳ ಸಂಖ್ಯೆ ಹೆಚ್ಚಾಗುತ್ತದೆ.
- ಮೇಲಿನ ಸಮೀಕರಣದ ಪ್ರಕಾರ ದ್ಯುತಿ ವಿದ್ಯುತ್ ಉತ್ಸರ್ಜನೆ ಸಂಭವಿಸಬೇಕಾದರೆ

$hv > \phi_o$ ಅಥವಾ $v > v_o$ ಆಗಿರಬೇಕು.

$$*V_o = \frac{\phi_o}{h} ------ (2)$$

ಈ ಸಮೀಕರಣದ ಪ್ರಕಾರ ದ್ಯುತಿ ವಿದ್ಯುತ್ ಪರಿಣಾಮ ಸಂಭವಿಸಬೇಕಾದರೆ ವಿಕಿರಣದ ಘಟಕ ಶಕ್ತಿಯು ನಿರ್ಣಾಯಕ ಆವೃತ್ತಿಗಿಂತ ಹೆಚ್ಚಿರಬೇಕಾಗಿರುತ್ತದೆ. ಪ್ರತಿಯೊಂದು ಲೋಹಕ್ಕೂ ನಿರ್ಣಾಯಕ ಆವೃತ್ತಿ $(\frac{\phi_o}{h})$ ವಿಭಿನ್ನವಾಗಿದ್ದು, ಅದಕ್ಕಿಂತ ಕಡಿಮೆ ಆವೃತ್ತಿಯಲ್ಲಿ ದ್ಯುತಿ ವಿದ್ಯುತ್ ಪರಿಣಾಮ ಸಂಭವಿಸದು.

- ದ್ಯುತಿ ವಿದ್ಯುತ್ ಪರಿಣಾಮವು ಕ್ಷಣ ಮಾತ್ರದಲ್ಲಿ ಸಂಭವಿಸುವ ವಿದ್ಯಮಾನವಾಗಿದೆ.

ಸಮೀಕರಣ 1 ಮತ್ತು 2 ರ ಪ್ರಕಾರ

$$eV_o = hv - \phi_o$$

ಮತ್ತು $V \geq v_o$

ಆದ್ದರಿಂದ $V_0 = (\frac{h}{e})v - \frac{\phi_o}{e}$

V_0 ನೊಂದಿಗೆ V ಗ್ರಾಫ್ ಎಳೆದರೆ ಅದು ಏಕ ರೇಖಾಗತವಾಗಿದ್ದು, ಇದರ ಇಳಿಜಾರು $= (h/e)$ ಮತ್ತು ಇದು ವಸ್ತುವಿನ ಸ್ವಭಾವದಿಂದ ಸ್ವತಂತ್ರವಾಗಿದೆ.

ಬೆಳಕಿನ ಕಣ ಸ್ವಭಾವ

ದ್ಯುತಿ ವಿದ್ಯುತ್ ಪರಿಣಾಮದ ಆಲಲೋಕನಗಳಿಂದ ಬೆಳಕು ಯಾವುದೇ ವಸ್ತುವಿನ ಜತೆಯ ಪರಸ್ಪರ ಕ್ರಿಯೆಯಲ್ಲಿ ಕ್ವಾಂಟ ಅಥವಾ ಶಕ್ತಿಯ ಘಟಕಗಳಿಂದ ಮಾಡಲ್ಪಟ್ಟದ್ದು. ಇದರ ಶಕ್ತಿಯು hv ಗೆ ಸಮನಾಗಿರುತ್ತದೆ. ಬೆಳಕಿನ ಕಣ ಸ್ವರೂಪ ವರ್ತನೆಯನ್ನು ಎ.ಎಚ್. ಕಾಂಪ್ಟನ್‌ರು ಎಲೆಕ್ಟ್ರಾನ್‌ಗಳಿಂದ ಕ್ಷ ಕಿರಣ ಚದುರುವಿಕೆ ಪ್ರಯೋಗದ ಮೂಲಕ ದೃಢಪಡಿಸಿದರು.

ವಿದ್ಯುತ್ ಕಾಂತೀಯ ವಿಕಿರಣದ ಪ್ರೋಟಾನ್ ಚಿತ್ರಣ

1) ದ್ರವ್ಯದೊಂದಿಗಿನ ವಿಕಿರಣದ ಪ್ರಕ್ರಿಯೆಯಲ್ಲಿ ವಿಕಿರಣವು ಕಣದಂತೆ ವರ್ತಿಸುತ್ತದೆ. ಈ ಕಣವನ್ನು ಪ್ರೋಟಾನ್ ಎನ್ನುತ್ತಾರೆ.
2) ಪ್ರತಿ ಪ್ರೋಟಾನ್ ಶಕ್ತಿಯು $E = hv$ ಮತ್ತು ಸಂವೇಗವು $p = \frac{hv}{c}$ ಆಗಿದ್ದು, ಇಲ್ಲಿ C ಬೆಳಕಿನ ವೇಗವಾಗಿದೆ.
3) ಈ ಪ್ರೋಟಾನ್‌ಗಳ ಶಕ್ತಿಯ ಕೇವಲ ಆವೃತ್ತಿಯ ಮೇಲೆ ಅವಲಂಬಿತವಾಗಿದ್ದು ತೀವ್ರತೆಯ ಮೇಲೆ ಸ್ವತಂತ್ರವಾಗಿದೆ.
4) ಪ್ರೋಟಾನ್‌ನ ವಿದ್ಯುದಾವೇಶವು ತಟಸ್ಥವಾಗಿದ್ದು, ವಿದ್ಯುತ್ ಕಾಂತೀಯ ಕ್ಷೇತ್ರಗಳಿಂದ ವಿಚಲಿತಗೊಳ್ಳುವುದಿಲ್ಲ.
5) ಪ್ರೋಟಾನ್ -ಎಲೆಕ್ಟ್ರಾನ್ ಡಿಕ್ಕಿಯಲ್ಲಿ ಒಟ್ಟು ಶಕ್ತಿ ಮತ್ತು ಒಟ್ಟು ಸಂವೇಗವು ಸಂರಕ್ಷಿತವಾಗಿರುತ್ತದೆ.

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಎಡ್ಡಿ ಕರೆಂಟ್' ಇಂಗ್ಲಿಷ್ ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://bit.ly/3ubZfGJ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ನಾವು ಇತರರಿಗಿಂತ ಚತುರರಾಗಿ ಇರಬೇಕಾದ ಅಗತ್ಯವಿಲ್ಲ. ಆದರೆ, ಉಳಿದವರಿಗಿಂತ ನಾವು ಹೆಚ್ಚು ಶಿಸ್ತುಬದ್ಧರಾಗಿ ಇರಬೇಕು. –ವಾರನ್ ಬಫೆಟ್

ಕೋವಿಡ್ ನಿಯಂತ್ರಣ ಮಾರ್ಗಸೂಚಿ ಕಟ್ಟುನಿಟ್ಟಾಗಿ ಜಾರಿಯಾಗಲಿ

ಕೊರೊನಾ ಸೋಂಕಿನ ಪ್ರಸರಣಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಹದಿನೈದು ದಿನಗಳ ಕಾಲ ಕಟ್ಟೆಚ್ಚರ ವಹಿಸುವ ರಾಜ್ಯ ಸರ್ಕಾರದ ನಿರ್ಧಾರ ಅತ್ಯಂತ ಅಗತ್ಯವಾಗಿದ್ದ ಕ್ರಮ. ಕೋವಿಡ್–19 ಪ್ರಕರಣಗಳು ಹೆಚ್ಚಿನ ಪ್ರಮಾಣದಲ್ಲಿ ವರದಿಯಾಗುತ್ತಿರುವ ದೇಶದ 8 ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿರುವುದರಿಂದ, ಸೋಂಕಿನ ವಿರುದ್ಧದ ಹೋರಾಟವನ್ನು ತೀವ್ರಗೊಳಿಸಬೇಕಾದ ಅನಿವಾರ್ಯ ರಾಜ್ಯ ಸರ್ಕಾರದ್ದಾಗಿದೆ. ದಿನದ ದುಡಿಮೆಯನ್ನು ನೆಚ್ಚಿಕೊಂಡ ಜನಸಾಮಾನ್ಯರನ್ನು ಸಂಕಟಕ್ಕೆ ದೂಡುವ ಲಾಕ್‌ಡೌನ್ ಅಥವಾ ರಾತ್ರಿ ಕರ್ಫ್ಯೂ ಜಾರಿಗೊಳಿಸುವ ಕಠಿಣ ನಿರ್ಧಾರದ ಬದಲಿಗೆ, ಮುನ್ನೆಚ್ಚರಿಕೆ ಕ್ರಮಗಳ ಮೂಲಕ ಕೊರೊನಾ ಸೋಂಕಿನ ನಿಯಂತ್ರಣಕ್ಕೆ ಮುಂದಾಗಿರುವುದು ಸ್ವಾಗತಾರ್ಹ. ಲಾಕ್‌ಡೌನ್‌ನಿಂದ ವೈರಾಣು ಪ್ರಸರಣದ ನಿಯಂತ್ರಣದ ಸಾಧನೆಗಿಂತಲೂ ಜನಸಾಮಾನ್ಯರ ಬದುಕುಗಳ ಮೇಲೆ ಉಂಟಾಗುವ ದುಷ್ಪರಿಣಾಮವೇ ದೊಡ್ಡದಾಗಿರುತ್ತದೆ. ಲಾಕ್‌ಡೌನ್ ಇಲ್ಲ ಎಂದು ಮುಖ್ಯಮಂತ್ರಿ ಹೇಳಿರುವುದು ಸಮಾಜದ ಹಲವು ವರ್ಗಗಳಲ್ಲಿ ನೆಮ್ಮದಿ ಮೂಡಿಸುವಂತಹ ಮಾತು. ನೂತನ ಮಾರ್ಗಸೂಚಿಯ ಪ್ರಕಾರ, ಮುಂದಿನ ಹದಿನೈದು ದಿನಗಳ ಕಾಲ ರಾಜ್ಯದಲ್ಲಿ ಯಾವುದೇ ಪ್ರತಿಭಟನೆ, ಧರಣಿಗಳಿಗೆ ಅವಕಾಶವಿಲ್ಲ ಹಾಗೂ ಮದುವೆ ಸೇರಿದಂತೆ ಯಾವುದೇ ಸಮಾರಂಭದಲ್ಲಿ 500ಕ್ಕಿಂತ ಹೆಚ್ಚಿನ ಜನ ಸೇರುವಂತಿಲ್ಲ. ಮದುವೆಗಳಲ್ಲಿ ಕೋವಿಡ್ ಮಾರ್ಗಸೂಚಿ ಉಲ್ಲಂಘನೆಯಾದರೆ ಕಲ್ಯಾಣಮಂಟಪಗಳ ಮಾಲೀಕರನ್ನೇ ಹೊಣೆಯಾಗಿಸುವ ಎಚ್ಚರಿಕೆ ನೀಡಲಾಗಿದೆ. ಲೋಕಸಭೆ ಹಾಗೂ ವಿಧಾನಸಭೆ ಉಪ ಚುನಾವಣೆ ಸಂದರ್ಭದಲ್ಲಿ ಹೆಚ್ಚು ಜನರು ಒಂದೆಡೆ ಸೇರದಂತೆ ನೋಡಿಕೊಳ್ಳುವುದಾಗಿ ಸರ್ಕಾರ ಹೇಳಿದೆ. ವಿವಿಧ ಇಲಾಖೆಗಳ ಮೂಲಕ ಪ್ರತ್ಯೇಕವಾಗಿ ಆದೇಶಗಳು ಹೊರಡುವುದರಿಂದ ಆಡಳಿತದಲ್ಲಿ ಸಮನ್ವಯದ ಕೊರತೆ ಎದುರಾಗುವುದಲ್ಲದೆ, ಜನಸಾಮಾನ್ಯರಲ್ಲೂ ಗೊಂದಲ ಉಂಟಾಗುತ್ತದೆ. ಇಂಥ ಗೊಂದಲ ತಪ್ಪಿಸಲು, ಕೋವಿಡ್ ನಿಯಂತ್ರಣ ಮತ್ತು ನಿರ್ವಹಣೆಗೆ ಸಂಬಂಧಿಸಿದ ಎಲ್ಲ ಆದೇಶ ಮತ್ತು ಸುತ್ತೋಲೆಗಳನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮಾತ್ರ ಹೊರಡಿಸುವ ನಿರ್ಧಾರ ಸಮರ್ಪಕವಾಗಿದೆ.

ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸುವುದೇ ಸದ್ಯದ ಕೋವಿಡ್ ವಿರುದ್ಧದ ಹೋರಾಟದ ಅತ್ಯುತ್ತಮ ಮಾರ್ಗವಾಗಿದೆ

ಕೋವಿಡ್ ಮಾರ್ಗಸೂಚಿ ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಸರ್ಕಾರ ಪುನರುಚ್ಚರಿಸಿದೆ. ಆದರೆ, ಈ ಎಚ್ಚರ ಬಾಯಿಮಾತಿಗೆ ಸೀಮಿತವಾಗಬಾರದು ಹಾಗೂ ಮಾರ್ಗಸೂಚಿಯನ್ನು ಜನಸಾಮಾನ್ಯರು ಮಾತ್ರ ಪಾಲಿಸಿದರೆ ಸಾಕು ಎನ್ನುವಂತಾಗಬಾರದು. ಪ್ರತಿಭಟನೆ, ಸಮಾವೇಶಗಳನ್ನು ನಿರ್ಬಂಧಿಸಿರುವುದು ಅಗತ್ಯವಾಗಿದ್ದ ಕ್ರಮವಾದರೂ, ಇಂಥ ಸಮಾವೇಶಗಳ ಮುಂಚೂಣಿಯಲ್ಲಿ ರಾಜಕಾರಣಿಗಳೇ ಇರುವುದನ್ನು ಮರೆಯಬಾರದು. ವಿವಿಧ ಸಂದರ್ಭಗಳಲ್ಲಿ ಶಾಸಕರು ಹಾಗೂ ಸಚಿವರು ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿರುವ ಪ್ರಕರಣಗಳು ಮಾಧ್ಯಮಗಳಲ್ಲಿ ಪ್ರಕಟವಾಗಿದ್ದರೂ, ಅವರ ವಿರುದ್ಧ ಕ್ರಮ ಜರುಗಿಸಿರುವ ಉದಾಹರಣೆಗಳಿಲ್ಲ. ಕೋವಿಡ್ ಮಾರ್ಗಸೂಚಿಗಳ ಪಾಲನೆಗೆ ರಾಜಕಾರಣಿಗಳು ಅತೀತರೆನ್ನುವ ರೀತಿ ಸರ್ಕಾರ ವರ್ತಿಸಬಾರದು. ನಿಯಮಗಳನ್ನು ಮುರಿದಾಗ ಜನಸಾಮಾನ್ಯ ಅಥವಾ ಜನಪ್ರತಿನಿಧಿ ಎನ್ನುವ ತಾರತಮ್ಯ ಮಾಡದೆ ತಪ್ಪಿತಸ್ಥರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕು. ಕೊರೊನಾ ಉಲ್ಬಣಗೊಳ್ಳದಂತೆ ವರ್ತಿಸುವ ಜವಾಬ್ದಾರಿ ಎಲ್ಲರ ಮೇಲೆಯೂ ಇದೆ. ಶಾಲೆಗಳಿಗೆ ಸಂಬಂಧಿಸಿದಂತೆಯೂ ಸರ್ಕಾರ ಸ್ಪಷ್ಟವಾದ ತೀರ್ಮಾನಕ್ಕೆ ಬರಬೇಕಾಗಿದೆ. ಒಂದರಿಂದ ಒಂಬತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಮುಂದಿನ ತರಗತಿಗೆ ಬಡ್ತಿ ನೀಡಲು ಪರೀಕ್ಷೆ ನಡೆಸಬೇಕೋ ಬೇಡವೋ ಎನ್ನುವ ಗೊಂದಲ ಇನ್ನೂ ಬಗೆಹರಿದಿಲ್ಲ. ಪರೀಕ್ಷೆ ಮತ್ತು ಫಲಿತಾಂಶಕ್ಕೆ ಸಂಬಂಧಿಸಿದ ಗೊಂದಲಗಳನ್ನು ಆದಷ್ಟು ಬೇಗ ಪರಿಹರಿಸಿಕೊಂಡು, ಶಾಲೆಗಳಿಗೆ ಅಲ್ಪಕಾಲದ ಬೇಸಿಗೆ ರಜೆ ನೀಡುವುದು ಅಗತ್ಯ. ಮಕ್ಕಳು ಮತ್ತು ಶಿಕ್ಷಕರಿಗೆ ಸಂಬಂಧಿಸಿದಂತೆ ಕಾದುನೋಡುವ ವಿಳಂಬ ನೀತಿ ಸಲ್ಲದು. ಕೊರೊನಾ ಸೋಂಕು ನಿಯಂತ್ರಣದ ನಿರ್ಣಾಯಕ ಹೋರಾಟದಲ್ಲಿ ಸರ್ಕಾರದೊಂದಿಗೆ ನಾಗರಿಕರು ಕೈಜೋಡಿಸಬೇಕಾಗಿದೆ. ರೋಗ ಲಕ್ಷಣಗಳುಳ್ಳ ಕೆಲವರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಹಿಂಜರಿಯುತ್ತಿದ್ದಾರೆ ಎನ್ನಲಾಗಿದೆ. ಇಂಥ ಹಿಂಜರಿಕೆ ವೈಯಕ್ತಿಕವಾಗಿ ಮಾತ್ರವಲ್ಲದೆ ಸಮಾಜದ ಹಿತಕ್ಕೂ ಅಪಾಯ ಉಂಟುಮಾಡಬಲ್ಲದು. ಸೋಂಕಿಗೊಳಗಾಗಿ ಪ್ರತ್ಯೇಕ ವಾಸದಲ್ಲಿ ಇರುವವರು ಮನೆ ಆರೈಕೆ ವೇಳೆ ಸಮಸ್ಯೆ ಎದುರಿಸುತ್ತಿರುವುದು ಆರೋಗ್ಯ ಇಲಾಖೆಯ ಮೇಲೆ ಹೆಚ್ಚಿನ ಒತ್ತಡ ಉಂಟುಮಾಡುತ್ತದೆ. ಸರ್ಕಾರದ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸುವುದೇ ಸದ್ಯದ ಕೋವಿಡ್ ವಿರುದ್ಧದ ಹೋರಾಟದ ಅತ್ಯುತ್ತಮ ಮಾರ್ಗವಾಗಿದೆ. ಕೋವಿಡ್ ಮಾರ್ಗಸೂಚಿ ಅನುಷ್ಠಾನದ ಜೊತೆಜೊತೆಗೆ ಲಸಿಕೆ ಅಭಿಯಾನಕ್ಕೂ ಸರ್ಕಾರ ಹೆಚ್ಚಿನ ಒತ್ತು ನೀಡಬೇಕಾಗಿದೆ.

ದಿನದ ಟ್ವೀಟ್

ಅಪಾಯ ಮನಗಾಣಬೇಕಿದೆ

ಒಂದೆಡೆ, ಲಸಿಕೆಯ ಅಗತ್ಯವನ್ನು ಜನರು ಮನಗಂಡಿದ್ದಾರೆ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಅದನ್ನು ಪಡೆದುಕೊಳ್ಳುತ್ತಿದ್ದಾರೆ. ಇನ್ನೊಂದೆಡೆ, ಹೆಚ್ಚಿನ ಜನರು ಮಾಸ್ಕ್ ಇಲ್ಲದೆ ತಿರುಗಾಡುವ ಮೂಲಕ ಹಾಗೂ ಚುನಾವಣಾ ಪ್ರಚಾರ ಸಭೆಗಳಲ್ಲಿ ಭಾಗಿಯಾಗುವ ಮೂಲಕ ಮಾಸ್ಕ್ ಮತ್ತು ಲಸಿಕೆಯ ಪರಿಣಾಮವನ್ನು ಕನಿಷ್ಠಗೊಳಿಸುತ್ತಿದ್ದಾರೆ. ಅವರನ್ನು ದೇವರು ಮಾತ್ರ ಕಾಪಾಡಬಲ್ಲರು!

ಆದಿಮೂಲಂ, ನಿವೃತ್ತ ಐಎಎಸ್ ಅಧಿಕಾರಿ

25 ವರ್ಷಗಳ ಹಿಂದೆ

ಭಾನುವಾರ, 31-3-1996

• ಕೋದಂಡರಾಮಯ್ಯ, ರಘುಪತಿಗೆ ಟಿಕೆಟ್: ತೀವ್ರ ವಿರೋಧ

ಬೆಂಗಳೂರು, ಮಾರ್ಚ್ 30– ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಮಾಜಿ ಸಚಿವ ಎಂ.ರಘುಪತಿ ಹಾಗೂ ಚಿತ್ರದುರ್ಗದಿಂದ ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿ ಪಿ.ಕೋದಂಡರಾಮಯ್ಯ ಅವರಿಗೆ ಟಿಕೆಟ್ ನೀಡಬೇಕು ಎಂದು ಜನತಾದಳದ ದೆಹಲಿ ವರಿಷ್ಠರು ಸೂಚನೆ ನೀಡಿದ್ದು, ಇದು ರಾಜ್ಯದ ದಳದ ಹಿರಿಯ ಮುಖಂಡರಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ.

ಚುನಾವಣೆಗೆ ಸ್ಪರ್ಧಿಸಲು ಯಾವುದೇ ಸಚಿವರು ಒಪ್ಪುತ್ತಿಲ್ಲವಾದ್ದರಿಂದ ಕನಿಷ್ಠ ಐದಾರು ಕ್ಷೇತ್ರಗಳಲ್ಲಿಯಾದರೂ ಸಚಿವರನ್ನು ಕಣಕ್ಕೆ ಇಳಿಸಬೇಕು ಎಂಬ ಪ್ರಸ್ತಾಪವನ್ನು ದಳದ ಮುಖಂಡರು ಸದ್ಯಕ್ಕೆ ಕೈಬಿಟ್ಟಿದ್ದಾರೆ.

ಆದರೂ ಬೆಳಗಾವಿ ಕ್ಷೇತ್ರದಿಂದ ಲೋಕೋಪಯೋಗಿ ಸಚಿವ ಶಿವಾನಂದ ಕೌಜಲಗಿ ಅವರನ್ನು ಸ್ಪರ್ಧೆಗಿಳಿಸುವ ಪ್ರಯತ್ನ ಇನ್ನೂ ಮುಂದುವರಿದಿದೆ.

• ಉತ್ತರದಲ್ಲಿ ಜನತಾದಳ ಛಿದ್ರ: ಭಾರೀ ಪಕ್ಷತ್ಯಾಗ

ನವದೆಹಲಿ, ಮಾರ್ಚ್ 30 (ಯುಎನ್‌ಐ)– ಸಮಾಜವಾದಿ ಪಕ್ಷ– ಜನತಾದಳ ಮೈತ್ರಿ ಜನತಾದಳದಲ್ಲಿ ಕೋಲಾಹಲವನ್ನೇ ಎಬ್ಬಿಸಿದೆ. ಉತ್ತರಪ್ರದೇಶ, ದೆಹಲಿ ಮತ್ತು ಬಿಹಾರಗಳ ಪಕ್ಷದ ಘಟಕಗಳಲ್ಲಿ ನಾಯಕರು ಮತ್ತು ಕಾರ್ಯಕರ್ತರು ಸಾಮೂಹಿಕವಾಗಿ ಪಕ್ಷಾಂತರ ಮಾಡುತ್ತಿದ್ದಾರೆ.

ಕೇಂದ್ರ ಸಮಿತಿಯಿಂದ ತಮ್ಮ ಘಟಕ ಸ್ವತಂತ್ರವಾಗಿದೆ ಎಂದು ಉತ್ತರಪ್ರದೇಶದ ಜನತಾದಳ ಘಟಕ ಘೋಷಿಸಿಕೊಂಡ ಕೆಲವೇ ಗಂಟೆಗಳಲ್ಲಿ ಆ ಘಟಕವನ್ನು ವಿಸರ್ಜಿಸಿರುವುದಾಗಿ ದಳ ನಾಯಕರು ದೆಹಲಿಯಲ್ಲಿ ಪ್ರಕಟಿಸಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 31-3-1971

• ಬಾಂಗ್ಲಾದೇಶದ ಬಹುಪಾಲು ಪ್ರದೇಶ ಮುಜೀಬುರ್ ಸೇನೆ ವಶ

ಅಗರ್ತಲ, ಮಾರ್ಚ್ 30– ಪೂರ್ವ ಪಾಕಿಸ್ತಾನದ ಬಹುಪಾಲು ಪ್ರದೇಶ ಸ್ವತಂತ್ರ ಬಾಂಗ್ಲಾದೇಶದ ವಿಮೋಚನಾ ಸೇನೆಯ ವಶದಲ್ಲಿದೆ ಎಂದು ಬಾಂಗ್ಲಾದೇಶದ ನಾಯಕರು ಇಂದು ವಿಶ್ವಕ್ಕೆ ಸಾರಿದರು.

ಸತ್ಯಾಂಶವನ್ನು ಕಣ್ಣಾರೆ ಕಂಡು ತಿಳಿಯಲು ಪ್ರಪಂಚದ ರಾಷ್ಟ್ರಗಳಿಗೆ ಅವರು ಆಹ್ವಾನವಿತ್ತರು. ಸ್ವತಂತ್ರ ಬಾಂಗ್ಲಾ ಬಾನುಲಿಯ ವಿಶೇಷ ಪ್ರಸಾರದಲ್ಲಿ ಮೇಜರ್ ಜಿಯಾಖಾನರು ಮಾತನಾಡುತ್ತಾ, ಪಶ್ಚಿಮ ಪಾಕಿಸ್ತಾನಿ ಪಡೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲೆಲ್ಲೂ ಸೋಲುಂಡು ಹಿಂದಕ್ಕೆ ಸರಿಯುತ್ತಿವೆ ಎಂದು ತಿಳಿಸಿದರು.

• ಮೈಸೂರು ಬಜೆಟ್‌ಗೆ ಅಸ್ತು– ರಾಷ್ಟ್ರಪತಿ ಆಡಳಿತ ಜಾರಿಗೆ ರಾಜ್ಯಸಭೆ ಮಿಶ್ರ ಪ್ರತಿಕ್ರಿಯೆ

ನವದೆಹಲಿ, ಮಾರ್ಚ್ 30– ಮೈಸೂರು ರಾಜ್ಯದ ತಾತ್ಕಾಲಿಕ ಬಜೆಟ್ ಅನ್ನು ಇಂದು ರಾಜ್ಯಸಭೆ ಒಪ್ಪಿತಾದರೂ ಮೈಸೂರಿನಲ್ಲಿ ರಾಷ್ಟ್ರಪತಿ ಆಡಳಿತವನ್ನು ಜಾರಿಗೆ ತಂದ ವಿಚಾರದಲ್ಲಿ ಸಮ್ಮಿಶ್ರ ಪ್ರತಿಕ್ರಿಯೆ ಕಂಡು ಬಂದಿತು.

ಕರ್ನಾಟಕದ ಮಾನ ತೆಗೆದ ಸಿ.ಡಿ. ಪ್ರಕರಣದ ಅಷ್ಟೂ ಹುಳುಕು ಹೊರಬರಲಿ

ಸಿ.ಡಿ. ಸುತ್ತ ಘಟಿಂಗರ ಆಟ!

ಅನುಸಂಧಾನ

ರವೀಂದ್ರ ಭಟ್ಟ

ವಿಧಾನ ಮಂಡಲದ ಅಂಗಳದಿಂದ ಹಿಡಿದು ಜನ ಓಡಾಡುವ ಹಾದಿಬೀದಿಗಳವರೆಗೆ ಈಗ ಸಿ.ಡಿಯದ್ದೇ ಮಾತು. ಮಾಧ್ಯಮಗಳಲ್ಲಿಯಂತೂ ಸಿ.ಡಿ ಹೊರತುಪಡಿಸಿ ಬೇರೆ ವಿಷಯಗಳೇ ಇಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಹೈಸ್ಪೀಡಲ್ಲಿ ಓಡುವ ವಿಷಯ ಅದು. ಅದಕ್ಕೇ ಲೈಕ್‌ಗಳು, ಕಮೆಂಟ್‌ಗಳು ಜಾಸ್ತಿ. ಸಿ.ಡಿಗೆ ಹೋದ ಮಾನ ಯಾವ ಸಿರಿ ಕೊಟ್ಟರೂ ವಾಪಸು ಬರುವುದಿಲ್ಲ ಎಂದು ಗೊತ್ತಿದ್ದರೂ ಸಿ.ಡಿ ಜಾಲಕ್ಕೆ ಜಾರುವವರು ಇದ್ದಾರೆ. ಸಿ.ಡಿ ಇಟ್ಟುಕೊಂಡೇ ರಾಜಕೀಯ ಮಾಡುವವರೂ ಇದ್ದಾರೆ. ಹೊಸ ಹೊಸ ಸಿ.ಡಿ ಬಿಡುಗಡೆ ಮಾಡುವವರೂ ಇದ್ದಾರೆ. ಬಿಡುಗಡೆ ಮಾಡುತ್ತೇನೆ ಎಂದು ಬೆದರಿಸುವವರೂ ಇದ್ದಾರೆ. ಫೈಲ್‌ಗಳನ್ನು ಇಟ್ಟುಕೊಂಡು ರಾಜಕೀಯ ಮಾಡಿದ್ದು, ದೂರವಾಣಿ ಸಂಭಾಷಣೆ ಇಟ್ಟುಕೊಂಡು ಲಾಭ ಮಾಡಿಕೊಂಡಿದ್ದು, ಆಡಿಯೊ ಬಿಡುಗಡೆ ಮಾಡಿ ಬಲಿ ಪಡೆದಿದ್ದು ಎಲ್ಲವೂ ಈ ನೆಲದಲ್ಲಿ ಆಗಿಹೋಗಿವೆ. ಈಗ ಸದ್ಯಕ್ಕೆ ಸಿ.ಡಿ ಕಾಲ. ಈ ಎಲ್ಲ ವಿದ್ಯಮಾನಗಳ ಒಳಗೆ ನಿಜವಾಗಿ ಚರ್ಚೆಯಾಗಲೇಬೇಕಾದ ವಿಷಯಗಳು ಹಿಂದೆ ಸರಿದಿವೆ. ರಾಜ್ಯ ಎದುರಿಸುತ್ತಿರುವ ಸಮಸ್ಯೆಗಳ ಮಾತು ಹಾಗಿರಲಿ, ಸಿ.ಡಿ ವಿಚಾರದಲ್ಲಿಯೇ ಹಲವಾರು ವಿಷಯಗಳು ಚರ್ಚೆಯಾಗದೆ ಹಿಂದಕ್ಕೆ ಸರಿದಿವೆ.

ಸಂತ್ರಸ್ತೆ ಎನ್ನಲಾದ ಯುವತಿಯು ಶಾಸಕ ರಮೇಶ ಜಾರಕಿಹೊಳಿ ಅವರ ವಿರುದ್ಧ ಹಲವು ಆರೋಪಗಳನ್ನು ಮಾಡುತ್ತಿದ್ದಾರೆ. ದಿನಕ್ಕೊಂದು ವಿಡಿಯೊ ಬಿಡುಗಡೆ ಮಾಡುತ್ತಿದ್ದಾರೆ. ಆ ಯುವತಿಯ ಪಾಲಕರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಈ ಸಿ.ಡಿ ಸ್ಫೋಟವಾಗಿ ಹತ್ತಿರ ಹತ್ತಿರ ಒಂದು ತಿಂಗಳಾಗುತ್ತಿದೆ. ಪ್ರಮುಖ ಆರೋಪಿಗಳ ಬಂಧನ ಆಗಿಲ್ಲ. ಹಾಗಾದರೆ ನಮ್ಮ ಪೊಲೀಸರು ಅಷ್ಟೊಂದು ಅಸಮರ್ಥರೇ? ಡಾ. ಎಂ.ಎಂ.ಕಲಬುರ್ಗಿ ಹತ್ಯೆ ಪ್ರಕರಣದಲ್ಲಿ ಚಾಣಾಕ್ಷತನ ಮೆರೆದವರು, ರಾಜೀವ್ ಗಾಂಧಿ ಹಂತಕರನ್ನು ಬಲೆಗೆ ಬೀಳಿಸಿದವರು ನಮ್ಮ ಪೊಲೀಸರು. ವಿದೇಶಕ್ಕೆ ಪರಾರಿಯಾದವರನ್ನು, ಪರಾರಿಯಾಗಲು ಹೊಂಚು ಹಾಕಿದವರನ್ನೂ ಪತ್ತೆ ಮಾಡಿ ಕಟಕಟೆಗೆ ತಂದು ನಿಲ್ಲಿಸುವ ಸಾಮರ್ಥ್ಯ ಇರುವ ಕರ್ನಾಟಕ ಪೊಲೀಸರು ಈ ಸಿ.ಡಿ ಪ್ರಕರಣದಲ್ಲಿ ನಿರೀಕ್ಷೆಯಂತೆ ಕೆಲಸ ಮಾಡಲು ಸಾಧ್ಯವಾಗದೇ ಇರುವುದಕ್ಕೆ ಏನಿರಬಹುದು ಕಾರಣ? ಯಾವ ಅಡಕತ್ತರಿಯಲ್ಲಿ ಅವರು ಸಿಲುಕಿದ್ದಾರೆ?

ಆರೋಪಿಯೊಬ್ಬರ ಮನೆಗೇ ತೆರಳಿ ಹೇಳಿಕೆ ಪಡೆಯುವಂತಹ ಔದಾರ್ಯವನ್ನೂ ನಮ್ಮ ಪೊಲೀಸರು ತೋರಿದ್ದಾರೆ. ದೂರು ದಾಖಲಾಗಿ ಇಷ್ಟು ದಿನವಾದರೂ ಮೇಲ್ನೋಟಕ್ಕೆ ಆರೋಪಿ ಎಂದು ಗೊತ್ತಾದವರನ್ನು ಬಂಧಿಸುವುದೂ ಇಲ್ಲ. ಸಂತ್ರಸ್ತ ಯುವತಿಯ ಪೋಷಕರು ಮಾಡುವ ಆರೋಪದ ಕುರಿತೂ ಯಾವುದೇ ಸ್ಪಷ್ಟನೆಯನ್ನು ನೀಡುವುದಿಲ್ಲ. ಸಾಮಾನ್ಯ ವ್ಯಕ್ತಿಯೊಬ್ಬರ ಪ್ರಕರಣ ಇದಾಗಿದ್ದರೆ ಪೊಲೀಸರು ಹೀಗೆ ನಡೆದುಕೊಳ್ಳುತ್ತಿದ್ದರೇ? ರಾಜ್ಯದ ಹೆಣ್ಣುಮಗಳೊಬ್ಬಳು ತನಗೆ ರಕ್ಷಣೆ ಇಲ್ಲ ಎಂದು ರೋದಿಸುತ್ತಿದ್ದರೂ ಗೃಹ ಸಚಿವರನ್ನು ಹೊರತುಪಡಿಸಿ ಅಧಿಕಾರಸ್ಥರಲ್ಲಿ ಪ್ರಮುಖರೆನಿಸಿಕೊಂಡ ಹಲವರು ಆ ಬಗ್ಗೆ ಚಕಾರವನ್ನೇ ಎತ್ತಿರಲಿಲ್ಲ. ಪೊಲೀಸರು ಅಡಕತ್ತರಿಯಲ್ಲಿ ಸಿಲುಕಿರುವುದಕ್ಕೆ ಇವೆಲ್ಲವೂ ಕಾರಣ ಇರಬಹುದೇ?

ಜಾರಕಿಹೊಳಿ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಸಿ.ಡಿ ಬಹಿರಂಗಗೊಂಡ ಸಂದರ್ಭದಲ್ಲಿಯೇ ಇನ್ನೂ ಹಲವು ಸಿ.ಡಿಗಳು ಹೊರಗೆ ಬರುತ್ತವೆ ಎಂಬ ಪ್ರಚಾರ ಜೋರಾಗಿತ್ತು. ಅವೆಲ್ಲ ಏನಾದವು? ಅವು ಕೇವಲ ಬ್ಲ್ಯಾಕ್‌ಮೇಲ್ ಮಾಡಲು ಬಳಕೆಯಾಗುತ್ತಿವೆಯೇ? ರಾಜಕೀಯ ಮೊಗಸಾಲೆಯಲ್ಲಿ ಇಂತಹ ಚರ್ಚೆಗಳು ಸಾಮಾನ್ಯವಾಗಿವೆ. ರಮೇಶ ಜಾರಕಿಹೊಳಿ ಸಿ.ಡಿ ವಿಚಾರವಾಗಿ ಕಠಿಣ ಕ್ರಮ ಕೈಗೊಂಡರೆ ಇನ್ನಷ್ಟು ಸಿ.ಡಿಗಳು ಹೊರಗೆ ಬರುತ್ತವೆ. ಕ್ರಮ ಕೈಗೊಳ್ಳದೆ ತಿಪ್ಪೆ ಸಾರಿಸಿದರೂ ಮತ್ತಷ್ಟು ಸಿ.ಡಿ ಗಳು ಹೊರಕ್ಕೆ ಬರುತ್ತವೆ. ಅವರನ್ನು ಇವರು, ಇವರನ್ನು ಅವರು ಸಿ.ಡಿ ಮೂಲಕವೇ ಬೆದರಿಸುತ್ತಿದ್ದಾರೆ ಎಂಬ ವದಂತಿಗಳು ಇವೆ. ಇವೆಲ್ಲಕ್ಕೂ ಉತ್ತರ ಹೇಳಲಾಗದ ಸ್ಥಿತಿಯಲ್ಲಿ ರಾಜ್ಯದ ಪೊಲೀಸರು ಇದ್ದಾರೆ. ‘ಯಾರನ್ನೂ ರಕ್ಷಿಸುವ ಪ್ರಶ್ನೆ ಇಲ್ಲ. ಕಾನೂನು ತನ್ನ ಕ್ರಮವನ್ನು ಕೈಗೊಳ್ಳುತ್ತದೆ. ತಪ್ಪು ಮಾಡಿದವರಿಗೆ ಕಠಿಣ ಶಿಕ್ಷೆ ಕಾದಿದೆ’ ಎಂದು ಗೃಹ ಸಚಿವರು ಬಹಿರಂಗವಾಗಿ ಹೇಳುತ್ತಾರಾದರೂ ಅವರ ಮಾತನ್ನು ನಂಬುವ ಸ್ಥಿತಿಯಲ್ಲಿ ರಾಜ್ಯದ ಜನ ಇಲ್ಲ, ಅವರಿಗೂ ಅವರ ಮಾತಿನಲ್ಲಿ ನಂಬಿಕೆ ಇರುವ ಹಾಗೆ ಕಾಣುತ್ತಿಲ್ಲ.

ಇನ್ನೊಂದು ಬಹಳ ಮುಖ್ಯವಾದ ಅಂಶ ಎಂದರೆ, ಸಿ.ಡಿಯಲ್ಲಿ ಇರುವ ಯುವತಿಯದ್ದೇ ತಪ್ಪು ಎಂಬುದಾಗಿ ಬಿಂಬಿಸಲು ಹೊರಟಿದ್ದು. ಯುವತಿ ತಪ್ಪು ಮಾಡಿರಬಹುದು. ಆದರೆ ಅದಕ್ಕೆ ಕುಮ್ಮಕ್ಕು ನೀಡಿದವರು ಯಾರು ಎನ್ನುವುದೂ ಬಹಿರಂಗವಾಗಬೇಕಲ್ಲ. ಜೊತೆಗೆ ಜಾರಕಿಹೊಳಿ ಅವರದ್ದು ಎನ್ನಲಾದ ಸಿ.ಡಿಯಲ್ಲಿ ಅವರು ಹೇಳಿದರೆನ್ನಲಾದ ‘ಯಡಿಯೂರಪ್ಪ ಭ್ರಷ್ಟ. ಸಿದ್ದರಾಮಯ್ಯ ಒಳ್ಳೆಯವರು, ಬೇರೆಯವರನ್ನು ಮುಖ್ಯಮಂತ್ರಿ ಮಾಡ್ತೇವೆ’ ಎನ್ನುವ ರಾಜಕೀಯ ವಿಷಯಗಳ ಬಗ್ಗೆ ಏಕೆ ಎಲ್ಲರೂ ಮೌನವಾಗಿದ್ದಾರೆ?

ರಾಜಕೀಯ ಮೊಗಸಾಲೆಯಲ್ಲಿ ಇನ್ನೊಂದು ರೀತಿಯ ಚರ್ಚೆಯೂ ನಡೆಯುತ್ತಿದೆ. ಯಡಿಯೂರಪ್ಪ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬರಲು ಕಾರಣರಾದವರನ್ನು ಬೇರೆ ಬೇರೆ ಕಾರಣಕ್ಕೆ ಮೂಲೆಗುಂಪು ಮಾಡುವುದೂ ಈ ಸಿ.ಡಿ ಪ್ರಕರಣದ ಉದ್ದೇಶ ಎಂದೂ ಹೇಳಲಾಗುತ್ತಿದೆ. ಅದರ ಸುಳಿವು ಸಿಕ್ಕೇ ಇತರ 6 ಸಚಿವರು ನ್ಯಾಯಾಲಯದ ಮೊರೆ ಹೋಗಿ ತಡೆಯಾಜ್ಞೆ ತಂದುಕೊಂಡಿದ್ದಾರೆ ಎಂಬ ಅಭಿಪ್ರಾಯವೂ ಇದೆ. ಎಚ್.ವಿಶ್ವನಾಥ್ ಅವರನ್ನು ಈಗಾಗಲೇ ಬದಿಗೆ ಸರಿಸಲಾಗಿದೆ. ಮಹೇಶ್ ಕುಮಟಳ್ಳಿ, ಎನ್.ಆರ್.ಸಂತೋಷ್, ಮರಂಕಲ್ ಮುಂತಾದವರು ಹಿಂದಕ್ಕೆ ಸರಿದಿದ್ದಾರೆ. ಪ್ರತಾಪ ಗೌಡ ಪಾಟೀಲ ಅವರ ಭವಿಷ್ಯ ಇನ್ನೂ ನಿರ್ಧಾರ ಆಗಿಲ್ಲ. ಮುನಿರತ್ನ ಅವರಿಗೆ ನೀಡಿದ್ದ ಭರವಸೆ ಭರವಸೆಯಾಗಿಯೇ ಉಳಿದಿದೆ. ಇದೆಲ್ಲದರ ಮುಂದುವರಿದ ಭಾಗವಾಗಿಯೇ ಜಾರಕಿಹೊಳಿ ಸಿ.ಡಿ ಸ್ಫೋಟಗೊಂಡಿದೆ ಎಂದು ವಾದಿಸುವವರೂ ಇದ್ದಾರೆ.

ಜಾರಕಿಹೊಳಿ ಅವರದ್ದು ಎನ್ನಲಾದ ಸಿ.ಡಿ ಕುರಿತಂತೆ ಕಾನೂನಾತ್ಮಕ ವಿಚಾರಣೆ, ತನಿಖೆ ನಡೆಯುವುದು ಒಂದು ಕಡೆ. ಅದನ್ನು ಪೊಲೀಸರು ತಮ್ಮ ಕೈಲಾದ ಮಟ್ಟಿಗೆ ಮಾಡುತ್ತಾರೆ. ಕಾನೂನು ತನ್ನ ಪರಿಧಿಯಲ್ಲಿ ಮಾಡಬಹುದಾದ ವಿಚಾರಣೆಯನ್ನು ಮುಂದುವರಿಸಬಹುದು. ಆದರೆ ಇನ್ನೊಂದು ಕಡೆ ಅದರ ರಾಜಕೀಯ ಕುತಂತ್ರದ ಬಗ್ಗೆ ತನಿಖೆ ನಡೆಸುವವರು ಯಾರು? ಎಲ್ಲಕ್ಕಿಂತ ಮುಖ್ಯವಾಗಿ ಇಡೀ ದೇಶದ ಮುಂದೆ, ಪ್ರಪಂಚದ ಮುಂದೆ ಕರ್ನಾಟಕದ ಗೌರವ, ಘನತೆ ಹರಾಜಾಗಿದೆಯಲ್ಲ. ಅದಕ್ಕೆ ಉತ್ತರ ಹೇಳುವವರು ಯಾರು? ಮಾಸ್ಟರ್ ಹಿರಣ್ಣಯ್ಯ ಅವರು ತಮ್ಮ ನಾಟಕಗಳಲ್ಲಿ ‘ಹುಟ್ಟಾ ಘಟಿಂಗರ ಕಟ್ಟಕಡೆಯ ಆಟ ರಾಜಕೀಯ’ ಎಂದು ಟೀಕೆ ಮಾಡುತ್ತಿದ್ದರು. ಈಗಿನ ಆಟ ಮೇಲಾಟಗಳನ್ನು ನೋಡಿದರೆ ಇದು ಹುಟ್ಟಾ ಘಟಿಂಗರ ಕಟ್ಟ ಕಡೆಯ ಆಟ ಅಲ್ಲ. ಮೊದಲ ಆಟವೇ ಇದು ಎಂಬ ಅನುಮಾನ ಬರುತ್ತಿದೆ. ಸಿ.ಡಿ ಕಿಡಿಗೇಡಿಗಳ ನಡುವೆ ಮಾನಗೇಡಿಗಳು ಕೈ ಬೆಚ್ಚಗೆ ಮಾಡಿಕೊಳ್ಳುತ್ತಿದ್ದಾರೆ. ನೈತಿಕತೆ, ಘನತೆ, ಗೌರವ ಎನ್ನುವ ಮಾತುಗಳಿಗೆ ಅರ್ಥವೇ ಇಲ್ಲದಂತಾಗಿದೆ. ಮಾನವಂತರು ಮೌನವಾಗಿದ್ದಾರೆ. ಮತದಾರರು ದಾರಿಕಾಣದಂತಾಗಿದ್ದಾರೆ.

ಇನ್ನೊಂದು ಗಂಭೀರ ಮತ್ತು ಅಧ್ಯಯನಕ್ಕೆ ಯೋಗ್ಯ ವಿಚಾರ ಎಂದರೆ, ಆರ್.ಡಿ.ಕಿತ್ತೂರ ಅವರಿಂದ ಹಿಡಿದು ರಮೇಶ ಜಾರಕಿಹೊಳಿವರೆಗೆ ರಾಜ್ಯದಲ್ಲಿ ಲೈಂಗಿಕ ಹಗರಣಕ್ಕೆ ತುತ್ತಾದವರೆಲ್ಲಾ ಹಿಂದುಳಿದ ವರ್ಗದವರು ಮತ್ತು ದಲಿತರು. ಇದು ಕಾಕತಾಳೀಯವೂ ಆಗಿರಬಹುದು. ಆದರೆ ಅವರೇ ಯಾಕೆ ಸಿಕ್ಕಿಬೀಳುತ್ತಿದ್ದಾರೆ. ಉಳಿದವರು ಸಿಕ್ಕಿ ಬೀಳುತ್ತಿಲ್ಲವೋ ಅಥವಾ ಇಂತಹ ಕೆಲಸವನ್ನೇ ಮಾಡಿಲ್ಲವೋ? ಈ ಪ್ರಶ್ನೆಗೆ ಉತ್ತರ ಹುಡುಕುವ ಕೆಲಸವೂ ಆಗಬೇಕಿದೆ.

ಚುರುಮುರಿ

ಸಿ.ಡಿ. ಸೋಂಕು

• ಮಣ್ಣೆ ರಾಜು

ಶಾಸಕರ ಮನೆ ಮುಂದೆ ಜನ ಗುಂಪು ಸೇರಿದ್ದರು. ಶಾಸಕರ ಪಿ.ಎ ಬಂದು, ‘ಶಾಸಕರು ಕ್ಷೇತ್ರದ ಅಭಿವೃದ್ಧಿ ಬಗ್ಗೆ ಸಿ.ಎಂ ಜೊತೆ ಫೋನ್‌ನಲ್ಲಿ ಚರ್ಚೆ ಮಾಡಿದ್ದಾರೆ, ಶಾಂತಿಯಿಂದ ಸಹಕರಿಸಿ’ ಎಂದ.

‘ಕೊರೊನಾ ಕಾಟದಲ್ಲೂ ಏನಂತ್ರೀ ಇವರ ಗೋಳು...’ ಅಂತ ಗೊಣಗಿಕೊಂಡೇ ಬಂದ ಶಾಸಕರು, ‘ಏನ್ರೀ ನಿಮ್ಮ ಅಹವಾಲು?’ ಎಂದು ಕೇಳಿದರು.

‘ಊರಲ್ಲಿ ಕುಡಿಯಲು ನೀರಿಲ್ಲ, ನಡೆಯಲು ರೋಡಿಲ್ಲ, ಗುದ್ದಲಿ ಪೂಜೆ ಇಲ್ಲ, ಉದ್ಘಾಟನೆ ಇಲ್ಲ, ನೀವಂತೂ ಕ್ಷೇತ್ರದ ಕಡೆ ಬಂದು ನಮ್ಮ ಕಷ್ಟ ಏನೂಂತ ಕೇಳಲಿಲ್ಲ, ನಿಮ್ಮ ಕಷ್ಟ ಏನೂಂತ ಕೇಳಲು ನಾವೇ ಬಂದ್ವಿ...’ ಜನ ತಲೆಗೊಂದು ಮಾತನಾಡಿದರು.

‘ಸೋಂಕು ನಿವಾರಣೆ ಆಗಿ ಸರ್ಕಾರದ ಅನುದಾನ ಸಿಗೋವರೆಗೂ ಸಮಾಧಾನವಾಗಿರಿ’.

‘ಕೊರೊನಾ ಸೋಂಕಾ ಸಾರ್?’

‘ಅಲ್ಲ, ಸರ್ಕಾರಕ್ಕೆ ಸಿ.ಡಿ ಸೋಂಕು ಅಂಟಿದೆ. ದೊಡ್ಡ ಸೈಜಿನ ಮಾಸ್ಕ್ ಹಾಕ್ಕೊಂಡು ಮುಖ ಮುಚ್ಚಿಕೊಳ್ಳುವಷ್ಟು ಮುಜುಗರ ಆಗಿದೆ. ನೋವಿನಲ್ಲಿ ನರಳುತ್ತಿರುವ ಸರ್ಕಾರದ ಬಳಿ ಹೋಗಿ ಯೋಜನೆಗೆ ಅನುದಾನ ಬೇಕು, ಅಭಿವೃದ್ಧಿಗೆ ಹಣ ಬೇಕು ಅಂತ ಕೇಳೋದು ಮಾನವೀಯತೆ ಅಲ್ಲ’ ಅಂದರು ಶಾಸಕರು.

‘ಸಿ.ಡಿ ಸೋಂಕಿಗೆ ಲಸಿಕೆ ಇಲ್ವಾ ಸಾರ್...? ಒಳ್ಳೆಯ ಡಾಕ್ಟರ್‌ಗೆ ತೋರಿಸಿ ಟ್ರೀಟ್‌ಮೆಂಟ್ ಕೊಡಿಸಿ’.

‘ಇದು ಡಾಕ್ಟರ್ ಚಿಕಿತ್ಸೆಯ ಮೆಡಿಕಲ್ ವೈರಸ್ ಅಲ್ಲ, ಸಿ.ಡಿ ಸೋಂಕನ್ನು ಪೊಲೀಸರ ಟ್ರೀಟ್‌ಮೆಂಟ್‌ನಿಂದ ಬಗ್ಗು ಬಡಿಯಬೇಕು’.

‘ಸಿ.ಡಿ ಸೋಂಕಿನಿಂದ ಸರ್ಕಾರ ಬೇಗ ಗುಣಮುಖವಾಗಲಿ ಎಂದು ನಾವೆಲ್ಲಾ ಪ್ರಾರ್ಥಿಸುತ್ತೇವೆ...’ ಎಂದರು ಜನ.

‘ನಿಮ್ಮ ಪ್ರಾರ್ಥನೆ ಫಲದಿಂದ ಸೋಂಕು ನಿವಾರಣೆಯಾಗಿ ಸರ್ಕಾರ ಚೇತರಿಸಿಕೊಂಡ ಮೇಲೆ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿ ಮಾಡ್ತೀನಿ...’ ಎಂದರು ಶಾಸಕರು. ಅವರ ಭರವಸೆ ನಂಬಿ ಜನ ವಾಪಸಾದರು.

ಸಂಗತ

ಆ್ಯಪ್ ಸ್ಟೋರ್‌ಗೆ ನಿಯಂತ್ರಣ ವ್ಯವಸ್ಥೆ?

ತಮ್ಮದೇ ಪಾವತಿ ಸೇವಾ ಆ್ಯಪ್ ಹೊಂದಿರುವ ಕಂಪನಿಗಳು ಇತರ ಆ್ಯಪ್‌ಗಳಿಗೆ ಸೇವೆ ನೀಡುವ ವಿಚಾರದಲ್ಲಿ ಪಕ್ಷಪಾತವಿಲ್ಲದೆ ನಡೆದುಕೊಳ್ಳಬಹುದೇ ಎಂಬುದು ಚಿಂತನಾರ್ಹ ಸಂಗತಿ

• ವಿಜಯ್ ಜೋಷಿ

ಹಿಂದಿನ ವರ್ಷದಲ್ಲಿ ಗೂಗಲ್ ಮತ್ತು ಪೇಟಿಎಂ ನಡುವಿನ ಸಂಘರ್ಷವೊಂದು ವರದಿಯಾಗಿತ್ತು. ಭಾರತದ ನವೋದ್ಯಮಗಳ ಪೈಕಿ ಬಹುದೊಡ್ಡ ಜನಪ್ರಿಯತೆ ಗಳಿಸಿಕೊಂಡಿರುವ ಪೇಟಿಎಂ ಕಂಪನಿಯ ಪಾವತಿ ಹಾಗೂ ಇತರ ಸೇವೆಗಳ ಆ್ಯಪ್ ಅನ್ನು ಗೂಗಲ್ ತನ್ನ ಪ್ಲೇಸ್ಟೋರ್‌ನಿಂದ ತೆಗೆದುಹಾಕಿತ್ತು. ಕ್ರೀಡಾ ಬೆಟ್ಟಿಂಗ್‌ಗೆ ಸಂಬಂಧಿಸಿದಂತೆ ತಾನು ರೂಪಿಸಿದ ಕೆಲವು ನಿಯಮಗಳನ್ನು ಪೇಟಿಎಂ ಉಲ್ಲಂಘಿಸಿದೆ ಎಂಬ ಕಾರಣವನ್ನು ಗೂಗಲ್ ನೀಡಿತ್ತು. ಪ್ಲೇಸ್ಟೋರ್‌ನಿಂದ ಹೊರಹಾಕಿಸಿಕೊಂಡ ಕೆಲವು ತಾಸುಗಳ ನಂತರದಲ್ಲಿ ಪೇಟಿಎಂ ಮತ್ತೆ ಅಲ್ಲಿ ಸ್ಥಾನ ಪಡೆಯಿತು ಎಂಬುದು ಬೇರೆ ಮಾತು. ಆದರೆ, ಪೇಟಿಎಂ ಕಂಪನಿಯ ಸಂಸ್ಥಾಪಕ ವಿಜಯ್ ಶೇಖರ್ ಶರ್ಮ ಅವರು ಆ ಸಂದರ್ಭದಲ್ಲಿ ಆಡಿದ್ದ ಮಾತು ಮಹತ್ವದ್ದು. ‘ಗೂಗಲ್ ಎಂಬುದು ಈಗ ಸರಿ ಯಾವುದು, ತಪ್ಪು ಯಾವುದು ಎಂಬುದನ್ನು ತೀರ್ಮಾನಿಸುವ, ತಪ್ಪಿಗೆ ಶಿಕ್ಷೆ ವಿಧಿಸುವ ಹಾಗೂ ಆ ಶಿಕ್ಷೆಯನ್ನು ಜಾರಿಗೆ ತರುವ’ ಶಕ್ತಿ ಹೊಂದಿದೆ ಎಂದು ಶರ್ಮ ಹೇಳಿದ್ದರು.

ಒಂದು ಅಂದಾಜಿನ ಪ್ರಕಾರ, ಭಾರತದ ಮೊಬೈಲ್ ಫೋನ್ ಮಾರುಕಟ್ಟೆಯಲ್ಲಿ ಆ್ಯಂಡ್ರಾಯ್ಡ್‌ನ ಪಾಲು ಶೇಕಡ 95ರಷ್ಟು. ಅಂದರೆ, ನೂರಕ್ಕೆ 95 ಮೊಬೈಲ್ ಫೋನ್‌ಗಳಲ್ಲಿ ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆ ಇದೆ ಮತ್ತು ಅಷ್ಟೂ ಫೋನ್‌ಗಳಲ್ಲಿ ಗೂಗಲ್ ಪ್ಲೇಸ್ಟೋರ್ ಕೂಡ ಇದೆ. ಆ್ಯಂಡ್ರಾಯ್ಡ್ ನಲ್ಲಿ ಬಳಸಬಹುದಾದ ಆ್ಯಪ್‌ಗಳನ್ನು ಬೇರೆ ಕಡೆಗಳಿಂದಲೂ ಡೌನ್‌ಲೋಡ್ ಮಾಡಿಕೊಳ್ಳುವ ಅವಕಾಶ ಇದೆಯಾದರೂ, ಹೆಚ್ಚಿನವರು ಆ್ಯಪ್‌ಗಳನ್ನು ಪಡೆದುಕೊಳ್ಳುವುದು ಪ್ಲೇಸ್ಟೋರ್‌ನಿಂದ. ಪೇಟಿಎಂ, ಫೋನ್‌ಪೆ, ಜೊಮ್ಯಾಟೊನಂತಹ ಕಂಪನಿಗಳು ತಮ್ಮ ಗ್ರಾಹಕರಿಗೆ ಸೇವೆ ಒದಗಿಸುವುದು ಮುಖ್ಯವಾಗಿ ಆ್ಯಪ್ ಮೂಲಕ. ಪ್ಲೇಸ್ಟೋರ್‌ನಿಂದ ಈ ಕಂಪನಿಗಳ ಆ್ಯಪ್ ಕಿತ್ತುಹಾಕಿದರೆ, ಕಂಪನಿಗಳ ಕತ್ತು ಹಿಸುಕಿದಂತೆಯೇ ಸರಿ. ಗೂಗಲ್ ಸೃಷ್ಟಿಸಿರುವ ಪ್ಲೇಸ್ಟೋರ್, ಹೊಸ ಕಾಲದ ಇಂತಹ ಕಂಪನಿಗಳಿಗೆ ತಮ್ಮ ಗ್ರಾಹಕರನ್ನು ತಲುಪಲು ಇರುವ ಪ್ರಧಾನ ಮಾಧ್ಯಮ ಕೂಡ ಹೌದು.

ಪ್ಲೇಸ್ಟೋರ್‌ನಿಂದ ಹೊರಹಾಕಿಸಿಕೊಂಡಿದ್ದ ಪೇಟಿಎಂ ಈಗಾಗಲೇ ತನ್ನದೇ ಆದ ಆ್ಯಪ್ ಸ್ಟೋರ್ ಆರಂಭಿಸಿದೆ. ಅದರಲ್ಲಿ ತನ್ನ ಆ್ಯಪ್‌ಗಳು ಮಾತ್ರವಲ್ಲದೆ, ಬೇರೆ ಕಂಪನಿಗಳ ಆ್ಯಪ್‌ಗಳಿಗೂ ಜಾಗ ನೀಡಿದೆ. ಈ ನಡುವೆ ಕೇಂದ್ರ ಸರ್ಕಾರ ಕೂಡ ತನ್ನದೇ ಆದ ಆ್ಯಪ್ ಸ್ಟೋರ್ ಶುರು ಮಾಡಿದೆ. ಅದರಲ್ಲಿ ಈಗ 965ಕ್ಕೂ ಹೆಚ್ಚು ಆ್ಯಪ್‌ಗಳಿಗೆ ಜಾಗ ನೀಡಲಾಗಿದೆ ಎಂದು ಈಚೆಗೆ ವರದಿಯಾಗಿದೆ. ಕೆಲವು ಮೊಬೈಲ್ ಕಂಪನಿಗಳು ತಮ್ಮ ಸ್ಮಾರ್ಟ್‌ಫೋನ್‌ನಲ್ಲಿ ತಮ್ಮದೇ ಆದ ಆ್ಯಪ್ ಸ್ಟೋರ್ ಅಳವಡಿಸಿರುವುದೂ ಇದೆ.

ಸ್ಮಾರ್ಟ್‌ಫೋನ್‌ಗಳು ಭಾರತೀಯರ ಕೈಗೆ ಅಗಷ್ಟೇ ಸಿಕ್ಕಿದ್ದ ಕಾಲದಲ್ಲಿ, ಆ್ಯಪ್ ಸ್ಟೋರ್‌ಗೆ ‘ಮಾರ್ಕೆಟ್’ ಎಂಬ ಹೆಸರಿತ್ತು. ಆಗ ಅದು, ಇಂದಿನ ನವೋದ್ಯಮಗಳ ಪಾಲಿಗೆ ಈಗಿನಷ್ಟು ಮಹತ್ವದ್ದಾಗಿರಲಿಲ್ಲ. ಆ ಮಾರ್ಕೆಟ್‌ನಲ್ಲಿ ಸಿಗುತ್ತಿದ್ದುದು ಒಂದಿಷ್ಟು ಚಿಕ್ಕ–ಪುಟ್ಟ ಗೇಮ್‌ಗಳು, ಗೂಗಲ್ ಕಂಪನಿಯೇ ರೂಪಿಸಿದ್ದ ಕೆಲವು ಆ್ಯಪ್‌ಗಳು ಇತ್ಯಾದಿ... ಆದರೆ ಇಂದು ಆ್ಯಪ್ ಸ್ಟೋರ್ ಎಂಬುದು ಬೃಹತ್ ಮಾರುಕಟ್ಟೆ ಇದ್ದಂತೆ. ಹಣಕಾಸು ಸೇವೆಗಳನ್ನು ಒದಗಿಸುವ ಪೇಟಿಎಂ, ಫೋನ್‌ಪೆ, ಈಕ್ವಿಟಿ ಹೂಡಿಕೆ ಸೇವೆಗಳನ್ನು ಒದಗಿಸುವ ಜೆರೊದಾ, ಸಾರಿಗೆ ಸೇವೆ ಒದಗಿಸುವ ಓಲಾ, ಉಬರ್, ಮನೆ–ಮನೆಗೆ ಆಹಾರ ತಂದುಕೊಡುವ ಸೇವಾ ಕ್ಷೇತ್ರದ ಜೊಮ್ಯಾಟೊ, ಸ್ವಿಗ್ಗಿ, ನೂರಾರು ಕೋಟಿ ಹಣ ಹೂಡಿಕೆ ಮಾಡಿ ಆಕರ್ಷಕ ಗೇಮ್‌ಗಳನ್ನು ರೂಪಿಸಿರುವ ಗೇಮಿಂಗ್ ಉದ್ಯಮಗಳು... ಇವೆಲ್ಲವುಗಳ ಪಾಲಿಗೆ ಆ್ಯಪ್ ಸ್ಟೋರ್‌ಗಳೇ ಜೀವನಾಡಿಗಳು.

ಮಾರುಕಟ್ಟೆಯಲ್ಲಿ ಚಕ್ರಾಧಿಪತ್ಯ ಹೊಂದಿರುವ ಗೂಗಲ್‌ನಂತಹ ಕಂಪನಿ, ತನ್ನ ಆ್ಯಪ್ ಸ್ಟೋರ್‌ನಿಂದ ಯಾವುದೇ ಉದ್ಯಮದ ಆ್ಯಪ್ ಅನ್ನು ಹೊರಹಾಕಿದರೆ ಆ ಉದ್ಯಮಕ್ಕೆ ಆಗುವ ನಷ್ಟ ಓದುಗರ ಊಹೆಗೆ ಬಿಟ್ಟದ್ದು. ತಾನೂ ಒಂದು ಲಾಭದ ಉದ್ದೇಶವಿರುವ ಕಂಪನಿಯಾಗಿರುವ ಗೂಗಲ್, ಇತರ ಕಂಪನಿಗಳ ವಿಚಾರದಲ್ಲಿ ಸದಾಕಾಲ ಅತ್ಯಂತ ನ್ಯಾಯಸಮ್ಮತವಾಗಿ ನಡೆದುಕೊಳ್ಳುತ್ತದೆ ಎಂದು ಭಾವಿಸಬಹುದೇ? ಗೂಗಲ್ ಕಂಪನಿಯದ್ದೇ ಪಾವತಿ ಸೇವಾ ಆ್ಯಪ್ ಇದೆ. ಹೀಗಿರುವಾಗ ಅದೇ ಗೂಗಲ್ ಕಂಪನಿ ಪಾವತಿ ಸೇವೆ ಒದಗಿಸುವ ಇತರ ಆ್ಯಪ್‌ಗಳ ವಿಚಾರದಲ್ಲಿ ಪಕ್ಷಪಾತ ಧೋರಣೆಯೇ ಇಲ್ಲದೆ ನಡೆದುಕೊಳ್ಳಬಹುದೇ? ಪೇಟಿಎಂ ತನ್ನ ಆ್ಯಪ್ ಸ್ಟೋರ್‌ನಲ್ಲಿ ಇತರ ಪಾವತಿ ಆ್ಯಪ್‌ಗಳನ್ನು ಹೇಗೆ ನೋಡಿಕೊಳ್ಳಬಹುದು?

ಹತ್ತು ಹಲವು ಪ್ರಕರಣಗಳನ್ನು ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಎದುರಿಸುತ್ತಿರುವ ಗೂಗಲ್‌ನಂತಹ ಕಂಪನಿಗೆ ಆ್ಯಪ್‌ಗಳ ವಿಚಾರದಲ್ಲಿ ‘ತನಿಖೆ ನಡೆಸುವ, ನ್ಯಾಯಾಧೀಶನಾಗುವ, ಶಿಕ್ಷೆಗೆ ಗುರಿಪಡಿಸುವ’ ಶಕ್ತಿಯನ್ನು ಕೊಟ್ಟಿರುವುದು ಉದ್ಯಮದ ಒಳಿತಿನ ದೃಷ್ಟಿಯಿಂದ ಸೂಕ್ತವಲ್ಲ. ಆ ಶಕ್ತಿಯನ್ನು ಸರ್ಕಾರಕ್ಕೂ ಕೊಡಬೇಕಿಲ್ಲ. ಆ ಕೆಲಸಕ್ಕೆ ತುರ್ತಾಗಿ ಬೇಕಿರುವುದು ಒಂದು ಶಾಸನಾತ್ಮಕ ನಿಯಂತ್ರಣ ಪ್ರಾಧಿಕಾರ. ಅಂತಹ ಪ್ರಾಧಿಕಾರ ರಚಿಸಬೇಕಿದ್ದ ಸರ್ಕಾರವು ತಾನೇ ಒಂದು ಆ್ಯಪ್ ಸ್ಟೋರ್ ಆರಂಭಿಸಿರುವುದು ತಮಾಷೆಯಂತೆ ಕಾಣುತ್ತಿದೆ.

ವಾಚಕರ ವಾಣಿ

ಖಾಸಗಿ ಬದುಕು ಅಸಹ್ಯಕರವಾಗದಿರಲಿ

ಮಾಧ್ಯಮಗಳಲ್ಲಿ ಇತ್ತೀಚೆಗೆ ಜನಪ್ರತಿನಿಧಿಗಳ ಕೆಸರೆರಚಾಟ ಕಣ್ಣಿಗೆ ರಾಚುತ್ತಿದೆ. ರಾಜಕೀಯ ಮೇಲಾಟಕ್ಕೆ ಪರಸ್ಪರ ದ್ವೇಷ, ತೇಜೋವಧೆಗಳಿಗಾಗಿ ಷಡ್ಯಂತ್ರಗಳನ್ನು ರೂಪಿಸುವ ಮೂಲಕ ತಮ್ಮ ಉದ್ದೇಶಗಳಿಗೆ ಹೆಣ್ಣಿನ ಮಾನಭಂಗವನ್ನೂ ಲಕ್ಷಿಸದವರಿಗೆ ನಾಚಿಕೆಯಾಗಬೇಕು. ಖಾಸಗಿ ಬದುಕಿನಿಂದ ರಾಜಕಾರಣಿಗಳೇನೂ ಹೊರತಲ್ಲ. ಅವರ ಖಾಸಗಿ ಬದುಕಿನ ಲೀಲಾವಿನೋದಗಳು ಸಾರ್ವಜನಿಕವಾಗಿ ಅಸಹ್ಯಕರವೆನಿಸಿ ಕೆಟ್ಟದಾಗಿ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬಾರದು.

ಹಿಂದೆ ಆಗಿಹೋದ ರಾಜ್ಯದ ಕೆಲವು ಮುಖ್ಯಮಂತ್ರಿಗಳ ಖಾಸಗಿ ಬದುಕಿನ ಲೀಲಾವಿನೋದಗಳು ಅಸಹ್ಯಕರವೆನಿಸದೆ ರಂಜನೀಯವೆನಿಸಿದ್ದವು. ಮೊನ್ನೆ ವಿಧಾನಸಭೆಯಲ್ಲಿ ಆರೋಗ್ಯ ಸಚಿವರು ಸಿಡಿಸಿದ ‘ಏಕಪತ್ನಿ ವ್ರತಸ್ಥ’ ಬಾಂಬ್ ಪ್ರತಿಯೊಬ್ಬರನ್ನೂ ಆತ್ಮವಿಮರ್ಶೆಗೆ ಒಡ್ಡಿಕೊಳ್ಳುವಂತೆ ಮಾಡಿದೆ. ಅದೇ ಸಮಯದಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರು ತಾವು ಇಂತಹ ವಿಚಾರದಲ್ಲಿ ಒಮ್ಮೆ ಜೀವನದಲ್ಲಿ ಎಡವಿದ್ದುದಾಗಿ ಹೇಳಿದ್ದು, ಉಳಿದವರ ಆತ್ಮಸಾಕ್ಷಿಯನ್ನು ಎಚ್ಚರಿಸುವಂತಿತ್ತು.

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಮುಜುಗರ ತರುವ ದೃಶ್ಯಗಳು

ದೃಶ್ಯ ಮಾಧ್ಯಮಗಳಲ್ಲಿ ಇತ್ತೀಚೆಗೆ ಪ್ರಸಾರವಾಗುತ್ತಿರುವ ಹಸಿಬಿಸಿ ಲೈಂಗಿಕ ಪ್ರಚೋದನಕಾರಿ ದೃಶ್ಯಗಳು, ಸಿ.ಡಿ. ಪ್ರಕರಣಕ್ಕೆ ಸಂಬಂಧಿಸಿದ ಸುದ್ದಿಗಳು ಕುಟುಂಬದವರು ಒಟ್ಟಾಗಿ ಕುಳಿತು ನೋಡುವಾಗ ಮುಜುಗರ ಉಂಟು ಮಾಡುವಂತಿವೆ. ಇದು, ಮಕ್ಕಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದೆ. ಕೆಲವು ದೃಶ್ಯ ಮಾಧ್ಯಮಗಳಿಗೆ ಸಾಮಾಜಿಕ ಕಾಳಜಿಯೇ ಇಲ್ಲದಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ಕೆಲವು ಸುದ್ದಿವಾಹಿನಿಗಳು ಟಿಆರ್‌ಪಿಯ ಜಿದ್ದಾಜಿದ್ದಿಗೆ ಬಿದ್ದು ವಿವೇಚನಾರಹಿತವಾಗಿ ವರದಿ ಮಾಡುತ್ತಿರುವುದು ಆತಂಕಕಾರಿಯಾಗಿದೆ. ರಾಜ್ಯದಲ್ಲಿ ಅನೇಕ ಜ್ವಲಂತ ಸಮಸ್ಯೆಗಳಿವೆ. ಅವೆಲ್ಲವನ್ನೂ ಬಿಟ್ಟು ದಿನದ ಇಪ್ಪತ್ತನಾಲ್ಕು ಗಂಟೆಯೂ ಇಂತಹ ಕೆಲಸಕ್ಕೆ ಬಾರದ ಸುದ್ದಿಗಳನ್ನು ಪ್ರಸಾರ ಮಾಡಲಾಗುತ್ತಿದೆ. ಇವುಗಳನ್ನು ನೋಡಿದ ಚಿಕ್ಕ ಮಕ್ಕಳು ಏನಾದರೂ ಆ ಬಗ್ಗೆ ಕೇಳಿದರೆ ನಾವು ಉತ್ತರಿಸಲಾರದ ಸ್ಥಿತಿಯಲ್ಲಿದ್ದೇವೆ. ಇಂತಹ ಸುದ್ದಿ–ದೃಶ್ಯಗಳನ್ನು ಪ್ರಸಾರ ಮಾಡಿ ಸಾಮಾಜಿಕ ಸ್ವಾಸ್ಥ್ಯ ಹಾಳುಗೆಡಹುವುದು ಬೇಡ.

ಸುರೇಶ ಗೌರೆ, ನವನಿಹಾಳ, ಕಲಬುರ್ಗಿ

ಮಿತಿ ಮೀರಿದೆ ಲಂಚದ ದಾಹ

‘ಪೌರಕಾರ್ಮಿಕರಿಗೆ ಪೊರಕೆ ಖರೀದಿಗೂ ಹಣ ನೀಡುವುದಿಲ್ಲ, ಅದನ್ನೂ ನಾವೇ ಖರೀದಿಸಬೇಕಾಗಿದೆ’ ಎಂಬ ಬೃಹತ್ ಬೆಂಗಳೂರು ಮಹಾನಗರಪಾಲಿಕೆ (ಬಿಬಿಎಂಪಿ) ಪೌರಕಾರ್ಮಿಕರ ಸಂಘದ ಜಂಟಿ ಕಾರ್ಯದರ್ಶಿ ಹೇಳಿಕೆಯು (ಪ್ರ.ವಾ., ಮಾರ್ಚ್ 30) ಇಂದಿನ ಸರ್ಕಾರ ಮತ್ತು ಅಧಿಕಾರಿಗಳ ಆಡಳಿತದ ಕಾರ್ಯವೈಖರಿಯ ದಯನೀಯ ಸ್ಥಿತಿಯನ್ನು ಎತ್ತಿ ತೋರಿಸುತ್ತದೆ. ಸರ್ಕಾರದ ಕಿವಿಗಳಿಗೆ ಅಥವಾ ಕಣ್ಣುಗಳಿಗೆ ಇಂಥ ಸಣ್ಣ ಸಣ್ಣ ಸಂಗತಿಗಳು ತಲುಪದೇ ಸೋರಿಹೋಗುತ್ತವೆ. ಪೊರಕೆ ಕತೆ ಇರಲಿ, ಕೆಲವು ಹಳ್ಳಿಗಳಲ್ಲಿ ಮರಣ ಅಥವಾ ಜನನ ಪ್ರಮಾಣ ಪತ್ರವನ್ನು ತೆಗೆದುಕೊಳ್ಳುವುದಕ್ಕೂ ಆಗದ ದುಸ್ತರ ಪರಿಸ್ಥಿತಿ ಇದೆ. ಅಂಗವಿಕಲರು, ವಯೋವೃದ್ಧರ ಪಿಂಚಣಿ, ಭತ್ಯೆ, ಪಡಿತರ, ವಿಧವಾ ವೇತನ ಪಡೆಯಬೇಕೆಂದರೆ, ಅಂಚೆ ಇಲಾಖೆಯಿಂದಲೋ ಪಂಚಾಯಿತಿ ವ್ಯಾಪ್ತಿಯಿಂದಲೋ ದೊರಕಬಹುದಾದ ಕನಿಷ್ಠ ಸೌಲಭ್ಯಗಳನ್ನು ಪಡೆದುಕೊಳ್ಳಬೇಕೆಂದರೆ ಯಮಯಾತನೆ. ನೂರೋ ಇನ್ನೂರೋ ರೂಪಾಯಿ ಲಂಚ ಕೊಟ್ಟು ಪಡೆದುಕೊಳ್ಳಬೇಕಾದ ಅನಿವಾರ್ಯ ಸ್ಥಿತಿ ಇದೆ.

ಎಲ್ಲೆಡೆಯೂ ಲಂಚದ ದಾಹ ಮಿತಿಮೀರಿದೆ. ಫಲಾನುಭವಿಗಳು ಗಟ್ಟಿಯಾಗಿ ಮಾತನಾಡಿದರೆ ನಾಳೆ ಅವರ ಸವಲತ್ತುಗಳನ್ನೇ ಇಲ್ಲವಾಗಿಸುವಷ್ಟು ಭಯದ ವಾತಾವರಣ ಸೃಷ್ಟಿಸಲಾಗಿದೆ. ಈ ಬಗ್ಗೆ ಅಧಿಕಾರಿಗಳಲ್ಲಿ ದೂರಿದರೆ ಪ್ರಯೋಜನವಿಲ್ಲ. ಬೇಲಿಯೇ ಎದ್ದು ಹೊಲ ಮೇಯುವಂತಿದೆ ಇಂದಿನ ಸ್ಥಿತಿ. ಹೀಗಿರುವಾಗ ಯಾರನ್ನು ದೂಷಿಸುವುದು, ಯಾರಲ್ಲಿ ಅಳಲು ತೋಡಿಕೊಳ್ಳುವುದು? ಇಲ್ಲಿ ಪೊರಕೆ ಖರೀದಿ ಒಂದು ಉದಾಹರಣೆ ಅಷ್ಟೆ.

ಅಶ್ವತ್ಥ ಕಲ್ಲೇದೇವರಹಳ್ಳಿ, ಕುಂಕಾನಾಡು, ಕಡೂರು

ಕೃಷಿ ಆಧುನೀಕರಣವೆಂದರೆ ಕಾರ್ಪೊರೇಟೀಕರಣವೇ?

ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ 75ನೆಯ ಮನ್ ಕಿ ಬಾತ್‌ನಲ್ಲಿ ‘ಕೃಷಿಗೆ ಆಧುನಿಕತೆಯ ಅಗತ್ಯವಿದೆ’ ಎಂದು ಒತ್ತಿ ಹೇಳಿದ್ದಾರೆ (ಪ್ರ.ವಾ., ಮಾರ್ಚ್ 29). ಇದರ ಜೊತೆಗೆ ಅವರು ಕೃಷಿ ಕ್ಷೇತ್ರದಲ್ಲಿ ಉದ್ಯೋಗ ಅವಕಾಶಗಳನ್ನು ಸೃಷ್ಟಿಸಲು, ರೈತರ ಆದಾಯವನ್ನು ವೃದ್ಧಿಸಲು ಸಾಂಪ್ರದಾಯಿಕ ಕೃಷಿ ಪದ್ಧತಿಗಳ ಜೊತೆಗೆ ಹೊಸ ಪರ್ಯಾಯಗಳು, ಆವಿಷ್ಕಾರಗಳನ್ನು ಅಳವಡಿಸಿಕೊಳ್ಳುವುದು ಮುಖ್ಯ ಎಂದೂ ಕರೆ ನೀಡಿದ್ದಾರೆ. ಪ್ರಧಾನಮಂತ್ರಿ ಆಶಯವೇನೋ ಸ್ವಾಗತಾರ್ಹ. ಆದರೆ ಇದು ಕೃಷಿಯ ಖಾಸಗೀಕರಣ ಮತ್ತು ಕಾರ್ಪೊರೇಟೀಕರಣಗಳಿಂದಲೇ ನಡೆಯಬೇಕೇ? ಗುತ್ತಿಗೆ ಕೃಷಿ, ಕೃಷಿ ಉತ್ಪನ್ನಗಳ ಮುಕ್ತ ಮಾರಾಟ, ಯಾರು ಬೇಕಾದರೂ ಎಷ್ಟು ಬೇಕಾದರೂ ಕೃಷಿ ಉತ್ಪನ್ನಗಳನ್ನು ದಾಸ್ತಾನಿಡಲು ಅನುವಾಗಿಸುವ ಕೃಷಿಗೆ ಸಂಬಂಧಿಸಿದ ಕಾಯ್ದೆಗಳು ಕೃಷಿಯನ್ನು ಆಧುನೀಕರಣಗೊಳಿಸುತ್ತವೋ ಅಥವಾ ಇದನ್ನು ಬಂಡವಾಳಿಗರ ಸಾಮ್ರಾಜ್ಯವನ್ನಾಗಿ ಮಾಡುತ್ತವೋ?

ಯಾವತ್ತೂ ನಮ್ಮ ಕೃಷಿಯು ರೈತ-ಪ್ರಣೀತ ಖಾಸಗಿ ಚಟುವಟಿಕೆಯಾಗಿತ್ತು. ಅಲ್ಲಿ ಆಧುನೀಕರಣವೂ ನಡೆಯುತ್ತಿತ್ತು. ಈಗ ಕಾರ್ಪೊರೆಟ್ ಪ್ರಣೀತ ಕೃಷಿಯಿಂದ ಅದು ಹೆಚ್ಚು ಹೆಚ್ಚು ಆಧುನೀಕರಣಗೊಳ್ಳಬಹುದು. ಆದರೆ ರೈತಕೇಂದ್ರಿತ ಕೃಷಿಯಾಗಿ ಉಳಿಯುವುದಿಲ್ಲ. ಇವು ಕೃಷಿ ವಲಯದಲ್ಲಿರುವ ಒಟ್ಟು ಭೂ ಹಿಡುವಳಿಗಾರರಲ್ಲಿ ಶೇ 85ರಷ್ಟಿರುವ ಅತಿಸಣ್ಣ ಮತ್ತು ಸಣ್ಣ ಹಿಡುವಳಿಗಾರರ ಬದುಕನ್ನು ಮತ್ತು ಭೂರಹಿತ ದಿನಗೂಲಿ ದುಡಿಮೆಗಾರರ ಬದುಕನ್ನು ಅಧೋಗತಿಗೆ ಇಳಿಸಿಬಿಡಬಹುದು. ಈ ಬಗ್ಗೆಯೂ ಪ್ರಧಾನಿ ಗಮನ ನೀಡುವ ಅಗತ್ಯವಿದೆ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಿಶ್ವದ ಗಮನ ಸೆಳೆದಿದ್ದ ಕುಟುಂಬದ ನಡೆ, ನಿರ್ಮಾಣವಾಗದ ದಾಖಲೆ

ಒಡೆದ 'ಕಾವೇರಿ ಕುಟುಂಬ' ಚಾರಿತ್ರಿಕ ಸೋಲು

• ಎಂ.ಎನ್.ಯೋಗೇಶ್

ಕಾವೇರಿ ಕುಟುಂಬದ ಸಭೆಯೊಂದರ ದೃಶ್ಯ

ಕಾವೇರಿ ನೀರು ಹಂಚಿಕೆ ವಿವಾದಕ್ಕೆ ರೈತರಿಂದಲೇ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ರಚನೆಯಾದ 'ಕಾವೇರಿ ಕುಟುಂಬ'ದ ಹೆಜ್ಜೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿತ್ತು. ಇದು ವಿಶ್ವದ ಪ್ರಥಮ ಪ್ರಯೋಗವಾಗಿದ್ದು ಫಲಿತಾಂಶಕ್ಕೆ ಕಾಯುತ್ತಿರುವುದಾಗಿ ವರ್ಲ್ಡ್ ವಾಟರ್ ಫೋರಂ (ಡಬ್ಲ್ಯುಡಬ್ಲ್ಯುಎಫ್) ಹೇಳಿತ್ತು.

ವಿಶ್ವಸಂಸ್ಥೆ ಕೂಡ ಕಾವೇರಿ ಕುಂಟುಂಬದ ಯತ್ನವನ್ನು ಶ್ಲಾಘಿಸಿತ್ತು. ವಿಶ್ವಸಂಸ್ಥೆಯ ಅಂಗಸಂಸ್ಥೆಯಾಗಿರುವ ಯುನೈಟೆಡ್ ನೇಷನ್ ಡೆವೆಲಪ್‌ಮೆಂಟ್ ಪ್ರೋಗ್ರಾಂ (ಯುಎನ್‌ಡಿಪಿ) ನಡಾವಳಿಯಲ್ಲಿ ಕುಟುಂಬದ ಪ್ರಯತ್ನವನ್ನು ದಾಖಲಿಸಲಾಗಿತ್ತು. ನೈಲ್‌ನದಿ ಅಚ್ಚುಕಟ್ಟಿನ 9 ದೇಶಗಳ ನಡುವೆ ವಿವಾದವಿದ್ದು ಆ ಎಲ್ಲಾ ದೇಶಗಳ ಪ್ರತಿನಿಧಿಗಳು ಕಾವೇರಿ ಕುಟುಂಬದ ಚಟುವಟಿಕೆ ಅಧ್ಯಯನಕ್ಕೆ ಚೆನ್ನೈಗೆ ಬಂದಿದ್ದರು. ವಿಶ್ವದ ಹಲವು ದೇಶಗಳು ಕಾವೇರಿ ಕುಟುಂಬ ಕೈಗೊಳ್ಳಲಿರುವ ಪರಿಹಾರ ಸೂತ್ರವನ್ನು ಕಾತರದಿಂದ ಕಾಯುತ್ತಿದ್ದವು.

ಕಾವೇರಿ ಕುಟುಂಬ ಕೈಗೊಳ್ಳುವ ನಿರ್ಧಾರಕ್ಕೆ ಬೆಂಬಲವಿದೆ ಎಂದು ಕರ್ನಾಟಕ ಸರ್ಕಾರ ಘೋಷಿಸಿತ್ತು. ರೈತಸಂಘ, ಇತರ ಸಂಘಟನೆಗಳು ಕುಟುಂಬ ಪ್ರತಿನಿಧಿಗಳಿಗೆ ಬೆನ್ನೆಲುಬಾಗಿ ನಿಂತಿದ್ದವು. ಆದರೆ ಇಂಥದ್ದೊಂದು ಬದ್ಧತೆ ತಮಿಳುನಾಡು ಕಡೆಯಿಂದ ಕಂಡುಬರಲಿಲ್ಲ. ರಾಜಕೀಯದಿಂದ ಹೊರತಾಗಿ ಕಾವೇರಿ ಕುಟುಂಬ ರಚನೆಯಾದರೂ ತಮಿಳುನಾಡು ಪ್ರತಿನಿಧಿಗಳು ರಾಜಕಾರಣದಿಂದ ಹೊರಬರಲಿಲ್ಲ. ನಿರ್ಧಾರಗಳಿಗೆ ಬದ್ಧರಾಗಲಿಲ್ಲ, ಸಭೆಯ ನಡಾವಳಿಯನ್ನೇ ಧಿಕ್ಕರಿಸಿದರು. ಹೀಗಾಗಿ ಕಾವೇರಿ ಕುಟುಂಬ ಒಡೆದ ಮನೆಯಾಯಿತು. ಕಡೆಗೆ ವಿಶ್ವದ ಹಲವು ರಾಷ್ಟ್ರಗಳ ಶುಭ ಸುದ್ದಿಯ ನಿರೀಕ್ಷೆ ಕೈಗೂಡಲಿಲ್ಲ, ಇತಿಹಾಸ ನಿರ್ಮಾಣವಾಗಲಿಲ್ಲ. ಈ ವೈಫಲ್ಯವನ್ನು ಹೋರಾಟಗಾರರು ಇತಿಹಾಸದ ಸೋಲು ಎಂದೇ ಬಣ್ಣಿಸುತ್ತಾರೆ.

ಕಾವೇರಿ ನ್ಯಾಯಮಂಡಳಿ 1991ರಲ್ಲಿ ಮಧ್ಯಂತರ ತೀರ್ಪು ಪ್ರಕಟಿಸಿದ ನಂತರ ಕರ್ನಾಟಕ–ತಮಿಳುನಾಡು ನಡುವೆ ಸಂಘರ್ಷ ತೀವ್ರ ಸ್ವರೂಪ ಪಡೆಯಿತು. ಎಸ್. ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದ ವೇಳೆ ಸರ್ಕಾರಿ ಪ್ರಾಯೋಜಿತ ಬಂದ್ ಆಚರಣೆಯಿಂದಾಗಿ 'ತಮಿಳರ ವಿರುದ್ಧ ಕನ್ನಡಿಗರ ಹೋರಾಟ' ಆರಂಭವಾಗಿತ್ತು.

ಹೋರಾಟದ ಸ್ವರೂಪ ಗಮನಿಸಿದ ಎರಡೂ ರಾಜ್ಯಗಳ ಸಮಾನ ಮನಸ್ಕರು ಸ್ನೇಹಯುತವಾಗಿ ವಿವಾದ ಬಗೆಹರಿಸಿಕೊಳ್ಳುವ ಕುರಿತು ಚರ್ಚೆ ನಡೆಸಿದರು. ತಮಿಳುನಾಡಿನ ಪ್ರೊ.ಜನಕರಾಜನ್ ಪ್ರಸ್ತಾವಕ್ಕೆ ಕರ್ನಾಟಕದ ನೀರಾವರಿ ತಜ್ಞರು, ಪರಿಸರ ಪ್ರೇಮಿಗಳು, ಚಿಂತಕರು ಒಪ್ಪಿದರು. ಕೇರಳ, ಪುದುಚೇರಿ ತಜ್ಞರನ್ನೂ ಸೇರಿಸಿಕೊಳ್ಳಲಾಯಿತು. 2000ದಲ್ಲಿ ತಮಿಳುನಾಡಿನ ಮದ್ರಾಸ್ ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿ (ಎಂಐಡಿಎಸ್) ಮೊದಲ ಪೂರ್ವಭಾವಿ ಸಭೆ ನಡೆಯಿತು. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) 2ನೇ ಪೂರ್ವಭಾವಿ ಸಭೆ ನಡೆಯಿತು.

ನಂತರ ಬೆಂಗಳೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್ ವೇದಿಕೆಯಲ್ಲಿ 'ಕಾವೇರಿ ಕುಟುಂಬ'ಕ್ಕೆ ಅಂತಿಮ ರೂಪ ನೀಡಲಾಯಿತು. ಪ್ರಾಧ್ಯಾಪಕ ಪ್ರೊ.ಕೆ.ಸಿ.ಬಸವರಾಜು ಕರ್ನಾಟಕ ಕುಟುಂಬದ ಮುಖ್ಯಸ್ಥರಾಗಿ, ಪ್ರೊ.ರಂಗನಾಥನ್ ತಮಿಳುನಾಡು ಕುಟುಂಬದ ಮುಖ್ಯಸ್ಥರಾಗಿ ಆಯ್ಕೆಯಾದರು. ತಲಾ 14 ಮಂದಿ ರೈತ ಮುಖಂಡರು ಕಾವೇರಿ ಕುಟುಂಬದ ಪ್ರತಿನಿಧಿಗಳಾಗಿ ಸೇರಿದರು.

ಜಯಲಲಿತಾ ಭಯ!

ವಿ.ಕೆ.ನಟರಾಜು

'ತಮಿಳುನಾಡು ರೈತ ಪ್ರತಿನಿಧಿಗಳ ನಡುವೆ ಭಿನ್ನಾಭಿಪ್ರಾಯವಿತ್ತು. ಮುಂದಿನ ಚುನಾವಣೆಯಲ್ಲಿ ಜಯಲಲಿತಾ ಸರ್ಕಾರ ಬರಲಿದ್ದು ಅವರು ತಮಿಳುನಾಡಿನ ಹಿತ ಕಾಯುತ್ತಾರೆ. ತೀರ್ಮಾನ ಕೈಗೊಳ್ಳುವ ತೊಂದರೆಯನ್ನು ತಾವೇಕೆ ಹೊರಬೇಕು ಎಂಬ ಮನೋಭಾವ ಅವರಲ್ಲಿತ್ತು. ಹೀಗಾಗಿ ಕಾವೇರಿ ಕುಟುಂಬಕ್ಕೆ ಸೋಲಾಯಿತು' ಎನ್ನುತ್ತಾರೆ ಮದ್ರಾಸ್ ಅಭಿವೃದ್ಧಿ ಅಧ್ಯಯನ ಸಂಸ್ಥೆ ಮಾಜಿ ನಿರ್ದೇಶಕ ಪ್ರೊ.ವಿ.ಕೆ.ನಟರಾಜು.

ಪ್ರಜಾಪ್ರಭುತ್ವವನ್ನು ಸೋಲಿಸಿದರು



ಕೆ.ಸಿ.ಬಸವರಾಜು

'2017ರ ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಕರ್ನಾಟಕಕ್ಕೆ 14.75 ಟಿಎಂಸಿ ಅಡಿ ಹೆಚ್ಚುವರಿ ನೀರು ಸಿಕ್ಕಿದ್ದು ನಾವು ತೃಪ್ತಿ ಪಟ್ಟುಕೊಂಡಿದ್ದೇವೆ. ಆದರೆ, ಇಷ್ಟೇ ಪ್ರಮಾಣದ ನೀರು 10 ವರ್ಷಗಳ ಹಿಂದೆ ಕಾವೇರಿ ಕುಟುಂಬದ ಮೂಲಕವೇ ದಕ್ಕಿತ್ತು. ಆದರೆ ತಮಿಳುನಾಡು ರೈತರ ದುಷ್ಟತನ, ಧೂರ್ತತನದಿಂದಾಗಿ ಕುಟುಂಬದ ಚರ್ಚೆ ಸಾಕಾರವಾಗಲಿಲ್ಲ. ಅವರು ಇತಿಹಾಸ ನಿರ್ಮಿಸಲು ಅವಕಾಶ ಕೊಡಲಿಲ್ಲ. ಆ ಮೂಲಕ ಪ್ರಜಾಪ್ರಭುತ್ವದ ಆಶಯವನ್ನು ಸೋಲಿಸಿದರು' ಎಂದು ಕಾವೇರಿ ಕುಟುಂಬದ ಮುಖ್ಯಸ್ಥ ಪ್ರೊ.ಕೆ.ಸಿ.ಬಸವರಾಜು ಬೇಸರ ವ್ಯಕ್ತಪಡಿಸಿದರು.

2003ರಲ್ಲಿ ಅಧಿಕೃತವಾಗಿ ಕಾವೇರಿ ಕುಟುಂಬ ಕಾರ್ಯಚಟುವಟಿಕೆ ಆರಂಭಿಸಿತು.

ಒಂದು ಸಭೆ ತಮಿಳುನಾಡಿನ ತಿರುಚಿನಾಪಳ್ಳಿಯಲ್ಲಿ ನಡೆದರೆ ಮತ್ತೊಂದು ಸಭೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಮಂಗಳಾ ಸಭಾಂಗಣದಲ್ಲಿ ನಡೆಯುತ್ತಿತ್ತು. ಒಟ್ಟು ಏಳು ಸಭೆ ನಡೆದವು. ಸರ್ಕಾರದಿಂದ ಒಂದು ಪೈಸೆ ಹಣ ಪಡೆಯದೇ ರೈತ ಮುಖಂಡರು ಸಭೆ ಆಯೋಜಿಸುತ್ತಿದ್ದರು.

ಪರಿಹಾರ ಸೂತ್ರವೇನು?: ನದಿ ಕಣಿವೆಯ ಕೆಳಭಾಗದಲ್ಲಿ ದೊರೆಯುವ ಅಂತರ್ಜಲ ಪ್ರಮಾಣವನ್ನು ಹಲವು ಸಂಸ್ಥೆಗಳು ಗುರುತಿಸಿವೆ. ಕಾವೇರಿ ನ್ಯಾಯಮಂಡಳಿ ಕೂಡ 29 ಟಿಎಂಸಿ ಅಡಿ ಅಂತರ್ಜಲ ಗುರುತಿಸಿದೆ. ಆದರೆ ಇದನ್ನು ತಮಿಳುನಾಡು ತಿರಸ್ಕರಿಸುತ್ತಲೇ ಬಂದಿದ್ದು ಒಟ್ಟಾರೆ ನೀರಿನ ಲಭ್ಯತೆಯ ಪ್ರಮಾಣಕ್ಕೆ ಸೇರಿಸಿಕೊಳ್ಳಲು ಈವರೆಗೂ ಸಾಧ್ಯವಾಗಿಲ್ಲ.

ಅಂತರ್ಜಲದ ಲಭ್ಯತೆಯನ್ನು ತಮಿಳುನಾಡು ಕುಟುಂಬದ ಸದಸ್ಯರು ಒಪ್ಪಿಕೊಳ್ಳುವಂತೆ ಮಾಡಲು ಕರ್ನಾಟಕ ಕುಟುಂಬ ಸದಸ್ಯರು ಯಶಸ್ವಿಯಾಗಿದ್ದರು. ಹೀಗಾಗಿ ಕಾವೇರಿ ಅಚ್ಚುಕಟ್ಟಿನಲ್ಲಿ ದೊರೆಯುವ ಒಟ್ಟು ನೀರಿನ ಲಭ್ಯತೆಯಲ್ಲಿ (740 ಟಿಎಂಸಿ ಅಡಿ) 10 ಟಿಎಂಸಿ ಅಡಿ ಕರ್ನಾಟಕಕ್ಕೆ ಹೆಚ್ಚುವರಿಯಾಗಿ ಕೊಡಲು ತಮಿಳುನಾಡು ಸದಸ್ಯರು ಒಪ್ಪಿದ್ದರು.

ಜೊತೆಗೆ ಬೆಂಗಳೂರಿನ ಜನರ ಕುಡಿಯುವ ನೀರಿಗಾಗಿ 10 ಟಿಎಂಸಿ ಅಡಿ ಹೆಚ್ಚುವರಿ ಕೊಡುವಂತೆ ಒತ್ತಾಯ ಮಾಡಲಾಗಿತ್ತು. 5 ಟಿಎಂಸಿ ಅಡಿ ಬೆಂಗಳೂರಿಗೆ ಸಿಕ್ಕೇ ಸಿಗುತ್ತದೆ ಎಂಬ ವಿಶ್ವಾಸ ಕರ್ನಾಟಕದ ಪ್ರತಿನಿಧಿಗಳಿಗಿತ್ತು. ನಂತರ ಕಾವೇರಿ ಕುಟುಂಬದ ತೀರ್ಮಾನವನ್ನು ನಾಲ್ಕೂ ರಾಜ್ಯಗಳ ಮುಖ್ಯಮಂತ್ರಿಗಳ ಮುಂದೆ ಮಂಡಿಸುವ ಮಾತುಕತೆಯೂ ನಡೆದಿತ್ತು.

ಆದರೆ, ಈ ವೇಳೆ 2007ರಲ್ಲಿ ಕಾವೇರಿ ನ್ಯಾಯಮಂಡಳಿ ಅಂತಿಮ ತೀರ್ಪು ಪ್ರಕಟಿಸಿತು. ಜೊತೆಗೆ ತಮಿಳುನಾಡು ವಿಧಾನಸಭಾ ಚುನಾವಣೆ ಸಮೀಪಿಸಿತು. ಇದರಿಂದಾಗಿ ತಮಿಳುನಾಡು ರೈತರು ಕಾವೇರಿ ಕುಟುಂಬದ ಚಟುವಟಿಕೆಯಿಂದ ದೂರ ಉಳಿದರು. ತಮಿಳುನಾಡು, ಕರ್ನಾಟಕ ಸರ್ಕಾರಗಳು ನ್ಯಾಯಮಂಡಳಿಯ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ ಕಾವೇರಿ ಕುಟುಂಬ ಒಡೆದು ಹೋಯಿತು.

'ಮೇಕೆದಾಟು ಸಾಕಾರ ಹಲವು ಸಮಸ್ಯೆಗಳಿಗೆ ಪರಿಹಾರ'

• ಕೆ.ಜೆ.ಮರಿಯಪ್ಪ

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾಗಿದ್ದ ಟಿ.ಬಿ.ಜಯಚಂದ್ರ ಅವರು ಮೇಕೆದಾಟು ಬಳಿ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಾಣಕ್ಕೆ ಪ್ರಯತ್ನ ನಡೆಸಿದ್ದರು. ಕಾನೂನು ತೊಡಕುಗಳನ್ನು ನಿವಾರಿಸಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಜಲಸಂಪನ್ಮೂಲ ಇಲಾಖೆಗೆ ನಿರ್ದೇಶನ ಕೊಡಿಸಿದ್ದರು. ಮೇಕೆದಾಟು ಮತ್ತು ನದಿ ಜೋಡಣೆ ಯೋಜನೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಸಂದರ್ಶನದಲ್ಲಿ ಬಿಚ್ಚಿಟ್ಟಿದ್ದಾರೆ:

• ಕಾವೇರಿಯ 'ಹೆಚ್ಚುವರಿ' ನೀರನ್ನು ವೈಗೈ–ಗುಂಡಾರ್ ನದಿಗಳಿಗೆ ಹರಿಸುವ ತಮಿಳುನಾಡಿನ ಯೋಜನೆಯು ಕರ್ನಾಟಕ– ತಮಿಳುನಾಡು ಮಧ್ಯೆ ಮತ್ತೆ ಜಲ ವಿವಾದಕ್ಕೆ ನಾಂದಿ ಹಾಡಿದೆಯಲ್ಲ...

ಈಗಾಗಲೇ ವಿವಾದ ಹುಟ್ಟು ಹಾಕಿದೆ. ಈ ವಿಚಾರ ಬಂದಾಗಲೆಲ್ಲ ಎರಡೂ ರಾಜ್ಯಗಳ ನಡುವೆ ಸಂಘರ್ಷ ಆರಂಭವಾಗುತ್ತದೆ. ಕಾವೇರಿ ನೀರನ್ನು ನಾವು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುವಲ್ಲಿ ಸೋತಿರುವುದು ಇಷ್ಟೆಲ್ಲ ಸಮಸ್ಯೆ, ರಾದ್ಧಾಂತಕ್ಕೆ ಕಾರಣವಾಗಿದೆ. ಕಾವೇರಿ ನ್ಯಾಯಮಂಡಳಿ ಐತೀರ್ಪು ನಮ್ಮ ಮುಂದಿದೆ. ತಮಿಳುನಾಡಿಗೆ ಹಿಂದೆ 192 ಟಿಎಂಸಿ ಅಡಿ ನೀರು ಬಿಡಬೇಕಿತ್ತು. ನ್ಯಾಯ ಮಂಡಳಿ ತೀರ್ಪಿನಂತೆ ಈಗ 177 ಟಿಎಂಸಿ ಅಡಿ ಹರಿಸಬೇಕಿದೆ. ನಂತರ ನಮಗೆ ಹೆಚ್ಚುವರಿ ನೀರು ಲಭ್ಯವಾಗಿದೆ. ಒಟ್ಟಾರೆಯಾಗಿ ಸಮುದ್ರಕ್ಕೆ ನೀರು ಹರಿದು ಹೋಗುವುದನ್ನು ತಡೆದು, ಬಳಸಿಕೊಳ್ಳಬೇಕಿದೆ. ಇದಕ್ಕೆ ಮೇಕೆದಾಟು ಬಳಿ ಅಣೆಕಟ್ಟೆ ಕಟ್ಟುವುದೊಂದೇ ಪರಿಹಾರ. ಈ ಯೋಜನೆ ಸಾಕಾರಗೊಂಡರೆ ತಮಿಳುನಾಡಿಗೆ ಕಾಲಕಾಲಕ್ಕೆ ನಿಗದಿಪಡಿಸಿದಷ್ಟು ನೀರು ಹರಿಸಬಹುದು. ಇದರಿಂದ ಅವರ ಪಾಲಿನ ನೀರನ್ನಷ್ಟೇ ಬಿಟ್ಟು, ಉಳಿದ ಹೆಚ್ಚುವರಿ ನೀರನ್ನು ರಾಜ್ಯದಲ್ಲಿ ಬಳಸಿಕೊಳ್ಳಬಹುದು. ಜತೆಗೆ 500ರಿಂದ 600 ಮೆಗಾ ವಾಟ್ ವಿದ್ಯುತ್ ಉತ್ಪಾದನೆ ಮಾಡಬಹುದು. ರಾಜಕೀಯ ಇಚ್ಛಾಶಕ್ತಿ ಕೊರತೆಯಿಂದ ಇದು ಕೈಗೂಡಿಲ್ಲ.

• ಮೇಕೆದಾಟು ಯೋಜನೆಗೆ ಕೇಂದ್ರ ಒಪ್ಪಿಗೆ ನೀಡುತ್ತಿಲ್ಲವಲ್ಲ?

ಹೌದು, ರಾಜಕೀಯ ಇಲ್ಲಿ ಕೆಲಸ ಮಾಡುತ್ತಿದೆ. ಪ್ರಸ್ತುತ ತಮಿಳುನಾಡಿನಲ್ಲಿ ವಿಧಾನಸಭೆ ಚುನಾವಣೆ ನಡೆಯುತ್ತಿದ್ದು, ನದಿ ಜೋಡಣೆಗೆ ಅವಕಾಶ ಮಾಡಿಕೊಡಲಾಗಿದೆ. ಲೋಕಸಭೆಯಲ್ಲೂ ನೀರಾವರಿ ವಿಚಾರದಲ್ಲಿ ತಮಿಳುನಾಡಿನ ಎಲ್ಲಾ ಸಂಸದರು ಒಟ್ಟಾಗುತ್ತಾರೆ ಎಂಬ ಭಯ ಪ್ರಧಾನಿ ನರೇಂದ್ರ ಮೋದಿ ಅವರಿಗಿದೆ. ನಮ್ಮಲ್ಲಿ ಬಿಜೆಪಿ ಸಂಸದರಿದ್ದರೂ ಒಟ್ಟಾಗಿ ಪ್ರಧಾನಿ ಬಳಿಗೆ ಹೋಗಿ ಯೋಜನೆಗೆ ಒಪ್ಪಿಗೆ ಪಡೆಯುವ ಪ್ರಯತ್ನ ಮಾಡಲಿಲ್ಲ. ಮೇಲಿಂದ ಕೆಳಗಿನ ತನಕ ಒಂದೇ ಸರ್ಕಾರ ಇದ್ದರೆ ಅಭಿವೃದ್ಧಿಯ ಹೊಳೆ ಹರಿಯುತ್ತದೆ ಎಂದು ಸುಳ್ಳು ಹೇಳಿ ಜನರನ್ನು ನಂಬಿಸಿದರು. ಜನ ಬೆಂಬಲಿಸಿದರೂ ಅವರ ಕೆಲಸ ಮಾಡುತ್ತಿಲ್ಲ. ಮೇಕೆದಾಟು ಯೋಜನೆ ಜಾರಿಗೆ ಈಗಲೂ ಎರಡು ಮಾರ್ಗ ಇವೆ. ಒಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಪ್ರಧಾನಿ ಬಳಿಗೆ ಹೋಗಿ ಒಪ್ಪಿಗೆ ಪಡೆದುಕೊಳ್ಳುವುದು. ಇದು ಸಾಧ್ಯವಾಗದಿದ್ದರೆ ಎರಡನೆಯದಾಗಿ ಸುಪ್ರೀಂ ಕೋರ್ಟ್ ಮೆಟ್ಟಿಲೇರುವುದು. ತಮಿಳುನಾಡಿನಲ್ಲಿ ನದಿ ಜೋಡಣೆಗೆ ಅವಕಾಶ ನೀಡಲಾಗಿದೆ. ಅದರಂತೆ ಅಣೆಕಟ್ಟೆ ನಿರ್ಮಿಸಲು ನಮಗೂ ಒಪ್ಪಿಗೆ ಕೊಡಿ ಎಂದು ಕೇಳುವುದು. ತಮಿಳುನಾಡಿಗೆ ನಿಗದಿತ ಪ್ರಮಾಣದಷ್ಟು ನೀರು ಬಿಡುಗಡೆ ಮಾಡುವ ಭರವಸೆಯನ್ನು ಕೋರ್ಟ್‌ಗೆ ನೀಡಬೇಕು. ಬೆಂಗಳೂರಿನ ಜನತೆ ಕುಡಿಯುವ ನೀರಿಲ್ಲದೆ ಪರಿತಪಿಸುತ್ತಿರುವುದು ಹಾಗೂ ವಿದ್ಯುತ್ ಸಮಸ್ಯೆ ಬಗ್ಗೆಯೂ ಮನದಟ್ಟು ಮಾಡಿಕೊಟ್ಟು ಒಪ್ಪಿಗೆ ಪಡೆಯುವುದೊಂದೇ ಉಳಿದಿರುವ ಮಾರ್ಗ.

ಪ್ರಜಾವಾಣಿ ಸಂದರ್ಶನ

ಟಿ.ಬಿ.ಜಯಚಂದ್ರ

• ಕರ್ನಾಟಕದ ರೈತರು ಭತ್ತ, ಕಬ್ಬು ಬೆಳೆಗೆ ಅತಿಯಾಗಿ ನೀರು ಬಳಸುತ್ತಾರೆ ಎಂದು ತಮಿಳುನಾಡು ಸದಾ ತಕರಾರು ತೆಗೆಯುತ್ತದೆ. ಹೀಗಿರುವಾಗ ಬೆಳೆ ವಿನ್ಯಾಸದಲ್ಲಿ ಬದಲಾವಣೆ ತರುವ ಪ್ರಯತ್ನ ಏಕೆ ಆಗುತ್ತಿಲ್ಲ?

ಕಾಲಕ್ಕೆ ಅನುಗುಣವಾಗಿ ಬೆಳೆ ಮಾರ್ಪಾಡು ಮಾಡಬೇಕಾಗುತ್ತದೆ. ಹಾಸನ ಜಿಲ್ಲೆಯಲ್ಲಿ ನಾಲೆ ನೀರಿನಿಂದ ಕಬ್ಬು ಬೆಳೆಯುವಂತಿಲ್ಲ. ಆದರೂ ಬೆಳೆಯುತ್ತಿಲ್ಲವೆ? ಆದರೆ ಇಲ್ಲಿ ಈ ವಿಚಾರ ಮುಖ್ಯವಲ್ಲ. ಮೊದಲಿಗೆ ನಮ್ಮ ಪಾಲಿನ ನೀರನ್ನು ನಾವು ಬಳಸಿಕೊಳ್ಳಲು ವೇದಿಕೆ ಸಿದ್ಧಪಡಿಸಿಕೊಳ್ಳಬೇಕು. ನೀರಿನ ಬಳಕೆಗೆ ದಾರಿ ಕಂಡುಕೊಂಡ ನಂತರ ರೈತರನ್ನು ಜಾಗೃತರನ್ನಾಗಿ ಮಾಡಬಹುದು. ಬೆಳೆ ಪದ್ಧತಿಯಲ್ಲೂ ಮಾರ್ಪಾಡು ಮಾಡಬಹುದು. ನೀರನ್ನೇ ಬಳಸಿಕೊಳ್ಳಲು ಸಾಧ್ಯವಾಗದೆ ಅದು–ಇದು ಬೆಳೆಯಬೇಡಿ ಎಂದು ಹೇಳುವುದು ಎಷ್ಟು ಸರಿ.



• ನುಗು ರೀತಿಯಲ್ಲಿ ಸಣ್ಣ ಅಣೆಕಟ್ಟೆಗಳನ್ನು ನಿರ್ಮಿಸಿಕೊಂಡರೆ ಮಳೆಗಾಲದಲ್ಲಿ ನೀರು ಸಂಗ್ರಹಿಸಬಹುದು. ಆದರೆ ಆ ಕೆಲಸವನ್ನೂ ಸರ್ಕಾರ ಮಾಡುತ್ತಿಲ್ಲ? ಇದಕ್ಕೆ ಇರುವ ತೊಡಕುಗಳು ಏನು?

ಯಾವ ತೊಡಕುಗಳೂ ಇಲ್ಲ. ಆದರೆ ಮಾಡುತ್ತಿಲ್ಲ. ಸಾಕಷ್ಟು ಕಡೆಗಳಲ್ಲಿ ಸಣ್ಣ ಪ್ರಮಾಣದ ಅಣೆಕಟ್ಟೆಗಳನ್ನು ನಿರ್ಮಿಸಿದರೆ ನೀರು ಸಂಗ್ರಹಿಸಬಹುದು. ನನಗೆ ನೆನಪಿರುವ ಒಂದು ಉದಾಹರಣೆ ಹೇಳುತ್ತೇನೆ. ಮಡಿಕೇರಿ ಬಳಿ ಒಂದು ಸ್ಥಳ ಗುರುತಿಸಲಾಗಿತ್ತು. ಅಲ್ಲಿ ಪುಟ್ಟದಾದ ಅಣೆಕಟ್ಟೆ ನಿರ್ಮಿಸಿದರೆ 4ರಿಂದ 5 ಟಿಎಂಸಿ ನೀರು ಸಂಗ್ರಹಿಸಬಹುದು. ಇದೇ ರೀತಿಯಲ್ಲಿ ಹಲವು ಕಡೆಗಳಲ್ಲಿ ಪ್ರಯತ್ನ ಮಾಡಬಹುದು. ಸಂಗ್ರಹಿಸಿದ ನೀರನ್ನು ಸ್ಥಳೀಯವಾಗಿ ಬಳಸಬಹುದು. ಹೆಚ್ಚಿನ ಆರ್ಥಿಕ ಹೊರೆಯೂ ಆಗುವುದಿಲ್ಲ. ಕೇಂದ್ರವನ್ನು ಬೇಡುವ ಸ್ಥಿತಿಯೂ ಬರುವುದಿಲ್ಲ.

• ಕಾಲುವೆಯ ಕೊನೆ ಭಾಗಕ್ಕೆ ನೀರು ಹರಿಯುವುದೇ ಇಲ್ಲ. ಆ ಭಾಗದ ಜನರು ಪ್ರತಿ ವರ್ಷವೂ ಹೋರಾಟ ನಡೆಸುವುದು ನಿಂತಿಲ್ಲ? ಆದರೂ ಸರ್ಕಾರ, ಜನಪ್ರತಿನಿಧಿಗಳು ಸ್ಪಂದಿಸುವುದಿಲ್ಲ ಏಕೆ?

ಯಾವುದೇ ಸರ್ಕಾರವಿದ್ದರೂ ನೀರಾವರಿ ವಿಚಾರ ಹಾಗೂ ಯೋಜನೆಗಳು ನಿರ್ಲಕ್ಷ್ಯಕ್ಕೆ ಒಳಗಾಗುತ್ತವೆ. ಯೋಜನೆ ರೂಪಿಸಿ ಜಾರಿ ಮಾಡಿ ಸುಮ್ಮನಾಗುತ್ತೇವೆ. ನಾಲೆ ಆಧುನೀಕರಣ ಮಾಡುವುದಿಲ್ಲ. ಗೊರೂರು ಜಲಾಶಯದಿಂದ ತುಮಕೂರು ಭಾಗಕ್ಕೆ ನೀರು ಹರಿದು ಬರುವ ಹೇಮಾವತಿ ನಾಲೆಯ ಆಧುನೀಕರಣಕ್ಕೆ ನಾನು ಹೋರಾಟಮಾಡಿ ಕಾರ್ಯಗತ ಮಾಡಿಸಬೇಕಾಯಿತು. ಜನಪ್ರತಿನಿಧಿಗಳು ತಮ್ಮ ಅಗತ್ಯವನ್ನಷ್ಟೇ ನೋಡಿಕೊಂಡು ಸುಮ್ಮನಾಗುವುದರಿಂದ ನಾಲೆಯ ಕೊನೆ ಭಾಗಕ್ಕೆ ನೀರು ಹರಿಯುವುದಿಲ್ಲ.

• ಕುಡಿಯಲು ನೀರು ಬಳಕೆ ಮಾಡುವಲ್ಲೂ ಇದೇ ಮನಸ್ಥಿತಿ ಇದೆಯಲ್ಲ?

ಈ ಬಗ್ಗೆ ಯಾರೂ ಸರಿಯಾಗಿ ಯೋಚಿಸುವುದಿಲ್ಲ. ಬೆಂಗಳೂರು ಸುತ್ತಮುತ್ತಲಿನ ಗ್ರಾಮ ಪಂಚಾಯಿತಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಿಕೊಂಡು ದಶಕ ಕಳೆದಿದ್ದರೂ ಈವರೆಗೂ ಕುಡಿಯಲು ನೀರು ಕೊಡಲು ಸಾಧ್ಯವಾಗಿಲ್ಲ. ಬೆಂಗಳೂರು ನಗರದ ಜನಸಂಖ್ಯೆ ಬೆಳವಣಿಗೆಯನ್ನು ನೋಡಿದರೆ 2030ರ ವೇಳೆಗೆ 2.25 ಕೋಟಿ ದಾಟುತ್ತದೆ. ಆ ವೇಳೆಗೆ 80 ಟಿಎಂಸಿ ಅಡಿ ನೀರು ಬೇಕಾಗುತ್ತದೆ. ಮಾಹಿತಿ ತಂತ್ರಜ್ಞಾನ ಕಂಪನಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ನಗರದ ಜನಸಂಖ್ಯೆ ವೇಗವಾಗಿ ಬೆಳೆಯುತ್ತಿದೆ. ಮುಂದೆ ಕುಡಿಯುವ ನೀರಿಗೆ ಏನು ಮಾಡಬೇಕು ಎಂಬ ಬಗ್ಗೆ ಯಾರೊಬ್ಬರೂ ತಲೆ ಕೆಡಿಸಿಕೊಂಡಿಲ್ಲ. ಈಗಲೇ ಯೋಚಿಸದಿದ್ದರೆ ಮುಂದೆ ನಗರದ ಜನರು ನೀರಿಲ್ಲದೆ ಪರಿತಪಿಸುತ್ತಾರೆ. ಮೇಕೆದಾಟು ಜಲಾಶಯ ನಿರ್ಮಾಣವಾದರೆ ಮಾತ್ರ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು.

• ನೀವು ಸಚಿವರಾಗಿದ್ದಾಗ ಯಾವೆಲ್ಲ ಪ್ರಯತ್ನಗಳು ನಡೆದಿದ್ದವು?

ನಾನು ಕಾನೂನು ಸಚಿವನಾಗಿದ್ದಾಗ ಮೇಕೆದಾಟು ಯೋಜನೆಗೆ ಸ್ಥಳೀಯವಾಗಿ ಇದ್ದ ಎಲ್ಲಾ ಅಡೆತಡೆಗಳನ್ನು ನಿವಾರಿಸಿದ್ದೆ. ಹಿರಿಯ ವಕೀಲ ಫಾಲಿ ನರಿಮನ್ ಅವರಿಂದ ಸಲಹೆ ಪಡೆದುಕೊಂಡಿದ್ದೆ. ತಾಂತ್ರಿಕ ಒಪ್ಪಿಗೆಯೂ ಸಿಕ್ಕಿತ್ತು. ನಂತರ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಜಲಸಂಪನ್ಮೂಲ ಇಲಾಖೆಗೆ ಸೂಚಿಸಲಾಗಿತ್ತು. ನಂತರ ಬಂದ ಸರ್ಕಾರಗಳು ಕೇಂದ್ರದ ಒಪ್ಪಿಗೆ ಕೋರಿ ಯೋಜನಾ ವರದಿ ಸಲ್ಲಿಸಿದ್ದರೂ ರಾಜಕೀಯ ಉದ್ದೇಶದಿಂದ ಈವರೆಗೂ ಅನುಮತಿ ಸಿಕ್ಕಿಲ್ಲ. ತಮಿಳುನಾಡಿನ ರಾಜಕೀಯ ಒತ್ತಡಕ್ಕೆ ಮಣಿದು ನದಿ ಜೋಡಣೆಗೆ ಅನುಮತಿ ನೀಡಲಾಗಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಹಾಗೂ ಹೆಚ್ಚಿನ ಸಂಖ್ಯೆಯ ಬಿಜೆಪಿ ಸಂಸದರು ಇದ್ದರೂ ಕೇಂದ್ರದ ಮೇಲೆ ಒತ್ತಡ ಹಾಕಲು ಸಾಧ್ಯವಾಗಿಲ್ಲ. ಹಾಗಾಗಿ ನಾವು ಹಿಂದುಳಿದಿದ್ದೇವೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಯುಪಿಎ ಸರ್ಕಾರದಲ್ಲಿ ಪ್ರಧಾನಿಯಾಗಿದ್ದ ಮನಮೋಹನ್ ಸಿಂಗ್ ಅವರು, ತಮ್ಮ ಅಧಿಕಾರದ ಅವಧಿಯಲ್ಲಿ ಬಾಂಗ್ಲಾದೇಶಕ್ಕೆ ಭೇಟಿ ನೀಡಿದ್ದರು. ಆಗ ಮನಮೋಹನ್ ಬದಲಿಗೆ, ಕಾಂಗ್ರೆಸ್‌ನ ಮುಖ್ಯಸ್ಥೆ ಸೋನಿಯಾ ಗಾಂಧಿ ಅವರು ಬಾಂಗ್ಲಾ ಪ್ರಧಾನಿ ಜತೆ ಮಾತುಕತೆ ನಡೆಸಿದ್ದರು. ಪ್ರಧಾನಿ ಮನಮೋಹನ್ ಸಿಂಗ್ ಅವರನ್ನು ಕಡೆಗಣಿಸಲಾಗಿತ್ತು. ಆದರೆ ಎನ್‌ಡಿಎ ಸರ್ಕಾರದಲ್ಲಿ ಪ್ರಧಾನಿ ಮೋದಿ ಅವರು ಬಾಂಗ್ಲಾ ಪ್ರವಾಸದಲ್ಲಿ, ಅಲ್ಲಿನ ಪ್ರಧಾನಿ ಷೇಕ್ ಹಸೀನಾ ಜತೆ ನೇರ ಮಾತುಕತೆ ನಡೆಸಿದ್ದಾರೆ ಎಂಬ ವಿವರಗಳಿರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ. ಇದರ ಜತೆ ಚಿತ್ರಗಳು ಸಹ ವೈರಲ್ ಆಗಿವೆ. ಕನ್ನಡದಲ್ಲಿ, ಪೋಸ್ಟ್‌ಕಾರ್ಡ್ ಕನ್ನಡ ತನ್ನ ಫೇಸ್‌ಬುಕ್ ಪುಟದಲ್ಲಿ ಈ ಪೋಸ್ಟ್ ಹಂಚಿಕೊಂಡಿದೆ.

ಇದು ಸುಳ್ಳು ಸುದ್ದಿ ಎಂದು ಹಲವು ಫ್ಯಾಕ್ಟ್‌ಚೆಕ್ ವೇದಿಕೆಗಳು ಹೇಳಿವೆ. ಮನಮೋಹನ್ ಸಿಂಗ್, ಸೋನಿಯಾ ಗಾಂಧಿ ಮತ್ತು ಷೇಕ್ ಹಸೀನಾ ಅವರು ಜತೆ ಇರುವ ಚಿತ್ರವು, ಯುಪಿಎ ಅವಧಿಯದ್ದು ಅಲ್ಲ. ಬಾಂಗ್ಲಾ ಪ್ರವಾಸದ ವೇಳೆ ತೆಗೆದ ಚಿತ್ರವೂ ಅಲ್ಲ. 2019ರ ಅಕ್ಟೋಬರ್ 6ರಂದು ಷೇಕ್ ಹಸೀನಾ ಅವರು ಭಾರತಕ್ಕೆ ಭೇಟಿ ನೀಡಿದ್ದಾಗ, ಕಾಂಗ್ರೆಸ್ ನಾಯಕರ ಜತೆಯೂ ಮಾತುಕತೆ ನಡೆಸಿದ್ದರು. ಆಗ ತೆಗೆಯಲಾಗಿದ್ದ ಚಿತ್ರವನ್ನು ಈಗ ತಪ್ಪು ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಬೆರಗಿನ ಬೆಳಕು
ಗುರುರಾಜ ಕರಜಗಿ

ಅರ್ಥವಾಗದ ಪ್ರಶ್ನೆ

ಮಹೋಷಧಕುಮಾರ ಯಾಕೆ ಹೀಗೆ ತಪ್ಪಿಸಿಕೊಂಡು ಹೋದ ಎಂದು ಅಮರಾದೇವಿ ಚಿಂತಿಸಿದಳು. ಆಕೆಗೆ ಕಾರಣ ಹೊಳೆಯಿತು. ಈ ರಾಜರಿಗೆ ಬುದ್ಧಿ ಕಡಿಮೆ, ಕೋಪ ಜಾಸ್ತಿ. ಆ ಕೋಪದ ಕ್ಷಣಗಳಲ್ಲಿ ಆತನ ಕೈ, ಕಾಲುಗಳನ್ನೋ ಅಥವಾ ತಲೆಯನ್ನೇ ಕತ್ತರಿಸಿಬಿಟ್ಟರೆ ಏನು ಮಾಡುವುದು? ಆದ್ದರಿಂದ ಆ ಕೋಪದ ಕ್ಷಣಗಳು ಕಳೆದುಹೋಗುವ ತನಕ ರಾಜನ ಕಣ್ಣಮುಂದೆ ಬರಬಾರದೆಂದು ಹೀಗೆ ಮಾಡಿದ್ದಾನೆ ಎಂದು ತಿಳಿದಳು. ಆ ಸಮಯದಲ್ಲಿ ರಾಜ್ಯದ ದೇವಿಗೆ, ಬೋಧಿಸತ್ವನಾದ ಮಹೋಷಧಕುಮಾರನ ಧರ್ಮಬೋಧೆ ದೊರೆಯದೆ, ಅವನನ್ನು ಕರೆತರುವ ಉಪಾಯ ಮಾಡಿದಳು. ಅರಮನೆಯ ನಾಲ್ಕನೆಯ ಮಹಡಿಯ ನಿಪಾತದಲ್ಲಿ ನಿಂತುಕೊಂಡು, 'ರಾಜಾ ನಾನು ನಾಲ್ಕು ಪ್ರಶ್ನೆಗಳನ್ನು ಕೇಳುತ್ತೇನೆ. ನಿನ್ನ ಅಮಾತ್ಯರಲ್ಲಿ ಯಾರಾದರೂ ಬುದ್ಧಿವಂತರಾಗಿದ್ದಾರೆ ಅವುಗಳಿಗೆ ಉತ್ತರ ಹೇಳಲಿ. ಇಲ್ಲದಿದ್ದರೆ ಮಹೋಷಧಕುಮಾರನನ್ನು ಕರೆಯಿಸಿ ಉತ್ತರವನ್ನು ಹೇಳಿಸು' ಎಂದಳು. ಆಕೆಯ ಮೊದಲನೆಯ ಪ್ರಶ್ನೆ ಹೀಗಿತ್ತು. 'ಅದು ಕೈ ಕಾಲುಗಳಿಂದ ಹೊಡೆಯುತ್ತದೆ, ಮುಖಕ್ಕೂ ಹೊಡೆಯುತ್ತದೆ. ಆದರೂ ರಾಜ, ಅದು ಅತ್ಯಂತ ಪ್ರಿಯವಾಗಿರುತ್ತದೆ. ಅಂಥ ದೃಶ್ಯ ಯಾವುದು?' ಮರುದಿನ ರಾಜ ತನ್ನ ದರ್ಬಾರಿನ ಪಂಡಿತರಾದ ಸೇನಕ ಮತ್ತಿತರನ್ನು ಕರೆದು, 'ದೇವಿ ನನಗೆ ಈ ಪ್ರಶ್ನೆಯನ್ನು ಕೇಳಿದಳು. ಆಕೆಗೆ ಒಟ್ಟು ನಾಲ್ಕು ಪ್ರಶ್ನೆಗಳಿವೆಯಂತೆ. ಈಗ ಮೊದಲನೆಯದನ್ನು ಕೇಳಿದ್ದಾಳೆ. ನನಗೆ ಅದರ ಉತ್ತರ ಗೊತ್ತಿಲ್ಲ. ನೀವೇ ಯೋಚನೆ ಮಾಡಿ ಅದಕ್ಕೆ ಉತ್ತರ ಹುಡುಕಿಕೊಡಿ' ಎಂದ. ಆ ಪ್ರಶ್ನೆಯನ್ನು ಕೇಳಿ ಸೇನಕ ಹಾಗೂ ಉಳಿದ ಪಂಡಿತರಿಗೆ ತಲೆ ಕೆಟ್ಟು ಹೋಯಿತು. ಅದರ ತಲೆಬುಡ ಅರ್ಥವಾಗಲಿಲ್ಲ. ಅದೊಂದು ಅರ್ಥಹೀನವಾದ ಪ್ರಶ್ನೆ ಎನ್ನಿಸಿತು.

ಯಾವುದು ಹೊಡೆಯುತ್ತದೆ, ಯಾರಿಗೆ ಹೊಡೆಯುತ್ತದೆ ಎಂದು ಯೋಚಿಸಿ, ಯೋಚಿಸಿ ಹಣ್ಣಾದರು ಪಂಡಿತರು. ಅಂದು ರಾತ್ರಿ ಪುನ: ದೇವಿ, 'ಯಾರಿಗಾದರೂ ಉತ್ತರ ಹೊಳೆಯಿತೇ?' ಎಂದು ರಾಜನನ್ನು ಕೇಳಿದರು. ಆತ, 'ನನ್ನ ನಾಲ್ವರೂ ಪಂಡಿತರಿಗೆ ಈ ಪ್ರಶ್ನೆಯನ್ನು ಕೇಳಿದ್ದೇನೆ. ಅವರಿಗೂ ಉತ್ತರ ತಿಳಿಯಲಿಲ್ಲ' ಎಂದ. 'ಈ ಮೂರ್ಖರಿಗೆ ಇದಕ್ಕೆ ಉತ್ತರ ಹೇಗೆ ಹೊಳೆದೀತು? ಮಹೋಷಧನ ಹೊರತಾಗಿ ಯಾರೂ ಇದಕ್ಕೆ ಉತ್ತರ ನೀಡಲಾರರು. ಅವನನ್ನು ಕರೆಯಿಸಿ. ಈ ಪ್ರಶ್ನೆಗಳಿಗೆ ಉತ್ತರ ಕೊಡಿಸದಿದ್ದರೆ, ಉರಿಯುತ್ತಿರುವ ಈ ಸುತ್ತಿಗೆಯಿಂದ ನಿನ್ನ ತಲೆಯನ್ನು ಒಡೆದುಬಿಡುತ್ತೇನೆ' ಎಂದು ದೇವಿ ಹೆದರಿಸಿದಳು. 'ನಾನೇನು ಮಾಡಲಿ?' ಎಂದು ಅಸಹಾಯಕನಾಗಿ ಕೇಳಿದ ರಾಜನಿಗೆ ದೇವಿ ಹೇಳಿದಳು, 'ಬೆಂಕಿಯ ಅಗತ್ಯವಿದ್ದಾಗ ಮಿಂಚುಹುಳವನ್ನು ಸುಡಿಸುವುದು ಮತ್ತು ಹಾಲು ಬೇಕಾದಾಗ ಕೊಂಬು ಹಿಂಡುವುದು ಸರಿಯಲ್ಲ' ಎಂದಳು. 'ಹಾಗೆಂದರೇನು?' ಎಂದು ಬೆಪ್ಪನಾಗಿ ರಾಜ ಕೇಳಿದ. ದೇವಿ, 'ರಾಜಾ, ಬೆಂಕಿ ಬೇಕಾದಾಗ ಒಬ್ಬ ಮನುಷ್ಯ ಕಾಡಿನಲ್ಲಿ ಹೊರಟ. ಅಲ್ಲಿ ಮಿನುಗುತ್ತಿರುವ ಮಿಂಚುಹುಳಗಳನ್ನು ಕಂಡು, ಅವು ಬೆಂಕಿಯ ಕಿಡಿಗಳು ಎಂದು ಭಾವಿಸಿ ಬೆರಣಿಯ ಚೂರುಗಳನ್ನು, ಒಣ ಹುಲ್ಲನ್ನು ಹಾಕುತ್ತಾ ಬಂದ. ಅವನ ಅಜ್ಞಾನದಿಂದಾಗಿ ಬೆಂಕಿ ಹುಟ್ಟಲಿಲ್ಲ. ಅಂತೆಯೇ ಮೂರ್ಖನೊಬ್ಬ ಹಾಲು ಬೇಕಾದಾಗ, ಹಸುವಿನ ಮೊಲೆಗಳನ್ನು ಹಿಂಡದೆ ಅದರ ಕೊಂಬುಗಳನ್ನು ಹಿಂಡಿ ಕೈ ನೋಯಿಸಿಕೊಂಡ, ಹಾಲು ದಕ್ಕಲಿಲ್ಲ. ಅಂತೆಯೇ ಮೂರ್ಖಮಂತ್ರಿಗಳನ್ನಿಟ್ಟುಕೊಂಡು ಬುದ್ಧಿವಂತಿಕೆಯ ಪ್ರಶ್ನೆಗಳಿಗೆ ಉತ್ತರ ಕೇಳುವುದು ವ್ಯರ್ಥ. ಆದ್ದರಿಂದ ಮಹೋಷಧಕುಮಾರನನ್ನು ಹುಡುಕಿಸು' ಎಂದು ಆಜ್ಞೆ ಮಾಡಿದಳು. ರಾಜ ನಾಲ್ಕು ಜನ ಅಮಾತ್ಯ ಪಂಡಿತರಿಗೆ ಹೇಳಿ, ಮಹೋಷಧಕುಮಾರನನ್ನು ಹುಡುಕಿ ತರಲು ನಾಲ್ಕು ದಿಕ್ಕಿಗೆ ಕಳುಹಿಸಿದ. ❖

ಗುಂಡಣ್ಣ

ದಿನ ಭವಿಷ್ಯ

ಬುಧವಾರ 31 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಉತ್ತರಭಾದ್ರ ತೃತೀಯ ಗಂ. 29-36 (ಸಾ. 6-13) ಬುಧವಾರ ನಿತ್ಯ ನಕ್ಷತ್ರ ಸ್ವಾತಿ ಗಂ. 17-45 (ಹ.1-32) ಹರ್ಷ ನಾಮ ಯೋಗ ಗಂ 18-9 ವಣಿಜ ಕರಣ ಗಂ. 2-32 ಉಪರಿ ಭದ್ರೆ ಕರಣ ಗಂ. 27-4 ವಿಷ ಗಂ. 30-55 ಅಮೃತ ಶೇಷ ಗಂ. 1-5 ಅಮೃತ ಗಂ. 53-15 ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 6-24 ಸೂರ್ಯಾಸ್ತ: 6-27 ಅದೃಷ್ಟ ಸಂಖ್ಯೆ 3 8

ಮೇಷ: ಕಲೆ ಸಂಗೀತ, ಸಿನಿಮಾ ಮುಂತಾದ ಕಲಾ ಕ್ಷೇತ್ರಗಳಲ್ಲಿ ದುಡಿಯುತ್ತಿರುವವರಿಗೆ ಒಳ್ಳೆಯ ಪುರೋಭಿವೃದ್ಧಿ. ಹೋಟೆಲ್ ಉದ್ಯಮಗಳಲ್ಲಿ ತೊಡಗಿಕೊಂಡವರಿಗೆ ಉತ್ತಮ ಲಾಭ. ವಸ್ತ್ರಾಭರಣ ಖರೀದಿ ಸಾಧ್ಯತೆ.

ವೃಷಭ: ಸರ್ಕಾರಿ ಮಟ್ಟದ ಉದ್ಯೋಗಿಗಳಿಗೆ ಯಶಸ್ಸು. ಮೇಲ್ವರ್ಗದ ಗುತ್ತಿಗೆದಾರರಿಗೆ ಟೆಂಡರ್ ಮೂಲಕ ಗುತ್ತಿಗೆ ಪಡೆಯುವ ಅವಕಾಶ ದೊರಕಲಿದೆ. ಕೃಷಿಕರಿಗೆ, ಕೃಷಿ ಜಮೀನು ವ್ಯಾಪಾರದಲ್ಲಿ ತೊಡಗಿರುವವರಿಗೆ ಉತ್ತಮ ಲಾಭ.

ಮಿಥುನ: ಜೀವನದಲ್ಲಿ ಒಂದು ವಿಶೇಷ ತಿರುವನ್ನು ಪಡೆದುಕೊಳ್ಳುವ ಪರ್ವಕಾಲ. ನಿಮ್ಮ ದುಡಿಮೆ, ನಿಷ್ಠೆ, ಆತ್ಮವಿಶ್ವಾಸ ವೃತ್ತಿರಂಗದಲ್ಲಿ ಯಶಸ್ಸು. ಮನೆಯಲ್ಲಿ ಮಂಗಳ ಕಾರ್ಯಗಳಿಗೆ ಚಾಲನೆ ನೀಡಲಿದ್ದೀರಿ.

ಕರ್ಕಾಟಕ: ವಿಚಾರಗಳನ್ನು ಭಿನ್ನ ದೃಷ್ಟಿಯಿಂದ ನೋಡಲು ಪ್ರಯತ್ನಿಸುವಿರಿ. ದೈನಂದಿನ ರೀತಿ ರಿವಾಜುಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಧಾವಂತದಿಂದ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾದೀತು.

ಸಿಂಹ: ಸಾಮಾಜಿಕ ರಂಗದಲ್ಲಿ ಸ್ಥಾನಮಾನದೊಂದಿಗೆ ಜನಾನುರಾಗಕ್ಕೂ ಉತ್ತಮ ಅವಕಾಶ ದೊರಕಲಿದೆ. ಸಂಕಲ್ಪದಂತೆ ಕಾರ್ಯಗಳು ನೆರವೇರಿ ಮುನ್ನಡೆ. ತೈಲೋದ್ಯಮದಲ್ಲಿ ತೊಡಗಿಸಿಕೊಂಡವರಿಗೆ ಉತ್ತಮ ಆದಾಯ.

ಕನ್ಯಾ: ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳು ಬರಲಿವೆ. ಎಲ್ಲ ವಿಧದಿಂದಲೂ ಸುಖ ಜೀವನ ನಿಮ್ಮದಾಗಲಿದೆ. ಅವಿವಾಹಿತರಿಗೆ ಬಂಧುಗಳ ಸಹಾಯದಿಂದ ಅನಿರೀಕ್ಷಿತವಾಗಿ ವಿವಾಹ ಯೋಗ ಕೂಡಿಬರಲಿದೆ.

ತುಲಾ: ಹಲವು ಹೊಸಬರ ಪರಿಚಯದಿಂದಾಗಿ ಎಲ್ಲ ರೀತಿಯಿಂದಲೂ ಅನುಕೂಲ. ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ದೊರಕಲಿದೆ. ಅವಿವಾಹಿತ ಸ್ತ್ರೀಯರಿಗೆ ಮಾಂಗಲ್ಯ ಭಾಗ್ಯ.

ವೃಶ್ಚಿಕ: ಕಾರ್ಯಕ್ಷೇತ್ರದಲ್ಲಿ ಕೆಲಸ ಕಾರ್ಯಗಳು ಸುಸೂತ್ರವಾಗಿ ಸಾಗುತ್ತವೆ. ಸಾಮಾಜಿಕವಾಗಿ ವರ್ಚಸ್ಸನ್ನು ಹೆಚ್ಚಿಸಿಕೊಳ್ಳಲಿದ್ದೀರಿ. ಸೂಕ್ತ ವ್ಯಕ್ತಿಗಳಿಂದ ಸಕಾಲದಲ್ಲಿ ಸಲಹೆ ಪಡೆಯುವುದರಿಂದ ಅನುಕೂಲ.

ಧನು: ಕಾರ್ಯರಂಗದಲ್ಲಿ ಧೈರ್ಯ, ಪ್ರಯತ್ನ ಬಲ, ಆತ್ಮವಿಶ್ವಾಸದ ಪ್ರವೃತ್ತಿಗಳಿಂದಾಗಿ ಸಮಸ್ಯೆಗಳು ದೂರ. ಸಾಮಾಜಿಕವಾಗಿ ವರ್ಚಸ್ಸು ಹೆಚ್ಚುವುದರ ಜೊತೆಗೆ ಗೌರವ ಪ್ರಾಪ್ತಿ. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಯ.

ಮಕರ: ಶಿಸ್ತುಬದ್ಧ ಜೀವನದಿಂದಾಗಿ ಎಲ್ಲ ರಂಗಗಳಲ್ಲಿಯೂ ಯಶಸ್ಸು. ಸಕಾರಾತ್ಮಕ ಚಿಂತನೆಗಳಿಂದಾಗಿ ಸಮಸ್ಯೆಗಳು ಕರಗಿಹೋಗಲಿವೆ. ಆಪ್ತ ಮಹಿಳೆಯರಿಂದ ದೊರೆತ ಸಲಹೆಗಳನ್ನು ತಿರಸ್ಕರಿಸುವುದು ಸರಿಯಲ್ಲ.

ಕುಂಭ: ವಿದ್ಯಾರ್ಥಿಗಳಿಗೆ ವಿಶೇಷ ರೀತಿಯ ಸೌಲಭ್ಯಗಳು ದೊರಕುವ ಸಾಧ್ಯತೆ. ಕೃಷಿಕ್ಷೇತ್ರದಲ್ಲಿ ದುಡಿಯುವವರಿಗೆ ಉತ್ತಮ ಆದಾಯ. ದರ್ಜಿಗಳು ಮತ್ತು ಜವುಳಿ ವ್ಯಾಪಾರಸ್ಥರಿಗೆ ಉತ್ತಮ ಲಾಭ. ಆರೋಗ್ಯದಲ್ಲಿ ಸ್ಥಿರತೆ ಕಾಣುವಿರಿ.

ಮೀನ: ಸ್ವತಂತ್ರ ವೃತ್ತಿಯವರಿಗೆ ನಿರಂತರ ಆದಾಯ ಬಂದರೂ ಖರ್ಚು ವೆಚ್ಚಗಳ ವಿಚಾರದಲ್ಲಿ ಜಾಗರೂಕತೆ ಅಗತ್ಯ. ಹಿರಿಯರ ಅನುಗ್ರದಿಂದ ನೆಮ್ಮದಿ. ಹೊಸ ಯೋಜನೆ ಪ್ರಾರಂಭಕ್ಕೆ ಚಿಂತನೆ.

ನಿಮ್ಮ ಜನ್ಮದಿನ 31-ಮಾರ್ಚ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಹಿಂದಿನ ಬದುಕಿನ ಅನುಭವಗಳು ಸಹಾಯಕವಾಗಿ ಪರಿಣಮಿಸಲಿವೆ. ಹೊಸ ಉತ್ಸಾಹದಿಂದ ಕೆಲಸ ಪ್ರಾರಂಭಿಸಿ. ಪ್ರಾರಂಭಿಸಿದ ಕೆಲಸಗಳನ್ನು ಶೀಘ್ರದಲ್ಲಿಯೇ ಪೂರೈಸಲಿದ್ದೀರಿ. ಜೀವನದಲ್ಲಿ ತುಂಬ ಮಹತ್ವದ ಹೆಜ್ಜೆಯನ್ನು ಇಡಲಿದ್ದೀರಿ.

ಪದಬಂಧ 4553
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವಿರಳವಾಗಿರುವ ಭಕ್ತಿ (3)
6.ಇದು ಪಕ್ಕಾ ಹೊಣೆಗೇಡಿತನವೇ ಬಿಡಿ! (5)
7.ಬಳ್ಳಿ ಇಲ್ಲಿ ಹಬ್ಬಿದೆ (3)
10.ಉಪವಾಸದಿಂದ ಮರಣ ಹೊಂದುವ ವ್ರತ (5)
15.ಕೈ ಕೊನೆಗಿಟ್ಟಾಗ ಕಾಣಿಸಿದ ಮಿಶ್ರಣ (3)
16.ಸಂಸಾರದ ಸೆರೆಯಿದು (5)
17.ಸಾಗಿಸುವಿಕೆಗೊಂದು ಪರ್ಯಾಯ ಪದ (3)

ಮೇಲಿಂದ ಕೆಳಕ್ಕೆ
1. ನಡುವೆ ಧ್ವನಿ ಕೊಟ್ಟರೆ ಇದು ಆಶ್ವಾಸನೆ (4)
2.ಕುಂಬಾರನ ಚಕ್ರವಿದು (3)
3.ಈತ ಪಕ್ಕಾ ಆಲಸಿ (3)
4. ವಾಲುತ್ತಾ ಕೇಳಿರುವ ಪ್ರಶ್ನೆ! (3)
5.ಚಿಮುಕಿಸುವುದನ್ನ ಹೀಗನ್ನಿ (4)
8.ಇದು ಕನ್ನಡಿಗನ ಎಕ್ಸ್‌ಪಿರಿಮೆಂಟ್! (3)
9.ಆ ವೇಷ ನೋಡಿದ್ದಕ್ಕೇ ಇಷ್ಟೊಂದು ರೋಷ (3)
11.ನಡುವೆ ಲೋಭವನ್ನು ತೋರಿಸಿ ಆಸೆ ಹುಟ್ಟಿಸುವುದು (4)
12.ರಾಜನ ಗೃಹವಿದು (4)
13.ಬಾಂಧವ್ಯ ಇಲ್ಲಿಕಾಣುತ್ತಿದೆ (3)
14.ಇದಂತೂ ಬೆಲೆಕಟ್ಟಲಾಗದುದು! (3)
15.ಸಾರವುಳ್ಳ ಕುಟುಂಬ (3)



4552ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ನವಸಾಗರ 4.ಸರಿಗೆ 6.ಮಟ್ಟಸ 8.ರಪಣ 9.ಮಾವುತ 10.ತರಂಗ 11.ಮಧುರ 13.ಪ್ರಾಕಾರ 14.ರಜತೋತ್ಸವ

ಮೇಲಿಂದ ಕೆಳಕ್ಕೆ: 1.ನವಸುಮ 2.ಪರಿಮಾಣ 5.ತರತಮ 7.ಸಮಾಗಮ 10.ತರಕಾರಿ 12.ರಥೋತ್ಸವ

ಸುಡೊಕು 4939

8				1			6	
				5		7		3
					3		2	
	4	2		9		8	3	
3			8	4	1			2
1	9			2				7
	8						7	
2		4	9		7	1	5	6
	5			3			8	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4938 ಸುಡೊಕು

8	7	2	3	4	6	1	9	5
5	1	4	8	2	9	7	6	3
9	3	6	5	1	7	2	8	4
3	8	9	1	6	5	4	2	7
4	2	1	9	7	3	8	5	6
6	5	7	2	8	4	3	1	9
7	4	8	6	9	2	5	3	1
1	9	5	7	3	8	6	4	2
2	6	3	4	5	1	9	7	8

ಮಮತಾ–ಸುವೇಂದು: ಗೆಲುವಿನ ಸನಿಹ ಯಾರು?

• ಶೋಮು ದಾಸ್

ಕೋಲ್ಕತ್ತ: ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಮತ್ತು ಒಂದು ಕಾಲದ ಅವರ ಆಪ್ತ, ಈಗ ಬಿಜೆಪಿಯಲ್ಲಿರುವ ಸುವೇಂದು ಅಧಿಕಾರಿ ಅವರ ಸ್ಪರ್ಧೆಯಿಂದಾಗಿ ಪಶ್ಚಿಮ ಬಂಗಾಳ ರಾಜಕಾರಣದ ಗಮನ ಕೇಂದ್ರವಾಗಿ ನಂದಿಗ್ರಾಮ ಮಾರ್ಪಟ್ಟಿದೆ. 2007ರಲ್ಲಿ ನಂದಿಗ್ರಾಮದಲ್ಲಿ ನಡೆದ ಭೂ ಚಳವಳಿಯ ಶ್ರೇಯ ತಮ್ಮದೇ ಎಂದು ಇಬ್ಬರೂ ಹೇಳಿಕೊಳ್ಳುತ್ತಿದ್ದಾರೆ. ಈ ಚುನಾವಣೆಯಲ್ಲಿ ಅದಷ್ಟೇ ಅಲ್ಲದೆ ಇತರ ಹಲವು ವಿಚಾರಗಳೂ ಇವೆ.

ಬಿಜೆಪಿಯ ಪಕ್ಷಾಂತರ ಕಾರ್ಯತಂತ್ರವು ನಂದಿಗ್ರಾಮದಲ್ಲಿ ಅಗ್ನಿಪರೀಕ್ಷೆಗೆ ಒಳಗಾಗಲಿದೆ. ಪೂರ್ವ ಮತ್ತು ಪಶ್ಚಿಮ ಮೇದಿನಿಪುರ ಜಿಲ್ಲೆಗಳಲ್ಲಿ ಪಕ್ಷ ಸಂಘಟನೆಗೆ ಬಲ ತುಂಬುವುದು ಟಿಎಂಸಿಯ ಚತುರ ಸಂಘಟಕರಾಗಿದ್ದ ಸುವೇಂದು ಅವರನ್ನು ಬಿಜೆಪಿ ಸೇರಿಸಿಕೊಂಡಿದ್ದರ ಹಿಂದೆ ಇದ್ದ ಕಾರಣ.

ಒಂದು ಬ್ಲಾಕ್ ಅಧ್ಯಕ್ಷರನ್ನು ಬಿಟ್ಟರೆ ಟಿಎಂಸಿಯ 'ಮತ ಆಕರ್ಷಿಸಬಲ್ಲ' ಮುಖಂಡರನ್ನು ತಮ್ಮತ್ತ ಸೆಳೆದುಕೊಳ್ಳಲು ಸುವೇಂದು ಅವರಿಗೆ ಸಾಧ್ಯವಾಗಿಲ್ಲ ಎಂದು ಅವರ ನಿಕಟವರ್ತಿಯಾಗಿದ್ದ ನಂದಿಗ್ರಾಮದಲ್ಲಿ ಟಿಎಂಸಿಯ ಪ್ರಮುಖ ಮುಖಂಡರಾಗಿರುವ ಸ್ವಯಂ ಖಾಜಿ ಹೇಳಿದ್ದಾರೆ.

'ಮತಗಟ್ಟೆ ಮಟ್ಟದ ಮುಖಂಡರೇ ಮತದಾರರನ್ನು ಪಕ್ಷಗಳ ಪರವಾಗಿ ಆಕರ್ಷಿಸುತ್ತಾರೆ. ಸುವೇಂದು ಜತೆಗೆ ಅಂತಹ ಮುಖಂಡರು ಯಾರೂ ಇಲ್ಲ' ಎಂಬುದು ಖಾಜಿ ಅವರ ಅಭಿಮತ.

ನಂದಿಗ್ರಾಮದ ಬಿಜೆಪಿಯ ಕೆಲವು ಮುಖಂಡರಿಗೆ ಸುವೇಂದು ಅವರನ್ನು ಒಪ್ಪಿಕೊಳ್ಳಲು ಸಾಧ್ಯವಾಗಿಲ್ಲ. ಹಾಗಾಗಿ ಅವರು ನಿಷ್ಕ್ರಿಯರಾಗಿದ್ದಾರೆ. ಇದು ಕೂಡ ಬಿಜೆಪಿ ಗೆಲುವಿನ ಸಾಧ್ಯತೆ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು ಎಂದು ಬಿಜೆಪಿ ಮುಖಂಡರು ಹೇಳುತ್ತಿದ್ದಾರೆ.

ಗಮನ ಸೆಳೆದ ಕ್ಷೇತ್ರ

ಕ್ಷೇತ್ರದಲ್ಲಿ ಮುಸ್ಲಿಂ ಮತದಾರರ ಪ್ರಮಾಣ ಶೇ 30ರಷ್ಟಿದೆ. 2011ರ ವಿಧಾನಸಭಾ ಚುನಾವಣೆಯಿಂದಲೇ ಈ ಸಮುದಾಯವು ಸುವೇಂದು ಅವರ ಬೆನ್ನಿಗೆ ನಿಂತಿದೆ. ಆದರೆ, ಬಿಜೆಪಿ ಮುಖಂಡರ ಮತ ಧ್ರುವೀಕರಣದ ಹೇಳಿಕೆಗಳಿಂದಾಗಿ ಪರಿಸ್ಥಿತಿ ಈಗ ಭಿನ್ನವಾಗಿದೆ. ಮಮತಾ ಅವರನ್ನು ನುಸುಳುಕೋರರ ಸೋದರತ್ತೆ ಎಂದೂ ರೋಹಿಂಗ್ಯಾ ಸಮುದಾಯದ ಜನರ ಚಿಕ್ಕಮ್ಮ ಎಂದೂ ಹೇಳಲಾಗಿದೆ. ಇದರಿಂದಾಗಿ ಮುಸ್ಲಿಂ ಸಮುದಾಯದ ಮತಗಳು ಮಮತಾ ಪರವಾಗಿ ಇನ್ನಷ್ಟು ಧ್ರುವೀಕರಣಗೊಳ್ಳಬಹುದು.

2011ರ ಜನಗಣತಿ ಪ್ರಕಾರ, ನಂದಿಗ್ರಾಮ ಬ್ಲಾಕ್ 1ರಲ್ಲಿ ಹಿಂದೂ ಮತದಾರರ ಪ್ರಮಾಣ ಶೇ 65.82 ಮತ್ತು ಮುಸ್ಲಿಂ ಮತದಾರರ ಪ್ರಮಾಣ ಶೇ 34.04. ಬ್ಲಾಕ್ 2ರಲ್ಲಿ ಹಿಂದೂ ಮತದಾರರ ಪ್ರಮಾಣ ಶೇ 87.71ರಷ್ಟು ಮುಸ್ಲಿಂ ಮತದಾರರ ಪ್ರಮಾಣ ಶೇ 12.12ರಷ್ಟಿದೆ.

ಹಿಂದೂಗಳ ಶೇ 70ರಷ್ಟು ಮತಗಳ ಧ್ರುವೀಕರಣ ಬಿಜೆಪಿಗೆ ಸಾಧ್ಯವಾದರೆ ಗೆಲ್ಲುವುದು ಮಮತಾಗೆ ಕಷ್ಟಕರ. ಸುವೇಂದು ಅವರು ದೇವಾಲಯಗಳ ಭೇಟಿಯನ್ನು ಹೆಚ್ಚಿಸಿದ್ದಾರೆ. ಸಂಸ್ಕೃತ ಶ್ಲೋಕವನ್ನು ಮಮತಾ ತಪ್ಪಾಗಿ ಪಠಿಸಿದ್ದಾರೆ ಎಂದು ಪದೇ ಪದೇ ಹೇಳುತ್ತಿದ್ದಾರೆ. ಹಿಂದೂ ಸಮುದಾಯವನ್ನು ತನ್ನತ್ತ ವಾಲುವಂತೆ ಮಾಡುವುದು ಬಿಜೆಪಿಯ ತಂತ್ರ ಎಂಬುದು ಸ್ಪಷ್ಟ.

ಮಮತಾ ಕೂಡ 'ಮೃದು ಹಿಂದುತ್ವ' ತಂತ್ರದ ಮೊರೆ ಹೋಗಿದ್ದಾರೆ. ದೇವಾಲಯಗಳಿಗೆ ಭೇಟಿ ಕೊಡುತ್ತಿದ್ದಾರೆ ಮತ್ತು ಸಂಸ್ಕೃತ ಶ್ಲೋಕ ಪಠಿಸುತ್ತಿದ್ದಾರೆ.

ನಂದಿಗ್ರಾಮದಲ್ಲಿ ಬಿಜೆಪಿ ಗೆಲ್ಲುವ ಸಾಧ್ಯತೆಯೇ ಇಲ್ಲ ಎನ್ನಲಾಗದು. ಇಲ್ಲಿ ಬಿಜೆಪಿಗೆ ನೆಲೆ ಇದೆ ಎಂದು ಸ್ಥಳೀಯರು ಹೇಳುತ್ತಿದ್ದಾರೆ. 2016ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಇಲ್ಲಿ 10,713 ಮತಗಳು ಸಿಕ್ಕಿದ್ದವು. ಕಳೆದ ಲೋಕಸಭಾ ಚುನಾವಣೆಯಲ್ಲಿ ಮತಗಳ ಸಂಖ್ಯೆಯು 62,268ಕ್ಕೆ ಏರಿದೆ.

2007ರ ಹೋರಾಟದಲ್ಲಿ ಸುವೇಂದು ಪಾತ್ರ, ಅವರ ಸಂಘಟನಾ ಕೌಶಲಗಳನ್ನು ನಿರ್ಲಕ್ಷಿಸಲಾಗದು. ಇಲ್ಲಿ ಮಮತಾಗೆ ಕಠಿಣ ಸ್ಪರ್ಧೆ ಇದೆ. ಹಾಗಿದ್ದರೂ ಮಮತಾ–ಸುವೇಂದು ನಡುವಣ ನಿಕಟ ಸ್ಪರ್ಧೆಯಲ್ಲಿ ಮಮತಾ ಗೆಲ್ಲುವ ಸಾಧ್ಯತೆಯೇ ಸ್ವಲ್ಪ ಹೆಚ್ಚು ಎಂದು ಟಿಎಂಸಿಯ ಸ್ಥಳೀಯ ಮುಖಂಡರೊಬ್ಬರು ಹೇಳಿದ್ದಾರೆ.

ಚುನಾವಣಾ ಕಣದಲ್ಲಿ

• ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 26–27ರಂದು ಬಾಂಗ್ಲಾದೇಶಕ್ಕೆ ನೀಡಿರುವ ಭೇಟಿಯು ಮಾದರಿ ನೀತಿ ಸಂಹಿತೆಯ ಉಲ್ಲಂಘನೆ. ಪಶ್ಚಿಮ ಬಂಗಾಳದ ಕೆಲವು ಕ್ಷೇತ್ರಗಳ ಮತದಾರರ ಮೇಲೆ ಪ್ರಭಾವ ಬೀರುವ ರೀತಿಯಲ್ಲಿ ಮೋದಿ ಅವರ ಕೆಲವು ಕಾರ್ಯಕ್ರಮಗಳು ಆಯೋಜನೆಗೊಂಡಿದ್ದವು ಎಂದು ಚುನಾವಣಾ ಆಯೋಗಕ್ಕೆ ಟಿಎಂಸಿ ದೂರು ನೀಡಿದೆ.

• ಬಿಜೆಪಿ ಅಭ್ಯರ್ಥಿ ಅಶೋಕ್ ದಿಂಡಾ ಅವರ ವಾಹನದ ಮೇಲೆ ಪೂರ್ವ ಮೇದಿನಿಪುರ ಜಿಲ್ಲೆಯ ಮೊಯ್ನಾದಲ್ಲಿ ಮಂಗಳವಾರ ದಾಳಿ ಆಗಿದೆ.

• ಏ. 1ರಂದು 2ನೇ ಹಂತದ ಮತದಾನ ನಡೆಯಲಿರುವ ಅಸ್ಸಾಂನ 39 ಕ್ಷೇತ್ರಗಳು ಮತ್ತು ಪ.ಬಂಗಾಳದ 30 ಕ್ಷೇತ್ರಗಳಲ್ಲಿ ಬಹಿರಂಗ ಪ್ರಚಾರ ಮಂಗಳವಾರ ಸಂಜೆ ಅಂತ್ಯಗೊಂಡಿದೆ.

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ದಿವಂಗತ ಟಿ. ಗೋವಿಂದಪ್ಪನವರು
ದಿನಾಂಕ 30-03-2021 ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತಿಮ ಸಂಸ್ಕಾರವನ್ನು ದಿನಾಂಕ 31-03-2021 ರಂದು ಮಧ್ಯಾಹ್ನ 1:30ಕ್ಕೆ ಕೊತ್ತನೂರಿನಲ್ಲಿ ನಡೆಸಲಾಗುವುದು. ತಾವುಗಳು ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಸ್ಥಳ: ಕೊತ್ತನೂರು ಹೆಣ್ಣೂರು ಬಾಗಲೂರು ಮುಖ್ಯ ರಸ್ತೆ, ಬೆಂಗಳೂರು–560 077
ಇಂತಿ ದುಃಖತಪ್ತರು: ಕೆ. ಜಿ. ಚಂದ್ರಶೇಖರ್, ಕೆ.ಜಿ. ಚಿದಾನಂದ, ಮಾಜಿ ಅಧ್ಯಕ್ಷರು, ಬಿ.ಜೆ.ಪಿ ಕೆ.ಆರ್. ಪುರ. ಕ್ಷೇತ್ರ, ಕೆ.ಜಿ. ಗಿರಿಬಾಬು, ಕೆ.ಜಿ. ಶ್ರೀನಿವಾಸ್, ಸಹೋದರಿಯರು ಮತ್ತು ಮಕ್ಕಳು ಹಾಗೂ ದಾಸಪ್ಪ ಕುಟುಂಬದವರು ಫೋನ್: 9845351440

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

'ಎಲ್‌ಡಿಎಫ್–ಯುಡಿಎಫ್ ಮ್ಯಾಚ್‌ಫಿಕ್ಸಿಂಗ್'

ಪಾಲಕ್ಕಾಡ್ (ಪಿಟಿಐ): 'ಕೆಲವೇ ಕೆಲವು ಬೆಳ್ಳಿಯ ನಾಣ್ಯಗಳ ಆಸೆಗಾಗಿ ಯೇಸುಕ್ರಿಸ್ತನ ಶಿಷ್ಯ ಜ್ಯೂಡಾಸ್, ಯೇಸುವನ್ನು ಹಿಡಿದುಕೊಟ್ಟು ದ್ರೋಹ ಬಗೆದ. ಎಲ್‌ಡಿಎಫ್ ಸರ್ಕಾರ ಸಹ ಚಿನ್ನಕ್ಕಾಗಿ, ಕೇರಳದ ಜನರಿಗೆ ದ್ರೋಹ ಬಗೆಯಿತು' ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದಾರೆ.

ಕೇರಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಮುಖ್ಯಮಂತ್ರಿ ಅಭ್ಯರ್ಥಿ ಇ.ಶ್ರೀಧರನ್ ಪರವಾಗಿ ಅವರು ಇಲ್ಲಿ ಪ್ರಚಾರ ನಡೆಸಿದರು. ಆಡಳಿತಾರೂಢ ಎಲ್‌ಡಿಎಫ್ ಮತ್ತು ವಿರೋಧ ಪಕ್ಷವಾದ ಯುಡಿಎಫ್ ವಿರುದ್ಧ ಹರಿಹಾಯ್ದರು.

'ಉಮ್ಮನ್ ಚಾಂಡಿ ಅವರ ಯುಡಿಎಫ್ ಸರ್ಕಾರ ಸೂರ್ಯನ ಕಿರಣಗಳನ್ನೂ ಬಿಡಲಿಲ್ಲ. ಸೋಲಾರ್ ಹಗರಣ ನಡೆಸಿತು. ಆಗ ಎಲ್‌ಡಿಎಫ್ ಸುಮ್ಮನೆ ಕೂಗಾಡಿತು ಅಷ್ಟೆ. ಅಧಿಕಾರಕ್ಕೆ ಬಂದ ನಂತರ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಶಬರಿಮಲೆಗೆ ಮಹಿಳೆಯರ ಪ್ರವೇಶದ ಸಮಯದಲ್ಲಿ ಎಲ್‌ಡಿಎಫ್ ಸರ್ಕಾರ ಜನರ ಮೇಲೆ ಲಾಠಿ ಪ್ರಯೋಗಿಸಿತು. ಇದನ್ನು ಯುಡಿಎಫ್ ಪ್ರಶ್ನಿಸಲಿಲ್ಲ' ಎಂದು ಮೋದಿ ಆರೋಪಿಸಿದ್ದಾರೆ.

'ಕೇರಳದಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್ ಒಂದು ಒಪ್ಪಂದ ಮಾಡಿಕೊಂಡಿವೆ. ಐದು ವರ್ಷ ಎಲ್‌ಡಿಎಫ್ ಅಧಿಕಾರದಲ್ಲಿದ್ದು, ಚೆನ್ನಾಗಿ ಲೂಟಿ ಮಾಡುತ್ತದೆ. ನಂತರದ ಐದು ವರ್ಷ ಯುಡಿಎಫ್ ಅಧಿಕಾರಕ್ಕೆ ಬಂದು ಚೆನ್ನಾಗಿ ಲೂಟಿ ಮಾಡುತ್ತದೆ. ಎರಡೂ ಮೈತ್ರಿಕೂಟಗಳು ಹೀಗೆ ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡು ಜನರನ್ನು ವಂಚಿಸುತ್ತಲೇ ಬಂದಿವೆ. ಆದರೆ, ಈ ವಂಚನೆಯ ಒಪ್ಪಂದವನ್ನು ಕೇರಳದ ಯುವಜನರು ಪ್ರಶ್ನಿಸುತ್ತಿದ್ದಾರೆ. ಈಚಿನ ವರ್ಷಗಳಲ್ಲಿ ಮೊದಲ ಬಾರಿಯ ಮತದಾರರಿಂದ ಕೇರಳದ ರಾಜಕಾರಣದಲ್ಲಿ ಬದಲಾವಣೆ ಆಗುತ್ತಿದೆ' ಎಂದು ಮೋದಿ ಹೇಳಿದ್ದಾರೆ.

ತಮಿಳುನಾಡಿನ ಧಾರಾಪುರಂನಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಜನರತ್ತ ಕೈಬೀಸಿದರು – ಪಿಟಿಐ ಚಿತ್ರ

'ಮುಖ್ಯಮಂತ್ರಿಗೇ ಟಿಕೆಟ್ ಇಲ್ಲ'

'ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಚಪ್ಪಲಿ ಎತ್ತಿ ಇಡುವ ಕೆಲಸವನ್ನೂ ಪುದುಚೇರಿಯ ಈ ಹಿಂದಿನ ಮುಖ್ಯಮಂತ್ರಿ ನಾರಾಯಣಸ್ವಾಮಿ ಮಾಡಿದ್ದರು. ಹೀಗಿದ್ದೂ ಅವರಿಗೆ ಈಗ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನೀಡಿಲ್ಲ ಅಂದರೆ, ಅವರದ್ದು ಇನ್ನೆಷ್ಟರಮಟ್ಟಿಗೆ ವಿಚ್ಛಿದ್ರಕಾರಿ ಸರ್ಕಾರ ಆಗಿದ್ದಿರಬಹುದು' ಎಂದು ಮೋದಿ ಲೇವಡಿ ಮಾಡಿದ್ದಾರೆ.

'ದಾಳಿಗೆ ಹಳೆಯ 2ಜಿ ಕ್ಷಿಪಣಿ'

ಧಾರಾಪುರಂ (ತಮಿಳುನಾಡು) (ಪಿಟಿಐ): 'ತಮಿಳುನಾಡಿನ ನಾರಿ ಶಕ್ತಿಯ ಮೇಲೆ ದಾಳಿ ನಡೆಸಲು ಕಾಂಗ್ರೆಸ್ ಮತ್ತು ಡಿಎಂಕೆ ಹಳೆಯ 2ಜಿ ಕ್ಷಿಪಣಿ ಬಿಟ್ಟಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ಲೇವಡಿ ಮಾಡಿದ್ದಾರೆ.

ಇಲ್ಲಿ, ಎಐಎಡಿಎಂಕೆ ಮತ್ತು ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದ ಮೋದಿ ಅವರು, ವಿರೋಧ ಪಕ್ಷಗಳ ವಿರುದ್ಧ ಹರಿಹಾಯ್ದರು. ಮಾಜಿ ಕೇಂದ್ರ ಸಚಿವ ಎ.ರಾಜಾ ಅವರು ಈಚೆಗೆ ಮುಖ್ಯಮಂತ್ರಿ ಇ.ಕೆ.ಪಳನಿಸ್ವಾಮಿ ಅವರ ಹುಟ್ಟಿನ ಬಗ್ಗೆ ಅವಹೇಳನ ಮಾಡಿದ್ದರು. 2ಜಿ ಹಗರಣದಲ್ಲಿ ಆರೋಪಿಯಾಗಿದ್ದ ರಾಜಾ ಅವರ ಹೆಸರನ್ನು ಉಲ್ಲೇಖಿಸದೆಯೇ ಪ್ರಧಾನಿ ಮೋದಿ ಅವರು, ರಾಜಾ ಅವರನ್ನು ಹಳೆಯ 2ಜಿ ಕ್ಷಿಪಣಿ ಎಂದಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ

Business to Business

Financial Services

ಮುದ್ರಾ ಯೋಜನೆಯ ಮೂಲಕ ಕೃಷಿ ಸ್ಥಿರಾಸ್ತಿ ವೈಯಕ್ತಿಕ ಬಿಸಿನೆಸ್ ವಿದ್ಯಾ, ವಾಹನ ಸಾಲ 4% ವಾರ್ಷಿಕ ಬಡ್ಡಿಯಲ್ಲಿ ಸಾಲಲಭ್ಯ 8095868219, 7057624634

Business Offers

Finance

★ಸಾಲ ಸೌಲಭ್ಯ★ ವ್ಯಾಪಾರಸಾಲ, ಆಸ್ತಿಸಾಲ, ಅಡಮಾನಸಾಲ, ಶಿಕ್ಷಣಸಾಲ, ಶೇ.6%ರ ಬಡ್ಡಿದರದಲ್ಲಿ, 40%ಸಬ್ಸಿಡಿ, ಎಲ್ಲಾರೀತಿಯ ಸಾಲದೊರೆಯುತ್ತದೆ. ಸಂಪರ್ಕಿಸಿ:09499457849/ 09953286082. ಏಜೆಂಟರು ಸಂಪರ್ಕಿಸಬಹುದು.

ಉದ್ಯೋಗಾವಕಾಶ

General

✓ ಎಲ್ಲಾ ಜಿಲ್ಲೆಗಳಲ್ಲಿಯೂ ವಸತಿ, ಊಟದೊಂದಿಗೆ ಯುವಕ/ ಯುವತಿಯರು ಬೇಕಾಗಿದ್ದಾರೆ.ಬಂದ ದಿನವೇ ಕೆಲಸ ಸಿಗುತ್ತದೆ.10th, PUC, ITI, Diploma, Any Degree, ಪಾಸ್/ಫೇಲ್ 16,200-70,000/-.8095037111, 8095036111

✓ ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9538606888, 9916016092

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

✓ ಕಂಪನಿಗಳಿಗೆ ಬೇಕಾಗಿದ್ದಾರೆ. VIDEOCON, ಟಯೋಟ, TVS ಬ್ರಿಟಾನಿಯಾಗಳಿಗೆ SSLC, ITI ನವರು, ಡಿಗ್ರಿಯವರು, ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿ 16,800-56,000/- ವಸತಿಯೂಟವಿದೆ. 9611715755

ಮಂಡ್ಯ ಜಿಲ್ಲೆ ನಾಗಮಂಗಲ ತಾll, ದೇವಲಾಪುರ ಹೋಬಳಿ (ಯಡಿಯೂರುನಿಂದ 10 ಕಿಮೀ) ಹನಿ ನೀರಾವರಿ ತೋಟದಲ್ಲಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ವಸತಿ ಉಚಿತ, ಉತ್ತಮ ಸಂಬಳ ಕೊಡಲಾಗುವುದು. ಸಂಪರ್ಕಿಸಿ: 9448253867

✓ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

Wanted

ಫೀಲ್ಡ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಕೆಲಸ ಬೆಂಗಳೂರಿನಲ್ಲಿ. ಎಸ್.ಎಸ್.ಎಲ್.ಸಿ ಆದವರು ಊಟ ವಸತಿ ಸೌಲಭ್ಯವಿದೆ. 9513668615, 8073250084

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ: 7019132200, 080-25300714

Part-Time Jobs

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

✓ ಮನೆಯಿಂದಲೇ ಕುಳಿತು ಬುಕ್ ಬರೆಯುವ ಫಾರಂ ತುಂಬುವ ಮೂಲಕ ಗಳಿಸಿ 15,000-25,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9972387417, 9844978728

Multiple Vacancy

ಮಹಿಳಾ ನರ್ಸ್, ವಾರ್ಡ್ ಬಾಯ್ ಮತ್ತು ಆಯಾ ತಕ್ಷಣ ಬೇಕಾಗಿದ್ದಾರೆ. ಉಚಿತ ಊಟ, ವಸತಿ ಸೌಲಭ್ಯವಿದೆ. ಬೆಂಗಳೂರಿನ ಸುಸಜ್ಜಿತ ವೃದ್ಧಾಶ್ರಮಕ್ಕೆ. ಸಂಪರ್ಕಿಸಿ: 7619583088

ಭವಿಷ್ಯ

Astrology

★॥ಶ್ರೀಶಾಕಂಬರಿದೇವಿ॥★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ ಸಂಭೋಗ ವಶೀಕರಣ ಮಾಟಮಂತ್ರ, ಸಾಲಭಾದೆ,ಶತ್ರುನಾಶ, ಧನವಶ,ಜನವಶ ಇನ್ನೂಯಾವುದೇ ಸಮಸ್ಯೆಗಳಿಗೆ ನೋಡುವಮೂಲಕ 11ನಿಮಿಷದಲ್ಲಿ ಪರಿಹಾರ. 9008968867

★ಕೆಲಸವಾದ ನಂತರಕಾಣಿಕೆ★ ಎಲ್ಲಿಯೂ ಪರಿಹಾರವಾಗದ ಕಠಿಣ, ನಿಗೂಢ ಗುಪ್ತಸಮಸ್ಯೆಗಳಿಗೆ ಶ್ರೀಸಾಯಿರಾಮ್ ದೀಕ್ಷಿತ್‌ರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಹನುಮಂತನಗರ,ಬೆಂಗಳೂರು. 9880382711

★॥(ಉಚಿತ ಭವಿಷ್ಯ)॥★ ದುರ್ಗಾಅಂಜನಂ ಜ್ಯೋತಿಷ್ಯಾಲಯ ಸಂತಾನಭಾಗ್ಯ, ದಾಂಪತ್ಯ,ಪ್ರೀತಿಯಲ್ಲಿ ಮೋಸ, (ಸ್ತ್ರೀ ಪುರುಷ ವಶೀಕರಣ) ಸಮಸ್ಯೆ ಏನೇಯಿರಲಿ ಕ್ಷಣಮಾತ್ರದಲ್ಲಿ ಪರಿಹಾರ. 8197357241

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿ ಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 8792564467

ವೈವಾಹಿಕ

Matrimonial Bureaus

ಎಲ್ಲಾ ಜಾತಿಗಳ ಮೊದಲನೆ ಮತ್ತು ಮರು ಮದುವೆಯ ವೈವಾಹಿಕ ಮಾಹಿತಿಗಾಗಿ ಸಂಪರ್ಕಿಸಿ. ವಧು ವರರ ಫೋಟೋ ವಿವರವನ್ನು 9019566555ಗೆ ವ್ಯಾಟ್ಸಪ್ ಮಾಡಿ

ಇತರೆ

Medical

ರಾಜವೈದ್ಯಂ: 10 ತಲೆಮಾರುಗಳಿಂದ ಆಯುರ್ವೇದ ಸಿದ್ಧವೈದ್ಯ ಪದ್ಧತಿಯಿಂದ ಸಂತಾನಹೀನತೆ, ಮಧುಮೇಹ, ಹೃದಯಾಘಾತ ರೋಗಗಳನ್ನು ನಿವಾರಿಸುತ್ತಾರೆ. ಪ್ರವೀಣ್ ಶರ್ಮ. 8088342303

ವೈಯಕ್ತಿಕ

Change of Name

I, SAMUEL. S R/a #A-4, JNCASR Staff Housing Colony, Srirampura Cross, Jakkur, Bengaluru-64 have changed my daughter's name from Kathrin. S TO ARNITHA SAMUEL vide affidavit dated 28.03.2021 before notary Chandrakala, Bengaluru.

I, SAMUEL. S R/a #A-4, JNCASR Staff Housing Colony, Srirampura Cross, Jakkur, Bengaluru-64 have changed my daughter's name from Mary Basilicas. S TO ADVIKA RAMYA SAMUEL vide affidavit dated 28.03.2021 before notary Chandrakala, Bengaluru.

I, ANJALI. A aged 26 years D/o Anthony Swamy R/a #c-41/5, JNCA- 4JNC Servant Quarters, IISc Campus, Bengaluru-12 have changed my name from Angeli to ANJALI. A vide affidavit dated 27.03.2021 before notary Kundan Babu Bengaluru

ಪ್ರವಾಸ

Travel

02.05.2021, 14.05.2021, 04.06.2021,04.07.2021 ರಿಂದ 14/20/27 ದಿನಗಳ ಕಾಶಿ,ಗಯಾ, ಪೂರಿಜಗನ್ನಾಥ್, ಪ್ರಯಾಗ, ಅಯೋಧ್ಯ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯುಮುನೋತ್ರಿ, ವೈಷ್ಣೋದೇವಿ, ದೆಹಲಿ/14 ದಿನಗಳ ಮುಕ್ತಿನಾಥ್, ನೇಪಾಳ, ಪೊಖ್ರಾ,ಜನಕಪುರಿ, ನೈಮಿಶಾರಣ್ಯ, ಘೋರಕ್-ಪುರ್. 'ಶ್ರೀಸುಧಾ ಟ್ರಾವಲ್ಸ್' 080-22429289, 9448119290, 9019301300

19-4-2021 ಮಧ್ಯ ಪ್ರದೇಶ, ಗುಜರಾತ್, ರಾಜಸ್ತಾನ 17 ದಿನಗಳ ಪ್ರವಾಸ NGS Package Tours, Bangalore +91 7975488469

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಮಂಗಲಾ ಅಂಗಡಿ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಮಂಗಲಾ ಸುರೇಶ ಅಂಗಡಿ ಮಂಗಳವಾರ ನಾಮಪತ್ರ ಸಲ್ಲಿಸಿದರು.

ಪ್ರತ್ಯೇಕವಾಗಿ 4 ಸೆಟ್‌ಗಳನ್ನು ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ಹರೀಶ್ ಕುಮಾರ್ ಸ್ವೀಕರಿಸಿದರು. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ವಿಧಾನಸಭೆ ಉಪಸಭಾಧ್ಯಕ್ಷ ಆನಂದ ಮಾಮನಿ, ದಕ್ಷಿಣ ಕ್ಷೇತ್ರದ ಶಾಸಕ ಅಭಯ ಪಾಟೀಲ ಹಾಗೂ ಉತ್ತರ ಕ್ಷೇತ್ರದ ಶಾಸಕ ಅನಿಲ ಬೆನಕೆ ಅವರು ಮಂಗಲಾ ಜತೆಗೆ ಇದ್ದರು.

ಶಾಸಕರಾದ ರಮೇಶ ಜಾರಕಿಹೊಳಿ ಹಾಗೂ ಬಾಲಚಂದ್ರ ಜಾರಕಿಹೊಳಿ ಅನುಪಸ್ಥಿತಿ ಎದ್ದುಕಂಡಿತು. ಯಾವುದೇ ಮೆರವಣಿಗೆ ಇರಲಿಲ್ಲ.

₹ 14.77 ಕೋಟಿ ಆಸ್ತಿ ಒಡತಿ

ಬೆಳಗಾವಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಂಗಲಾ ಅಂಗಡಿ ತಮ್ಮ ಹೆಸರಿನಲ್ಲಿ ಒಟ್ಟು ₹ 14.77 ಕೋಟಿ ಆಸ್ತಿ ಹೊಂದಿದ್ದಾರೆ. ಈ ಪೈಕಿ ₹ 11.03 ಕೋಟಿ ಸ್ಥಿರಾಸ್ತಿ ಹಾಗೂ ₹ 3.74 ಕೋಟಿ ಚರಾಸ್ತಿ. ಇದರಲ್ಲಿ ₹ 60.23 ಲಕ್ಷ ಸಾಲ ಸೇರಿದೆ.

ನಾಮಪತ್ರದೊಂದಿಗೆ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಆಸ್ತಿ ವಿವರಗಳನ್ನು ಅವರು ಘೋಷಿಸಿದ್ದಾರೆ. ಬಿ.ಎಸ್ಸಿ. ಪದವೀಧರೆ ಆಗಿರುವ, 58 ವರ್ಷದ ಅವರು ಕೃಷಿ, ವ್ಯವಹಾರ ಹಾಗೂ ಸಮಾಜಸೇವೆ ತಮ್ಮ ವೃತ್ತಿ ಎಂದು ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣವಾದ ಫೇಸ್‌ಬುಕ್, ಟ್ವಿಟರ್ ಹಾಗೂ ಇನ್‌ಸ್ಟಾಗ್ರಾಂನಲ್ಲಿ ಖಾತೆ ಹೊಂದಿದ್ದಾರೆ. ಕ್ರಿಮಿನಲ್ ಮೊಕದ್ದಮೆ ಇಲ್ಲ.

ಪತಿ, ದಿವಂಗತ ಸುರೇಶ ಅಂಗಡಿ ಅವರ ಹೆಸರಿನಲ್ಲಿ ₹1.62 ಕೋಟಿ ಚರಾಸ್ತಿ ಮತ್ತು ₹ 14.32 ಕೋಟಿ ಸ್ಥಿರಾಸ್ತಿ ಸೇರಿ ₹ 15.94 ಕೋಟಿ ಆಸ್ತಿ ತೋರಿಸಿದ್ದಾರೆ. ಅವರ ಹೆಸರಲ್ಲಿ ₹ 6.95 ಕೋಟಿ ಸಾಲವಿದೆ. ಅಂಗಡಿ ಕುಟುಂಬ ನಡೆಸುವ ಕಂಪನಿ ಹಾಗೂ ಟ್ರಸ್ಟ್ ಹೆಸರಿನಲ್ಲಿ ₹ 11.05 ಕೋಟಿ ಚರಾಸ್ತಿ ಮತ್ತು ₹ 95.52 ಕೋಟಿ ಮೌಲ್ಯದ ಸ್ಥಿರಾಸ್ತಿ ಸೇರಿ ₹ 106 ಕೋಟಿ ಆಗುತ್ತದೆ. ಜೊತೆಗೆ, ₹ 91.98 ಕೋಟಿ ಸಾಲವಿದೆ.

ಕಾಂಗ್ರೆಸ್ ಪಕ್ಷ ಸೇರಿದ ಸಿಂಧ್ಯಾ

ಬಸವಕಲ್ಯಾಣ: ಜೆಡಿಎಸ್ ಮುಖಂಡ ಪಿ.ಜಿ.ಆರ್. ಸಿಂಧ್ಯಾ ಅವರು ಇಲ್ಲಿ ಕಾಂಗ್ರೆಸ್ ಸೇರಿದರು. ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಸಿಂಧ್ಯಾ ಅವರಿಗೆ ಪಕ್ಷದ ಧ್ವಜ ಕೊಟ್ಟು ಬರ ಮಾಡಿಕೊಂಡರು.

'ಕಳೆದ ಬಾರಿ ಈ ಕ್ಷೇತ್ರದಿಂದ ಗೆದ್ದಿದ್ದ ಬಿ.ನಾರಾಯಣ ರಾವ್ ನನ್ನ ಆಶೀರ್ವಾದ ಪಡೆದಿದ್ದರು. ನಾನು ನಾರಾಯಣರಾವ್ ವಿರುದ್ಧ ಸ್ಪರ್ಧಿಸಿ ತಪ್ಪು ಮಾಡಿದ್ದೆ. ಹೀಗಾಗಿ ಅವರ ಪತ್ನಿ ಪರ ಪ್ರಚಾರಕ್ಕೆ ಬಂದಿದ್ದೇನೆ' ಎಂದು ಸಿಂಧ್ಯಾ ಹೇಳಿದರು.

ಭದ್ರತಾ ಪಡೆ ಮೂಲಕ ಹಣ ಹಂಚಿಕೆ: ಮಮತಾ

ನಂದಿಗ್ರಾಮ (ಪಶ್ಚಿಮ ಬಂಗಾಳ) (ಪಿಟಿಐ): ನಂದಿಗ್ರಾಮ ವಿಧಾನಸಭಾ ಕ್ಷೇತ್ರದ ಮತದಾರರಲ್ಲಿ ಭಯ ಹುಟ್ಟಿಸಲು ಬಿಜೆಪಿ ಆಡಳಿತದ ರಾಜ್ಯಗಳಿಂದ ಪೊಲೀಸ್ ಪಡೆಗಳನ್ನು ಕರೆತರಲಾಗಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಂಗಳವಾರ ಆರೋಪಿಸಿದ್ದಾರೆ.

ಗಾಲಿಕುರ್ಚಿಯಲ್ಲಿ ಕುಳಿತು ಕ್ಷೇತ್ರದುದ್ದಕ್ಕೂ ಕೊನೆಯ ಹಂತದ ಪ್ರಚಾರ ಮಾಡಿದ ಅವರು ಸೋನಾಚುರಾ ಎಂಬಲ್ಲಿ ಮಾತನಾಡಿದರು. ಭದ್ರತಾ ಪಡೆಗಳು ಮತದಾರರಿಗೆ ಹಣ ಹಂಚುತ್ತಿವೆ. ಭದ್ರತಾಪಡೆ ವಾಹನಗಳ ಮೂಲಕ ಹಣ ಸಾಗಿಸಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

ಈ ಮಧ್ಯೆ ನಂದಿಗ್ರಾಮದ ರೇಯಪಾರಾ ಎಂಬಲ್ಲಿ ಚುನಾವಣಾ ಪ್ರಚಾರಕ್ಕೆ ತೆರಳಿದ್ದ ಮಮತಾ ಬ್ಯಾನರ್ಜಿ ಅವರಿಗೆ ಬಿಜೆಪಿ ಬೆಂಬಲಿಗರು 'ಜೈ ಶ್ರೀರಾಮ್' ಘೋಷಣೆ ಕೂಗಿ ಮುಜುಗರ ಉಂಟುಮಾಡಿದರು.

'ಮಮತಾ ಸೋಲಿಸಿ': ಪಶ್ಚಿಮ ಬಂಗಾಳದಲ್ಲಿ ನಿಜವಾದ ಬದಲಾವಣೆಯನ್ನು ತರಬೇಕಾದರೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ನಂದಿಗ್ರಾಮದಲ್ಲಿ ಸೋಲಿಸಬೇಕು ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಹೇಳಿದ್ದಾರೆ.

ಬಿಜೆಪಿಯ ಶರಣು ಸಲಗರ, ಕಾಂಗ್ರೆಸ್‌ನ ಮಾಲಾ ನಾಮಪತ್ರ

ಬಿಜೆಪಿಗೆ ಸೆಡ್ಡು ಹೊಡೆದ ಖೂಬಾ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ಬಿಜೆಪಿ ನಾಯಕರ ಮನವೊಲಿಕೆಗೆ ಜಗ್ಗದ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಬಿಜೆಪಿ ವಿರುದ್ಧ ಬಂಡೆದ್ದು ಪಕ್ಷೇತರರಾಗಿ ಮಂಗಳವಾರ ನಾಮಪತ್ರ ಸಲ್ಲಿಸಿದರು.

ಜೆಡಿಎಸ್ ತೊರೆದಿರುವ ಮಾಜಿ ಶಾಸಕ, ಮರಾಠ ಸಮಾಜದ ಮುಖಂಡ ಎಂ.ಜಿ. ಮುಳೆ ಅವರು ಶರದ್ ಪವಾರ್ ನೇತೃತ್ವದ ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷದಿಂದ ಕಣಕ್ಕಿಳಿದಿದ್ದು, ಬಿಜೆಪಿ ಅಭ್ಯರ್ಥಿ ಶರಣು ಸಲಗರ ಹಾಗೂ ಕಾಂಗ್ರೆಸ್‌ನ ಮಾಲಾ ನಾರಾಯಣ ರಾವ್ ಅವರು ತಮ್ಮ ಪಕ್ಷದ ಮುಖಂಡರೊಂದಿಗೆ ನಾಮಪತ್ರ ಸಲ್ಲಿಸಿದರು. ಈ ಎಲ್ಲ ಅಭ್ಯರ್ಥಿಗಳು ಪ್ರತ್ಯೇಕವಾಗಿ ಸಮಾವೇಶಗಳನ್ನೂ ನಡೆಸಿದರು.

ಮಲ್ಲಿಕಾರ್ಜುನ ಖೂಬಾ ಅವರ ಮನೆಗೆ ಭೇಟಿ ನೀಡಿದ ವಸತಿ ಸಚಿವ ವಿ.ಸೋಮಣ್ಣ, ಜಿಲ್ಲಾ ಉಸ್ತುವಾರಿ ಸಚಿವ ಪ್ರಭು ಚವಾಣ್, ಬಿಜೆಪಿ ವಿಭಾಗ ಪ್ರಮುಖ ಈಶ್ವರಸಿಂಗ್ ಠಾಕೂರ್ ಅವರು ಮನವೊಲಿಸಲು ಯತ್ನಿಸಿದರು. ಗೃಹ ಸಚಿವ ಬಸವರಾಜ ಬೊಮ್ಮಾಯಿ ಸಹ ಮನವೊಲಿಸುವುದಾಗಿ ಹೇಳಿಕೊಂಡಿದ್ದರು. ಆದರೆ, ಇದಕ್ಕೆ ಮಣಿಯದ ಮಲ್ಲಿಕಾರ್ಜುನ, 'ಸ್ವಾಭಿಮಾನಿ ಬಳಗ'ದ ಹೆಸರಿನಲ್ಲಿ ಬೆಂಬಲಿಗರ ಸಮಾವೇಶ ನಡೆಸಿದರು.

'ಬಿಜೆಪಿ ಹೈಕಮಾಂಡ್‌ನಲ್ಲಿ ಎಡವಟ್ಟು ಆಗಿದೆ. ಸೂಟ್‌ಕೇಸ್ ಕೆಲಸ ಮಾಡಿದೆ. ಬಿಜೆಪಿ ಹಾಗೂ ಮುಖ್ಯಮಂತ್ರಿ ಯಡಿಯೂರಪ್ಪ ನನಗೆ ಮೋಸ ಮಾಡಿದ್ದಾರೆ. ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮೇಲೆ ಈಗಲೂ ವಿಶ್ವಾಸ ಇದೆ. ಬಿಜೆಪಿಯಲ್ಲಿದ್ದರೂ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದೇನೆ. ಕ್ಷೇತ್ರದ ಸ್ವಾಭಿಮಾನಿಗಳು ನನಗೆ ನ್ಯಾಯ ದೊರಕಿಸಿಕೊಡಲಿದ್ದಾರೆ' ಎಂದು ಮಲ್ಲಿಕಾರ್ಜುನ ಖೂಬಾ ಹೇಳಿದರು.

ಸಮಾವೇಶದಲ್ಲಿ ಇದಕ್ಕೆ ತಿರುಗೇಟು ನೀಡಿದ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ, '12ನೇ ಶತಮಾನದಲ್ಲಿ ದೇಶದ ಮೂಲೆ ಮೂಲೆಯಿಂದ ಶರಣರು ಇಲ್ಲಿಗೆ ಬಂದಿದ್ದರು. ಪಕ್ಕದ ಜಿಲ್ಲೆಯ ಶರಣು ಸಲಗರ ಇಲ್ಲಿ ಸಲ್ಲುವುದಿಲ್ಲವೇ' ಎಂದು ಪ್ರಶ್ನಿಸಿದರು.

'ಪ್ರಧಾನಿ ಮೋದಿ ಅವರು ಬಸವಣ್ಣನವರನ್ನು ಆಗಾಗ ನೆನಪಿಸಿಕೊಳ್ಳುತ್ತಾರೆ. ಈ ಕಾರಣಕ್ಕಾಗಿ ಬಿಜೆಪಿಯನ್ನು ಗೆಲ್ಲಿಸಿ' ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಮನವಿ ಮಾಡಿದರು.

'₹50 ಕೋಟಿ ಖರ್ಚು ಸಾಧ್ಯತೆ': 'ಬಸವಕಲ್ಯಾಣ ವಿಧಾನಸಭಾ ಉಪ ಚುನಾವಣೆಯಲ್ಲಿ ಬಿಜೆಪಿ ₹ 50 ಕೋಟಿ ಖರ್ಚು ಮಾಡುವ ಸಾಧ್ಯತೆ ಇದೆ. ರಾಜ್ಯ ಹಾಗೂ ಪ್ರಜಾಪ್ರಭುತ್ವವನ್ನು ಉಳಿಸಲು ಯಾರೂ ಮತ ಮಾರಿಕೊಳ್ಳಬಾರದು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಸಮಾವೇಶದಲ್ಲಿ ಮನವಿ ಮಾಡಿದರು.

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇದ್ದರು.

ಬಸವಕಲ್ಯಾಣದಲ್ಲಿ ಕೋಟೆ ಆವರಣದಿಂದ ತೇರು ಮೈದಾನದವರೆಗೆ ನಡೆದ ಕಾಂಗ್ರೆಸ್ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಕಾರ್ಯಕರ್ತರು

ಬಸವಕಲ್ಯಾಣದಲ್ಲಿ ಜೆಡಿಎಸ್‌ನಿಂದ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದು ಬಿಜೆಪಿ ಮತ್ತು ಜೆಡಿಎಸ್‌ನ ಹುನ್ನಾರ. ಆ ಪಕ್ಷಗಳು ಒಳ ಒಪ್ಪಂದ ಮಾಡಿಕೊಂಡಿವೆ
ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಹಣ ಪಡೆದು ಬಿಜೆಪಿ ಟಿಕೆಟ್ ನೀಡಲಾಗಿದೆ ಎಂಬ ಕುಮಾರಸ್ವಾಮಿ ಅವರ ಆರೋಪದಲ್ಲಿ ಹುರುಳಿಲ್ಲ. ಜೆಡಿಎಸ್ ಡೀಲ್ ಪಕ್ಷವಾಗಿದ್ದು, ನಮ್ಮದು ಸಾಮಾನ್ಯ ಕಾರ್ಯಕರ್ತರ ಪರವಾದ ಪಕ್ಷ
ಲಕ್ಷ್ಮಣ ಸವದಿ, ಉಪ ಮುಖ್ಯಮಂತ್ರಿ

₹ 7.20 ಕೋಟಿ ಆಸ್ತಿಯ ಒಡೆಯ

ಬಸವಕಲ್ಯಾಣ: ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಅವರ ಸ್ಥಿರಾಸ್ತಿ ಹಾಗೂ ಚರಾಸ್ತಿಯ ಒಟ್ಟು ಮೌಲ್ಯ ₹ 7.20 ಕೋಟಿ ಇದೆ. ಉದ್ಯಮಿಯಾಗಿರುವ ಖೂಬಾ ಅವರಿಗೆ ಮುಂಬೈ ಹಾಗೂ ದೆಹಲಿಯಲ್ಲಿ ಒಂದೊಂದು ಫ್ಲ್ಯಾಟ್‌ಗಳಿವೆ.

ಮುಂಬೈನ ಗೋರೆಗಾಂವ್ ಹಾಗೂ ದೆಹಲಿ ಭಿಕಾಜಿ ಕಾಮಾದಲ್ಲಿ ಫ್ಲ್ಯಾಟ್‌ಗಳಿದ್ದು, ಇದರ ಮೌಲ್ಯ ₹ 46.96 ಲಕ್ಷ. ಖೂಬಾ ಅವರ ಬಳಿ ₹ 49,089 ಮೌಲ್ಯದ ಪಿಸ್ತೂಲ್ ಇದೆ. ಪಜೆರೊ ಕಾರು, ಟೊಯೊಟೊ ಇನ್ನೋವಾ ಕಾರು, ಮಹಿಂದ್ರಾ ಬೊಲೆರೊ ಹಾಗೂ ಟಾಟಾ ವಿಸ್ಟಾ ಕಾರು ಇವರ ಒಡೆತನದಲ್ಲಿದೆ.

ಹಡಪದ ಸಮಾಜದ ಅಭ್ಯರ್ಥಿ ಕಣಕ್ಕೆ

ಬಿಜೆಪಿ ಮುಖಂಡ ಹಾಗೂ ಹಡಪದ ಸಮಾಜ ಸಂಘದ ಕಲಬುರ್ಗಿ ವಿಭಾಗೀಯ ಘಟಕದ ಅಧ್ಯಕ್ಷ ಈರಣ್ಣ ಹಡಪದ ಅವರು ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,507
ಇಂದಿನ ಅಂತ್ಯ	14,845
▲	338
ದಿನದ ಗರಿಷ್ಠ	14,876

ವಿನಿಮಯ ದರ

$ ಡಾಲರ್	73.38
£ ಪೌಂಡ್	100.98
€ ಯುರೊ	86.13
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹405
12 ಮೊಟ್ಟೆಗೆ	₹54
ಮೈಸೂರು	
100 ಮೊಟ್ಟೆಗೆ	₹410

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹1250 (1255)
ಸೂರ್ಯಕಾಂತಿ (ರಿಫೈನ್ಡ್)	₹1700 (1710)
ಪಾಮೋಲಿನ್	₹1188 (1210)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ ₹24000-30000

2ನೇ ದರ್ಜೆ ₹16000-25000

ಕೊಬ್ಬರಿ ಧಾರಣೆ

ಮಂಗಳೂರು	₹8000-11000
ಪುತ್ತೂರು	₹5000-14000
ತುರುವೇಕೆರೆ	₹14200-14500

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

ದೊಡ್ಡ	₹1200-1400
ಮಧ್ಯಮ	₹800-1200
ಸಣ್ಣ	₹500-800

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಶಶಿಕುಮಾರ್, ಊರು ಬೇಡ

● **ಪ್ರಶ್ನೆ: ನಾನು ಪೊಲೀಸ್ ಕಾನ್‌ಸ್ಟೆಬಲ್ ಆಗಿ ಈ ವರ್ಷ ನೇಮಕಗೊಂಡಿದ್ದೇನೆ. ನನ್ನ ವಯಸ್ಸು 27 ವರ್ಷ. ನನ್ನ ಸಂಬಳದ ಶ್ರೇಣಿ ₹ 23,500–₹ 47,650 (ಬೇಸಿಕ್ ಪೇ), ಕೈಗೆ ₹ 30 ಸಾವಿರ ಬರುತ್ತದೆ. ಅವಿವಾಹಿತ. ಇಷ್ಟರವರೆಗೆ ಏನೂ ಆದಾಯವಿರಲಿಲ್ಲ. ಈಗ ನೌಕರಿ ಸಿಕ್ಕಿದೆ. ನನ್ನ ಜೀವನ ಹಸನಾಗಲು ಹೇಗೆ ಉಳಿತಾಯ ಮಾಡಬಹುದು ಎಂಬುದನ್ನು ತಿಳಿಸಿ.**

ಉತ್ತರ: ನೀವು ಕೆಲಸಕ್ಕೆ ಸೇರಿದ ತಕ್ಷಣ ಉಳಿತಾಯದ ವಿಚಾರದಲ್ಲಿ ಪ್ರಶ್ನೆ ಕೇಳಿರುವುದು ಸಂತಸದ ವಿಚಾರ. ವ್ಯಕ್ತಿ ಕೆಲಸಕ್ಕೆ ಸೇರಿದ ತಕ್ಷಣ ಆದಾಯಕ್ಕೆ ಅನುಗುಣವಾಗಿ ಉಳಿತಾಯದ ಅಭ್ಯಾಸ ಅಳವಡಿಸಿಕೊಳ್ಳಬೇಕು. ನೀವು ಗರಿಷ್ಠ ₹ 10 ಸಾವಿರ ನಿಮ್ಮ ಖರ್ಚಿಗೆ ಇರಿಸಿ, ಉಳಿದ ₹ 20 ಸಾವಿರ ಈ ರೀತಿ ಉಳಿತಾಯ ಮಾಡಿ. ಜೀವ ವಿಮೆ ₹ 3,000, ಪಿಪಿಎಫ್ ₹ 2,000, ಒಂದು ವರ್ಷದ ಆರ್.ಡಿ. ₹ 15,000 ಮಾಡಿ. ಜೀವ ವಿಮೆ ನಿಮ್ಮ ಆದಾಯದ ಶೇ 10ರಷ್ಟು ಇದ್ದು, ಇದು ಪ್ರತಿ ವ್ಯಕ್ತಿಗೂ ಅಗತ್ಯ. ಪಿಪಿಎಫ್ 15 ವರ್ಷಗಳ ದೀರ್ಘಾವಧಿ ಯೋಜನೆ. ಮುಂದೆ ₹ 5 ವರ್ಷಗಳಂತೆ ಮುಂದುವರಿಸುತ್ತಾ ನಿವೃತ್ತಿ ತನಕ ಹಣ ಹೂಡಿರಿ.

ಜೀವನದ ಸಂಜೆಗೆ ಈ ಮೊತ್ತ ನೆರವಾಗುತ್ತದೆ. ನೀವು ಅವಿವಾಹಿತರಾಗಿದ್ದು ಒಂದೆರಡು ವರ್ಷಗಳಲ್ಲಿ ಮದುವೆ ಆಗಬೇಕಾಗಿರುವುದರಿಂದ ₹ 15,000 ಆರ್.ಡಿ. ಒಂದೇ ವರ್ಷಕ್ಕೆ ಮಾಡಿರಿ. ವರ್ಷ ಕಳೆದಾಗ ಮದುವೆ ನಿಶ್ಚಯವಾಗದಿರುವಲ್ಲಿ ಇಲ್ಲಿ ಬರುವ ಮೊತ್ತ ಅದೇ ಬ್ಯಾಂಕ್‌ನಲ್ಲಿ ಒಂದು ವರ್ಷದ, ಒಮ್ಮೆಲೇ ಬಡ್ಡಿ ಬರುವ ಠೇವಣಿಯಲ್ಲಿ ಇರಿಸಿ ಹಾಗೂ ಪುನಃ ಹೊಸ ಆರ್.ಡಿ. ₹ 15,000ದಂತೆ ಒಂದು ವರ್ಷಕ್ಕೆ ಮಾಡಿರಿ. ಹೀಗೆ ಮಾಡಿದಲ್ಲಿ ನಿಮ್ಮ ಉದ್ದೇಶ ಸಫಲವಾಗುತ್ತದೆ. ನೀವು ಪದವೀಧರರೆಂದು ತಿಳಿಯುತ್ತೇನೆ. ಸಬ್ ಇನ್‌ಸ್ಪೆಕ್ಟರ್ ಪರೀಕ್ಷೆ ಬರೆದು ಬಡ್ತಿ ಹೊಂದಿರಿ. ನಿಮಗೆ ಉಜ್ವಲ ಭವಿಷ್ಯ ಹಾರೈಸುತ್ತೇನೆ.

ಅಶೋಕ್, ಗದಗ

● **ಪ್ರಶ್ನೆ: ನಾನು ಬುಕ್ ಬೈಂಡಿಂಗ್ ಕೆಲಸ ಮಾಡುತ್ತೇನೆ. ನನ್ನ ತಿಂಗಳ ವರಮಾನ ₹ 10 ಸಾವಿರ. ನಾನು ಒಂದು ಆರ್.ಡಿ. ಮಾಡಿ ಒಂದು ಸಣ್ಣ ನಿವೇಶನ ಕೊಂಡಿದ್ದೇನೆ. ನಾನು ತಿಂಗಳಿಗೆ ₹ 600ರಂತೆ ಪ್ರತೀ ವರ್ಷವೂ ಆರ್.ಡಿ. ಮಾಡುತ್ತಾ ಬಂದಿದ್ದೇನೆ. ಇನ್ನೆರಡು ವರ್ಷಗಳಲ್ಲಿ ಆರ್.ಡಿ. ಅವಧಿ ಮುಗಿಯುತ್ತದೆ. ನನ್ನ ಎಲ್ಲಾ ಆರ್.ಡಿ.ಗಳೂ ಶೇ 9.5ರ ಬಡ್ಡಿದರ ಇರುವಾಗ 10 ವರ್ಷಗಳ ಅವಧಿಗೆ ಮಾಡಿದ್ದಾಗಿವೆ. ಇನ್ನು ಇವುಗಳು ಮುಗಿಯುತ್ತಲೇ ಏನು ಮಾಡಲಿ? ನನ್ನ ಬಿಡುವಿನ ಸಮಯದಲ್ಲಿ ಜೀವನೋಪಾಯಕ್ಕೆ ಏನಾದರೂ ದಾರಿ ತೋರಿಸಿರಿ.**

ಉತ್ತರ: ನೀವು ನನ್ನ ಸಲಹೆಯಂತೆ ಆರ್.ಡಿ. ಮಾಡಿ ನಿವೇಶನ ಕೊಂಡಿರುವುದು ಹಾಗೂ ಈ ಹಿಂದೆ ಶೇ 9.5ರ ಬಡ್ಡಿದರ ಇರುವಾಗ 10 ವರ್ಷಗಳ ಆರ್.ಡಿ. ಮಾಡಿರುವುದು ತುಂಬಾ ಖುಷಿ ಕೊಟ್ಟಿದೆ. ಸಣ್ಣ ಆದಾಯದಲ್ಲಿ ಕೂಡಾ ಕ್ರಮಬದ್ಧವಾದ ಉಳಿತಾಯ ಮಾಡಬಹುದು ಎನ್ನುವುದನ್ನು ನಿಮ್ಮಿಂದ ಯುವಜನರು ತಿಳಿಯಬೇಕಾಗಿದೆ. ನೀವು ಆರ್.ಡಿ. ಮುಗಿಯುತ್ತಲೇ ಬರುವ ಮೊತ್ತ ಅದೇ ಬ್ಯಾಂಕ್‌ನಲ್ಲಿ ಒಮ್ಮೆಲೇ ಬಡ್ಡಿ ಬರುವ ಠೇವಣಿಯಲ್ಲಿ 5 ವರ್ಷಗಳ ಅವಧಿಗೆ ಇಡಿ. ನಿಮ್ಮ ಬಿಡುವಿನ ಸಮಯದಲ್ಲಿ ಜೀವ ವಿಮಾ ಪಾಲಿಸಿ ಮಾಡಲು, ಎಲ್‌ಐಸಿ ಆಫೀಸಿನಲ್ಲಿ ವಿಚಾರಿಸಿ. ನಿಮಗೆ ಜನ ಸಂಪರ್ಕ ಇರುವುದರಿಂದ ಈ ಉದ್ಯೋಗ ಮಾಡಬಹುದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಪ್ರತಿ ಬಾರಿಯೂ ಗ್ರಾಹಕರ ಒಪ್ಪಿಗೆ ಕಡ್ಡಾಯ: ಆರ್‌ಬಿಐ

ಸ್ವಯಂಚಾಲಿತ ಪಾವತಿ: ನಾಳೆಯಿಂದ ಹೊಸ ನಿಯಮ

ನವದೆಹಲಿ (ಪಿಟಿಐ): ‘ವಿದ್ಯುತ್ ಶುಲ್ಕ, ಒಟಿಟಿ ಚಂದಾದಾರಿಕೆ ಹಣ, ಪೋಸ್ಟ್‌ಪೇಯ್ಡ್ ಮೊಬೈಲ್ ಶುಲ್ಕ... ಇಂಥ ಪಾವತಿಗಳೆಲ್ಲ ಸ್ವಯಂಚಾಲಿತವಾಗಿ ಆಗುವಂತೆ ನಾನು ವ್ಯವಸ್ಥೆ ಮಾಡಿಕೊಂಡಿದ್ದೇನೆ. ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್ ಬಳಸಿ, ಈ ಶುಲ್ಕಗಳೆಲ್ಲ ನಿಗದಿತ ದಿನ ತಾವಾಗಿಯೇ ಪಾವತಿ ಆಗುತ್ತಿರುವಂತೆ ಮಾಡಿದ್ದೇನೆ’ ಎಂದು ಹೇಳುವವರಿಗೆ ಇಲ್ಲೊಂದು ಪ್ರಮುಖ ಸುದ್ದಿ ಇದೆ.

ಏಪ್ರಿಲ್ 1ರಿಂದ (ಗುರುವಾರ) ಇಂತಹ ಪಾವತಿಗಳು ಸ್ವಯಂಚಾಲಿತವಾಗಿ ಆಗುವುದಿಲ್ಲ. ಇಂತಹ ಪಾವತಿಗಳಿಗೆ ಪ್ರತಿ ಬಾರಿಯೂ ಗ್ರಾಹಕರಿಂದ ಒಪ್ಪಿಗೆ ಪಡೆದುಕೊಳ್ಳುವುದು ಕಡ್ಡಾಯ ಎಂದು ಆರ್‌ಬಿಐ ರೂಪಿಸಿರುವ ನಿಯಮವು ಗುರುವಾರದಿಂದ ಜಾರಿಗೆ ಬರಲಿದೆ. ಆದರೆ, ಆರ್‌ಬಿಐ ನಿಯಮವನ್ನು ಅನುಷ್ಠಾನಕ್ಕೆ ತರಲು ಹೆಚ್ಚಿನ ಕಾಲಾವಕಾಶ ಬೇಕು ಎಂದು ಬ್ಯಾಂಕ್‌ಗಳು ಹಾಗೂ ಪಾವತಿ ಸೇವೆ ಒದಗಿಸುವ ಕಂಪನಿಗಳು ಕೋರಿವೆ.

ಕಾರ್ಡ್ ಬಳಸಿ ಮಾಡುವ

ಪಾವತಿಗಳು ಇನ್ನಷ್ಟು ಸುರಕ್ಷಿತವಾಗಿರಬೇಕು ಎಂಬ ಉದ್ದೇಶದಿಂದ ಆರ್‌ಬಿಐ ಈ ನಿಯಮ ರೂಪಿಸಿದೆ. ಆದರೆ ಕೆಲವು ಬ್ಯಾಂಕ್‌ಗಳು ಹಾಗೂ ಕೆಲವು ಪಾವತಿ ಸೇವಾ ಕಂಪನಿಗಳು ಈ ನಿಯಮ ಜಾರಿಗೆ ತರಲು ಅಗತ್ಯ ಸಿದ್ಧತೆ ಮಾಡಿಕೊಂಡಿಲ್ಲವಾದ ಕಾರಣ, ವಿವಿಧ ಬಗೆಯ ಬಿಲ್ ಪಾವತಿಗಳು, ಡಿಟಿಎಚ್ ರೀಚಾರ್ಜ್, ಒಟಿಟಿ ಚಂದಾ ನವೀಕರಣಕ್ಕೆ ಸಂಬಂಧಿಸಿದ ಸ್ವಯಂಚಾಲಿತ ಪಾವತಿಗಳಿಗೆ ಮಾರ್ಚ್ 31ರ ನಂತರ ಅಡ್ಡಿ ಎದುರಾಗಬಹುದು.

ಹೊಸ ನಿಯಮಗಳ ಅನುಸಾರ ಬ್ಯಾಂಕ್‌ಗಳು ಮುಂದೆ ಬರಲಿರುವ ಪಾವತಿಯ ಬಗ್ಗೆ ಗ್ರಾಹಕರಿಗೆ ಮುಂಚಿತವಾಗಿ ತಿಳಿಸಬೇಕು. ಗ್ರಾಹಕರಿಂದ ಒಪ್ಪಿಗೆ ದೊರೆತ ನಂತರವಷ್ಟೇ ಹಣ ಪಾವತಿ ಆಗುತ್ತದೆ. ಅಂದರೆ, ಪಾವತಿಯು ಸ್ವಯಂಚಾಲಿತವಾಗಿ ನಡೆಯುವುದಿಲ್ಲ, ಗ್ರಾಹಕ ಸಮ್ಮತಿ ನೀಡಿದರೆ ಮಾತ್ರ ಆಗುತ್ತದೆ.

‘ಬ್ಯಾಂಕ್‌ಗಳು ಹಾಗೂ ಪಾವತಿ ಸೇವಾ ಕಂಪನಿಗಳು 2019ರಿಂದಲೂ ಆರ್‌ಬಿಐನ ನಿರ್ದೇಶನವನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ನಿಯಮ ಜಾರಿಗೆ ಬರುವ ಎರಡು ತಿಂಗಳು ಮುಂಚಿತವಾಗಿ ಎಲ್ಲ ಅಗತ್ಯ ಕ್ರಮಗಳನ್ನು ಅವು ಕೈಗೊಳ್ಳಬೇಕಿತ್ತು. ಆಗ ಹೊಸ ವ್ಯವಸ್ಥೆಗೆ ಹೊರಳಿಕೊಳ್ಳುವುದು ಸುಲಭವಾಗುತ್ತಿತ್ತು’ ಎಂದು ಭಾರತೀಯ ಪಾವತಿ ಪರಿಷತ್ತಿನ (ಪಿಸಿಐ) ಅಧ್ಯಕ್ಷ ವಿಶ್ವಾಸ್ ಪಟೇಲ್ ಹೇಳಿದರು.

‘ನಮ್ಮ ಅಂದಾಜಿನ ಪ್ರಕಾರಣ ಸ್ವಯಂಚಾಲಿತವಾಗಿ ನಡೆಯುವ ಪಾವತಿಗಳ ಮೂಲಕ ದೇಶದಲ್ಲಿ ಪ್ರತಿ ತಿಂಗಳು ₹ 2,000 ಕೋಟಿ ಮೊತ್ತದ ವಹಿವಾಟು ನಡೆಯುತ್ತದೆ. ಗ್ರಾಹಕರಿಗೆ ತೊಂದರೆ ಆಗಲಾರದು, ವರ್ತಕರಿಗೆ ಸಮಸ್ಯೆ ಎದುರಾಗಲಾರದು ಎಂಬುದು ನಮ್ಮ ನಿರೀಕ್ಷೆ’ ಎಂದು ಪಟೇಲ್ ಹೇಳಿದರು.

ಚಿನ್ನ ₹ 138, ಬೆಳ್ಳಿ ₹ 320 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ 10 ಗ್ರಾಂ ಚಿನ್ನದ ದರ ₹ 138ರಷ್ಟು ಕಡಿಮೆಯಾಗಿ ₹ 44,113ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹ 320ರಷ್ಟು ಇಳಿಕೆ ಕಂಡು ₹ 63,212ಕ್ಕೆ ತಲುಪಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	900-9050
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	355
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-41000
ಹಳತು	42500-50500
ಪುತ್ತೂರು	
ಕೋಕ	9500-24000
ಹೊಸತು	28500-41000
ಯಲ್ಲಾಪುರ	
ಬಿಳಿಗೋಟು	24656-31369
ಕೋಕ	19622-29299
ಚಾಲಿ	32599-39160
ಕೆಂಪುಗೋಟು	27699-30311
ರಾಶಿ	39819-42399
ತಟ್ಟಿಬೆಟ್ಟೆ	32899-38320

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	9950	---	9775	--- ಸೆಂಟ್ಸ್
ಎಸಿ	4030	---	3750	
ಆರ್‌ಪಿ	5150	---	5075	
ಆರ್‌ಸಿ	3000	---	2875	--- ಡಾಲರ್ಸ್

ನಾಲ್ಕು ದಿನಗಳ ಬಳಿಕ ಮತ್ತೆ ಇಂಧನ ದರ ಇಳಿಕೆ

ನವದೆಹಲಿ/ಬೆಂಗಳೂರು (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ನಾಲ್ಕು ದಿನಗಳ ಅಂತರದ ಬಳಿಕ ಪೆಟ್ರೋಲ್, ಡೀಸೆಲ್ ದರವನ್ನು ಮತ್ತೆ ಇಳಿಕೆ ಮಾಡಿವೆ.

ಬೆಂಗಳೂರಿನಲ್ಲಿ ಪ್ರತಿ ಲೀಟರ್ ಪೆಟ್ರೋಲ್ ದರ 23 ಪೈಸೆ ಇಳಿಕೆಯಾಗಿ ₹ 93.59ರಂತೆ ಹಾಗೂ ಡೀಸೆಲ್ ದರ ಲೀಟರಿಗೆ 24 ಪೈಸೆ ಕಡಿಮೆಯಾಗಿ ₹ 85.75ರಂತೆ ಮಾರಾಟವಾಗಿದೆ.

ದೆಹಲಿಯಲ್ಲಿ ಪೆಟ್ರೋಲ್ ದರ 22 ಪೈಸೆ ಮತ್ತು ಡೀಸೆಲ್ ದರ 23 ಪೈಸೆ ಕಡಿಮೆಯಾಗಿ ಲೀಟರಿಗೆ ಕ್ರಮವಾಗಿ ₹ 90.56 ಮತ್ತು 80.87ರಂತೆ ಮಾರಾಟವಾಗಿದೆ. ಮುಂಬೈನಲ್ಲಿ ಪೆಟ್ರೋಲ್ ದರ ₹ 96.98 ಮತ್ತು ಡೀಸೆಲ್ ದರ ₹ 87.96ರಷ್ಟಾಗಿದೆ.

ಮುಂಬೈ ಧಾರಣೆ

ಶೇಂಗಾ

30-3-2021

ಜಾವಾ 70/80(ಹೊಸ)	10900-10950
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9000-9100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1560)
ಒಂದು ವಾರದ ಡೆಲಿವರಿ	1555 (1555)
ಸೋಯಾ ಕಚ್ಚಾ	1245 (1240)
ಪಾಮ್ ವಾರದ ಡೆಲಿವರಿ	1186 (1208)
ಸೂರ್ಯಕಾಂತಿ ಎಣ್ಣೆ ಕಚ್ಚಾ	1650 (1660)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
44,150 (44,250)
ಬೆಳ್ಳಿ ಕೆ.ಜಿ 63,650 (64,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎರಡು ವಾರಗಳ ಗರಿಷ್ಠ ಮಟ್ಟಕ್ಕೆ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ದೇಶದ ಷೇರು ಪೇಟೆಗಳು ಮಂಗಳವಾರದ ವಹಿವಾಟಿನಲ್ಲಿ ಎರಡು ವಾರಗಳ ಗರಿಷ್ಠ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿವೆ.

ಜಾಗತಿಕ ಷೇರುಪೇಟೆಗಳ ಸಕಾರಾತ್ಮಕ ಚಲನೆಯ ಜೊತೆಗೆ ಹಣಕಾಸು, ಐ.ಟಿ. ಮತ್ತು ಇಂಧನ ವಲಯದ ಷೇರುಗಳ ಗಳಿಕೆಯು ಸತತ ಎರಡನೇ ದಿನವೂ ಸೂಚ್ಯಂಕಗಳ ಏರಿಕೆಗೆ ಕಾರಣವಾದವು ಎಂದು ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ದಿನದ ವಹಿವಾಟಿನಲ್ಲಿ 1,128 ಅಂಶಗಳಷ್ಟು ಜಿಗಿತ ಕಂಡಿತು. ಎರಡು ತಿಂಗಳಲ್ಲಿ ದಿನದ ವಹಿವಾಟಿನಲ್ಲಿ ಕಂಡ ಗರಿಷ್ಠ ಏರಿಕೆ ಇದಾಗಿದೆ. 50,137 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿದೆ. ಹೂಡಿಕೆದಾರರ ಸಂಪತ್ತು 6.02 ಲಕ್ಷ ಕೋಟಿಗಳಷ್ಟು ವೃದ್ಧಿಯಾಗಿದೆ. ಇದರಿಂದ ಷೇರುಪೇಟೆಯ ಒಟ್ಟಾರೆ ಸಂಪತ್ತಿನ ಮೌಲ್ಯ ₹ 204.77 ಲಕ್ಷ ಕೋಟಿಗಳಿಗೆ ತಲುಪಿದೆ.

ರೂಪಾಯಿ 87 ಪೈಸೆ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ 87 ಪೈಸೆ ಇಳಿಕೆಯಾಗಿ ಒಂದು ಡಾಲರ್‌ಗೆ ₹ 73.38ರಂತೆ ವಿನಿಮಯಗೊಂಡಿತು.

ಕರ್ನಾಟಕ ಚರ್ಮ ಮತ್ತು ಫ್ಯಾಷನ್ ತಾಂತ್ರಿಕ ಸಂಸ್ಥೆ
(ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅಂಗ ಸಂಸ್ಥೆ)
ಉಲ್ಲಾಳ ಉಪನಗರ, ಬೆಂಗಳೂರು–560110
ದಿನಾಂಕ: 31.03.2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ನಿರ್ದೇಶಕರು ಕರ್ನಾಟಕ ಚರ್ಮ ಮತ್ತು ಫ್ಯಾಷನ್ ತಾಂತ್ರಿಕ ಸಂಸ್ಥೆ, ಬೆಂಗಳೂರು ಇಲ್ಲಿಗೆ ಅರ್ಹ ಟೆಂಡರ್‌ದಾರರಿಂದ ವಿವಿಧ ಕಾಮಗಾರಿ ಮತ್ತು ಯಂತ್ರೋಪಕರಣಗಳ ಟೆಂಟರ್‌ಗಳನ್ನು ಇ–ಟೆಂಡರ್ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಅಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಕಾಲ
1	KILT/ADMN/MACHINES III PHASE/TENDER/21	08.04.2021, 11:30 A.M
2	KILT/ADMN/AM1/RETAINING WALL /TENDER/21	28.04.2021, 5:00 P.M
3	KILT/ADMN/AM1/ELECTRICAL-WORK/2020-21/CALL-2	28.04.2021 , 11:00 A.M
4	KILT/ADMN/AM1/BADMINTON INDOOR STADIUM	28.04.2021, 5:00 P.M

ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ http://eproc.karnataka.gov.in ಮಾಹಿತಿ ಪಡೆಯಬಹುದು.

ಸಹಿ/- ನಿರ್ದೇಶಕರು, ಕಿಲ್ಟ್

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ,
ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ–2/ಟೆಂಡರ್.ಅಧಿಸೂಚನೆ/2020–21/9293 ದಿನಾಂಕ: 30.03.2021

ಅಲ್ಪಾವಧಿ ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ **ಕೆ.ಕೆ.ಆರ್.ಡಿ.ಬಿ, ಯೋಜನೆಯಡಿ 02 ಕಾಮಗಾರಿಗಳಿಗೆ** ಟೆಂಡರ್ ಕರೆಯಲಾಗಿದೆ. ಇಂಡೆಂಟ್ ಸಂಖ್ಯೆ : 136692, 136693, 2) ಕಾಮಗಾರಿ ಅಂದಾಜು ಮೊತ್ತ : ರೂ. ಕನಿಷ್ಠ **44.08** ಲಕ್ಷಗಳು, ಗರಿಷ್ಠ **240.11** ಲಕ್ಷಗಳು, 3) ಗುತ್ತಿಗೆದಾರರ ಅರ್ಹತೆ ವಿವರ : ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಒಂದನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರಾಗಿರಬೇಕು, 4) ಪ್ರೀ ಬಿಡ್ ಸಭೆ ದಿನಾಂಕ : **06–04–2021 (11.00 ಗಂಟೆ)**, 5) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : **07–04–2021 (17.30 ಗಂಟೆ)**, 6) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **08–04–2021 (16.00 ಗಂಟೆ)**, 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **09–04–2021 (16.30 ಗಂಟೆ)**, 8) ಆರ್ಥಿಕ ಬಿಡ್ ತೆರೆಯುವ ದಿನಾಂಕ : **12–04–2021 (11.30 ಗಂಟೆ)**, 9) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ ಕಚೇರಿ ಇವರನ್ನು ಸಂಪರ್ಕಿಸುವುದು. 10) **ಸೂಚನೆ : ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು,** 11) ಅಂತರ್ಜಾಲ ತಾಣದ ವಿಳಾಸ : www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1171/ಎಂ.ಸಿ.&ಎ/2020–21

ಬೆಂಗಳೂರು : ನರ್ತಕಿ 4 ಆಟ, ವೀರೇಶ್ (Screen 1) 4 ಆಟ, ವೀರೇಶ್ (Screen 2) 4 ಆಟ, ನವರಂಗ್ (ರಾಜಾಜಿನಗರ್) 4 ಆಟ, ಅಂಜನ್ (ಮಾಗಡಿ ರೋಡ್) 4 ಆಟ, URVASHI 4 ಆಟ, Swagath (Shankarnag) (M.G.Road), Hmt CINEMA (ಜಾಲಹಳ್ಳಿ), ಕಾವೇರಿ (ಸ್ಯಾಂಕಿ ರೋಡ್) 4 ಆಟ, ವೈಭವ್ (ಸಂಜಯನಗರ) 4 ಆಟ, ಗೋವರ್ಧನ್ (ಯಶವಂತಪುರ) 4 ಆಟ, ಶಾರದಾ (ಎಸ್.ಪಿ.ರೋಡ್) 4 ಆಟ, ಪೂರ್ಣಿಮಾ (ಜೆ.ಸಿ.ರೋಡ್) 4 ಆಟ, ಮಾರುತಿ (ರಾಜಗೋಪಾಲನಗರ) 4 ಆಟ, ವೆಂಕಟೇಶ್ವರ (ಆವಲಹಳ್ಳಿ) 4 ಆಟ, ಸಿದ್ದೇಶ್ವರ (ಜೆ.ಪಿ.ನಗರ) 4 ಆಟ, ಸಿದ್ದಲಿಂಗೇಶ್ವರ (ಜೆ.ಪಿ.ನಗರ) 4 ಆಟ, ಬಾಲಾಜಿ (ತಾವರೇಕೆರೆ) 4 ಆಟ, ಶ್ರೀನಿವಾಸ (ಗೌಡನಪಾಳ್ಯ) 4 ಆಟ, ಚಂದ್ರೋದಯ (ವಿದ್ಯಾಪೀಠ ಸರ್ಕಲ್) 4 ಆಟ, ಮಹದೇಶ್ವರ (ಕದಿರೇನಹಳ್ಳಿ) 4 ಆಟ, ಮುಕುಂದ ಸೇವಾನಗರ 4 ಆಟ, ವೀರಭದ್ರೇಶ್ವರ (ಕಮಲಾನಗರ) 4 ಆಟ, ವಿಕ್ಟರಿ ಸಿನಿಮಾ ಕಾಮಾಕ್ಷಿಪಾಳ್ಯ 4 ಆಟ, ಆಕಾಶ್ (ಲಗ್ಗೆರೆ) 4 ಆಟ, ಮೋಹನ್ (ಸುಂಕದಕಟ್ಟೆ) 4 ಆಟ, VR CINEMAS (ಮಲ್ಲತ್‌ಹಳ್ಳಿ) 4 ಆಟ, ವಜ್ರೇಶ್ವರಿ (ಉಲ್ಲಾಳ) 4 ಆಟ, VIJAYALAKSHMI THEATRE Garudacharpalya, Bengaluru-48. 4 ಆಟ, ಕೃಷ್ಣ (ಕೆ.ಆರ್.ಪುರಂ) 4 ಆಟ
ಗಣೇಶ್ (ಯಲಹಂಕ) 4 ಆಟ, ಮಾನಸಾ (ಕೋಣನಕುಂಟೆ ಕ್ರಾಸ್) 4 ಆಟ, ಬೃಂದಾ (ಹೊಂಗಸಂದ್ರ) 4 ಆಟ, ತಿರುಮಲಾ (ಅಗರ) 4 ಆಟ, ತುಳಸಿ (ಮಾರತ್‌ಹಳ್ಳಿ) 4 ಆಟ, ಕೃಷ್ಣ (ಬೊಮ್ಮನಹಳ್ಳಿ) 4 ಆಟ, ರಾಜಮುರುಳಿ (ಕೋಡಿಗೇಹಳ್ಳಿ) 4 ಆಟ, ರಾಧಾಕೃಷ್ಣ (ಆರ್.ಟಿ.ನಗರ) 4 ಆಟ, ಪುಷ್ಪಾಂಜಲಿ A/C 4 ಆಟ, ವೃದ್ಧಿ (ನಾಗವಾರ) 4 ಆಟ, ಅರುಣಾ (ಶ್ರೀರಾಮ್‌ಪುರ) 4 ಆಟ, Balaji Cinemas : Multiplex UTHARALLI MAIN ROAD CHIKKALSANDRA 4 ಆಟ, ವಿಜಯ್ (ಬ್ಯಾಟರಾಯನಪುರ) 4 ಆಟ, ರಾಬಿನ್ (ಕೆಂಗೇರಿ) 4 ಆಟ, ವೆಂಕಟೇಶ್ವರ (ಕೆಂಗೇರಿ) 4 ಆಟ, ವೈನಿಧಿ (ಸಿಂಗಾಪುರ ಲೇಔಟ್) 4 ಆಟ, ಬಾಲಾಜಿ (ದೊಮ್ಮಸಂದ್ರ) 4 ಆಟ, ಲಕ್ಷ್ಮೀ (ಗೊಟ್ಟಿಗೆರೆ) 4 ಆಟ, ವಿನಾಯಕ (ವರ್ತೂರು) 4 ಆಟ, ರವಿ (ಸರ್ಜಾಪುರ) 4 ಆಟ, ಶ್ರೀನಿವಾಸ (ಹೆಬ್ಬಗೋಡಿ) 4 ಆಟ, PVR Orion, Forum, Vaishnavi, Regalia, Marketcity, VR Mall, Vegacity, Spirit, Arena, Uptown, GT Mall, Aura, INOX Mantri, Central, Swagath, Garuda, RMZ, Garuda Yelahanka, Forum, Brookfield, Lido, Cinépolis ETA Mall, RMM, Orion East, Shantiniketan, SJR, Fun, GOPALAN CINEMAS Arcade, Innovation, Legacy, Grand, Signature
CARNIVAL, INNOVATIVE, KINO CINEMAS, ತುಮಕೂರು : ಗಾಯತ್ರಿ 4 ಆಟ, ಕೃಷ್ಣ 4 ಆಟ, ಜೈಭಾರತ್ ರಾತ್ರಿ ಆಟ, ಕೋಲಾರ : ನಾರಾಯಣಿ 4 ಆಟ, ರಾಮನಗರ : ಶಾನ್ 4 ಆಟ, ದೊಡ್ಡಬಳ್ಳಾಪುರ : ಸೌಂದರ್ಯ ಮಹಲ್ 4 ಆಟ, ರಾಜಕಮಲ್ 4 ಆಟ, ವೈಭವ್ ರಾತ್ರಿ ಆಟ, ಶಿರಾ : ಸಪ್ತಗಿರಿ 4 ಆಟ, ಸಿರಾ : ಭಾಗ್ಯಲಕ್ಷ್ಮೀ 4 ಆಟ, ಚನ್ನಪಟ್ಟಣ : ಲಕ್ಷ್ಮೀ 4 ಆಟ, ಹೊಸಕೋಟೆ : ಸಾಧನಾ 4 ಆಟ, ತಿಪಟೂರು : ತ್ರಿಮೂರ್ತಿ 4 ಆಟ, ಲಕ್ಷ್ಮೀ 4 ಆಟ, ಕನಕಪುರ : ಗೋಪಾಲಕೃಷ್ಣ 4 ಆಟ, ಮಾಗಡಿ : ನಿರ್ಮಲ್ 4 ಆಟ, ಬಾಲಾಜಿ 4 ಆಟ, ಚಿಕ್ಕಬಳ್ಳಾಪುರ : ಬಾಲಾಜಿ 4 ಆಟ, ವಿಜಿಪುರ : ಗೌರಿಶಂಕರ 4 ಆಟ, ನೆಲಮಂಗಲ : ರೂಪ 4 ಆಟ, ಜಿಗಣಿ : ನಂದೀಶ್ವರ 4 ಆಟ, ಆನೇಕಲ್ : ಅನ್ನಪೂರ್ಣೇಶ್ವರಿ 4 ಆಟ, ಕುಣಿಗಲ್ : ಆಕಾಶ್ 4 ಆಟ, ತುರುವೇಕೆರೆ : ಕೃಷ್ಣ 4 ಆಟ, ಮಧುಗಿರಿ : ಶಾಂತಲಾ 4 ಆಟ, ಬಂಗಾರಪೇಟೆ : ಬಾಲಚಂದರ್ 4 ಆಟ, ಮಾಲೂರು : ಬಾಲಾಜಿ 4 ಆಟ, ಗೌರಿಬಿದನೂರು : ಅಭಿಲಾಷ 4 ಆಟ
ಪಾವಗಡ : ಮಾರುತಿ 4 ಆಟ, ಬಾಗೇಪಲ್ಲಿ : ವೆಂಕಟೇಶ್ವರ 4 ಆಟ, ಹುಲಿಯಾರ : ಬಾಲಾಜಿ 4 ಆಟ, ಶಿಡ್ಲಘಟ್ಟ : ವೆಂಕಟೇಶ್ವರ 4 ಆಟ, ಮೈಸೂರು : ಉಡ್‌ಲ್ಯಾಂಡ್ಸ್ 4 ಆಟ, ಪದ್ಮ 4 ಆಟ, DRC CINEMAS, PVR (Garuda) (Forum), sathyam, INOX, MYSURU VISION CINEMAS, ಮೈಸೂರು : ಮಹದೇಶ್ವರ 4 ಆಟ, ಬಾಲಾಜಿ, ಡಿಲಕ್ಸ್ 4 ಆಟ, ಮಂಡ್ಯ : ಗುರುಶ್ರೀ 4 ಆಟ, ಸಂಜಯ 4 ಆಟ, ಹಾಸನ : ಎಸ್.ಬಿ.ಜಿ 4 ಆಟ, ಚಾಮರಾಜನಗರ : ಬಸವೇಶ್ವರ 4 ಆಟ, ಗುರುರಾಘವೇಂದ್ರ 4 ಆಟ, ಚನ್ನರಾಯಪಟ್ಟಣ : ಗಾಯತ್ರಿ 4 ಆಟ, ಮಳವಳ್ಳಿ : ಮಹಾಲಕ್ಷ್ಮೀ 4 ಆಟ, ಮದ್ದೂರು : ಸಂಜಯ 4 ಆಟ, ಗುಂಡ್ಲುಪೇಟೆ : ಸೂರ್ಯ 4 ಆಟ, ಕೊಳ್ಳೇಗಾಲ : ಕೃಷ್ಣ 4 ಆಟ, ಕೆ.ಆರ್.ಪೇಟೆ : ಬಸವೇಶ್ವರ 4 ಆಟ, ಹೊಳೆನರಸೀಪುರ : ಚೆನ್ನಾಂಬಿಕಾ 4 ಆಟ, ಪಿರಿಯಾಪಟ್ಟಣ : ಮಹದೇಶ್ವರ 4 ಆಟ, ಹುಣಸೂರು : ಲೀಲಾ 4 ಆಟ, ಟಿ.ನರಸೀಪುರ : ವಿಜಯ್‌ಭಗವಾನ್ 4 ಆಟ, ಬನ್ನೂರು : ಸೋಮೇಶ್ವರ 4 ಆಟ, ನಾಗಮಂಗಲ : ವೆಂಕಟೇಶ್ವರ 4 ಆಟ, ಪಾಂಡವಪುರ : ಲಕ್ಷ್ಮೀ 4 ಆಟ, ಅರಸೀಕೆರೆ : ರತ್ನ 4 ಆಟ
ಕೆ.ಎಂ.ದೊಡ್ಡಿ : ಮಾರುತಿ 4 ಆಟ, ಬೆಳ್ಳೂರು ಕ್ರಾಸ್ : ಮಾರುತಿ 4 ಆಟ, ಸಾಲಿಗ್ರಾಮ : ಪದ್ಮಾಂಬ 4 ಆಟ, ಹುಲ್ಲಹಳ್ಳಿ : ವಿನಾಯಕ 4 ಆಟ, ಬಾಬುರಾಯನಕೊಪ್ಪಲು : ಭಾರತಿ 4 ಆಟ, ಸಕಲೇಶಪುರ : ಜೈಮಾರುತಿ 4 ಆಟ, ಅರ್‌ಕೆರೆ : ಮಂಜುನಾಥ 4 ಆಟ, ಕುಶಾಲನಗರ : ಕೂರ್ಗ್ ಸಿನಿಮಾಸ್ 4 ಆಟ, ಶುಂಟಿಕೊಪ್ಪ : ಗಣೇಶ್ 4 ಆಟ, ಸಿದ್ದಾಪುರ : ಉಡ್‌ಲ್ಯಾಂಡ್ಸ್ 4 ಆಟ, ಗನ್‌ಜಾಮ್ : ಶ್ರೀದೇವಿ 4 ಆಟ, ಸಾತನೂರು : ವೆಂಕಟೇಶ್ವರ 4 ಆಟ, ಹಲಗೂರು : ರವಿ 4 ಆಟ, ಸರಗೂರು : ಶಂಕರ್ 4 ಆಟ, ಕೇರಳಾಪುರ : ಮಂಜುನಾಥ 4 ಆಟ, ಬಾಣಾವರ : ವೆಂಕಟೇಶ್ವರ 4 ಆಟ, ಕೆರಗೋಡು : ಅಂಜಲಿ 4 ಆಟ, ಶಿವಮೊಗ್ಗ : ಮಲ್ಲಿಕಾರ್ಜುನ 4 ಆಟ, Bharath Cinemas 4 ಆಟ, ಚಿಕ್ಕಮಗಳೂರು : ಮಿಲನ್ 4 ಆಟ, ಭದ್ರಾವತಿ : ವೆಂಕಟೇಶ್ವರ 4 ಆಟ, ಕಡೂರು : ವಿಜಯಲಕ್ಷ್ಮೀ 4 ಆಟ, ತರಿಕೆರೆ : ವಿನಾಯಕ 4 ಆಟ, ಶಿಕಾರಿಪುರ : ಮಾಲತೇಶ್ 4 ಆಟ, ತೀರ್ಥಹಳ್ಳಿ : ವಿನಾಯಕ 4 ಆಟ, ಹೊನ್ನಾಳಿ : ಶಾಂತಾ 4 ಆಟ, ಸಾಗರ : ಶ್ರೀ 4 ಆಟ, ಹನವೇರಿ : ಶ್ರೀದೇವಿ 4 ಆಟ, ನ್ಯಾಮತಿ : ಶ್ರೀಶೈಲ 4 ಆಟ
ಸಂತೆಬೆನ್ನೂರು : ವೆಂಕಟೇಶ್ವರ 4 ಆಟ, ಆನವಟ್ಟಿ : ರೇಣುಕಾ 4 ಆಟ, ದಾವಣಗೆರೆ : ಗೀತಾಂಜಲಿ 4 ಆಟ, ಪುಷ್ಪಾಂಜಲಿ 4 ಆಟ, ವಸಂತ 4 ಆಟ, ಚಿತ್ರದುರ್ಗ : ಬಸವೇಶ್ವರ 4 ಆಟ, ಪ್ರಸನ್ನ 4 ಆಟ, ಬಳ್ಳಾರಿ : ನಟರಾಜ ಕಾಂಪ್ಲೆಕ್ಸ್ 4 ಆಟ, ರಾಧಿಕಾ 4 ಆಟ, ಹೊಸಪೇಟೆ : ಮೀರಾಲಂ 4 ಆಟ, ಬಾಲಾ 4 ಆಟ, ಹಿರಿಯೂರು : ನಂಜುಂಡೇಶ್ವರ 4 ಆಟ, ಹಗರಿಬೊಮ್ಮನಹಳ್ಳಿ : ವಿಷ್ಣು 4 ಆಟ, ಚಳ್ಳಕೆರೆ : ರಾಮಕೃಷ್ಣ 4 ಆಟ, ಜಗಳೂರು : ಭರತ್ 4 ಆಟ, ಸಂಡೂರು : ಶ್ರೀನಿವಾಸ 4 ಆಟ, ಕಂಪ್ಲಿ : ಭಾರತ್ 4 ಆಟ, ಕೂಡ್ಲಿಗಿ : ಬಸವೇಶ್ವರ 4 ಆಟ, ಭರಮಸಾಗರ : ವಿನಾಯಕ 4 ಆಟ, ಶಿರಗುಪ್ಪ : ರಾಮಕೃಷ್ಣ 4 ಆಟ, ಮಳೆಬೆನ್ನೂರು : ಜ್ಯೋತಿ 4 ಆಟ, ತೋರಣಗಲ್ಲು : ವಿಜಯಲಕ್ಷ್ಮೀ 4 ಆಟ, ಮೊಣಕಾಲ್ಮೂರು : ಭಾಗ್ಯಲಕ್ಷ್ಮೀ 4 ಆಟ, ಚಿಕ್ಕಜಾಜೂರು : ಮಾರುತಿ 4 ಆಟ, ಹುಬ್ಬಳ್ಳಿ : ಅಪ್ಸರಾ 4 ಆಟ, ಸುಧಾ 4 ಆಟ, PVR, Cinépolis, ಧಾರವಾಡ : ಸಂಗಂ 4 ಆಟ, ಬೆಳಗಾವಿ : ಚಿತ್ರ 4 ಆಟ, ನರ್ತಕಿ 4 ಆಟ, INOX, CARNIVAL CINEMAS KAPEEL BELGAUM., MIRAJ CINEMAS
ವಿಜಾಪುರ : ಲಕ್ಷ್ಮೀ 4 ಆಟ, ಅಮೀರ್ 4 ಆಟ, ಗದಗ : ಶ್ರೀವೆಂಕಟೇಶ 4 ಆಟ, ಮಹಾಲಕ್ಷ್ಮೀ 4 ಆಟ, ಗೋಕಾಕ್ : ಲಕ್ಷ್ಮೀ 4 ಆಟ, ರಾಣೆಬೆನ್ನೂರು : ಶಕ್ತಿ 4 ಆಟ, ಶಂಕರ್ 4 ಆಟ, ಹಾವೇರಿ : ಮಾಧವಿ 4 ಆಟ, ಬಾಗಲಕೋಟೆ : ಶಕ್ತಿ 4 ಆಟ, ಚಂದನ್ 4 ಆಟ, ಶಿರಸಿ : ನಟರಾಜ 4 ಆಟ, ಮುಧೋಳ್ : ಸುಭಾಷಿಣಿ 4 ಆಟ, ಸೂರ್ಯವಂಶಿ ಮಲ್ಟಿಪ್ಲೆಕ್ಸ್ 4 ಆಟ, ಬೈಲಹೊಂಗಲ : ಸಂಗಂ 4 ಆಟ, ಜಮಖಂಡಿ : ಸುವರ್ಣ 4 ಆಟ, ಬನಹಟ್ಟಿ : ವೈಭವ್ 4 ಆಟ, ಲಕ್ಷ್ಮೇಶ್ವರ : ರವಿ 4 ಆಟ, ಬಾದಾಮಿ : ಮಾಕುಟೇಶ್ವರ 4 ಆಟ, ರಾಮದುರ್ಗ : ಶ್ರೀನಿವಾಸ 4 ಆಟ, ಇಳಕಲ್ : ಶ್ರೀನಿವಾಸ 4 ಆಟ, ಸಿಂಧಗಿ : ವಿನಾಯಕ 4 ಆಟ, ಆನಂದ್ 4 ಆಟ, ಕಾರವಾರ : ಅರ್ಜುನ್ 4 ಆಟ, ಭಟ್ಕಳ : ಪುಷ್ಪಾಂಜಲಿ 4 ಆಟ, ತಾಳಿಕೋಟೆ : ಅಮೀರ್ 4 ಆಟ, ಅಥಣಿ : ದುರ್ಗಾಲಕ್ಷ್ಮೀ 4 ಆಟ, ಬ್ಯಾಡಗಿ : ಪಾಂಡುರಂಗ 4 ಆಟ, ಇಂಡಿ : ಮಹಾವೀರ್ 4 ಆಟ, ಗಜೇಂದ್ರಗಡ : ಅಲಂಕಾರ್ 4 ಆಟ, ಅಂಕಲಿ : ಮಯೂರ 4 ಆಟ, ಹಾರೋಗೇರೆ : ಚಂದ್ರಮಾ 4 ಆಟ, ಸಂಕೇಶ್ವರ : ಸಾಯಿನಾಥ 4 ಆಟ, ಶಿಗ್ಗಾಂ : ರಾಜಶ್ರೀ 4 ಆಟ
ಮಹಾಲಿಂಗಪುರ : ಅಷ್ಟಗಿ 4 ಆಟ, ಹಳಿಯಾಳ : ಬಸವರಾಜ್ 4 ಆಟ, ಮೂಡಲಗಿ : ವೆಂಕಟೇಶ 4 ಆಟ, ಗುಳೇದಗುಡ್ಡ : ಅಂಕಿತಾ 4 ಆಟ, ಬೀಳಗಿ : ಶ್ರೀನಿವಾಸ 4 ಆಟ, ಚಿಕ್ಕಕೆರೂರು : ಪವನ್ 4 ಆಟ, ದಾಂಡೇಲಿ : ಶ್ರೀಹರಿ 4 ಆಟ, ಕಲಬುರ್ಗಿ : SHETTY'S MULTIPLEX, MIRAJ CINEMAS, ಗಂಗಾವತಿ : ಶಿವೆ 4 ಆಟ, ಅಮರ್ 4 ಆಟ, ಬೀದರ್ : ಸಪ್ನ 4 ಆಟ, ರಾಯಚೂರು : ಎಸ್.ಎನ್.ಟಿ 4 ಆಟ, MIRAJ CINEMAS, ಕೊಪ್ಪಳ : ಲಕ್ಷ್ಮೀ 4 ಆಟ, ಶಿವೆ 4 ಆಟ, ಶಹಾಪುರ : ಜಯಶ್ರೀ 4 ಆಟ, ಭವಾನಿ 4 ಆಟ, ಯಾದಗಿರಿ : ಭಾಗ್ಯಲಕ್ಷ್ಮೀ 4 ಆಟ, ಮಾನ್ವಿ : ಅಪರ್ಣ 4 ಆಟ, ಸಿಂಧನೂರು : ಮಂಜುನಾಥ 4 ಆಟ, ದೇವದುರ್ಗ : ಭರತ್ 4 ಆಟ, ಕುಷ್ಟಗಿ : ಬಸವರಾಜ್ 4 ಆಟ, ಮಸ್ಕಿ : ವಿಜಯಾ 4 ಆಟ, ಬಾಲ್ಕಿ : ಸಂಗಮೇಶ್ವರ 4 ಆಟ, ಕಾರಟಗಿ : ಪದ್ಮಾವತಿ 4 ಆಟ, ಕನಕಗಿರಿ : ನಂದಿ 4 ಆಟ, ಶಿರವಾರ : ಶಿವಮಾತಾ 4 ಆಟ, ಮಂಗಳೂರು : SP CINEMAS since 1976 4 ಆಟ, BIG Cinemas, PVR, Cinépolis, ಮಣಿಪಾಲ್ : INOX, BIG Cinemas, ಉಡುಪಿ : ಅಲಂಕಾರ್ 4 ಆಟ, ಕುಂದಾಪುರ : ವಿನಾಯಕ 4 ಆಟ, BIG Cinemas, ಬೈಂದೂರು : ಶಂಕರ್ 4 ಆಟ ಹಾಗೂ ರಾಜ್ಯಾದ್ಯಂತ

ನಿನಾದ್ ರವಿ

ಟೆನಿಸ್: ಎರಡನೇ ಸುತ್ತಿಗೆ ನಿನಾದ್

ಬೆಂಗಳೂರು: ಕರ್ನಾಟಕದ ನಿನಾದ್ ರವಿ ಅವರು ಮಧ್ಯಪ್ರದೇಶದ ಇಂದೋರ್‌ನಲ್ಲಿ ನಡೆಯುತ್ತಿರುವ ಎಐಟಿಎ 18 ವರ್ಷದೊಳಗಿನವರ ರಾಷ್ಟ್ರೀಯ ಜೂನಿಯರ್ ಟೆನಿಸ್ ಟೂರ್ನಿಯಲ್ಲಿ ಎರಡನೇ ಸುತ್ತು ಪ್ರವೇಶಿಸಿದ್ದಾರೆ.

ಬೆಂಗಳೂರಿನ ಸುರಾನ ಕಾಲೇಜಿನ ವಿದ್ಯಾರ್ಥಿ ನಿನಾದ್, ಮಂಗಳವಾರ ನಡೆದ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ 6-3,6-3ರಿಂದ ಛತ್ತೀಸಗಡದ ಆರ್ಯನ್ ಠಾಕೂರ್ ಅವರನ್ನು ಸೋಲಿಸಿದರು. ಎರಡನೇ ಸುತ್ತಿನ ಪಂದ್ಯದಲ್ಲಿ ನಿನಾದ್ ಅವರಿಗೆ ಹರಿಯಾಣದ ಆದಿತ್ಯ ನಂದಾಲ್ ಸವಾಲು ಎದುರಾಗಿದೆ.

ಬಾಕ್ಸರ್‌ಗಳಿಗೆ ಕೋವಿಡ್

ನವದೆಹಲಿ (ಪಿಟಿಐ): ಟರ್ಕಿಯ ಬೊಸ್ಪೊರಸ್ ಟೂರ್ನಿಯಲ್ಲಿ ಪಾಲ್ಗೊಂಡಿದ್ದ ಭಾರತದ ಮೂವರು ಬಾಕ್ಸರ್‌ಗಳು ಸೇರಿ ಎಂಟು ಮಂದಿಗೆ ಕೋವಿಡ್–19 ಖಚಿತಪಟ್ಟಿದೆ. ಅವರೆಲ್ಲರೂ ಸದ್ಯ ಇಸ್ತಾನ್‌ಬುಲ್‌ನಲ್ಲಿ ಕ್ವಾರಂಟೈನ್‌ನಲ್ಲಿದ್ದಾರೆ.

ಕಾಮನ್‌ವೆಲ್ತ್ ಗೇಮ್ಸ್ ಬೆಳ್ಳಿಪದಕ ವಿಜೇತ ಗೌರವ್ ಸೋಳಂಕಿ (57 ಕೆಜಿ ವಿಭಾಗ), ಪ್ರಯಾಗ್ ಚೌಹಾನ್ (75 ಕೆಜಿ) ಹಾಗೂ ಬ್ರಿಜೇಶ್ ಯಾದವ್ ಅವರಿಗೆ ಸೋಂಕು ದೃಢಪಟ್ಟಿದೆ. ತರಬೇತುದಾರರಾದ ಧರ್ಮೇಂದ್ರ ಯಾದವ್, ಸಂತೋಷ್ ಬಿರ್ಮೋಳೆ, ಫಿಸಿಯೊಥೆರಪಿಸ್ಟ್‌ಗಳಾದ ಶಿಖಾ ಕೇಡಿಯಾ, ಉಮೇಶ್ ಮತ್ತು ವಿಡಿಯೊ ಅನಾಲಿಸ್ಟ್ ನಿತಿನ್ ಕುಮಾರ್ ಸೋಂಕಿತರಲ್ಲಿ ಸೇರಿದ್ದು ಪ್ರತ್ಯೇಕವಾಸದಲ್ಲಿದ್ದಾರೆ. ಬೊಸ್ಪೊರಸ್ ಟೂರ್ನಿ ಈಗಾಗಲೇ ಮುಕ್ತಾಯವಾಗಿದ್ದು, ಪುರುಷರ ವಿಭಾಗದಲ್ಲಿ ಸೋಳಂಕಿ ಒಬ್ಬರೇ ಕಂಚಿನ ಪದಕ ಗೆದ್ದುಕೊಂಡಿದ್ದಾರೆ. ನಿಖತ್ ಜರೀನ್ (51 ಕೆಜಿ) ಮಹಿಳಾ ವಿಭಾಗದಲ್ಲಿ ಕಂಚು ವಿಜೇತರಾಗಿದ್ದರು.

ಹರ್ಮನ್‌ಪ್ರೀತ್ ಕೌರ್‌ಗೆ ಸೋಂಕು

ಪಟಿಯಾಲ (ಪಿಟಿಐ): ಭಾರತ ಮಹಿಳಾ ಟಿ20 ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರಿಗೆ ಕೋವಿಡ್–19 ದೃಢಪಟ್ಟಿದೆ. ಸೋಂಕಿನ ಸೌಮ್ಯ ಲಕ್ಷಣಗಳು ಅವರಲ್ಲಿ ಕಂಡುಬಂದಿವೆ.

ಹರ್ಮನ್‌ಪ್ರೀತ್

ದಕ್ಷಿಣ ಆಫ್ರಿಕಾ ತಂಡದ ವಿರುದ್ಧ ಇತ್ತೀಚೆಗೆ ಕೊನೆಗೊಂಡ ಸರಣಿಯ ಐದನೇ ಏಕದಿನ ಪಂದ್ಯದಲ್ಲಿ ಗಾಯಗೊಂಡ ಹಿನ್ನೆಲೆಯಲ್ಲಿ, ಟಿ20 ಸರಣಿಯಲ್ಲಿ ಅವರು ಕಣಕ್ಕಿಳಿದಿರಲಿಲ್ಲ. ಸೋಮವಾರ ಜ್ವರದ ಲಕ್ಷಣಗಳು ಕಂಡುಬಂದ ಕಾರಣ ಪರೀಕ್ಷೆ ಮಾಡಿಸಿಕೊಂಡಾಗ ಕೋವಿಡ್ ಇರುವುದು ದೃಢಪಟ್ಟಿದೆ.

ರಾಷ್ಟ್ರೀಯ ಆಹ್ವಾನಿತ ಈಜು ಕೂಟದಲ್ಲಿ ಶ್ರೀಹರಿ, ಸುವನಾಗೆ ಮೊದಲ ಸ್ಥಾನ

ಧಿನಿಧಿ, ಅಕ್ಷಜ್ ದಾಖಲೆಗಳ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾಲ್ಫಿನ್ ಈಜು ಕೇಂದ್ರದ ಧಿನಿಧಿ ದೇಶಿಂಗು, ಬಾಲಕಿಯರ ವಿಭಾಗದಲ್ಲಿ ಆರು ಮತ್ತು ಅಕ್ಷಜ್ ಠಾಕೂರಿಯಾ ಬಾಲಕರ ವಿಭಾಗದಲ್ಲಿ ಐದು ಕೂಟ ದಾಖಲೆ ಬರೆದು ರಾಜ್ಯ ಸಬ್ ಜೂನಿಯರ್ ಈಜುಕೂಟದಲ್ಲಿ ಮಿಂಚಿದರು.

ನಗರದ ಪಡುಕೋಣೆ–ದ್ರಾವಿಡ್ ಸೆಂಟರ್ ಆಫ್ ಸ್ಪೋರ್ಟ್ಸ್ ಎಕ್ಸಲೆನ್ಸ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಆಹ್ವಾನಿತ ಕೂಟದ ಎರಡನೇ ದಿನ ನೆಟ್ಟಕಲ್ಲಪ್ಪ ಈಜು ಕೇಂದ್ರದ ಹಿತಶ್ರೀ ಎನ್. ಕಂಚಿನ ಪದಕ ಗೆದ್ದುಕೊಂಡರು.

ಬಾಲಕಿಯರ 4ಎ ಗುಂಪಿನ 50 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಅವರು ಮೂರನೇ ಸ್ಥಾನ ಗಳಿಸಿದರು. ಕೂಟದ ಎರಡನೇ ದಿನ ಡಾಲ್ಫಿನ್ ಕೇಂದ್ರದ ಈಜುಪಟುಗಳು ಪಾರಮ್ಯ ಮೆರೆದರು.

ಫಲಿತಾಂಶಗಳು: ರಾಜ್ಯ ಸಬ್ ಜೂನಿಯರ್ ಕೂಟ: ಬಾಲಕರ 4ಎ ಗುಂಪು 100 ಮೀ. ಫ್ರೀಸ್ಟೈಲ್: ಅಕ್ಷಜ್‌ಠಾಕೂರಿಯಾ (ಡಾಲ್ಫಿನ್ ಈಜು ಕೇಂದ್ರ)–1 ಕಾಲ: 1:04.43 ನಿ. (ಕೂಟ ದಾಖಲೆ), ದ್ರುಪದ್ ರಾಮಕೃಷ್ಣ (ಪೂಜಾ ಈಜು ಕೇಂದ್ರ)–2, ನೈತಿಕ್ ಎನ್.(ಡಾಲ್ಫಿನ್)–3; 50 ಮೀ. ಬ್ಯಾಕ್‌ಸ್ಟ್ರೋಕ್: ಅಕ್ಷಜ್ ಠಾಕೂರಿಯಾ (ಡಾಲ್ಫಿನ್)–1 ಕಾಲ: 34.83 ಸೆ.(ಕೂಟ ದಾಖಲೆ), ಆ್ಯಡ್ರಿಯನ್ ನೀಲ್ ಸೆರಾವೊ (ಜಿಎಫ್‌ಆರ್‌ಎವೈ)–2, ನೈತಿಕ್ ಎನ್(ಡಾಲ್ಫಿನ್)–3; 50 ಮೀ. ಬ್ರೆಸ್ಟ್ ಸ್ಟ್ರೋಕ್; ಅಕ್ಷಜ್ ಠಾಕೂರಿಯಾ (ಡಾಲ್ಫಿನ್)–1 ಕಾಲ: 40.60 ಸೆ. ಯಶ್ ಎಚ್. ಪಾಲ್(ಬಸವನಗುಡಿ ಈಜು ಕೇಂದ್ರ)–2, ನೈತಿಕ್ ಎನ್. (ಡಾಲ್ಫಿನ್)–3; 50 ಮೀ. ಬಟರ್‌ಫ್ಲೈ: ಅಕ್ಷಜ್ ಠಾಕೂರಿಯಾ (ಡಾಲ್ಫಿನ್)–1, ಕಾಲ: 31.39 ಸೆ. (ಕೂಟ ದಾಖಲೆ), ನೈತಿಕ್ ಎನ್(ಡಾಲ್ಫಿನ್)–2, ಜಾಡೆನ್ ಫಿಲಿಪ್ ಥಾಮಸ್(ಮತ್ಸ್ಯ ಇಂಕ್)–3; 200 ಮೀ. ಮೆಡ್ಲೆ: ಅಕ್ಷಜ್ ಠಾಕೂರಿಯಾ (ಡಾಲ್ಫಿನ್)–1, ಕಾಲ: 2:41.51 (ಕೂಟ ದಾಖಲೆ), ದ್ರುಪದ್ ರಾಮಕೃಷ್ಣ (ಪೂಜಾ)–2, ನೈತಿಕ್ ಎನ್. (ಡಾಲ್ಫಿನ್)–3; 50 ಮೀ. ಫ್ರೀಸ್ಟೈಲ್: ಅಕ್ಷಜ್ ಠಾಕೂರಿಯಾ (ಡಾಲ್ಫಿನ್)–1 ಕಾಲ:29.76 ಸೆ. (ಕೂಟ ದಾಖಲೆ), ರಕ್ಷನ್ ಪಿ. (ಡಾಲ್ಫಿನ್)–2, ದ್ರುಪದ್ ರಾಮಕೃಷ್ಣ–3. **ಬಾಲಕಿಯರ ಗುಂಪು4 ಎ: 100 ಮೀ ಫ್ರೀಸ್ಟೈಲ್:** ಧಿನಿಧಿ ದೇಸಿಂಗು (ಡಾಲ್ಫಿನ್)–1. ಕಾಲ: 1:3.3 ನಿ (ಕೂಟ ದಾಖಲೆ), ತನಿಷಿ ಗುಪ್ತಾ (ನಿಶಾ ಮಿಲೆಟ್ಸ್ ಈಜು ಅಕಾಡೆಮಿ) –2, ನೈಶಾ (ಪೂಜಾ)–3; 50 ಮೀ ಬ್ಯಾಕ್‌ಸ್ಟ್ರೋಕ್: ಧಿನಿಧಿ ದೇಸಿಂಗು (ಡಾಲ್ಫಿನ್)–1. ಕಾಲ: 34.07 ಸೆ (ಕೂಟ ದಾಖಲೆ), ನೈಶಾ (ಪೂಜಾ)–2, ತನಿಷಿ (ನಿಶಾ ಮಿಲೆಟ್ಸ್)–3; 50 ಮೀ ಬ್ರೆಸ್ಟ್ ಸ್ಟ್ರೋಕ್: ಧಿನಿಧಿ ದೇಸಿಂಗು (ಡಾಲ್ಫಿನ್)–1. ಕಾಲ: 39.23 ಸೆ (ಕೂಟ ದಾಖಲೆ), ಪೌಲಿನ್ ಡಯಾಸ್ (ಜೈ ಹಿಂದ್ ಕ್ಲಬ್ ಮಂಗಳೂರು)–2, ತಿಸ್ಯಾ ಸೋನಾರ್ (ವಿಜಯನಗರ ಈಜು ಕೇಂದ್ರ)–3; 50 ಮೀ ಬಟರ್‌ಫ್ಲೈ: ಧಿನಿಧಿ ದೇಸಿಂಗು (ಡಾಲ್ಫಿನ್)–1. ಕಾಲ: 31.1 ಸೆ (ಕೂಟ ದಾಖಲೆ), ತನಿಶಿ ಗುಪ್ತಾ (ನಿಶಾ ಮಿಲೆಟ್ಸ್)–2, ಹಿತಶ್ರೀ ಎನ್ (ನೆಟ್ಟಕಲ್ಲಪ್ಪ ಈಜು ಕೇಂದ್ರ)–3; 200 ಮೀ ಮೆಡ್ಲೆ: ಧಿನಿಧಿ ದೇಸಿಂಗು (ಡಾಲ್ಫಿನ್)–1. ಕಾಲ: 2:34.92 ನಿ (ಕೂಟ ದಾಖಲೆ), ನೈಶಾ (ಪೂಜಾ)–2, ತನಿಶಿ ಗುಪ್ತಾ (ನಿಶಾ ಮಿಲೆಟ್ಸ್)–3; 50 ಮೀ ಫ್ರೀಸ್ಟೈಲ್: ಧಿನಿಧಿ ದೇಸಿಂಗು (ಡಾಲ್ಫಿನ್)–1. ಕಾಲ: 28.89 ಸೆ (ಕೂಟ ದಾಖಲೆ), ತನಿಶಿ ಗುಪ್ತಾ (ನಿಶಾ ಮಿಲೆಟ್ಸ್)–2, ತಿಸ್ಯಾ ಸೋನಾರ್ (ವಿಜಯನಗರ)–3.

ಆಹ್ವಾನಿತ ಕೂಟ (ಕರ್ನಾಟಕದ ಫಲಿತಾಂಶಗಳು ಮಾತ್ರ): ಪುರುಷರ 800 ಮೀ ಫ್ರೀಸ್ಟೈಲ್: ಅನೀಶ್ ಎಸ್. ಗೌಡ (ಪೂಜಾ)–1. ಕಾಲ: 8.39.47 ನಿ; 50 ಮೀ ಬ್ರೆಸ್ಟ್ ಸ್ಟ್ರೋಕ್: ಧನುಷ್ ಎಸ್ (ಡಾಲ್ಫಿನ್)–1. ಕಾಲ: 29.31 ಸೆ, ಜಯಪ್ರಕಾಶ ಏಕಬೋಟೆ (ಡಾಲ್ಫಿನ್)–3; 200 ಮೀ ಬಟರ್‌ಫ್ಲೈ: ಉತ್ಕರ್ಷ್ ಎಸ್.ಪಾಟೀಲ (ಬಸವನಗುಡಿ)–3; 50 ಮೀ ಬ್ಯಾಕ್‌ಸ್ಟ್ರೋಕ್: ಶ್ರೀಹರಿ ನಟರಾಜ್ (ಡಾಲ್ಫಿನ್)–1. ಕಾಲ: 25.46 ಸೆ; 400 ಮೀ ಫ್ರೈಸ್ಟೈಲ್: ಅನೀಶ್ ಎಸ್ ಗೌಡ (ಪೂಜಾ)–2. **ಮಹಿಳೆಯರ 800 ಮೀ ಫ್ರೀಸ್ಟೈಲ್:** ಶಿರೀನ್ (ಪೂಜಾ)–2; 50 ಮೀ ಬ್ರೆಸ್ಟ್‌ಸ್ಟ್ರೋಕ್: ಅನ್ವಿತಾ ಎ ಗೌಡ (ಡಾಲ್ಫಿನ್)–1. ಕಾಲ: 35.56 ಸೆ; 200 ಮೀ ಬಟರ್‌ಫ್ಲೈ: ಸೃಷ್ಟಿ ನಾಗ್ (ಡಾಲ್ಫಿನ್)–3; 50 ಮೀ ಬ್ಯಾಕ್‌ಸ್ಟ್ರೋಕ್: ಸುವನಾ ಸಿ.ಭಾಸ್ಕರ್ (ಡಾಲ್ಫಿನ್)–1. ಕಾಲ: 30.83 ಸೆ; 400 ಮೀ ಫ್ರೀಸ್ಟೈಲ್: ಶಿರೀನ್ (ಪೂಜಾ)–3.

ಅಕ್ಷಜ್ ಠಾಕೂರಿಯಾ (ಎಡ) ಮತ್ತು ಧಿನಿಧಿ ದೇಸಿಂಗು

ಅಗ್ರಸ್ಥಾನದಲ್ಲಿ ಶೆಫಾಲಿ ವರ್ಮಾ

ದುಬೈ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ಆರಂಭಿಕ ಆಟಗಾರ್ತಿ ಶೆಫಾಲಿ ವರ್ಮಾ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟಿ20 ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಭದ್ರಪಡಿಸಿಕೊಂಡಿದ್ದಾರೆ. ಅವರ ಖಾತೆಯಲ್ಲಿ ಒಟ್ಟು 776 ರೇಟಿಂಗ್ ಪಾಯಿಂಟ್ಸ್ ಇವೆ. ಆಸ್ಟ್ರೇಲಿಯಾದ ಬೆತ್ ಮೂನಿ ಅವರಿಗಿಂತ 35 ಪಾಯಿಂಟ್ಸ್ ಮುನ್ನಡೆಯಲ್ಲಿದ್ದಾರೆ. ಸ್ಮೃತಿ ಮಂದಾನ ಅವರೂ ಏಳರಿಂದ ಆರನೇ ಸ್ಥಾನಕ್ಕೇರಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ಎಡಗೈ ಸ್ಪಿನ್ನರ್, ವಿಜಯಪುರದ ರಾಜೇಶ್ವರಿ ಗಾಯಕವಾಡ್ 13ನೇ ಸ್ಥಾನಕ್ಕೇರಿದ್ದಾರೆ.

ಡೋಪಿಂಗ್: ಅರುಣ್ ಸಜನಾನಿ ನಿಟ್ಟುಸಿರು

ಬೆಂಗಳೂರು: ಡೋಪಿಂಗ್ ಪ್ರಕರಣದಲ್ಲಿ ಸಿಲುಕಿದ್ದ, ಕ್ವೀನ್ ಲತೀಫಾ ಕುದುರೆಯ ಸಹ ಮಾಲೀಕ ಅರುಣ್ ಸಜನಾನಿ ಅವರ ಮೇಲಿನ ಆರೋಪಗಳನ್ನು ನ್ಯಾಯಾಲಯ ಅಲ್ಲಗಳೆದಿದ್ದು ಅರುಣ್ ನಿಟ್ಟುಸಿರು ಬಿಡುವಂತಾಗಿದೆ. 2017ರಲ್ಲಿ ಮಾಡಿರುವ ಆರೋಪಗಳು ನಿರಾಧಾರವಾದದ್ದು ಎಂದು ನ್ಯಾಯಾಲಯ ಹೇಳಿದೆ. ಕರ್ನಾಟಕ ರೇಸ್ ಕುದುರೆಗಳ ಮಾಲೀಕರ ಸಂಘದ ಸದಸ್ಯ ಎಚ್. ಎಸ್.ಚಂದ್ರೇಗೌಡ ಬೆಂಗಳೂರು ಟರ್ಫ್ ಕ್ಲಬ್‌ನ (ಬಿಟಿಸಿ) ಇಬ್ಬರು ಪದಾಧಿಕಾರಿಗಳು, ಕ್ವೀನ್ ಲತೀಫಾದ ಇಬ್ಬರು ಮಾಲೀಕರು ಮತ್ತು ಅದರ ಇಬ್ಬರು ತರಬೇತುದಾರರ ವಿರುದ್ಧ ಕೇಸ್ ದಾಖಲಿಸಿದ್ದರು.

ಸ್ಯೂಯೆಜ್ ಕಾಲುವೆಯಲ್ಲಿ ಸಿಲುಕಿದ್ದ ದೈತ್ಯ ಹಡಗು ಕೊನೆಗೂ ಮುಕ್ತ!

ಟೆನಿಸ್: ಕ್ವಾರ್ಟರ್‌ಫೈನಲ್‌ಗೆ ಅನ್ವಿ

ಬೆಂಗಳೂರು: ಹರ್ಷಿಣಿ ಎನ್. ಅವರಿಗೆ ಸೋಲುಣಿಸಿದ ಅನ್ವಿ ಪುನಗಂಟಿ ಅವರು ಕೆಎಸ್‌ಎಲ್‌ಟಿಎ–ಎಐಟಿಎ 16 ವರ್ಷದೊಳಗಿನವರ ಟ್ಯಾಲೆಂಟ್ ಸಿರೀಸ್ ಟೆನಿಸ್ ಟೂರ್ನಿಯ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟರು.

ಮಂಗಳವಾರ ಇಲ್ಲಿ ನಡೆದ ಬಾಲಕಿಯರ ವಿಭಾಗದ ಪ್ರೀಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಅನ್ವಿ 6–2, 7–5ರಿಂದ ಹರ್ಷಿಣಿ ಅವರನ್ನು ಮಣಿಸಿದರು.

ಕಳೆದ ವಾರ 14 ವರ್ಷದೊಳಗಿನವರ ಟೂರ್ನಿಯ ಫೈನಲ್‌ನಲ್ಲಿ ಹರ್ಷಿಣಿ ಎದುರು ಅನುಭವಿಸಿದ್ದ ಸೋಲಿಗೆ ಅನ್ವಿ ಅವರು ಇಲ್ಲಿ ಮುಯ್ಯಿ ತೀರಿಸಿಕೊಂಡರು.

ಬಾಲಕರ ವಿಭಾಗದಲ್ಲಿ ಅಗ್ರಶ್ರೇಯಾಂಕದ ಜೇಸನ್ ಮೈಕೆಲ್ ಡೇವಿಡ್ ಹಾಗೂ ಬಾಲಕಿಯರ ವಿಭಾಗದಲ್ಲಿ ಗಗನಾ ಮೋಹನ್ ಕುಮಾರ್ ಕೂಡ ಎಂಟರ ಘಟ್ಟ ತಲುಪಿದರು. ಜೇಸನ್ ಡೇವಿಡ್ 6–0, 6–4ರಿಂದ ಪವನ್ ಗಣೇಶ್ ಎದುರು, ಗಗನಾ 6–2, 6–3ರಿಂದ ಧರಣಿ ಶ್ರೀನಿವಾಸ್ ವಿರುದ್ಧ ಗೆದ್ದರು.

ಬಾಲಕರ ವಿಭಾಗದ ಪ್ರೀಕ್ವಾರ್ಟರ್ ಹಂತದ ಇನ್ನುಳಿದ ಪಂದ್ಯಗಳಲ್ಲಿ ದೇವ್ ಶಿವಶಂಕರ್ 6-3, 4-6, 7-5ರಿಂದ ಆರಾಧ್ಯ ದ್ವಿವೇದಿ ಎದುರು, ಶ್ರೀನಿಕೇತನ್ ಕಣ್ಣನ್ 7–6, 6–2ರಿಂದ ವೈಭ ಕೃಷ್ಣ ಶ್ರೀರಾಮ್ ವಿರುದ್ಧ, ಸೂರಜ್ ವಿಜಯಕುಮಾರ್ 6–1, 6–3ರಿಂದ ವೆಂಕಟೇಶ್ ಬಾಲಸುಬ್ರಮಣ್ಯಂ ಎದುರು, ಶ್ರೀಕರ್ ದೋನಿ 6-4, 6-2ರಿಂದ ಧ್ರುವ ಅಡಿಗ ವಿರುದ್ಧ ಗೆದ್ದು ಬೀಗಿದರು.

ಬಾಲಕಿಯರ ಪ್ರೀಕ್ವಾರ್ಟರ್ ಹಣಾಹಣಿಗಳಲ್ಲಿ ಹೃದಯೇಶಿ ಪೈ 6–3, 7–5ರಿಂದ ಉಮಾಮ್ ಅಹಮ್ಮದ್ ಎದುರು, ಮಹಿಕಾ ಸುರವರಂ 7-5, 7-5ರಿಂದ ಸಮೃದ್ಧಿ ಪದ್ಮಿತಿ ವಿರುದ್ಧ, ವನ್ಯಾ ಶ್ರೀವಾತ್ಸವ್ 6-3, 4-6, 6-1ರಿಂದ ದಿಶಾ ಖಂಡೋಜಿ ಅವರನ್ನು ಸೋಲಿಸಿದರು.

ಭಾರತ ಹಾಕಿ ತಂಡಕ್ಕೆ ಮನ್‌ಪ್ರೀತ್ ನಾಯಕ

ನವದೆಹಲಿ (ಪಿಟಿಐ): ಮನ್‌ಪ್ರೀತ್ ಸಿಂಗ್ ಅವರು ಒಲಿಂಪಿಕ್ ಚಾಂಪಿಯನ್ ಅರ್ಜೆಂಟೀನಾ ಎದುರು ಮುಂದಿನ ತಿಂಗಳು ನಡೆಯಲಿರುವ ಎಫ್‌ಐಎಚ್ ಪ್ರೊ ಲೀಗ್ ಪಂದ್ಯಗಳಿಗೆ ಭಾರತ ತಂಡದ ನಾಯಕತ್ವ ವಹಿಸಲಿದ್ದಾರೆ. ವೈಯಕ್ತಿಕ ಕಾರಣ ನೀಡಿ ಇತ್ತೀಚೆಗೆ ಕೊನೆಗೊಂಡ ಯೂರೋಪ್ ಪ್ರವಾಸದಲ್ಲಿ ಅವರು ತಂಡದಲ್ಲಿ ಆಡಿರಲಿಲ್ಲ.

ಅರ್ಜೆಂಟೀನಾ ವಿರುದ್ಧ ಏಪ್ರಿಲ್ 11 ಹಾಗೂ 12ರಂದು ಬ್ಯೂನಸ್ ಐರಿಸ್‌ನಲ್ಲಿ ನಿಗದಿಯಾಗಿರುವ ಪಂದ್ಯಗಳಿಗೆ ಭಾರತದ 22 ಆಟಗಾರರ ತಂಡವನ್ನು ಮಂಗಳವಾರ ಪ್ರಕಟಿಸಲಾಗಿದೆ. ಏಪ್ರಿಲ್ 6, 7 ಬಳಿಕ 13 ಹಾಗೂ 14ರಂದು ಅಭ್ಯಾಸ ಪಂದ್ಯಗಳನ್ನು ಅರ್ಜೆಂಟೀನಾ ವಿರುದ್ಧ ಭಾರತ ಆಡಲಿದೆ. ಜುಲೈನಲ್ಲಿ ನಡೆಯಲಿರುವ ಟೋಕಿಯೊ ಒಲಿಂಪಿಕ್ಸ್‌ಗೆ ಪೂರ್ವಸಿದ್ಧತೆಯಾಗಿ ಈ ಪಂದ್ಯಗಳು ನಡೆಯಲಿವೆ.

ಪುನಶ್ಚೇತನ ಶಿಬಿರದಲ್ಲಿದ್ದ ಅನುಭವಿ ಡ್ರ್ಯಾಗ್‌ಫ್ಲಿಕ್ ತಜ್ಞ ರೂಪಿಂದರ್ ಪಾಲ್ ಸಿಂಗ್ ಹಾಗೂ ವರುಣ್ ಕುಮಾರ್ ಯೂರೋಪ್ ಪ್ರವಾಸಕ್ಕೆ ತೆರಳಿರಲಿಲ್ಲ. ಈಗ ಅವರೂ ತಂಡಕ್ಕೆ ಮರಳಿದ್ದಾರೆ.

ಯೂರೋಪ್ ಪ್ರವಾಸದಲ್ಲಿ ಆಡಿದ್ದ ಆಕಾಶದೀಪ್ ಸಿಂಗ್, ರಮಣದೀಪ್ ಸಿಂಗ್ ಹಾಗೂ ಸಿಮ್ರನ್ ಜೀತ್ ಸಿಂಗ್ ಅವರಿಗೆ ವಿಶ್ರಾಂತಿ ನೀಡಲಾಗಿದೆ.

‘ಟೋಕಿಯೊ ಒಲಿಂಪಿಕ್ಸ್ ಸಿದ್ಧತೆಯಲ್ಲಿರುವ ಆಟಗಾರರಿಗೆ ಅಂತರರಾಷ್ಟ್ರೀಯ ಮಟ್ಟದ ವೇದಿಕೆ ಕಲ್ಪಿಸಿಕೊಡುವ ದೃಷ್ಟಿಯಿಂದ 22 ಆಟಗಾರರ ಸಮತೋಲಿತ ತಂಡವನ್ನು ಅರ್ಜೆಂಟೀನಾಕ್ಕೆ ಕರೆದೊಯ್ಯುತ್ತಿದ್ದೇವೆ‘ ಎಂದು ತಂಡದ ಮುಖ್ಯ ಕೋಚ್ ಗ್ರಹಾಂ ರೀಡ್ ಹೇಳಿದ್ದಾರೆ.

ಭಾರತ ತಂಡವು ಬುಧವಾರ ಬೆಂಗಳೂರಿನಿಂದ ಬ್ಯೂನಸ್ ಐರಿಸ್‌ಗೆ ಪ್ರಯಾಣ ಬೆಳೆಸಲಿದೆ. ಅದಕ್ಕೂ ಮೊದಲು ಆಟಗಾರರು ಕೋವಿಡ್–19ಕ್ಕೆ ಸಂಬಂಧಿಸಿದ ಕಡ್ಡಾಯ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಗಾಗಬೇಕಿದೆ.

ತಂಡ: ಮನ್‌ಪ್ರೀತ್ ಸಿಂಗ್ (ನಾಯಕ), ಹರ್ಮನ್‌ಪ್ರೀತ್ ಸಿಂಗ್ (ಉಪನಾಯಕ), ಪಿ.ಆರ್.ಶ್ರೀಜೇಶ್, ಕೃಷ್ಣ ಬಹಾದ್ದೂರ್ ಪಾಠಕ್, ಅಮಿತ್ ರೋಹಿದಾಸ್, ಗುರಿಂದರ್ ಸಿಂಗ್, ಸುರೇಂದರ್ ಕುಮಾರ್, ಬೀರೇಂದ್ರ ಲಾಕ್ರಾ, ಹಾರ್ದಿಕ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್, ರಾಜ್ ಕುಮಾರ್ ಪಾಲ್, ನೀಲಕಂಠ ಶರ್ಮಾ, ಶಂಶೇರ್ ಸಿಂಗ್, ಗುರ್ಜಂತ್ ಸಿಂಗ್, ದಿಲ್‌ಪ್ರೀತ್ ಸಿಂಗ್, ಮನದೀಪ್ ಸಿಂಗ್, ಲಲಿತ್ ಉಪಾಧ್ಯಾಯ, ಜಸ್ಕರಣ್ ಸಿಂಗ್, ಸುಮಿತ್ ಹಾಗೂ ಶೀಲಾನಂದ ಲಾಕ್ರಾ, ರೂಪಿಂದರ್ ಪಾಲ್ ಸಿಂಗ್ ಹಾಗೂ ವರುಣ್ ಕುಮಾರ್.

ಮನ್‌ಪ್ರೀತ್ ಸಿಂಗ್–ಪಿಟಿಐ ಚಿತ್ರ

ಆರ್‌ಸಿಬಿ ತಾಲೀಮು ಶುರು

ಚೆನ್ನೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟ್ವೆಂಟಿ–20 ಕ್ರಿಕೆಟ್ ಟೂರ್ನಿಯ ಪ್ರಶಸ್ತಿ ಜಯಿಸುವ ಮತ್ತೊಂದು ಕನಸಿನೊಂದಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮಂಗಳವಾರ ತಾಲೀಮು ಆರಂಭಿಸಿದೆ.

ಆರ್‌ಸಿಬಿಯ 11 ಆಟಗಾರರ ಕಂಡಿಷನಿಂಗ್ ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ. ಒಂಬತ್ತು ದಿನಗಳ ಶಿಬಿರ ಇದಾಗಿದೆ.

ಭಾರತ ತಂಡದ ಆಟಗಾರರಾದ ಸ್ಪಿನ್ನರ್ ಯಜುವೇಂದ್ರ ಚಾಹಲ್, ಮಧ್ಯಮವೇಗಿಗಳಾದ ನವದೀಪ್ ಸೈನಿ, ಮೊಹಮ್ಮದ್ ಸಿರಾಜ್, ಹರ್ಷಲ್ ಪಟೇಲ್, ಶಾಬಾಜ್ ಅಹಮದ್, ಪವನ್ ದೇಶಪಾಂಡೆ, ಮೊಹಮ್ಮದ್ ಅಜರುದ್ದೀನ್, ಸಚಿನ್ ಬೇಬಿ, ಸುಯಶ್ ಪ್ರಭುದೇಸಾಯಿ, ಕೆ.ಎಸ್. ಭರತ್, ರಜತ್ ಪಾಟೀದಾರ್ ತಾಲೀಮಿನಲ್ಲಿ ಭಾಗವಹಿಸುವರು.

ತಂಡದ ಕ್ರಿಕೆಟ್ ಚಟುವಟಿಕೆಗಳ ನಿರ್ದೇಶಕ ಮೈಕ್ ಹೆಸನ್ ಮತ್ತು ಮುಖ್ಯ ಕೋಚ್ ಸೈಮನ್ ಕ್ಯಾಟಿಚ್ ಮಾರ್ಗದರ್ಶನದಲ್ಲಿ ಶಿಬಿರ ನಡೆಯಲಿದೆ.

‘ಶ್ರೀರಾಮಚಂದ್ರ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯಲ್ಲಿರುವ ಸೆಂಟರ್ ಫಾರ್ ಸ್ಪೋರ್ಟ್ಸ್ ಸೈನ್ಸ್ (ಸಿಎಸ್‌ಎಸ್) ಕೇಂದ್ರದಲ್ಲಿ ಕಂಡಿಷನಿಂಗ್ ಶಿಬಿರ ನಡೆಯಲಿದೆ. ಅನುಭವಿ ಕೋಚ್‌ಗಳಾದ ಸಂಜಯ್ ಬಾಂಗರ್, ಶ್ರೀರಾಮ್ ಶ್ರೀಧರನ್, ಆ್ಯಡಂ ಗ್ರಿಫಿತ್, ಶಂಕರ್ ಬಸು ಮತ್ತು ಮಲೋಲನ್ ರಂಗರಾಜನ್ ತರಬೇತಿ ನೀಡುವರು. ಆಟಗಾರರ ದೈಹಿಕ ಸಾಮರ್ಥ್ಯ ವೃದ್ಧಿಯ ತರಬೇತಿಯೇ ಈ ಶಿಬಿರದ ಮುಖ್ಯ ಉದ್ದೇಶವಾಗಿದೆ‘ ಎಂದು ಆರ್‌ಸಿಬಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ. ಏಪ್ರಿಲ್ 9ರಂದು ಟೂರ್ನಿ ಆರಂಭವಾಗಲಿದೆ.

ಬ್ಯಾಟಿಂಗ್ ಕೋಚ್ ಸಂಜಯ್ ಬಾಂಗರ್, ಲೆಗ್ ಸ್ಪಿನ್ನರ್ ಯಜುವೇಂದ್ರ ಚಾಹಲ್ ಮತ್ತು ಮಧ್ಯಮ ವೇಗಿ ಮೊಹಮ್ಮದ್ ಸಿರಾಜ್ –ಆರ್‌ಸಿಬಿ ಚಿತ್ರ

ಪೂಮಾ ಕಿಟ್ ಪ್ರಾಯೋಜಕತ್ವ

ಆರ್‌ಸಿಬಿ ತಂಡದ ಕ್ರಿಕೆಟ್ ಕಿಟ್‌ಗಳಿಗೆ ಪೂಮಾ ಸಂಸ್ಥೆಯು ಪ್ರಾಯೋಜಕತ್ವ ನೀಡಲಿದೆ. ವಿಶ್ವದರ್ಜೆಯ ಕ್ರೀಡಾ ಪೋಷಾಕು ಮತ್ತು ಉತ್ಪನ್ನಗಳ ಸಂಸ್ಥೆಯಾಗಿರುವ ಪೂಮಾ ದೀರ್ಘ ಅವಧಿಯ ಪಾಲುದಾರಿಕೆ ಒಡಂಬಡಿಕೆ ಮಾಡಿಕೊಂಡಿದೆ.

ಪೂಮಾ ಕಂಪನಿಯು ಕೆಲವು ಕಾಲದಿಂದ ಆರ್‌ಸಿಬಿ ತಂಡದ ನಾಯಕ ವಿರಾಟ್ ಕೊಹ್ಲಿ ಅವರೊಂದಿಗೆ ಪ್ರಾಯೋಜಕತ್ವ ಒಪ್ಪಂದ ಹೊಂದಿದೆ.

‘ಆರ್‌ಸಿಬಿ ಪರಿವಾರಕ್ಕೆ ಪೂಮಾ ಸಂಸ್ಥೆಗೆ ಸ್ವಾಗತ. ವಿಶ್ವದಾದ್ಯಂತ ಆರ್‌ಸಿಬಿ ಉತ್ಪನ್ನಗಳು ಮತ್ತು ಅಭಿಮಾನಿಗಳ ನಡುವೆ ಸಂಪರ್ಕ ಗಟ್ಟಿಗೊಳಿಸಲು ಪೂಮಾ ಕೈಬಲಪಡಿಸಲಿದೆ‘ ಎಂದು ಪತ್ರಿಕಾ ಪ್ರಕಟಣೆಯಲ್ಲಿ ವಿರಾಟ್ ಕೊಹ್ಲಿ ಹೇಳಿದ್ದಾರೆ.

ಚೆನ್ನೈಗೆ ನಾಳೆ ವಿರಾಟ್ ಕೊಹ್ಲಿ

ಆರ್‌ಸಿಬಿ ತಂಡದ ನಾಯಕ ವಿರಾಟ್ ಕೊಹ್ಲಿ ಅವರು ಗುರುವಾರ ಚೆನ್ನೈಗೆ ಬಂದಿಳಿಯಲಿದ್ದಾರೆ. ತಂಡದ ತಾರಾ ಆಟಗಾರ, ದಕ್ಷಿಣ ಆಫ್ರಿಕಾದ ಎಬಿ ಡಿವಿಲಿಯರ್ಸ್ ಬುಧವಾರ ರಾತ್ರಿ ತಂಡವನ್ನು ಸೇರಿಕೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಹೋದ ಭಾನುವಾರ ವಿರಾಟ್ ಕೊಹ್ಲಿ ನಾಯಕತ್ವದ ಭಾರತ ತಂಡವು ಪುಣೆಯಲ್ಲಿ ಇಂಗ್ಲೆಂಡ್ ಎದುರಿನ ಏಕದಿನ ಸರಣಿಯಲ್ಲಿ ಜಯಸಾಧಿಸಿತ್ತು.

ಡೆಲ್ಲಿಗೆ ರಿಷಭ್ ಪಂತ್ ನಾಯಕ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ವಿಕೆಟ್‌ಕೀಪರ್ ರಿಷಭ್ ಪಂತ್ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕರಾಗಿ ಆಯ್ಕೆಯಾಗಿದ್ದಾರೆ.

ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಯಲ್ಲಿ ಗಾಯಗೊಂಡಿದ್ದ ಶ್ರೇಯಸ್ ಅಯ್ಯರ್ ಮೂರುವರೆ ತಿಂಗಳು ಕ್ರಿಕೆಟ್ ಕಣದಿಂದ ದೂರವುಳಿಯಲಿದ್ದಾರೆ. ಅದರಿಂದಾಗಿ ತೆರವಾಗಿದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕನ ಪಟ್ಟವು ಪಂತ್‌ಗೆ ಒಲಿದಿದೆ.

ಈ ಹಿಂದೆ ದೆಹಲಿಯ ರಣಜಿ ತಂಡವನ್ನು ರಿಷಭ್ ಮುನ್ನಡೆಸಿದ್ದರು. ಆದರೆ ಐಪಿಎಲ್‌ನಲ್ಲಿ ನಾಯಕತ್ವ ವಹಿಸುತ್ತಿರುವುದು ಇದೇ ಮೊದಲು.

‘ದೆಹಲಿ ನಾನು ಬೆಳೆದ ಜಾಗ. ಐಪಿಎಲ್‌ನಲ್ಲಿ ಆರು ವರ್ಷಗಳಿಂದ ಇದೇ ತಂಡದಲ್ಲಿ ಆಡುತ್ತಿದ್ದೇನೆ. ತಂಡವನ್ನು ಮುನ್ನಡೆಸುವ ಕನಸು ಕಂಡಿದ್ದೆ. ಇಷ್ಟು ಬೇಗ ಕೈಗೂಡಿರುವುದು ಸಂತಸವಾಗಿದೆ‘ ಎಂದು ಪಂತ್ ಹೇಳಿದ್ದಾರೆ.

ಜನವರಿಯಲ್ಲಿ ಆಸ್ಟ್ರೇಲಿಯಾದಲ್ಲಿ ಭಾರತ ತಂಡವು ಟೆಸ್ಟ್ ಸರಣಿಯಲ್ಲಿ ಐತಿಹಾಸಿಕ ಜಯ ಸಾಧಿಸುವಲ್ಲಿ ಪಂತ್ ಬ್ಯಾಟಿಂಗ್ ಪ್ರಮುಖ ಪಾತ್ರವಹಿಸಿತ್ತು. ತವರಿನಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯ ಗೆಲುವಿಗೂ ಅಮೋಘ ಕಾಣಿಕೆ ನೀಡಿದ್ದರು. ಟಿ20 ಮತ್ತು ಏಕದಿನ ಸರಣಿಯಲ್ಲಿಯೂ ಮಿಂಚಿದ್ದರು. ಡೆಲ್ಲಿ ತಂಡಕ್ಕೆ ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮಾಜಿ ನಾಯಕ ರಿಕಿ ಪಾಂಟಿಂಗ್ ಮುಖ್ಯ ಕೋಚ್ ಆಗಿದ್ದಾರೆ.

ಕೋಲ್ಕತ್ತ ರೇಸ್

ಜೇಕ್ ಗೆಲ್ಲುವ ನಿರೀಕ್ಷೆ

ಕೋಲ್ಕತ್ತ ಮಿಲಿಯನ್ (2020-21) ಬುಧವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಜೇಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.45ಕ್ಕೆ ಆರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಆಫ್ನಿಕ 1, ಬಡ್ಡಿಹೋಲಿ 7, ಬಲ್ಗುಟಿ 3
2ನೇ ರೇಸ್: ಡೇರಿಂಗ್ ಹಾರ್ಟ್ 6, ಅಪ್ನಾ ಟೈಮ್ ಆಯೇಗಾ 2, ಟ್ರೆಷರ್ ಹಂಟ್ 1
3ನೇ ರೇಸ್: ಅಶ್ವಮೇಘ್ 3, ಟಾಹೊ 7, ಬೆಲೇರಿಯನ್ 1
4ನೇ ರೇಸ್: ಇಂಟೆಲೆಕ್ಶನ್ 2, ಹೆಡ್‌ಬಾಯ್ 3, ಸೀಸ್ಕಿ 4
5ನೇ ರೇಸ್: ಇಂಕ 2, ಘೋಸ್ಟ್ 5, ಟಾಪ್‌ಸ್ನಾಚ್ 4
6ನೇ ರೇಸ್: ಜೇಕ್ 3, ಗೇಲನ್ 2, ಕ್ಲೆಟಸ್ 1
7ನೇ ರೇಸ್: ರೇನ್‌ಬೋ ಟ್ರೌಟ್ 4, ಟ್ಯೂಡೋರ್ ಹಾರ್ಟ್ 8, ಶಿಮ್ಮರಿಂಗ್ ಸ್ಟಾರ್ 7
8ನೇ ರೇಸ್: ಕಿಮಾಯ 2, ಲೌಬೌಟಿನ್ 3, ವಿಸ್ಪರಿಂಗ್ ಗ್ರಾಸ್ 10

ಉತ್ತಮ ಬೆಟ್: ಡೇರಿಂಗ್ ಹಾರ್ಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಅಪರೂಪದ ಕಾಯಿಲೆ: ಹಣಕಾಸು ನೆರವಿಗೆ ದಕ್ಷಿಣ ರಾಜ್ಯಗಳ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ‘ಅಪರೂಪದ ಕಾಯಿಲೆ’ಗಳ ಕುರಿತ ರಾಷ್ಟ್ರೀಯ ನೀತಿಯನ್ನು ಅಂತಿಮಗೊಳಿಸಲು ಸಜ್ಜಾಗಿದೆ. ಇದು ಮಾರ್ಚ್ 31ರಂದು ಬಿಡುಗಡೆಯಾಗುವ ಸಾಧ್ಯತೆಯಿದೆ. ಈ ನಡುವೆ ದಕ್ಷಿಣ ಭಾರತ ರಾಜ್ಯಗಳಾದ ಕರ್ನಾಟಕ, ಕೇರಳ ಹಾಗೂ ತಮಿಳುನಾಡು ಸರ್ಕಾರಗಳು ಈ ಕಾಯಿಲೆಗಳ ಚಿಕಿತ್ಸೆಗೆ ಅಗತ್ಯ ಹಣಕಾಸು ನೆರವು ಒದಗಿಸಬೇಕು ಎಂದು ಕೇಂದ್ರ ಸರ್ಕಾರವನ್ನು ಕೋರಿವೆ.

ಲೈಸೋಸೋಮಲ್ ಸ್ಟೋರೇಜ್ ಡಿಸಾರ್ಡರ್ಸ್ (ಎಲ್‌ಎಸ್‌ಡಿ) ಸೇರಿದಂತೆ ಮಾರಣಾಂತಿಕ ಅಪರೂಪದ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳ ಪತ್ತೆ ಮತ್ತು ಚಿಕಿತ್ಸೆಗೆ ಹಣಕಾಸು ನೆರವು ಕೇಳಿವೆ. ಗ್ರೂಪ್ 3 ಕಾಯಿಲೆಗಳು ಎಂದು ವರ್ಗೀಕರಿಸಲಾಗಿರುವ, ಎಲ್‌ಎಸ್‌ಡಿಗಳಾದ ಪೊಂಪೆ ಕಾಯಿಲೆ, ಗೌಚರ್ ಕಾಯಿಲೆ, ಫ್ಯಾಬ್ರಿ ಕಾಯಿಲೆ ಮತ್ತು ಎಂಪಿಎಸ್–1 ಚಿಕಿತ್ಸೆಗೆ ಅಧಿಕ ಹಣದ ಅವಶ್ಯಕತೆ ಇದೆ. ಇವುಗಳಿಗೆ ವಿಶೇಷ ಚಿಕಿತ್ಸೆ ಮತ್ತು ದೀರ್ಘಕಾಲದ ನಿರ್ವಹಣೆಯ ಅಗತ್ಯವಿರುತ್ತದೆ.

ಎಲ್‌ಎಸ್‌ಡಿ ಇರುವ ರೋಗಿಗಳಿಗೆ ಕರ್ನಾಟಕ ಸರ್ಕಾರವು ಚಿಕಿತ್ಸೆ ನೀಡಲು ಪ್ರಾರಂಭಿಸಿ 5 ವರ್ಷಗಳು ಸಂದಿವೆ. ಕೇರಳ ಮತ್ತು ತಮಿಳುನಾಡು ಸರ್ಕಾರಗಳೂ ಮಕ್ಕಳ ಜೀವ ಉಳಿಸುವ ಚಿಕಿತ್ಸೆ ನೀಡಲು ಹಣ ಹಂಚಿಕೆ ಮಾಡಿವೆ. ಕರ್ನಾಟಕವು ಸುಮಾರು ₹40 ಕೋಟಿ ವೆಚ್ಚ ಮಾಡಿದೆ. ಕೇರಳದಲ್ಲಿ ಪೊಂಪೆ ಕಾಯಿಲೆ ಕಂಡುಬಂದಿದ್ದ ಇಬ್ಬರು ಮಕ್ಕಳ ಚಿಕಿತ್ಸಾ ವೆಚ್ಚವಾಗಿ ₹1.5 ಕೋಟಿ ಹಣ ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಕೇರಳ ಹೈಕೋರ್ಟ್ ಇತ್ತೀಚೆಗೆ ಸೂಚಿಸಿತ್ತು. ಕೇರಳ ಸರ್ಕಾರ ಸಹ ₹50 ಲಕ್ಷ ನೀಡಿದೆ. ತಮಿಳುನಾಡಿನಲ್ಲಿ ಇಂತಹ ಕಾಯಿಲೆಗಳಿಂದ ಬಳಲುವ 11 ರೋಗಿಗಳ ಚಿಕಿತ್ಸೆಗಾಗಿ ₹4.4 ಕೋಟಿ ಬಿಡುಗಡೆ ಮಾಡುವಂತೆ ಮದ್ರಾಸ್ ಹೈಕೋರ್ಟ್ ಕಳೆದ ವರ್ಷ ಕೇಂದ್ರ ಸರ್ಕಾರಕ್ಕೆ ಸೂಚಿಸಿತ್ತು. ₹5 ಕೋಟಿ ಬಿಡುಗಡೆ ಮಾಡುವಂತೆ ತಮಿಳುನಾಡು ಸರ್ಕಾರಕ್ಕೂ ನಿರ್ದೇಶಿಸಿತ್ತು. ಇದೀಗ ಮೂರೂ ರಾಜ್ಯಗಳ ಆರೋಗ್ಯ ಇಲಾಖೆಗಳು ಕೇಂದ್ರಕ್ಕೆ ಪತ್ರ ಬರೆದಿದ್ದು, ಅನುದಾನ ಒದಗಿಸಲು ಮನವಿ ಸಲ್ಲಿಸಿವೆ.

ದೇಶಮುಖ್ ಭ್ರಷ್ಟಾಚಾರ ಆರೋಪ: ಏಕಸದಸ್ಯ ಸಮಿತಿ ರಚನೆ

ಮುಂಬೈ (ಪಿಟಿಐ): ಗೃಹ ಸಚಿವ ಅನಿಲ್ ದೇಶಮುಖ್ ವಿರುದ್ಧದ ಭ್ರಷ್ಟಾಚಾರ ಆರೋಪ ಕುರಿತು ತನಿಖೆ ನಡೆಸಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೈಲಾಶ್ ಯು.ಚಾಂದೀವಾಲ್ ನೇತೃತ್ವದ ಏಕ ಸದಸ್ಯ ಸಮಿತಿಯನ್ನು ಮಹಾರಾಷ್ಟ್ರ ಸರ್ಕಾರ ಮಂಗಳವಾರ ರಚಿಸಿದೆ. ಆರು ತಿಂಗಳೊಳಗೆ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ. ಮುಂಬೈನಲ್ಲಿನ ಬಾರ್ ಹಾಗೂ ರೆಸ್ಟೋರೆಂಟ್‌ಗಳಿಂದ ಪ್ರತಿ ತಿಂಗಳು ₹ 100 ಕೋಟಿ ಸಂಗ್ರಹಿಸುವಂತೆ ಸಚಿವ ದೇಶಮುಖ್ ಸೂಚಿಸಿದ್ದರು ಎಂದು ಮುಂಬೈನ ಮಾಜಿ ಪೊಲೀಸ್ ಕಮಿಷನರ್ ಪರಮ್ ಬೀರ್ ಸಿಂಗ್ ಆರೋಪಿಸಿದ್ದಾರೆ.

ಮ್ಯಾನ್ಮಾರ್: ಸುತ್ತೋಲೆ ವಾಪಸ್ ಪಡೆದ ಮಣಿಪುರ ಸರ್ಕಾರ

ಇಂಫಾಲ (ಪಿಟಿಐ): ಮ್ಯಾನ್ಮಾರ್‌ನಲ್ಲಿ ಮಿಲಿಟರಿ ದಂಗೆಯ ನಂತರ ಅಲ್ಲಿಂದ ಭಾರತಕ್ಕೆ ಬರುತ್ತಿರುವ ನಿರಾಶ್ರಿತರಿಗೆ ಆಹಾರ ಮತ್ತು ಆಶ್ರಯ ನೀಡಲು ಯಾವುದೇ ಶಿಬಿರಗಳನ್ನು ತೆರೆಯಬಾರದು ಎಂದು ಗಡಿ ಭಾಗದ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ ಹೊರಡಿಸಿದ್ದ ಮಣಿಪುರ ಸರ್ಕಾರವು, ಸಾರ್ವಜನಿಕರಿಂದ ವ್ಯಾಪಕ ವಿರೋಧ ವ್ಯಕ್ತವಾದ ಕಾರಣ ಮೂರೇ ದಿನಗಳಲ್ಲಿ ಆ ಸುತ್ತೋಲೆಯನ್ನು ಹಿಂದಕ್ಕೆ ಪಡೆದಿದೆ.

ಚಂದೇಲ್, ತೆಂಗೌಪಾಲ್, ಕಮ್ಜಾಂಗ್, ಉಖ್ರುಲ್ ಮತ್ತು ಚುರಾಚಂದಪುರದ ಜಿಲ್ಲಾಧಿಕಾರಿಗಳಿಗೆ ಮಾರ್ಚ್ 26ರಂದು ವಿಶೇಷ ಕಾರ್ಯದರ್ಶಿ (ಗೃಹ) ಈ ಸುತ್ತೋಲೆ ಹೊರಡಿಸಿದ್ದರು.

ಅಲ್ಲದೆ ಅವರು ಆಧಾರ್ ದಾಖಲಾತಿಯನ್ನೂ ನಿಲ್ಲಿಸುವಂತೆ ಸೂಚಿಸಿದ್ದರು.

ಎವರ್ ಗಿವನ್‌ನಲ್ಲಿನ ಭಾರತೀಯರ ಸುರಕ್ಷತೆಗೆ ಗಮನ: ಸಚಿವಾಲಯ

ನವದೆಹಲಿ: ಸುಯೆಜ್ ಕಾಲುವೆಯಲ್ಲಿ ಸಿಲುಕಿದ್ದ ಎವರ್ ಗಿವನ್ ಹಡಗಿನಲ್ಲಿರುವ ಭಾರತೀಯರ ಸುರಕ್ಷತೆಗೆ ಸಂಬಂಧಪಟ್ಟವರೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆ ಎಂದು ಕೇಂದ್ರ ಹಡಗು ಮತ್ತು ಜಲಮಾರ್ಗಗಳ ಸಚಿವಾಲಯದ ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

‘ಈ ಹಡಗು ಸಿಬ್ಬಂದಿ ಪೈಕಿ 25 ಜನ ಭಾರತೀಯರಿದ್ದಾರೆ. ಅವರ ಸುರಕ್ಷತೆ ನಮಗೆ ಮುಖ್ಯ. ಹಡಗು ಸುಯೆಜ್ ಕಾಲುವೆಯಲ್ಲಿ ಸಿಲುಕಿದ್ದಕ್ಕೆ ಸಂಬಂಧಿಸಿ ಭಾರತೀಯರು ತನಿಖೆ ಎದುರಿಸಬೇಕಾಗುತ್ತದೆ ಎಂದು ಆತಂಕಪಡುವ ಅಗತ್ಯ ಇಲ್ಲ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಈ ವರೆಗೆ ಹಡಗಿನ ಸಿಬ್ಬಂದಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿಲ್ಲ. ಆ ಕುರಿತು ಊಹಾಪೋಹಗಳಿಗೆ ಆಸ್ಪದವಿಲ್ಲ. ಈ ಅವಘಡಕ್ಕೆ ಕಾರಣ ಪತ್ತೆಗೆ ಮೊದಲು ತನಿಖೆ ನಡೆಯಲಿ’ ಎಂದು ನ್ಯಾಷನಲ್ ಶಿಪ್ಪಿಂಗ್ ಬೋರ್ಡ್‌ನ ಸದಸ್ಯ ಕ್ಯಾಪ್ಟನ್ ಸಂಜಯ್ ಪರಾಶರ್ ಪ್ರತಿಕ್ರಿಯಿಸಿದ್ದಾರೆ.

ರಾಷ್ಟ್ರಪತಿ ಕೋವಿಂದ್‌ಗೆ ಬೈಪಾಸ್ ಸರ್ಜರಿ ಯಶಸ್ವಿ

ನವದೆಹಲಿ: ಇಲ್ಲಿಯ ಏಮ್ಸ್ ಆಸ್ಪತ್ರೆಯಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಗೆ ಯಶಸ್ವಿಯಾಗಿ ತೆರೆದ ಹೃದಯ ಶಸ್ತ್ರಚಿಕಿತ್ಸೆ ಮಾಡಲಾಗಿದೆ ಎಂದು ರಾಷ್ಟ್ರಪತಿ ಭವನದ ಪ್ರಕಟಣೆ ತಿಳಿಸಿದೆ.

ರಾಷ್ಟ್ರಪತಿ ಅವರ ಆರೋಗ್ಯ ಸ್ಥಿರವಾಗಿದ್ದು, ಏಮ್ಸ್ ವೈದ್ಯರ ವಿಶೇಷ ತಂಡ ಅವರ ಆರೋಗ್ಯದ ಮೇಲೆ ನಿಗಾ ಇರಿಸಿದೆ ಎಂದು ಹೇಳಿಕೆ ತಿಳಿಸಿದೆ.

‘ರಾಮನಾಥ್ ಕೋವಿಂದ್ ಅವರಿಗೆ ಯಶಸ್ವಿಯಾಗಿ ತೆರೆದ ಹೃದಯ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ವೈದ್ಯರ ತಂಡವನ್ನು ಅಭಿನಂದಿಸುತ್ತೇನೆ. ರಾಷ್ಟ್ರಪತಿ ಅವರ ಆರೋಗ್ಯದ ಕುರಿತು ಏಮ್ಸ್ ವೈದ್ಯರ ಜೊತೆಗೆ ಮಾತನಾಡಿದ್ದೇನೆ. ಅವರು ಶೀಘ್ರ ಗುಣ ಮುಖರಾಗಲಿ ಎಂದು ಹಾರೈಸುತ್ತೇನೆ’ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಟ್ವೀಟ್ ಮಾಡಿದ್ದಾರೆ.


ರಾಮನಾಥ ಕೋವಿಂದ್

ರಾಷ್ಟ್ರಪತಿ ಅವರಿಗೆ ಎದೆನೋವು ಕಾಣಿಸಿಕೊಂಡಿದ್ದರಿಂದ ಕಳೆದ ವಾರ ಸೇನಾ ಸಂಶೋಧನೆ ಮತ್ತು ರೆಫರಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

‘ಅಫ್ಗಾನಿಸ್ತಾನ: ಶಾಂತಿ ಅಗತ್ಯ’

ದುಶಾನ್ಬೆ (ಪಿಟಿಐ): ಅಫ್ಗಾನಿಸ್ತಾನದಲ್ಲಿನ ಹಿಂಸಾಚಾರ ಮತ್ತು ರಕ್ತಪಾತದ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಭಾರತ, ಯುದ್ಧ ಪೀಡಿತ ದೇಶದೊಳಗೆ ಮತ್ತು ಸುತ್ತಲೂ ಶಾಂತಿಯ ಅಗತ್ಯವಿದೆ ಎಂದು ಪ್ರತಿಪಾದಿಸಿದೆ.

ಈ ಕುರಿತು ರಾಜಕೀಯ ಪರಿಹಾರಕ್ಕೆ ಸಂಬಂಧಿಸಿದವರು ಒಳ್ಳೆಯ ನಂಬಿಕೆ ಮತ್ತು ಬದ್ಧತೆಯಿಂದ ಮುಂದಾಗಬೇಕು ಎಂದು ಕರೆಕೊಟ್ಟಿದೆ.

ತಜಕಿಸ್ತಾನದ ರಾಜಧಾನಿ ದುಶಾನ್ಬೆಯಲ್ಲಿ ನಡೆದ 9ನೇ ‘ಹಾರ್ಟ್ ಆಫ್ ಏಷ್ಯಾ’ ಸಚಿವರ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್, ಅಫ್ಗಾನಿಸ್ತಾನದಲ್ಲಿನ ಸರ್ಕಾರ ಮತ್ತು ತಾಲಿಬಾನ್ ನಡುವಿನ ಮಾತುಕತೆಯನ್ನು ಚುರುಕುಗೊಳಿಸಲು ಕೈಗೊಂಡಿರುವ ಎಲ್ಲ ಪ್ರಯತ್ನಗಳನ್ನು ಭಾರತ ಬೆಂಬಲಿಸುತ್ತದೆ ಎಂದರು.

ಜೈಶಂಕರ್

ಅಫ್ಗಾನಿಸ್ತಾನಕ್ಕೆ ನಿಜವಾದ 'ದ್ವಿ ಶಾಂತಿ' ಬೇಕಾಗಿದೆ. ಅಂದರೆ, ಅದು ಅಫ್ಘಾನಿಸ್ತಾನದೊಳಗಿನ ಶಾಂತಿ ಮತ್ತು ದೇಶದ ಸುತ್ತಲಿನ ಶಾಂತಿಯಾಗಿದೆ. ಅದಕ್ಕಾಗಿ ಆ ದೇಶದ ಒಳಗೆ ಮತ್ತು ಸುತ್ತಮುತ್ತಲಿನ ಎಲ್ಲರ ಹಿತಾಸಕ್ತಿಗಳನ್ನು ಸಮನ್ವಯಗೊಳಿಸುವ ಅಗತ್ಯವಿದೆ ಎಂದು ಜೈಶಂಕರ್ ಸಮ್ಮೇಳನದಲ್ಲಿ ಹೇಳಿದರು.

ಅಫ್ಗಾನಿಸ್ತಾನದ ಅಧ್ಯಕ್ಷ ಅಶ್ರಫ್ ಘನಿ, ಪಾಕಿಸ್ತಾನ ವಿದೇಶಾಂಗ ಸಚಿವ ಷಾ ಮಹಮೂದ್ ಖುರೇಷಿ ಮತ್ತು ಇತರರು ಈ ಸಮಾವೇಶದಲ್ಲಿ ಭಾಗವಹಿಸಿದ್ದರು.